ಪ್ರಕಟಣೆ

ಅಧ್ಯಕ್ಷರು: ದಿನಾಂಕ 28ನೇ ಡಿಸೆಂಬರ್ 1994ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯು ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಯಿತು.

ದಿನಾಂಕ: 29.12.1994 ಗುರುವಾರ ಬೆಳಿಗ್ಗೆ 11.00 ಗಂಟೆಗೆ	1. ಗಮನ ಸೆಳೆಯುವ ಸೂಚನೆಗಳು
	2. 1994-95ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಅಂದಾಜುಗಳ ಮಂಡನೆ
	3. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವದ ಮೇಲೆ ಚರ್ಚೆ
ದಿನಾಂಕ: 30.12.1994 ಶುಕ್ರವಾರ ಬೆಳಿಗ್ಗೆ 9.30 ಗಂಟೆಯಿಂದ 1.30 ಗಂಟೆಯವರೆಗೆ ಮತ್ತು 2.30 ಗಂಟೆಯಿಂದ 6.30 ಗಂಟೆಯವರೆಗೆ	ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ.
ದಿನಾಂಕ: 31.12.1994 ಶನಿವಾರ ಬೆಳಿಗ್ಗೆ 9.30 ಗಂಟೆಯಿಂದ 1.30 ಗಂಟೆಯವರೆಗೆ ಮತ್ತು 2.30 ಗಂಟೆಯಿಂದ 6.30 ಗಂಟೆಯವರೆಗೆ	ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಸದನವು ಸಮಿತಿಯ ಶಿಫಾರಸ್ಸಿಗೆ ಒಪ್ಪಿಗೆ ನೀಡಿದೆಯೆಂದು ಭಾವಿಸುತ್ತೇನೆ.

ಈಗ ಅರ್ಧ ಘಂಟೆಕಾಲ ಸದನವನ್ನು ಮುಂದೂಡಲಾಗಿದೆ.

(ಸದನವು ಪುನಃ 2.50 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರಾದ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

ಅಧ್ಯಕ್ಷರು:– ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣೆ, ಮಾನ್ಯ ಸಿ.ಎಂ. ಉದಾಸಿಯವರು ಸೂಚಿಸಬೇಕು.

ಶ್ರೀ ಸಿ.ಎಂ. ಉದಾಸಿ:– ಸನ್ಮಾನ್ಯ ಅಧ್ಯಕ್ಷರೆ, ಡಿಸಂಬರ್ 28, 1994ರಂದು ವಿಧಾನ ಮಂಡಲದ ಸದಸ್ಯರುಗಳನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸಭೆಯ ಸದಸ್ಯರುಗಳಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ.

ಶ್ರೀ ಕೃಷ್ಣ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಿ.ಎಂ. ಉದಾಸಿಯವರು ರಾಜ್ಯಪಾಲರು ಮಾಡಿರತಕ್ಕಂಥ

ಭಾಷಣಕ್ಕೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಮಂಡಿಸಿರುವ ಸೂಚನೆಯನ್ನು ನಾನು ಅನುಮೋದಿಸುತ್ತೇನೆ.

† ಶ್ರೀ ಸಿ.ಎಂ. ಉದಾಸಿ (ಹಾನಗಲ್):– ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ರಾಜ್ಯಪಾಲರು ದಿನಾಂಕ: 28–12–1994 ರಂದು ಮಾಡಿದ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವಂಥ ಕೆಲಸವನ್ನು ನಾನು ಮಾಡಬಯಸುತ್ತಿದ್ದೇನೆ. ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಐತಿಹಾಸಿಕವಾದಂಥ ಚುನಾವಣೆ ನಡೆದು ಜನ ಕೊಟ್ಟಿರುವ ತೀರ್ಮಾನವು ಒಂದು ಅಭೂತಪೂರ್ವ ತೀರ್ಮಾನವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಹೇಳುವಾಗ ಅವರೇ ನಗುತ್ತಿದ್ದಾರೆ, ಏಕೆ ಎಂದು ಗೊತ್ತಾಗುತ್ತಿಲ್ಲ.

ಶ್ರೀ ಸಿ.ಎಂ. ಉದಾಸಿ:– ನಿಮ್ಮನ್ನು ನೋಡಿ ನನಗೆ ನಗು ಬಂತು.

ಅಧ್ಯಕ್ಷರು:– ಒಬ್ಬೊಬ್ಬರು ಒಂದೊಂದು ಕಾರಣಕ್ಕಾಗಿ ನಗುತ್ತಾರೆ. ನಮ್ಮ ಆಫೀಸ್‌ನವರು ನಿಮ್ಮ ಪಾರ್ಟಿಯನ್ನು ಕರ್ನಾಟಕ ಕಾಂಗ್ರೆಸ್(ಐ) ಎಂದು ಮಾಡಿಕೊಂಡು ಬಂದುಬಿಟ್ಟಿದ್ದಾರೆ. ನಾನು ಇದನ್ನು ನೋಡಿ ನಗುತ್ತಿದ್ದೆ.

ಶ್ರೀ ಸಿ.ಎಂ. ಉದಾಸಿ:– ಸನ್ಮಾನ್ಯ ಖರ್ಗೆಯವರಿಗೆ ಈ ಪರಿಸ್ಥಿತಿ ಬಂತಲ್ಲಾ ಎಂದು ನಗೆ ಬಂತು, ಅದನ್ನು ಹೇಳಲಿಕ್ಕೆ ಹೊರಟಿದ್ದೆ. ಅದನ್ನು ಹೇಳುವ ಮೊದಲೇ ಅವರು ನಗುವುದಕ್ಕೆ ಶುರು ಮಾಡಿದರು.

ಅಧ್ಯಕ್ಷರು:– ಅವರ ಪರಿಸ್ಥಿತಿ ಏನೋ ಚೆನ್ನಾಗಿದೆ. ಕೆಲವರು ಹೊರಗೇ ಉಳಿದು ಬಿಟ್ಟಿದ್ದಾರಲ್ಲಾ, ಪಾಪ.

ಶ್ರೀ ಸಿ.ಎಂ. ಉದಾಸಿ:– ಕಳೆದ 5 ವರ್ಷಗಳ ಹಿಂದೆ ಮಾನ್ಯ ಖರ್ಗೆಯವರು ಭಾಷಣ ಮಾಡುವಾಗ ನಾವು ಅಧಿಕಾರಕ್ಕೆ ಬಂದರೆ, ನಾವು ಜನರ ಆಶೋತ್ತರಗಳನ್ನು ಈಡೇರಿಸುವಂಥ ಕಾಲದಲ್ಲಿ ರೈತರ ಮತ್ತು ಹಿಂದುಳಿದ ವರ್ಗದವರ, ಬಡವರ ಅಲ್ಪ ಸಂಖ್ಯಾತರ, ದೀನ ದಲಿತರ ಉದ್ಧಾರದ ಮಾತುಗಳನ್ನು ಮಾತನಾಡಿ ಚುನಾವಣೆಯಲ್ಲಿ ಗೆದ್ದು ಬಂದಾಗ ಸುಭದ್ರವಾದ ಸರ್ಕಾರವನ್ನು ಕೊಡುತ್ತೇವೆ ಎನ್ನುವಂಥ ಮಾತುಗಳನ್ನು ಅವರು ಹೇಳಿದ್ದರು. ಅವರ ಸುಭದ್ರವಾದ ಸರ್ಕಾರ ಹೇಗಿತ್ತು ಎಂದು ನಾಡಿನ ಜನತೆ ಮತ್ತು ನಮಗೆಲ್ಲಾ ಅನುಭವಕ್ಕೆ ಬಂದಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಆ ಅನುಭವ ಬಂದಿದ್ದರಿಂದಲೇ ಇವತ್ತು ಈ ರಾಜ್ಯದ ಜನ ಜನತಾದಳಕ್ಕೆ ಬೆಂಬಲವನ್ನು ಕೊಟ್ಟು ಬಹುಮತದಿಂದ ಆರಿಸಿ ಕಳುಹಿಸಿದ್ದಾರೆ. ಕಾಂಗ್ರೇಸಿಗರನ್ನು 3ನೇ ಸ್ಥಾನದಲ್ಲಿ ಕುಳ್ಳಿರಿಸಿದ್ದಾರೆ. ಸಂಖ್ಯಾ ಬಲದಿಂದ ಸುಭದ್ರವಾದ ಸರ್ಕಾರ ಕೊಡುತ್ತೇವೆಂದು ಹೇಳುತ್ತಾ ಬಂದಿದ್ದ ಕಾಂಗ್ರೇಸ್ ಸರ್ಕಾರದವರು ಕಳೆದ 5 ವರ್ಷಗಳಲ್ಲಿ 3 ಜನ ಮುಖ್ಯ ಮಂತ್ರಿಗಳನ್ನು ಬದಲಾಯಿಸಿದರು, 4ನೇ ಮುಖ್ಯ ಮಂತ್ರಿಗಳು ಆಗುವಂಥ ಪರಿಸ್ಥಿತಿ ಕೂಡ ಬಂದಿತ್ತು. ರೈತರು ಬವಣೆ ಪಡುತ್ತಿರುವಂಥ ಸಂದರ್ಭದಲ್ಲಿ ಹಾಗೂ ಕರ್ನಾಟಕದ ಜನತೆ ತೀವ್ರವಾದ ಸಮಸ್ಯೆಯನ್ನು ಎದುರಿಸತಕ್ಕಂಥ ಸಂದರ್ಭದಲ್ಲಿ 5 ವರ್ಷಗಳ ಅವಧಿಯಲ್ಲಿ ಇವರು ಮಾಡಿದಂಥ ಆಡಳಿತದ ಪರಿಣಾಮ ಏನಾಗಿದೆಯೆಂದರೆ, ಜನ ಇವೊತ್ತು ಅವರಿಗೆ ಸರಿಯಾದ ಬುದ್ಧಿಯನ್ನು ಕಲಿಸಿದ್ದಾರೆ. ಅವರಿಗೆ ಬುದ್ಧಿ ಕಲಿಸಿದ್ದರಿಂದ ಇವತ್ತು ಜನತಾದಳ ಅಧಿಕಾರಕ್ಕೆ ಬಂತು. ರೈತರುಗಳು ಅತಿವೃಷ್ಟಿ ಮತ್ತು ಅನಾವೃಷ್ಟಿ ಹಾಗೂ ಕಷ್ಟಗಳಿಂದ ಪರದಾಡುತ್ತಿರುವಾಗ ಅವರ ಸಮಸ್ಯೆಗಳನ್ನು ಬಗೆಹರಿಸಲು ಒಳ್ಳೆಯ ಕಾರ್ಯಕ್ರಮ ಹಾಕಿಕೊಳ್ಳುವ ಬದಲು ಇವರು ಕಚ್ಚಾಟದಲ್ಲಿ ತೊಡಗಿದ್ದರಿಂದ ಜನರು ಸರ್ಕಾರವನ್ನು ಶಪಿಸುವಂಥ ಸಂದರ್ಭ ಬಂದಿತ್ತು. ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಇಡೀ ರಾಜ್ಯದ ಜನರು ತೊಂದರೆಯಲ್ಲಿರುವಾಗ

ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಚಿಂತನೆ ಮಾಡದೆ ಕೇವಲ ರಾಜಕಾರಣವನ್ನೇ ಮಾಡಿಕೊಂಡು ಹೊರಟಿದ್ದರು. ಆ ಸಂದರ್ಭದಲ್ಲಿ ಮಾನ್ಯ ಶೇಷನ್‌ರವರು ಚುನಾವಣೆ ಘೋಷಣೆ ಮಾಡಿದರು.

ಶ್ರೀ ಹೆಚ್. ಶಿವಪ್ಪ:- ಅವರು ಏನೇನು ಮಾಡಿದರು ಎನ್ನುವ ಬದಲಾಗಿ ನೀವು ಏನೇನು ಮಾಡುತ್ತೀರೆಂದು ಹೇಳಿ. ಇನ್ನೊಬ್ಬರನ್ನು ಟೀಕೆ ಮಾಡುವುದು ಬೇಡ.

ಶ್ರೀ ಸಿ.ಎಂ. ಉದಾಸಿ:- ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯ ಮಾನ್ಯ ಶಿವಪ್ಪನವರಿಗೂ ಗೊತ್ತು. ಅವರ ಸರ್ಕಾರ ಇದ್ದಾಗ ಅವರಿಗೂ ಭ್ರಮನಿರಸನವಾಗಿ ಕಾಂಗ್ರೆಸ್‌ನ್ನು ಬಿಟ್ಟು ಅವರು ಚುನಾವಣೆಯಲ್ಲಿ ಸ್ಪರ್ಧಿಸಿದರೆಂದು ನಾವು ಹೇಳಬೇಕಾಗಿಲ್ಲ. ಕಳೆದ 5 ವರ್ಷಗಳಲ್ಲಿ 179 ಜನ ಶಾಸನಕರು ಇರುವ ಕಾಂಗ್ರೆಸ್ ಸರ್ಕಾರದಲ್ಲಿ ಮಾನ್ಯ ವೀರೇಂದ್ರಪಾಟೀಲರು ಸರಿಯಾಗಿ ಕೆಲಸ ಕಾರ್ಯಗಳನ್ನು ಮಾಡಲಿಕ್ಕಾಗದೆ ಒಂದು ವರ್ಷದಲ್ಲೇ ಮುಖ್ಯಮಂತ್ರಿ ಪದವಿಯನ್ನು ಬಿಟ್ಟು ಖಜಾನೆಯಲ್ಲಿ 100 ಕೋಟಿ ರೂಪಾಯಿ ಹಣ ಇಟ್ಟು ಹೋದರು. ನಂತರ ಬಂದಂಥ ಮುಖ್ಯ ಮಂತ್ರಿಗಳು ಏನು ಮಾಡಿದರೆಂಬ ಬಗ್ಗೆ ನಾವು ಚಿಂತನೆ ಮಾಡಬೇಕು. ಏಕೆಂದರೆ ಅವರು ಚುನಾವಣೆ ಸಂದರ್ಭದಲ್ಲಿ ಗರೀಬಿ ಹಠಾವೋ, ಹಮೀರಿ ಹಠಾವೋ, ಬೇಕಾರಿ ಹಠಾವೋ ಎಂದು ಹೇಳುತ್ತಿದ್ದರು. ಇದರ ಬಗ್ಗೆ ಜನತೆಗೆ ಒಂದು ವರ್ಷದ ನಂತರ ಅರ್ಥವಾಯಿತೆಂದು ನಾನು ಭಾವಿಸಿಕೊಳ್ಳುತ್ತೇನೆ. ಈ ರಾಜ್ಯದ ಸಂಪತ್ತು ಲೂಟಿ ಮಾಡಿದ ಪರಿಣಾಮವಾಗಿ ಆರ್ಥಿಕವಾಗಿ ಈಗ ಬಹಳ ತೊಂದರೆಯಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಮ್ಮ ಗೌರ್ನರ್ ಭಾಷಣದಲ್ಲಿ ಏನು ಹೇಳಲಾಗಿದೆಯೋ ಅದರ ಬಗ್ಗೆ ಮಾತು ಹೇಳಿ. ಇಂಥ ರಿಸೋರ್ಸ್‌ನಲ್ಲಿ ಲೋಪ ಆಗಿದೆ. 100 ಕೋಟಿ ಹೋಗಿದೆ, 10 ಕೋಟಿ ಹೋಗಿದೆ ಎಂದು ನಿರ್ದಿಷ್ಟವಾದ ಉದಾಹರಣೆ ಕೊಡಿ. ಅದು ಬಿಟ್ಟು ಅವರು ಹಾಗೆ ಮಾಡಿದರು. ಹೀಗೆ ಮಾಡಿದರು ಎಂದು ಹೇಳುವುದು ಸರಿಯಲ್ಲ. ಏನು ಮಾಡಿದರು ? ಯಾರ ಮನೆಯನ್ನಾದರೂ ಹೊಡೆದರೆ ? ಆಶ್ರಯ ಸ್ಕೀಮ್ ಮಾಡಿಲ್ಲವೇ ? ಆರಾಧನ ಸ್ಕೀಮ್ ಆಗಿಲ್ಲವೇ ? ಮಿಸ್ ಯೂಸ್ ಆಗಿದ್ದರೆ ಇಂಥ ಕ್ಷೇತ್ರದಲ್ಲಿ ಹೀಗೆ ಆಗಿದೆ ಎಂದು ಹೇಳಿ.

ಶ್ರೀ ಸಿ.ಎಂ. ಉದಾಸಿ:- ಈ ಆರೋಪವನ್ನು ನಾವು ಮಾಡಿದ್ದಲ್ಲ. ಕಾಂಗ್ರೆಸ್‌ನವರೇ ಮಾಡಿದ್ದುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿಮಗೆ ಏನು ಹೇಳಬೇಕಾಗಿಯೋ ಹೇಳಿ. ಗೌರ್ನರ್ ಮುಖಾಂತರ ಏನು ಭಾಷಣ ಮಾಡಿಸಲಾಗಿದೆ. ನಿಮ್ಮ ಹೊಸ ಸರ್ಕಾರದ ನೀತಿ ಏನಿದೆ, ಏನು ಹೊಸ ರೂಪ ಕೊಡುತ್ತಿದ್ದೀರಿ – ಅದರ ಬಗ್ಗೆ ಹೇಳಿ. ಅದನ್ನು ಬಿಟ್ಟು ಖರ್ಗೆಯವರು ಹಾಗೆ ಮಾಡಿದರು ಎಂದು ಹೇಳಬೇಡಿ. ಅದು ಎಲ್ಲಾ ಮತದಾರರಿಗೂ, ಜನರಿಗೂ ಗೊತ್ತಿದೆ. ಅದು ಗೊತ್ತಾದ ಮೇಲೆ ನಿಮ್ಮ ಜಾಗದಲ್ಲಿ ನೀವು ಇದ್ದೀರಿ, ನಮ್ಮ ಜಾಗದಲ್ಲಿ ನಾವು ಇದ್ದೇವೆ. ಆದರೆ ನೀವು ಏನು ಮಾಡುತ್ತೀರಿ ಅದನ್ನು ಹೇಳಿ. ನಿಮ್ಮ ಪರಿಸ್ಥಿತಿಯೂ ಏನಾಗಿತ್ತು ಎಂದು ನನಗೂ ಗೊತ್ತಿದೆ. ನೀವು ಎರಡು ಸಾರಿ ಸೋತಿಲ್ಲವೇ ?

ಶ್ರೀ ಸಿ.ಎಂ. ಉದಾಸಿ:- ನಾನು ಒಂದೇ ಸಲ ಸೋತಿರುವುದು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು 1989ರ ಡಿಸೆಂಬರ್ 18ರಲ್ಲಿ ಒಂದು ಸಲ ಭಾಷಣ ಮಾಡಿದರು. ತಾವು ಹಿರಿಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ನಾನು ಮೂರನೇ ಸಲ ಆರಿಸಿ ಬಂದಿರಬಹುದು. ಒಂದು ಸಲ ಚುನಾವಣೆಯಲ್ಲಿ ಸೋತಿರಬಹುದು. ನಾವು ಸಿದ್ಧಾಂತಗಳ ಬಗ್ಗೆ ವಿಚಾರ ಮಾಡಬೇಕೇ ಹೊರತು ಚುನಾವಣೆಯಲ್ಲಿ ಸೋತಿದ್ದೇ ಒಂದು ಮೆರಿಟ್ ಆಗಿ ತೆಗೆದುಕೊಂಡು ಮಾತನಾಡುವುದಿಲ್ಲ.

ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಡಿಸೆಂಬರ್ 18, 1989ರಲ್ಲಿ ಏನು ಭಾಷಣ ಮಾಡಿದ್ದೀರಿ,

ಅದನ್ನು ತಾವು ನೆನಪು ಮಾಡಿಕೊಂಡು ಮಾತನಾಡಿ. ಚುನಾವಣೆ ಸಂದರ್ಭದಲ್ಲಿ ಜನತೆಗೆ ನಾವೇನು ವಚನಗಳನ್ನು ಕೊಟ್ಟಿದ್ದೇವೆ. ಅದನ್ನು ಮರೆತರೆ ಅದರ ಪರಿಣಾಮ ಏನಾಗುತ್ತದೆ ಎಂಬುದನ್ನು ರಾಜ್ಯದಲ್ಲಿ ಈ ಚುನಾವಣೆಯು ತೋರಿಸಿಕೊಟ್ಟಿದೆ. ತಾವು ಅಂದು ಅಧಿಕಾರಕ್ಕೆ ಬಂದರೆ ಎಲ್ಲಾ ಚುನಾವಣೆಗಳನ್ನು ನಡೆಸುತ್ತೇವೆ ಎಂದು ಹೇಳಿದ್ದೀರಿ. ಆದರೆ ನೀವು ಬಂದ ಮೇಲೆ ಪುರಸಭೆಗಳ ಚುನಾವಣೆಗಳನ್ನು ಮಾಡುವುದೊಂದನ್ನು ಬಿಟ್ಟರೆ ಬೇರೆ ಯಾವ ಚುನಾವಣೆಗಳನ್ನು ಮಾಡಿದ್ದೀರಿ? ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್, ಎಪಿಎಂಸಿಗಳಿಗೂ ಚುನಾವಣೆ ಮಾಡಿಲ್ಲ. ಜಿಲ್ಲಾ ಮತ್ತು ಮಂಡಳಪಂಚಾಯತ್‌ಗಳ ಚುನಾವಣೆಗಳನ್ನು ಯಾವುದೇ ಕಾರಣಕ್ಕೂ ಮುಂದೂಡಬಾರದು ಎಂದು ಇದ್ದರೂ ಕೂಡ, ಜನತೆಗೆ ಕೊಟ್ಟಿರತಕ್ಕಂಥ ಅಧಿಕಾರವನ್ನು ನೀವು ಮೊಟಕುಗೊಳಿಸಿದ್ದರಿಂದ ಆಗಬೇಕಾಗಿದ್ದ ಅಭಿವೃದ್ಧಿಕಾರ್ಯಗಳು ಯಾವರೀತಿಯಲ್ಲಿ ವಿಫಲವಾದವು ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಪ್ರಸ್ತಾವನೆಯ ಮೂಲಕ ಬೆಂಗಳೂರಿನ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಹೇಳುವಾಗ ಒಂದು ಮಾತನ್ನು ಹೇಳಿದ್ದರು. ಗ್ರಾಮೀಣ ಭಾಗದಲ್ಲಿನ ನೀರಿನ ತೊಂದರೆಗಳನ್ನು ಸರಿಪಡಿಸತಕ್ಕಂಥ ಜಿಲ್ಲಾ ಮತ್ತು ಮಂಡಳಿ ಪಂಚಾಯತ್‌ಗಳನ್ನು ಮೊಟಕುಗೊಳಿಸಿದ್ದನ್ನು ತಾವು ಅರ್ಥಮಾಡಿಕೊಳ್ಳಬೇಕು. ದಿವಂಗತ ನಜೀರ್‌ಸಾಬ್‌ರವರು ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಮಂಡಳ ಮತ್ತು ಜಿಲ್ಲಾ ಪಂಚಾಯತ್‌ಗಳ ಮೂಲಕ ಕುಡಿಯುವ ನೀರಿನ ವ್ಯವಸ್ಥೆಯನ್ನು ಸೂಕ್ತರೀತಿಯಲ್ಲಿ ಮಾಡಿ ಹೇಗೆ ಪ್ರಸಿದ್ಧರಾದರು ಎಂಬುದನ್ನು ತಿಳಿದುಕೊಳ್ಳಬೇಕು. ಬೆಂಗಳೂರಿನಂಥ ನಗರಕ್ಕೆ 300ಕೋಟಿ ರೂಪಾಯಿಗಳ ಕುಡಿಯುವ ನೀರಿನ ಯೋಜನೆಯನ್ನು ಮಾಡುತ್ತೇವೆ, ಬೆಂಗಳೂರಿನಲ್ಲಿ 10ನೇ ಮಹಡಿಯ ಮೇಲೆಯೂ ನಲ್ಲಿ ತಿರುಗಿಸಿದರೆ ನೀರು ಬರುವಂಥ ವ್ಯವಸ್ಥೆ ಇದೆ. ಆದರೆ ಗ್ರಾಮೀಣ ಭಾಗದ ಜನರಿಗೆ 2 ಮೈಲಿ ನಡೆದುಕೊಂಡು ಹೋದರೂ ನೀರು ಸಿಗದಂಥ ಪರಿಸ್ಥಿತಿ ಇದೆ. ಇದ್ದ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಲು ಕೂಡ ಸಾಧ್ಯವಾಗದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಬಿಟ್ಟಿದ್ದೀರಿ.

ಶ್ರೀ ಜಿ.ಎಸ್. ಶಿವನಂಜಪ್ಪ:- ಆಗ ಹಾಕಿದ ಬೋರ್‌ವೆಲ್‌ಗಳೆಲ್ಲವೂ ಒಣಗಿ ಹೋಗಿವೆ. ಈಗ ಹೊಸದಾಗಿ ಹಾಕಬೇಕಾಗಿದೆ. ಆ ಕರ್ಮ ಈಗ ನಿಮಗೇ ಬಂದಿದೆ.

ಶ್ರೀ ಕೆ. ಶ್ರೀನಿವಾಸಗೌಡ:- ಶಿವನಂಜಪ್ಪನವರಿಗೂ ಇನ್ನೂ ಕಾಂಗ್ರೆಸ್ ಮೋಹ ಬಿಟ್ಟಿಲ್ಲವೆಂದು ಕಾಣುತ್ತದೆ. ಅವರು ಪಕ್ಷೇತರರಾಗಿ ಸ್ಪರ್ಧಿಸಿ ಬಂದಿದ್ದಾರೆ, ಆದರೂ ಕಾಂಗ್ರೆಸ್ ಮೋಹಬಿಟ್ಟಿಲ್ಲ.

ಶ್ರೀ ಸಿ. ಎಂ. ಉದಾಸಿ:- ಶಿವನಂಜಪ್ಪನವರಿಗೆ ಇನ್ನೂ ಕಾಂಗ್ರೆಸ್ ಮೋಹ ಬಿಟ್ಟಿಲ್ಲ. ಅವರಿಗೆ ಸ್ವತಂತ್ರವಾಗಿ ಸ್ಪರ್ಧಿಸಿ ಗೆದ್ದರೂ ಮೋಹ ಮಾತ್ರ ಹೋಗಿಲ್ಲ.....

ಶ್ರೀ ಕೆ. ಶ್ರೀನಿವಾಸ ಗೌಡ:- ಕುಡಿಯುವ ನೀರು ಕೊಡುವುದು ಧರ್ಮ. ಅದನ್ನು ಕರ್ಮ ಎಂದು ದಯವಿಟ್ಟು ಹೇಳಬೇಡಿ. ಏಕೆಂದರೆ ನೀವು ಮೊದಲಿನಿಂದಲೂ ಅದನ್ನೇ ಕಲಿತು ಬಂದಿದ್ದೀರಿ.

ಶ್ರೀ ಜಿ.ಎಸ್. ಶಿವನಂಜಪ್ಪ:- ಆಗ ರಾಜಕಾರಣ ಮಾಡಿದರು. ಅದನ್ನೆಲ್ಲಾ ಹೇಳುವುದು ಬೇಡ ಮುಂದೆ ಏನೆಂದು ಹೇಳಿ....

ಅಧ್ಯಕ್ಷರು:- ಶ್ರೀನಿವಾಸಗೌಡರೇ, ಧರ್ಮ ಕರ್ಮದ ಬಗ್ಗೆ ಮಾತನಾಡುವವರು ಬೇರೆಯವರು ಇದ್ದಾರೆ. ಅವರವರ ವಿಚಾರದಲ್ಲಿ ಅವರವರೇ ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರು ಧರ್ಮದ ಬಗ್ಗೆ ಮಾತನಾಡಲು ಯಾರು ಅರ್ಹರು ಎಂದು ಹೇಳಿದ್ದಾರೆ. ಇನ್ನು ಮೇಲೆ ಯಡಿಯೂರಪ್ಪನವರು ಧರ್ಮದ ಬಗ್ಗೆ ಮಾತನಾಡಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರು, ಈ ದೇಶದ ಬಗ್ಗೆ, ಧರ್ಮದ ಬಗ್ಗೆ, ಮಾತನಾಡುವಂಥ ನೈತಿಕ ಹಕ್ಕು ಇದ್ದರೆ ಅದು ಬಿಜೆಪಿಯವರಿಗೆ ಮಾತ್ರ ಎಂದು ಮಾರ್ಮಿಕವಾಗಿ ಹೇಳಿದರು. ಅದನ್ನು ನೀವು ಕೂಡ ಒಪ್ಪಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ಹಾಗಾದರೆ ತಾವು ಅವರ ಹಣೆಯ ಮೇಲಿನ ಕುಂಕುಮ ನೋಡಿ ಹೇಳಿದೀರಿ ಎಂದು ಕಾಣುತ್ತದೆ.

ಅಧ್ಯಕ್ಷರು:- ನನ್ನ ಮನಸ್ಸು ನಿಮಗೆ ಒಬ್ಬರಿಗೆ ಚೆನ್ನಾಗಿ ಅರ್ಥವಾಗಿದೆ ಎಂದು ಕಾಣುತ್ತದೆ.

ಶ್ರೀ ಸಿ.ಎಂ. ಉದಾಸಿ:- ಜಲ್ಲಾ ಪರಿಷತ್ತು ಮತ್ತು ಮಂಡಳ ಪಂಚಾಯತ್‌ಗಳ ಮೂಲಕ ಜನತೆಗೆ ಕೊಟ್ಟ ಅಧಿಕಾರವನ್ನು ಕಸಿದುಕೊಂಡಿದ್ದರ ಪರಿಣಾಮವಾಗಿ ಇವೊತ್ತು ಕೊಳವೆಬಾವಿಗಳನ್ನು ಕೂಡ ರಿಪೇರಿ ಮಾಡಲು ಸಾಧ್ಯವಾಗದಿರುವಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದೀರಿ ಎಂದು ಹೇಳಬೇಕಾಗಿದೆ. ಅದರ ಪರಿಣಾಮ ಏನಾಗಿದೆ ಅಂದರೆ ಪ್ರತಿಯೊಬ್ಬ ಮಹಿಳೆ ನಿಮ್ಮನ್ನು ಶಪಿಸುವಂಥ ಪರಿಸ್ಥಿತಿ ಬಂತು. ಅದರ ಪರಿಣಾಮವೇ ಚುನಾವಣೆಯಲ್ಲಿ ಮತದಾರರ ತೀರ್ಮಾನವಾಗಿ ಬಂತು. ಹೀಗೆ ಜನತೆಯ ಕಲ್ಯಾಣ ಮಾಡುವುದರಲ್ಲಿ ವಿಫಲವಾಗಿ ಜನತೆಯನ್ನು ಶೋಷಣೆ ಮಾಡುವ ವಿಚಾರದಲ್ಲಿ ಮುಂದಾಗಿದ್ದರಿಂದ ಆರ್ಥಿಕವಾಗಿ ಸರಕಾರವು ದಿವಾಳಿಯಾಗಿದ್ದರಿಂದ ಈ ಪರಿಸ್ಥಿತಿಯು ಬಂತು. ಹೀಗಿರುವಾಗ ಚುನಾವಣೆಗಳ ಮೂಲಕ ಜನತೆಗೆ ಕೊಟ್ಟಿರತಕ್ಕಂಥ ಅಧಿಕಾರವನ್ನು ಮೊಟಕುಗೊಳಿಸಿ, ಹೊಸ ಪಂಚಾಯತ್ ಆಕ್ಟ್‌ನ್ನು ಜಾರಿಗೆ ತಂದಿದ್ದೀರಿ. ಅದನ್ನು ಒಂದು ವರ್ಷದ ಹಿಂದೆ ತಂದಿದ್ದೀರಿ. ಆದರೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಮಾಡಲು ನಿಮಗೆ ಆರುತಿಂಗಳು ಬೇಕಾಯಿತು. ಹೀಗೆ ಅವರು ಆರಿಸಿ ಬಂದರೂ ಕೂಡ ಅವರಿಗೆ ಯಾವ ಅಧಿಕಾರವೂ ಇಲ್ಲದೆ ಕಾರ್ಯದರ್ಶಿಯೇ ಅಧಿಕಾರ ಚಲಾಯಿಸುವ ಪರಿಸ್ಥಿತಿಯನ್ನು ತಂದ ಕಾರಣ ಜನತೆಯು ನಿಮಗೆ ಪಾಠವನ್ನು ಕಲಿಸುವಂತಾಯಿತು. ರೈತರ ಬಗ್ಗೆ ಬಹಳ ಕಳಕಳಿಯ ಮಾತನಾಡುವ ತಾವುಗಳು ಕಳೆದ ಐದು ವರ್ಷಗಳಿಂದ ಎಪಿಎಂಸಿಗಳಿಗೆ ಚುನಾವಣೆಯನ್ನು ಮಾಡಿಲ್ಲ. ಶೋಷಣೆಯನ್ನು ತಪ್ಪಿಸುತ್ತೇವೆಂದು ಹೇಳುವ ನೀವು ಆ ಬಗ್ಗೆಯೂ ಯಾವುದೇ ಕೆಲಸವನ್ನು ಮಾಡಿಲ್ಲ. ಅಂತೆಯೇ ನಿಮ್ಮ ಅಧಿಕಾರ ವ್ಯಾಪ್ತಿಯನ್ನು ಕೂಡ ಮೀರಿ ಹುಬ್ಬಳ್ಳಿಯ ಎಪಿಎಂಸಿಗೆ ನಾಮಕರಣವನ್ನು ಮಾಡಿದ್ದೀರಿ.

ಸರ್ಕಾರಿ ಅಧಿಕಾರಿಗಳು ಹುಬ್ಬಳ್ಳಿ ಎಪಿಎಂಸಿಯೊಳಗೆ ಇರಬೇಕಾದರೂ ಸಹಿತ ತಾವು ಬೈಫರ್ಕೇಶನ್ ಮಾಡಿ ತಮಗೆ ಬೇಕಾದ ಕಾಂಗ್ರೆಸಿನವರನ್ನು ಅಧ್ಯಕ್ಷರನ್ನಾಗಿ ಮಾಡಿ ಸದಸ್ಯರನ್ನು ಮಾಡಿದ್ದು ಕಾನೂನುಬಾಹಿರವಾಗಿದ್ದರೂ ಸಹಿತ ಅದನ್ನು ಮುಂದುವರೆಸಿಕೊಂಡು ಬಂದಿರಿ. ಇದು ಏನು ತೋರಿಸುತ್ತದೆ ಎಂದರೆ, ಅಧಿಕಾರಕ್ಕಾಗಿ ತಾವು ಏನು ಬೇಕಾದರೂ ಮಾಡುತ್ತೀರಿ ಎಂಬುದು ಈ ಕೆಲಸ ಕಾರ್ಯಗಳಿಂದ ನಮಗೆಲ್ಲರಿಗೂ ಅರ್ಥವಾಗುತ್ತಿದೆ. ಇದರ ಜೊತೆಗೆ ಸಹಕಾರಿ ಸಂಘಗಳ ಬಗ್ಗೆ ತಾವು ನಡೆದುಕೊಂಡ ರೀತಿಯನ್ನು ನಾನು ವಿವರವಾಗಿ ಇಲ್ಲಿ ಹೇಳಬಯಸುತ್ತೇನೆ. ಸಹಕಾರಿ ಮಂತ್ರಿಗಳಾಗಿ ಕೆಲಸ ಮಾಡಿದ ಹಿರಿಯರು ಸಹಿತ ಇಲ್ಲಿದ್ದಾರೆ. ಕರ್ನಾಟಕ ರಾಜ್ಯದ ಸಹಕಾರಿ ಸಂಘಗಳ ಚುನಾವಣೆಗಳನ್ನು ನಡೆಸದೇ ಇದ್ದ ಸಂದರ್ಭದಲ್ಲಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳ ಚುನಾವಣೆ ತಾಲ್ಲೂಕು ಮಟ್ಟದ ಚುನಾವಣೆಗಳನ್ನು ಮಾಡುವಾಗಲೂ ಸಹಿತ ನಾವು ನ್ಯಾಯಾಲಯಕ್ಕೆ ಹೋಗಿ ಮ್ಯಾಂಡಮಸ್ ಇಷ್ಯೂ ಮಾಡಿಸಿಕೊಂಡು ಚುನಾವಣೆ ಮಾಡಬೇಕಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದಿರಿ. ಏಕೆಂದರೆ ಹಾನಗಲ್ ತಾಲ್ಲೂಕಿನ ಒಂದು ಪಿಎಲ್‌ಡಿ ಬ್ಯಾಂಕಿನ ಚುನಾವಣೆಗೆ ಶ್ರೀನಿವಾಸಪುರದ ಪಿಎಲ್‌ಡಿ ಚುನಾವಣೆಗೆ ಕೋರ್ಟಿಗೆ ಹೋಗಿ ನಾವು ನ್ಯಾಯಾಲಯದ ಆದೇಶ ತಂದ ಮೇಲೂ ಸಹಿತ ಚುನಾವಣೆ ನಡೆಸಲು ವಿಳಂಬ ಮಾಡಿದಿರಿ. ಆ ರೀತಿ ಮಾಡಿದ ಮೇಲೂ

ಸಹಿತ ಅವಕ್ಕೆ ನಾಮಕರಣ ಮಾಡಿಕೊಂಡು ಹಿಂಬಾಗಿಲಿನಿಂದ ಅಧಿಕಾರಕ್ಕೆ ಬರಲು ಪ್ರಯತ್ನಪಟ್ಟಿರಿ. ಇದರ ಜೊತೆಗೆ ಸಕ್ಕರೆ ಕಾರ್ಖಾನೆಗಳು ಚುನಾವಣೆ ಮತ್ತು ಸಹಕಾರಿ ನೂಲಿನ ಗಿರಿಣಿಗಳ ಚುನಾವಣೆಗಳು ಸಹಿತ ತಮ್ಮ ಹಸ್ತಕ್ಷೇಪದಿಂದ ಅನೇಕ ಸಹಕಾರಿ ಸಂಘಗಳು ಹಾಳಾಗುವುದಕ್ಕೆ ಕಾರಣರಾದಿರಿ. ಆರ್ಥಿಕವಾಗಿ ನಮ್ಮ ರಾಜ್ಯ ಮುಂದೆ ಹೋಗಬೇಕು.

ಒಬ್ಬ ಮಾನ್ಯ ಸದಸ್ಯರು:- ಅಧ್ಯಕ್ಷರೇ ಅವರು ಇನ್ನು ಮುಂದೆ ಯಾವುದೇ ಸಹಕಾರಿ ಸಂಘಗಳ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂಬ ಭರವಸೆ ಕೊಡುತ್ತಾರೋ ಕೇಳಿರಿ ?

ಅಧ್ಯಕ್ಷರು:- ಕೊಡಿ ಭರವಸೆ, ಕೊಡುವುದಕ್ಕೇನು ? ನೀವು ಸಹಕಾರ ಮಂತ್ರಿಯಾದಾಗ ಹಾಗೇ ಮಾಡುತ್ತೇನೆ ಎಂದು.

ಶ್ರೀ ಸಿ.ಎಂ. ಉದಾಸಿ:- ಅವರಿಗೆ ಮಾತನಾಡಲು ಅವಕಾಶ ಸಿಕ್ಕಿದಾಗ ಅವರು ಹೇಳಲಿ. ಸಹಕಾರಿ ಸಕ್ಕರೆ ಕಾರ್ಖಾನೆ ಬಗ್ಗೆ ಅದರಲ್ಲೂ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ಬಗ್ಗೆ ಅವರು ನಡೆದುಕೊಂಡ ರೀತಿ ಒಂದು ದಾಖಲೆಯಲ್ಲಿದೆ. ಆ ಕಾರ್ಖಾನೆಗೆ ಮೂರು ಸಹ ಚುನಾವಣೆ ಪ್ರಕ್ರಿಯೆ ಪ್ರಾರಂಭವಾದರೂ ಚುನಾವಣೆಗಳನ್ನು ಮುಂದೂಡಿದರು.

ನ್ಯಾಯಾಲಯದಿಂದ ಆದೇಶ ಬಂದ ಮೇಲೆ ಏನು ಮಾಡಿದರು ಎಂದರೆ ಚುನಾವಣೆಯಲ್ಲಿ ತಮ್ಮ ಪಕ್ಷದವರೇ ಆರಿಸಿ ಬರಬೇಕೆಂದು 12 ವಿಭಾಗಗಳನ್ನು ಮಾಡುವುದಕ್ಕೆ ಹೊರಟರು. ಅಲ್ಲಿ ಸರ್ವ ಸಾಧಾರಣ ಸಭೆಯಲ್ಲಿ ಅದಕ್ಕೆ ಗೊತ್ತುವಳಿ ಮಾಡಬೇಕೆಂದು ಪ್ರಯತ್ನಪಟ್ಟರೂ ಸಹ ಆ ಸಭೆಯಲ್ಲಿ ಇವರಿಗೆ ವಿರೋಧವಾಗಿ ತೀರ್ಮಾನವಾದರೂ ಸಹಿತ ಯಾವ ಬೈಲಾಗಳ ತಿದ್ದುಪಡಿ ವಿರೋಧವಾಗಿ ಜನಗಳು ತೀರ್ಮಾನ ಕೊಟ್ಟರೂ ಸಹಿತ ಎರಡು ಸಲ ಅದೂ ಕರ್ನಾಟಕ ಇತಿಹಾಸದಲ್ಲಿ ಸರ್ವ ಸಾಧಾರಣ ಸಭೆಗೆ ಚುನಾವಣೆ ನಡೆಯಬೇಕಾದಾಗ ಸಿಂಬಲ್ ಕೊಟ್ಟು ಪರ ಮತ್ತು ವಿರೋಧ ಮತ ಕೊಡಿಸುವ ಕೆಲಸ ಮಾಡಿಸಿದರು. ಮಾಡಿದರೂ ಚುನಾವಣೆಗಳಲ್ಲಿ ಸೋತಾಗಲೂ ಕೂಡ ಸರ್ಕಾರ ತನ್ನ ಅಧಿಕಾರವನ್ನು ಸೆಕ್ಷನ್ 121 ಕಲಮನ್ನು ಉಪಯೋಗ ಮಾಡಿಕೊಂಡು ಕಾಯಿದೆ ತಿದ್ದುಪಡಿ ಮಾಡಿದರು. ಇದನ್ನೆಲ್ಲಾ ನೋಡಿದರೆ ಇವರಿಗೆ ಯಾವರೀತಿ ಅಧಿಕಾರ ದಾಹ ಇತ್ತು ಎಂಬ ಬಗ್ಗೆ ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಕೊನೆಗೆ ಏನಾಯಿತೆಂದರೆ, ಚುನಾವಣೆಯಲ್ಲಿಯಾ ಸಹಿತ 18ರಲ್ಲಿ 15 ಜನ ನಮ್ಮ ಪಕ್ಷದವರು ಗೆದ್ದಾಗ ಅದಕ್ಕೆ 15ಜನ ನಾಮಕರಣ ಮಾಡಲು ಸಾಧ್ಯವೇ ಎಂದು ಪರಿಶೀಲನೆ ಮಾಡಲು ಹೊರಟರು. ಕೊನೆಗೆ 11 ಜನರನ್ನು ನಾಮಕರಣ ಮಾಡಿದರು. ಅನಂತರ ಆ ಪ್ರಶ್ನೆ ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ ಪ್ರಸ್ತಾಪವಾದಾಗ ನಾವು ಕಾನೂನು ವ್ಯಾಪ್ತಿ ಮೀರಿ ಮಾಡುವುದಿಲ್ಲ ಎಂದರು. ನ್ಯಾಯಾಲಯದ ಆಜ್ಞೆ ಮೀರಿ ಮಾಡುವುದಿಲ್ಲ ಎಂದರು. ನ್ಯಾಯಾಲಯ ನಿಶ್ಚಿತವಾಗಿ ಆದೇಶ ಕೊಟ್ಟರೂ ಸಹ 11 ಜನ ನಾಮಕರಣ ಮಾಡಿದ್ದನ್ನು ಸುಪ್ರೀಂ ಕೋರ್ಟ್ ಸ್ಟ್ರಕ್‌ಡೌನ್ ಮಾಡಿದಾಗಲೂ ಸಹಿತ ಅದನ್ನು ತಡೆಹಿಡಿಯಲಿಕ್ಕೆ ಪ್ರಯತ್ನಪಟ್ಟರು. ಇದು ಏನು ತೋರಿಸುತ್ತದೆ ಎಂದರೆ, ಅಧಿಕಾರ ದುರುಪಯೋಗ ಮಾಡಿಕೊಳ್ಳುವ ಬಗ್ಗೆ ಅವರು ಮಾಡಿರುವ ಕೆಲಸದಿಂದ ಸಹಕಾರಿ ಸಂಘಗಳು ಬಹಳ ಗಂಭೀರ ಪರಿಸ್ಥಿತಿಯಲ್ಲಿವೆ ಎಂದು ಹೇಳಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣದ ಮೇಲೆ ಕೃತಜ್ಞತೆ ಸಲ್ಲಿಸುವುದಕ್ಕೆ ನಿಂತಿರುವುದು. ಆದರೆ ಈಗ ಪ್ರತಿ ಮಾತಿನಲ್ಲೂ ನಾವು ತಪ್ಪು ಮಾಡಿದಿರಿ ಎಂದು ಹೇಳುತ್ತಿದ್ದೀರಿ. ನಾವು ತಪ್ಪು ಮಾಡಿದ್ದೇವೆ ಎಂದೇ ಇಟ್ಟುಕೊಳ್ಳಿ. ಅದಕ್ಕಾಗಿಯೇ ಜನ ನಿಮಗೆ ವೋಟ್ ಕೊಟ್ಟಿರುವುದು. ದಯವಿಟ್ಟು ತಾವು ಟ್ರಾಕ್ ತಪ್ಪಿದ್ದೀರಿ ಎಂದು ಏಕೆ ಹೇಳುತ್ತಿದ್ದೇನೆಂದರೆ, ತಾವು ಕೃತಜ್ಞತೆ ಸಲ್ಲಿಸಬೇಕಾದರೆ ತಾವು ಚುನಾವಣೆಗೆ ಬರಲು ಪ್ರಣಾಳಿಕೆ ಹೊರಡಿಸಿದ್ದಿರಲ್ಲ ಅದನ್ನು ಆಧಾರವಾಗಿಟ್ಟುಕೊಂಡು, ರಾಜ್ಯಪಾಲರ ಭಾಷಣಕ್ಕೂ ಪ್ರಣಾಳಿಕೆಗೂ

ಎಷ್ಟರಮಟ್ಟಿನ ಹೋಲಿಕೆ ಇದೆಯೆಂದು ತಾವು ಹೇಳಿದರೆ ಬಹುಶಃ ನಮಗೆ ಅರ್ಥವಾಗುತ್ತದೆ. ನಮಗ್ಯಾಕೆ ಪದೇಪದೇ ಹೇಳುತ್ತಿದ್ದೀರಿ? ಹೌದು, ಜನ ವಿಶ್ವಾಸವಿಟ್ಟು ಈ ಸಲ ನಿಮಗೆ ವೋಟ್ ಕೊಟ್ಟಿದ್ದಾರೆ, ನೀವೇನು ಮಾಡುತ್ತೀರಿ ಹೇಳಿ ದಯವಿಟ್ಟು. ನೀವು ಏಕೋ ಟ್ರಾಕ್ ತಪ್ಪಿದಂತೆ ಕಾಣುತ್ತದಲ್ಲ.

ಶ್ರೀ ಸಿ.ಎಂ. ಉದಾಸಿ:– ನಾವು ಚುನಾವಣಾ ಪ್ರಣಾಳಿಕೆಯಲ್ಲಿ ನಮ್ಮ ಸರಕಾರ ಅಧಿಕಾರಕ್ಕೆ ಬಂದರೆ ಏನು ಮಾಡುತ್ತೇವೆಂದು.....

ಅಧ್ಯಕ್ಷರು:– ತಾವಿನ್ನೂ ಮಾನ್ಯ ಖರ್ಗೆಯವರೇ ಸಹಕಾರ ಮಂತ್ರಿಗಳೆಂದು ಮಾತನಾಡುತ್ತೀರಿ, ಆದರೆ ಅವರು ಅಲ್ಲ ಎಂಬ ಮಾತನ್ನು ನಿಮಗೆ ನೆನಪು ಮಾಡಿದರು. ಖರ್ಗೆಯವರು ಈ ಕಡೆ ಗಮನ ಕೊಟ್ಟಿಲ್ಲ. ಬೇರೆ ಪೇಪರ್ ಕೈಗೆತ್ತಿಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಅವರ ದುರ್ದೈವವೋ, ನಮ್ಮ ದುರ್ದೈವವೋ ಗೊತ್ತಿಲ್ಲ. ಈಗ ನಾನು ಒಂದು ಅರ್ಜಿ ನೋಡುತ್ತಿದ್ದೇನೆ. ಅದರ ಬಗ್ಗೆ ಹೇಳಬೇಕಾಗುತ್ತದೆ. ಎಸ್.ಆರ್. ಪಾಟೀಲ್ ಅಧ್ಯಕ್ಷರು, ಕರ್ನಾಟಕ ಕೋ–ಆಪರೇಟಿವ್ ಸಕ್ಕರೆ ಕಾರ್ಖಾನೆ ಹಾವೇರಿ ಅವರೊಂದು ಅರ್ಜಿ ನೀಡಿದ್ದಾರೆ. ನಾನು ಕಾಂಗ್ರೆಸ್ ಪಕ್ಷದ ವತಿಯಿಂದ ಈ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ದಿನಾಂಕ 26–9–96ರಂದು ಆಯ್ಕೆಯಾಗಿದ್ದೇನೆ. ಈ ಮಧ್ಯೆ ದಿನಾಂಕ 1–12–94 ರಂದು ಸರ್ವೋಚ್ಚ ನ್ಯಾಯಾಲಯ ಒಂದು ತೀರ್ಪು ನೀಡಿದ್ದಾರೆ. ಅದರ ಪ್ರತಿಯನ್ನು ಲಗತ್ತಿಸಿದ್ದೇನೆ. ನನ್ನನ್ನು ಅದರಲ್ಲಿ ಪ್ರತಿವಾದಿಯನ್ನಾಗಿ ಮಾಡಬೇಕೆಂದು ಹೀಗೆ ಇದರೊಳಗೆ ಎಲ್ಲಾ ಚರಿತ್ರೆ ಅಲ್ಲಿ ಏನೇನು ಆಗಿದೆ ಎಂದು ಇದೆ. ಏನೇನಾಗಿದೆ ಎಂದು ಅವರೇನು ಹೇಳುತ್ತಿದ್ದಾರಲ್ಲ, ಈಗ ಅವರ ಸರಕಾರ ಬಂದ ಮೇಲೆ ಏನೇನು ಮಾಡಿದ್ದಾರೆಂಬುದು ಇದರಲ್ಲಿ ಸ್ವಲ್ಪ ಬಂದ ಹಾಗೆ ಕಾಣುತ್ತದೆ. ತಮಗೆ ಇದನ್ನು ಕಳಿಸಿಕೊಡುತ್ತೇನೆ. ಸುಮ್ಮನೆ ಇದರ ಮೇಲೆ ವಾದ ಏಕೆ?

ಅಧ್ಯಕ್ಷರು:-- ನಾನು ನಿಮಗೇನೋ ಉಪಕಾರ ಮಾಡುವುದಕ್ಕೆ ಹೋದರೆ ನೀವು ನನ್ನ ಮೇಲೆ ಹೊರೆ ಹಾಕಿದಿರಲ್ಲ....

ಶ್ರೀ ಸಿ.ಎಂ. ಉದಾಸಿ:– ನಾನು ಇದನ್ನು ಹೇಳಬಾರದೆಂದು ಇದ್ದೆ. ಸುಪ್ರೀಂ ಕೋರ್ಟಿನಲ್ಲಿ ಏನಾಯಿತೆಂದು ಹೇಳುತ್ತೇನೆ. 26–9–94ರಂದು ಸಹಕಾರಿ ಸಕ್ಕರೆ ಕಾರ್ಖಾನೆಗೆ ಚುನಾವಣೆ ನಡೆಯಿತು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಸಹಕಾರಿ ಕ್ಷೇತ್ರದ ಬಗ್ಗೆ ಅವರು ತಾವು ತಪ್ಪು ಮಾಡಿದ್ದೀರಿ ಎನ್ನುವುದು ಇವರು ಅವರು ತಪ್ಪು ಮಾಡಿದ್ದಾರೆನ್ನುವುದನ್ನು ಹೇಳುತ್ತಿದ್ದಾರೆ. ಒಟ್ಟು ಕರ್ನಾಟಕ ಚಿತ್ರ ನಮ್ಮ ಮುಂದೆ ಇಟ್ಟುಕೊಂಡು ಸಹಕಾರಿ ಕ್ಷೇತ್ರಕ್ಕೆ ಬಲ ಬರತಕ್ಕಂತಹ ಒಂದು ಜವಾಬ್ದಾರಿ ಕೆಲಸವನ್ನು ನಾವೆಲ್ಲರೂ ಸೇರಿಕೊಂಡು ಮಾಡಿದರೆ ಸಹಕಾರಿ ಕ್ಷೇತ್ರ ಬೆಳೆಯುತ್ತದೆ. ಖಾಸಗಿ ಕ್ಷೇತ್ರ, ಸಹಕಾರಿ ಕ್ಷೇತ್ರ, ಜಂಟಿ ಕ್ಷೇತ್ರ, ಸಕ್ಕರೆ ಕಾರ್ಖಾನೆಯಲ್ಲಿ ಏನೇನು ಪರಿಣಾಮ ಆಗಿದೆ. ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಪೂರ್ಣ ಸಹಕಾರಿ ಕ್ಷೇತ್ರವೆಂದು ನಾವು ರೈತರಿಂದ ಆರಿಸಿ ಬರುವುದಷ್ಟೆ ಪೂರ್ಣ ಹೊಣೆಗಾರಿಗೆ ನಮ್ಮದು ಏನು ಇದೆ ಎಂದು ವಿಚಾರ ಮಾಡಬೇಕು. ಈಗ ಷುಗರ್ ಟೆಕ್ನಾಲಜಿ ಬಗ್ಗೆ, ಷುಗರ್ ಇಂಡಸ್ಟ್ರಿ ಟೆಕ್ನಾಲಜಿ ಬಗ್ಗೆ ಏನೇನೂ ಗೊತ್ತಿರುವುದಿಲ್ಲ. ಒಬ್ಬ ಸಹಕಾರಿ ಕ್ಷೇತ್ರದಲ್ಲಿ ಜವಾಬ್ದಾರಿಯುತವಾಗಿ ಕೆಲಸ ಮಾಡಿರುತ್ತಾನೆ. ಸರಕಾರದಿಂದ ಒಬ್ಬ ಎಂ.ಡಿ.ಯನ್ನು ಕಳಿಸುತ್ತೇವೆ. ಒಬ್ಬ ಕಾರ್ಯದರ್ಶಿಯನ್ನು ಕಳಿಸುತ್ತೇವೆ. ನಾವು ಅವರೇನು ಕೆಲಸ ಮಾಡಿದರೂ ಇಟ್ಟುಕೊಳ್ಳಬೇಕಾಗುತ್ತದೆ. ಸಹಕಾರಿ ಕ್ಷೇತ್ರ ಅಂದರೆ ಪೂರ್ಣ ಅವರದ್ದೇ ಜವಾಬ್ದಾರಿ ಕ್ಷೇತ್ರವಾಗುತ್ತದೆ. ಎಂ.ಡಿ.ಯನ್ನು ನಾವೇ ಸ್ವತಃ ನೇಮಕ ಮಾಡಬೇಕಾಗುತ್ತದೆ. ನಮ್ಮ ಕಾರ್ಖಾನೆಯನ್ನು ಅತ್ಯಂತ

ಜವಾಬ್ದಾರಿಯಿಂದ ನಡೆಸತಕ್ಕಂತಹ ಕಾನೂನು ಮಾಡಬೇಕಾಗುತ್ತದೆ. ನಾಮಕರಣದ ಮೂಲಕ ನಾವು ತಪ್ಪು ಮಾಡಿದ್ದೇವೆ, ಅವರು ತಪ್ಪು ಮಾಡಿದ್ದಾರೆ ಎಂದು ಹೇಳಿ ನೀವು ಒಂದು ಸಲ ಇಲ್ಲಿಗೆ ಬರುವುದು ಅವರು ಅಲ್ಲಿಗೆ ಹೋಗುವುದು ಬೇಡ. ಒಟ್ಟಿನಲ್ಲಿ ಕರ್ನಾಟಕದಲ್ಲಿ ಸಹಕಾರಿ ಕ್ಷೇತ್ರದ ಬಗ್ಗೆ ಎಲ್ಲರೂ ಸೇರಿ ಒಂದು ಕಲ್ಪನೆ ಇಟ್ಟುಕೊಂಡು ಮಹಾರಾಷ್ಟ್ರದಲ್ಲಿ ಏನೇನು ಕಾನೂನು ಮಾಡಿದೆ ಅದರ ಪ್ರಕಾರ ಸಹಕಾರಿ ಕ್ಷೇತ್ರ ಬೆಳೆಸಿದರೆ ಮಾತ್ರ ಕರ್ನಾಟಕದಲ್ಲಿ ಸಹಕಾರಿ ಕ್ಷೇತ್ರ ಬೆಳೆಯಲಿಕ್ಕೆ ಸಾಧ್ಯ. ಇಲ್ಲದಿದ್ದರೆ ನಾವು ಕೇವಲ ಶಾಸನ ಸಭೆಯಲ್ಲಿ ಅವರನ್ನು ಟೀಕೆ ಮಾಡುವುದು ಅವರು ನಮ್ಮನ್ನು ಟೀಕೆ ಮಾಡುವುದು ಎನ್ನುವ ಭಾವನೆಯಲ್ಲಿ ಹೊರಟು ಹೋಗುತ್ತದೆ. ಸಹಕಾರಿ ಕ್ಷೇತ್ರದ ಬಗ್ಗೆ ಇಡೀ ಶಾಸನ ಸಭೆಯಲ್ಲಿ ಒಂದು ಕಲ್ಪನೆ ಇರಬೇಕು. ಸಹಕಾರಿ ಕ್ಷೇತ್ರ ಎಂದರೆ ಹೇಗಿರಬೇಕು. ಅದು ಜನರ ಕ್ಷೇತ್ರ, ಅದು ಅಭಿವೃದ್ಧಿ ಕ್ಷೇತ್ರ. ಅದು ಯಾವ ರೀತಿ ಬೆಳೆಯಬೇಕು ಎಂದು ವಿಚಾರ ಮಾಡಬೇಕು. ಉದಾಹರಣೆಗೆ ಹೇಳುವುದಾದರೆ, ನಾನು ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ ನಿರ್ದೇಶಕನಾಗಿ ಇದ್ದೆ 7 ವರ್ಷ ಆಯಿತು. ಎಕ್ಸ್‌ಪ್ಯಾನ್‌ಷನ್‌ಗೆ 7 ವರ್ಷಗಳಿಂದ ಒಂದು ಫ್ರಾಡ್ ನಡೆದಿಲ್ಲ. ಇದುವರೆಗೂ ರೈತರು ಎಷ್ಟು ಕಷ್ಟಪಟ್ಟಿದ್ದಾರೆಂದು ಹೇಳಲಿಕ್ಕೆ ಅಸಾಧ್ಯ. ಅದು ಪೂರ್ಣ ಕೇಂದ್ರ ಸರ್ಕಾರದ ಹಿಡಿತದಲ್ಲಿದೆ. ನಮ್ಮ ಸಕ್ಕರೆ ಕಾರ್ಖಾನೆಗೆ ಸಂಬಂಧಪಟ್ಟ ನೂರು ಕೋಟಿ ಆಸ್ತಿ ನಮ್ಮದು ಇರುವುದು. ನಾನು ಸಾಲ ತೆಗೆದುಕೊಳ್ಳಬೇಕಾದರೆ ಕೇಂದ್ರ ಮತ್ತು ರಾಜ್ಯ ಸರಕಾರವನ್ನು ಕಾಯುತ್ತಾ ಕುಳಿತುಕೊಳ್ಳಬೇಕು. ದಯವಿಟ್ಟು ಸುಮ್ಮನೆ ಎಲ್ಲರನ್ನೂ ಟೀಕೆ ಮಾಡುವುದು ಬೇಡ. ಎಲ್ಲರೂ ಸೇರಿ ಸಹಕಾರಿ ಕ್ಷೇತ್ರದ ಬಗ್ಗೆ ಜವಾಬ್ದಾರಿಯುತವಾಗಿ ಕೆಲಸ ಮಾಡಿದರೆ ಕರ್ನಾಟಕದಲ್ಲಿ ಸಹಕಾರಿ ಕ್ಷೇತ್ರ ಉಳಿಯುತ್ತದೆ.

ಶ್ರೀ ಸಿ.ಎಂ. ಉದಾಸಿ:– ಮಾನ್ಯ ಸದಸ್ಯರು ನನಗೆ ಹೊಸಬರು. ಸಹಕಾರಿ ಸಕ್ಕರೆ ಕಾರ್ಖಾನೆ ಬಗ್ಗೆ ನಾನೇನು ಹೇಳುತ್ತಿದ್ದೆ ಎಂದು ಕೇಳಿ. ಲಾಭದಲ್ಲಿ ನಡೆಯುವಂತಹ ಒಂದು ಕಾರ್ಖಾನೆ ಎಂಬ ಪರಿಕಲ್ಪನೆ ತಮಗೆ ಇಲ್ಲ. ಚುನಾವಣೆ ನಡೆದ ಮೇಲೆ ಅಧ್ಯಕ್ಷರ ಚುನಾವಣೆ ನಡೆದ ದಿವಸವೇ ಸರ್ವೋಚ್ಚ ನ್ಯಾಯಾಲಯದಲ್ಲಿ ನಾಮಕರಣವನ್ನು ರದ್ದುಪಡಿಸಿದರು. ಯಾವಾಗ 18 ಜನ ಸದಸ್ಯರು ಚುನಾಯಿತ ಪ್ರತಿನಿಧಿಗಳು ಇದ್ದರು. ಅವರಲ್ಲಿ ಕೇವಲ 15 ಜನ ನಾವು ಆರಿಸಿ ಬಂದಿದ್ದರಲ್ಲಿ ಒಬ್ಬರನ್ನು ಅವರು ಒಡೆದುಕೊಂಡು ತೆಗೆದುಕೊಂಡಿದ್ದರು. ನಾವು 14 ಜನ ಇದ್ದೆವು. ಅವರು 4 ಜನರು ಇದ್ದರು. ಆ ಸಂದರ್ಭದಲ್ಲಿ ನಾಮಕರಣ ಹೊಂದಿದ ಸದಸ್ಯರನ್ನು ತೆಗೆದುಕೊಂಡು ಮಧ್ಯಾಹ್ನ 2 ಗಂಟೆಗೆ ಚುನಾವಣೆಯಾಗಿದೆ, ಅಂದೇ ಸುಪ್ರೀಂ ಕೋರ್ಟಿನಲ್ಲೂ ಸಹಿತ ನಾಮಕರಣ ರದ್ದಾಗಿದೆ. ಅವರಿಗೆ ಮಾನ ಮರ್ಯಾದೆ ಮತ್ತು ಕಾನೂನಿಗೆ ಗೌರವ ಕೊಡುವ ವಿಚಾರ ಇದ್ದಿದ್ದರೆ ಅಂದೇ ಅವರು ರಾಜೀನಾಮೆಯನ್ನು ಕೊಡಬೇಕಾಗಿತ್ತು. ನಾಮಕರಣ ಹೊಂದಿದ ಸದಸ್ಯರಿಗೆ ಅಂದಿನಿಂದಲೇ ಹಕ್ಕು ಇಲ್ಲ ಎನ್ನುವುದು ಗೊತ್ತಾದಾಗ ಅವರು ಅವತ್ತೇ ರಾಜಿನಾಮೆಯನ್ನು ಕೊಡಬಹುದಿತ್ತು. ಆದರೆ ಅವರು ರಾಜೀನಾಮೆಯನ್ನು ಕೊಡಲಿಲ್ಲ. ಮತ್ತೆ ಅದರ ಬಗ್ಗೆ ಸರ್ವೋಚ್ಚನ್ಯಾಯಾಲಯಕ್ಕೆ ಹೋಗಿ ಈ ಆಜ್ಞೆಯನ್ನು ಜಾರಿಗೆ ತರುವಲ್ಲಿ ತೊಂದರೆಯಾಗಿರುವ ಬಗ್ಗೆ ಗಮನಕ್ಕೆ ತಂದಾಗ 26–9–94ರಂದು ತೀರ್ಮಾನವಾಗಿ ಏನು ಅಧ್ಯಕ್ಷರು, ಉಪಾಧ್ಯಕ್ಷರ ಚುನಾವಣೆಯಾಗಿದೆ. ಅದರ ಹಿಂದಿನ ಪರಿಸ್ಥಿತಿ ಮುಂದುವರಿಯಬೇಕು ಹಾಗೂ 26–9–94 ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಆಗಿರುವಂಥ ಏನು ತೀರ್ಪಿದೆಯಲ್ಲ, ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳನ್ನು ಮನ್ನಾ ಮಾಡಬೇಕು ಮತ್ತು ತೀರ್ಪಿನ ಪ್ರಕಾರ ನಾಮಕರಣವನ್ನು ಕೇವಲ 7ಕ್ಕೆ ಮಾಡಬಹುದೆಂದು ಘೋಷಣೆ ಮಾಡಿದ್ದಾರೆಯೇ ಹೊರತು ಅದರ ಬಗ್ಗೆ ಸನ್ಮಾನ್ಯ ಖರ್ಗೆಯವರಿಗೆ ಗೊತ್ತಿಲ್ಲ. ಅವರು ಪತ್ರ ಕೊಟ್ಟಿರುವುದನ್ನು ಇಲ್ಲಿ ಅವರು ಕೊಟ್ಟಿರಬೇಕು ಎಂದು ನಾನು ಭಾವಿಸಿಕೊಂಡಿದ್ದೇನೆ. ಹೀಗಿರಬೇಕಾದರೆ ಕೇವಲ ಒಂದು ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ವಿಚಾರವಲ್ಲ, ಬನಹಟ್ಟಿಯ ನೂಲಿನ ಗಿರಣಿಯ ಪರಿಸ್ಥಿತಿಯೇನಾಯಿತು.

ಸವದತ್ತಿಯ ನೂಲಿನ ಗಿರಣಿಯ ಆಡಳಿತದಲ್ಲಿ ಹಸ್ತಕ್ಷೇಪದಿಂದದ ಏನಾಗಿದೆ ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ವಿದೇಶಕ್ಕೆ ರಫ್ತು ಮಾಡುವಂಥ ಒಂದು ಒಳ್ಳೆಯ ಉದ್ದಿಮೆಯಾಗಿ ಬೆಳೆಯುವಂಥ ಬನಹಟ್ಟಿ ಸಹಕಾರಿ ನೂಲಿನ ಗಿರಣಿಗೆ ಆ ಸಂದರ್ಭದಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಎಷ್ಟರಮಟ್ಟಿಗೆ ಕಾಂಗ್ರೆಸ್ಸಿಗರು ಗೌರವ ಕೊಟ್ಟರು ಎನ್ನುವುದನ್ನು ನಾವು ಇಲ್ಲಿ ಅರ್ಥಮಾಡಿಕೊಳ್ಳಬೇಕಾಗಿದೆ. ಆದರ ಪರಿಣಾಮವೇನಾಗಿದೆಯೆಂದರೆ, ಇವೊತ್ತು ಸಹಕಾರಿ ರಂಗದಲ್ಲಿ ಸನ್ಮಾನ್ಯ ಪುಟ್ಟಣ್ಣಯ್ಯನವರು ಮಾತನಾಡಿದಂತೆ ನಿರಾಸಕ್ತಿ ಮೂಡುವಂಥ ಒಂದು ಸಂದರ್ಭದಲ್ಲಿ ಅದರ ಬಗ್ಗೆ ವೈಪರೀತ್ಯ ಭಾವನೆ ಮೂಡುವಂಥ ಪರಿಸ್ಥಿತಿ ಬಂದಿದೆ ಎನ್ನುವಂಥ ಮಾತನ್ನು ಏನು ಹೇಳಿದ್ದಾರಲ್ಲ, ಇದು ಸುಧಾರಣೆಯಾಗಬೇಕು ಎನ್ನುವ ದೃಷ್ಟಿಯಲ್ಲಿ ನಾನು ಸಹಿತ ಅವರ ಮಾತಿಗೆ ಸಮ್ಮತಿಸುತ್ತೇನೆ. ಆದರೆ ಒಂದನ್ನು ಮಾತ್ರ ನಿಶ್ಚಿತವಾಗಿ ಅರ್ಥಮಾಡಿಕೊಳ್ಳಬೇಕು. ರೈತರ ಬಗ್ಗೆ ಕಳಕಳಿಯ ಮಾತುಗಳನ್ನಾಡುವಂಥ ಜನರು ರೈತರ ಹಿತಚಿಂತನೆಯ ಬಗ್ಗೆ ಮಾತನಾಡುವಂಥ ಜನರು ಅವರು ಬಹಳಷ್ಟು ಹೇಳಿದರು. ಈ ಚುನಾವಣೆಯ ಪೂರ್ವದಲ್ಲಿ ಮೂರೂವರೆ ವರ್ಷದ ಮೊದಲ ಲೋಕಸಭೆ ಚುನಾವಣೆ ನಡೆದಾಗ ಏನು ಹೇಳಿದ್ದರು ಎಂದರೆ, ಇವತ್ತು ಆಡಳಿತಕ್ಕೆ ಬಂದಿದ್ದೇ ಆದರೆ 1991ನೇ ಜೂನ್ 31ನೇ ತಾರೀಖಿನಲ್ಲಿರುವಂಥ ಬೆಲೆಯನ್ನು ತರುತ್ತೇವೆ. ಬೆಲೆ ಏರಿಕೆಯನ್ನು ತಡೆಗಟ್ಟುತ್ತೇವೆ ಎನ್ನುವ ಮಾತನ್ನು ಹೇಳಿದರು ಆದರೆ ಬೆಲೆ ಏರಿಕೆಯನ್ನು ತಡೆಗಟ್ಟುತ್ತೇವೆ ಎಂದು ಹೇಳಿದ ಮನುಷ್ಯರು ಆ ಬೆಲೆ ಏರಿಕೆ ಜಾಸ್ತಿಯಾಗಿದೆಯೇ ಹೊರತು ಇವತ್ತು ಬೆಲೆ ಕಡಿಮೆಯಾಗಿಲ್ಲ. ಇವತ್ತು ರೈತರು ಆರ್ಥಿಕವಾಗಿ ದುರ್ಬಲರಾಗುವುದಕ್ಕೆ ಕಾರಣವೇನು ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ರೈತರಿಗೆ ಮಾರಾಟದ ವಸ್ತುಗಳನ್ನು ಕೊಳ್ಳುವಂಥ ಶಕ್ತಿ ಏನಿದೆ, ಆ ಶಕ್ತಿ ಕಡಿಮೆಯಾಗಿರುವುದರಿಂದ ರೈತರು ಇವತ್ತು ಆರ್ಥಿಕವಾಗಿ ಹಾನಿಯನ್ನು ಅನುಭವಿಸುತ್ತಿದ್ದಾರೆ. ಇವತ್ತು ಅನಾವೃಷ್ಟಿಯಿಂದ ಹಾನಿಯಾಗಿದ್ದರೆ, ಅತಿವೃಷ್ಟಿಯಿಂದ ಹಾನಿಯಾಗಿದ್ದಿದ್ದರೆ ಮತ್ತು ರೋಗರುಜಿನಗಳು ಬಂದು ಇವತ್ತು ಬೆಳೆ ಹಾನಿಯಾಗಿದ್ದಿದ್ದರೆ ಆ ಪರಿಸ್ಥಿತಿ ಬೇರೆ ಇತ್ತು. ಆದರೆ ಪ್ರತಿವರ್ಷ ರೈತ ಬೆಳೆ ಸಾಲವನ್ನು ಪಡೆಯಬೇಕು. ಬೆಳೆ ಸಾಲವನ್ನು ಪಡೆದೇ ಅವನು ಜೀವನ ಮಾಡಬೇಕು ಎಂದು ಹೇಳಿದರೆ ಏತಕ್ಕೆ ಈ ಕ್ರಮ ಇರಬೇಕು ಎನ್ನುವ ಬಗ್ಗೆ ನಾವುಗಳು ಚಿಂತನೆಯನ್ನು ಮಾಡಬೇಕಾಗಿದೆ. ಮುಖ್ಯವಾದ ವಿಚಾರವೇನಾಗಿದೆ ಎಂದರೆ ಇವತ್ತು ರೈತ ಬೆಳೆದಂಥ ಬೆಳೆಗೆ ಯೋಗ್ಯವಾದ ಬೆಲೆ ಇಲ್ಲದೇ ಇರುವುದರಿಂದ ಈ ರೀತಿಯಾಗಿದೆ.

ಒಬ್ಬ ಮಾನ್ಯ ಸದಸ್ಯರು:– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಉದಾಸಿಯವರು ಸರ್ಕಾರದ ನೀತಿಯನ್ನು ಬಹಳ ಪ್ರತಿಪಾದನೆ ಮಾಡಿ ಹೇಳತಕ್ಕಂಥ ಸಂದರ್ಭದಲ್ಲಿ, ಅನೇಕ ಸದಸ್ಯರುಗಳು ಸಲಹೆಸೂಚನೆಗಳನ್ನು ಕೊಡುವ ಸಂದರ್ಭದಲ್ಲಿ ಒಬ್ಬ ಅಧಿಕಾರಿಗಳೂ ಇಲ್ಲ, ಮುಖ್ಯಮಂತ್ರಿಗಳೂ ಇಲ್ಲ, ಉಪ ಮುಖ್ಯಮಂತ್ರಿಗಳೂ ಇಲ್ಲ. ಇದನ್ನು ಅವರು ಯಾರಿಗೆ ಹೇಳುತ್ತಾರೋ ನನಗೆ ಗೊತ್ತಾಗಲಿಲ್ಲ. ಅದಕ್ಕೋಸ್ಕರ ನಾನು ಅಧ್ಯಕ್ಷರಲ್ಲಿ ಅಪ್ಪಣೆಯನ್ನು ಮಾಡಿಕೊಳ್ಳುತ್ತೇನೆ, ಅಧಿಕಾರಿಗಳೂ ಬೇಕು. ತಾವೂ ದಯವಿಟ್ಟು ಅವರೆಲ್ಲರನ್ನೂ ಕರೆಯಿಸಿದರೆ ಸದಸ್ಯರ ಎಲ್ಲಾ ಸೂಚನೆಗಳನ್ನು ಕೂಡ ನೋಟ್ ಮಾಡಿಕೊಳ್ಳಬಹುದು.

ಅಧ್ಯಕ್ಷರು:– ಮುಖ್ಯಮಂತ್ರಿಗಳಿಗೆ ಹೇಳಿಕಳುಹಿಸಿದ್ದಾರೆ. ಅವರು ಬರುತ್ತಾರೆ.

ಶ್ರೀ ಸಿ.ಎಂ. ಉದಾಸಿ:– ಮಾನ್ಯ ಅಧ್ಯಕ್ಷರೇ ಕಳೆದ ಐದು ವರ್ಷಗಳಲ್ಲಿ ನೀವು ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡದೆಯೇ, ಸುಸ್ತಿ ಬಡ್ಡಿ ಮನ್ನಾ ಮಾಡದೆಯೇ ಮತ್ತು ರೈತರಿಗೆ ಯಾವುದೇ ಪರಿಹಾರವನ್ನು ಕೊಡದಂಥ ಇಂಥ ಸಂದರ್ಭದಲ್ಲಿ ಇವತ್ತು ನಾವು ಸರ್ಕಾರ ಬಹಳಷ್ಟು ತೊಂದರೆಯಲ್ಲಿದ್ದಾಗಲೂ ಸಹಿತ ಪರಿಹಾರವನ್ನು ಕೊಡುವುದಕ್ಕೆ ಅಥವಾ ರೈತರ ಸಮಸ್ಯೆಗಳನ್ನು

ಪರಿಹರಿಸುವುದಕ್ಕೆ ನಾವು ಮುಂದೆ ಬರುತ್ತಿದ್ದಾಗ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾನು ಇಚ್ಛೆಪಡುತ್ತಿದ್ದೇನೆ. ಏಕೆಂದರೆ ನೂರು ರೂಪಾಯಿ ಕ್ವಿಂಟಾಲ್ ಭತ್ತ ಇದ್ದಾಗ ನಾವು ಒಂದು ಕ್ವಿಂಟಾಲ್ ಭತ್ತ ಮಾರಿದರೆ ನಾವು ಎಷ್ಟು ಸಿಮೆಂಟನ್ನು ಕೊಳ್ಳಲಿಕ್ಕೆ ಸಾಧ್ಯ ಇತ್ತು? ಇವತ್ತು ಒಂದು ಕ್ವಿಂಟಾಲ್ ಭತ್ತವನ್ನು ಮಾರಿದಾಗ ಎಷ್ಟು ಸಿಮೆಂಟನ್ನು ಕೊಳ್ಳಲಿಕ್ಕೆ ಸಾಧ್ಯ ಇದೆ? ಇದನ್ನು ನಾವು ನೋಡಬೇಕಾಗಿದೆ.

1974ನೇ ಇಸವಿಯಲ್ಲಿ ಒಂದು ನೂರು ರೂಪಾಯಿಗೆ ಒಂದು ಕ್ವಿಂಟಾಲ್ ಭತ್ತ ಇದ್ದಾಗ ಒಂದು ಟ್ರಾಕ್ಟರ್ ಕೊಳ್ಳಬೇಕಾದರೆ 34 ಸಾವಿರ ರೂಪಾಯಿ ಸಾಕಾಗುತ್ತಿತ್ತು. ಆದರೆ ಇವತ್ತು ಒಂದು ಟ್ರಾಕ್ಟರ್ ಕೊಳ್ಳಬೇಕಾದರೆ ಎಷ್ಟು ಕ್ವಿಂಟಾಲ್ ಭತ್ತ ಬೇಕು ಎನ್ನುವುದು ಪ್ರಶ್ನೆ. ಹಾಗೆಯೇ ಪ್ರತಿಯೊಂದರಲ್ಲಿಯೂ ಸಹಿತ ರೈತರು ಬೆಳೆದಿರುವಂತಹ ಮಾಲು, ಕಬ್ಬು, ಇರಲಿ, ಭತ್ತ ಇರಲಿ, ಶೇಂಗಾ ಇರಲಿ, ಜೋಳ ಇರಲಿ, ಗೋಧಿ ಇರಲಿ ನಾವು ಮಾರಾಟ ಮಾಡಿಬರಬೇಕಾದಾಗ ಹಣ ಏನು ಬರುತ್ತದೆ, ಆ ಹಣದಿಂದ ಕೊಳ್ಳುವ ಶಕ್ತಿ ಕಡಿಮೆ ಆಗಬಾರದು. ಆ ಪರಿಸ್ಥಿತಿ ಬರಬೇಕಾದರೆ ಈ ದೇಶದ ಆರ್ಥಿಕ ನೀತಿಯಲ್ಲಿ ಬದಲಾವಣೆ ಬರಬೇಕು. ಆ ಆರ್ಥಿಕ ನೀತಿಯಲ್ಲಿ ಬದಲಾವಣೆ ಬರದೇ ಇದ್ದರೆ ಸಾಧ್ಯವಾಗುವುದಿಲ್ಲ. ಇವತ್ತು ನಮಗೆ ಅನುಭವ ಇದೆ. 1953ರಲ್ಲಿ ನಮ್ಮ ವಿಭಾಗದಲ್ಲಿ ಏನು ಇತ್ತು ಎಂದರೆ, ಒಂದು ನೂರು ರೂಪಾಯಿಗೆ ಎರಡು ಚೀಲ ಭತ್ತ ಬಡ್ಡಿ ಇತ್ತು. ಒಂದು ರೂಪಾಯಿ ಸಾಲ ಮಾಡಿದಂತಹ ರೈತ ಎರಡು ಚೀಲ ಭತ್ತ ಬಡ್ಡಿ ಕೊಡುತ್ತಿದ್ದ. 100 ರೂಪಾಯಿ ಕಾಲಾಂತರದಲ್ಲಿ 100 ರೂಪಾಯಿಗೆ 50 ರೂಪಾಯಿ ಬಡ್ಡಿ ಆಯಿತು. 100 ರೂಪಾಯಿ 25 ರೂಪಾಯಿ ಆಯಿತು. 11 ಆಯಿತು, 7 ಆಯಿತು. ಆದರೆ ನೂರು ರೂಪಾಯಿಗೆ ಬಡ್ಡಿ ಇಲ್ಲದೇ ಹೋದರೂ ಸಹಿತ ರೈತ ಸಾಲಗಾರನಾಗಿ ಏಕೆ ಇರಬೇಕಾಯಿತು? ಈ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಇವತ್ತು ದೇಶದಲ್ಲಿ ಬದಲಾವಣೆ ತರಬೇಕಾಗಿದೆ. ಒಂದು ಆರ್ಥಿಕ ನೀತಿಯಲ್ಲಿ ಈ ದೇಶದ ಆರ್ಥಿಕ ನೀತಿಯನ್ನು ಬದಲಾಯಿಸುತ್ತೇವೆ. ಒಳ್ಳೆಯದನ್ನು ಮಾಡುತ್ತೇವೆಂದು ಹೇಳಿದಂತಹ ನರಸಿಂಹರಾಯರು ಹಾಗೂ ಮನಮೋಹನ ಸಿಂಗ್ ಅವರು ಮಾಡಿದ್ದು ಏನು ಎಂಬುದನ್ನು ನಾವು ಈಗ ಅರ್ಥಮಾಡಿಕೊಳ್ಳಬೇಕಾಗಿದೆ. ಅದರ ಪರಿಣಾಮವಾಗಿ ದೇಶದಲ್ಲಿ ರೈತರು ನಿಕೃಷ್ಟ ಪರಿಸ್ಥಿತಿಗೆ ಹೋಗಲು ಅವರು ಕಾರಣ ಕರ್ತರಾಗಿದ್ದಾರೆ ಎಂದು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಈ ಸಂದರ್ಭದಲ್ಲಿ ಅನೇಕರು ನಮಗೆ ಬೇಡಿಕೆಗಳನ್ನು ಇಟ್ಟರು. ಆ ಬೇಡಿಕೆಗಳನ್ನು ಮನ್ನಿಸಬೇಕಾದಾಗ ಇವತ್ತು ಸಾಲ ಮನ್ನಾ, ಬಡ್ಡಿ ಮನ್ನಾ, ಸುಸ್ತಿ ಬಡ್ಡಿ ಮನ್ನಾ ಈ ವಿಚಾರದಲ್ಲಿ ಅನೇಕ ಪಕ್ಷದವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದರು. ಆದರೆ ನಾವು ಸುಸ್ತಿ ಬಡ್ಡಿ ಮಾತ್ರ ಮನ್ನಾ ಮಾಡುತ್ತೇವೆಂದು ಹೇಳಿದ್ದಾಗ್ಯೂ ಸಹಿತ ಇವತ್ತು ಚುನಾವಣೆಯಲ್ಲಿ ಆರಿಸಿ ಬಂದ ಮೇಲೆ ನಾವು ನ್ಯಾಯವಾಗಿದ್ದನ್ನು ಹೇಳಿ, ಹೇಳಿದ್ದನ್ನು ಮಾಡುತ್ತೇವೆ ಎನ್ನುವುದನ್ನು ಅವರು ಗಮನದಲ್ಲಿಟ್ಟುರುವುದರಿಂದ ಅವರು ಚುನಾವಣೆಯಲ್ಲಿ ನಮ್ಮನ್ನು ಗೆಲ್ಲಿಸಿದ್ದಾರೆ ಎನ್ನುವ ಅರ್ಥ ಬರುತ್ತದೆ. ಯಾವಾಗಲೂ ಸಹಿತ ನಾವು ಚುನಾವಣೆಯಲ್ಲಿ ಸುಳ್ಳು ಭರವಸೆಗಳನ್ನು ಕೊಟ್ಟರೆ ಜನ ನಮ್ಮನ್ನು ಆರಿಸುವುದಿಲ್ಲ ಮತ್ತು ಆರಿಸಿ ಬರುವುದಕ್ಕೆ ಸಾಧ್ಯ ಇಲ್ಲ ಎನ್ನುವುದನ್ನು ಹಿಂದಿನ ಐದು ವರ್ಷಗಳ ನಡವಳಿಕೆಗಳನ್ನು ನೋಡಿದರೆ ನಮಗೆ ಅರ್ಥ ಆಗುತ್ತದೆ. ಅದಕ್ಕಾಗಿ ನಾವು ಇವತ್ತು ಕರ್ನಾಟಕ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ನೋಡಬೇಕಾಗಿದೆ. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾದ ಮೇಲೆ ನಂತರ ಅವರು ಹೋದಾಗ ಸುಮಾರು 200 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಅವರು ಕೊಡಬೇಕಾದಂತಹ ಬಾಕಿ ಹಣ ಇದೆ ಎನ್ನುವ ಮಾತನ್ನು ಮಾನ್ಯ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಗಳಾದಾಗ ಹೇಳಿದರು. ಹಾಗೆಯೇ ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾಗಿ ಅಧಿಕಾರವನ್ನು ಬಿಟ್ಟು ಹೋಗುವ ಮುನ್ನ ಏನು ಪರಿಸ್ಥಿತಿ ಇತ್ತು ಎಂದರೆ, ಅವರು ಸರ್ಕಾರಿ ನೌಕರರ ಸಂಬಳಕ್ಕಾಗಿಯೇ ಹಲವು ಸಂಸ್ಥೆಗಳಿಂದ 360 ಕೋಟಿ

ರೂಪಾಯಿಗಳ ಸಾಲವನ್ನು ತೆಗೆದುಕೊಳ್ಳತಕ್ಕ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ಸರ್ಕಾರವನ್ನು ದಿವಾಳಿ ಅಂಚಿಗೆ ತಂದಿಟ್ಟರು ಎನ್ನುವ ಪರಿಸ್ಥಿತಿ ಬಂದಿದೆ. ಇವತ್ತು ನಾವು ಬಡ್ಡಿ ಮನ್ನಾ ಮಾಡಲಿಕ್ಕೆ ಹೊರಟಿದ್ದೇ, ಆದರೆ ಅದರ ಜೊತೆಗೆ ಸುಮಾರು 250 ಕೋಟಿ ರೂಪಾಯಿಗಳಷ್ಟು ಹಣವನ್ನು ನಾವು ಪರಿಹಾರವಾಗಿ ಕೊಡಬೇಕಾಗುತ್ತದೆ. ಹಾಗೆಯೇ ಇವತ್ತು ಸಹಾಯ ಧನದಲ್ಲಿ ನಾವು 3.25 ಪೈಸೆಗೆ ಒಂದು ಕೆ.ಜಿ. ಅಕ್ಕಿ ಕೊಡಬೇಕಾದಂತಹ ಕಾರ್ಯಕ್ರಮವಿದೆ. ಹಿಂದೆ ಅಕ್ಕಿ ಕೊಡುವ ಕಾರ್ಯಕ್ರಮದ ಮೂಲಕ ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಎಂದು ಪ್ರಾರಂಭ ಮಾಡಿದ್ದನ್ನು ನೀವು ಬಂದ್ ಮಾಡಿ ಆಗಿದೆ. 35 ಲಕ್ಷ ಕುಟುಂಬಗಳಿಗೆ ನಾವು ಹಸಿರು ಕಾರ್ಡ್‌ಗಳನ್ನು ಕೊಟ್ಟಾಗ, ನೀವು ಅಧಿಕಾರದಲ್ಲಿ ಬಂದಾಗ ಏನು ಹೇಳುತ್ತಿದ್ದೀರಿ, ಹಸಿರು ಕಾರ್ಡ್‌ಗಳನ್ನು ಕೊಟ್ಟಿರುವಲ್ಲಿ ಬಹಳಷ್ಟು ಅಕ್ರಮಗಳು ನಡೆದಿವೆ ಎಂದು ಹೇಳಿದ್ದಿರಿ. ಹಾಗೆಯೇ 35 ಲಕ್ಷ ಕುಟುಂಬಗಳಿಗೆ ಹಸಿರು ಕಾರ್ಡ್‌ಗಳನ್ನು ನಮ್ಮ ಪಕ್ಷದವರು ಕೊಡಬೇಕಾದಾಗ ಯಾರದಾದರೂ ನಮ್ಮ ಪಕ್ಷದ ನಾಯಕರ ಹೆಸರಿನಲ್ಲಿ ಚಿತ್ರ ಹಾಕಿ ಕೊಟ್ಟಿರಲಿಲ್ಲ. ತಾವು ಕಾರ್ಡ್‌ಗಳನ್ನು ಬದಲಾಯಿಸಿ, ಬದಲಾಯಿಸಿದರೂ ಸಹಿತ 50 ಸಾವಿರಕ್ಕಿಂತ ಹೆಚ್ಚು ಬೋಗಸ್ ಕಾರ್ಡ್‌ಗಳನ್ನು ಹುಡುಕಲಿಕ್ಕೆ ಸಾಧ್ಯವಾಗಲಿಲ್ಲ. ಶೇಕಡ ಒಂದೂವರೆಯಷ್ಟು ಪರ್ಸೆಂಟ್ ಕಾರ್ಡ್‌ಗಳನ್ನು ಮಾತ್ರ ನೀವು ಹುಡುಕಲಿಕ್ಕೆ ಸಾಧ್ಯವಾಗಿದೆ ಎಂದು ಹೇಳಿದರೆ 35 ಲಕ್ಷ ಕುಟುಂಬಗಳಲ್ಲಿ ಕೇವಲ 50 ಸಾವಿರ ಕಾರ್ಡ್‌ಗಳನ್ನು ಹುಡುಕಲಿಕ್ಕೆ ಸಾಧ್ಯವಾದರೆ ತಾವು ಯಾವ ರೀತಿ ಕೆಲಸ ಮಾಡಿದ್ದೀರಿ ಎಂದು ಅರ್ಥ ಮಾಡಿಕೊಳ್ಳಬೇಕು. ಅಂತಹ ಒಂದು ಕಲ್ಯಾಣ ಕಾರ್ಯಕ್ರಮವನ್ನು ಆ ಕಾರ್ಡ್‌ಗಳನ್ನು ಕೊಡುವಾಗ ನೀವು ಇಂದಿರಾಗಾಂಧಿ ಅವರ ಹೆಸರು, ಚಿತ್ರ ಹಾಕಿ ಕಾರ್ಡ್‌ಗಳನ್ನು ಕೊಟ್ಟರೂ ಸಹಿತ ಎರಡು ರೂಪಾಯಿ ಕೆ.ಜಿ. ಅಕ್ಕಿಗೆ ಬದಲಾಗಿ ಒಂದೂವರೆ ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡಬಹುದು ಎಂದು ನಾವು ಭಾವಿಸಿಕೊಂಡಿದ್ದೆವು. ಆದರೆ ನೀವು ಮಾಡಿದ್ದುದು ಏನು ? ಎರಡು ರೂಪಾಯಿ ಬದಲು 5 ರೂಪಾಯಿ 50 ಪೈಸೆಗೆ 1 ಕಿಲೋ ಅಕ್ಕಿ ಕೊಡುವ ಕಾರ್ಯಕ್ರಮವನ್ನು ತಾವು ಮಾಡಿದಿರಿ. ಅಕ್ಕಿ ಕೊಡುವ ಕಾರ್ಯಕ್ರಮವನ್ನು ಯಾವ ರೀತಿ ನಡೆಸಿದಿರಿ ಎಂದು ಮೊದಲು ನೋಡಿಕೊಳ್ಳಬೇಕಾಗಿದೆ. ಇಡೀ ರಾಜ್ಯದಲ್ಲಿ ಈ ವ್ಯವಸ್ಥೆಯಿಂದ ಏನಾಯಿತೆಂದರೆ, ಕಳ್ಳ ಮಾರುಕಟ್ಟೆಗೆ ಆಹಾರ ಧಾನ್ಯ ವಿತರಣೆಯಾಗುವಂಥ ಪರಿಸ್ಥಿತಿ ನಿರ್ಮಾಣ ಮಾಡಿದ್ದೀರಿ. ನನ್ನ ತಾಲ್ಲೂಕಿನಲ್ಲೆ ಒಂದು ಉದಾಹರಣೆ ಹೇಳುವುದಾದರೆ, 3 ಕಡೆ ಕ್ರಿಮಿನಲ್ ಕೇಸ್ ಇದ್ದವರಿಗೇ ಪಡಿತರ ವಸ್ತುಗಳನ್ನು ಮಾರಾಟ ಮಾಡುವಂಥ ವ್ಯವಸ್ಥೆ ಮಾಡಿಕೊಟ್ಟರೆಂದರೆ, ಇಡೀ ರಾಜ್ಯಾದ್ಯಂತ ಈ ವ್ಯವಸ್ಥೆ ಏನಾಗಿರಬಹುದು ? ಧಾರವಾಡ ಜಿಲ್ಲೆಯಲ್ಲಿ ಇಂಥಾ ಅನೇಕ ಉದಾಹರಣೆಗಳನ್ನು ಹೇಳಬಹುದು. ಇದು ಏನು ತೋರಿಸುತ್ತದೆಂದರೆ, ಇವತ್ತು, ಬಡವರ ಬಗ್ಗೆ ನಿಶ್ಚಿತವಾದ ಚಿಂತೆ ಮತ್ತು ಕಳಕಳಿ ತಮಗೆ ಇದ್ದಿದ್ದರೆ ಆ ಕೆಲಸದಲ್ಲಿ ಬಹಳಷ್ಟು ಬದಲಾವಣೆ ತರಲಿಕ್ಕೆ ಸಾಧ್ಯವಾಗುತ್ತಿತ್ತು. ಅದು ಮಾಡದೆ, ಕೇವಲ ಬಡವರ ಹೆಸರಿನಲ್ಲಿ ಕಣ್ಣೀರು ಸುರಿಸುವಂಥ ಕಾರ್ಯಕ್ರಮ ಮಾಡಿದಿರಿ. ಭ್ರಷ್ಟಾಚಾರವನ್ನು ಬೆಳೆಸಿಕೊಂಡು ಬಂದಿದ್ದರ ಬಗ್ಗೆ, 'ಭ್ರಷ್ಟಾಚಾರದ ಹತ್ತು ಮುಖಗಳು' ಎಂದು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಮುಖ ಪುಟದಲ್ಲ ಬಂತು. ಅದು ತಮಗೆಲ್ಲರಿಗೂ ಅರ್ಥವಾಗಿರಬಹುದು. ಅದನ್ನೇ ಉದ್ದೇಶಿಸಿ ಸನ್ಮಾನ್ಯ ರಾಜ್ಯಪಾಲರ ಮುಖೇನ ಮಾನ್ಯ ಮುಖ್ಯಮಂತ್ರಿಗಳು ಮುಂದಿನ 5 ವರ್ಷಗಳಲ್ಲಿ ಮಾಡಬಹುದಾದ ಕೆಲಸಗಳಲ್ಲಿ ಅವರು ಒಂದು ಮಾತನ್ನು ಹೇಳಿದ್ದಾರೆ. "ನಾವೆಲ್ಲ ಹೆಮ್ಮೆ ಪಡಬಹುದಾದ ರೀತಿಯಲ್ಲಿ ಚುನಾಯಿತ ಪ್ರತಿನಿಧಿಗಳು ಜನತೆಯ ಆಶೋತ್ತರಗಳನ್ನು ಈಡೇರಿಸುವಂಥ ಸರ್ವ ಪ್ರಯತ್ನಗಳನ್ನೂ ಮಾಡಬೇಕಾಗಿದೆ. ಜನಸಾಮಾನ್ಯರ ಅಗತ್ಯಗಳಿಗೆ ಸ್ಪಂದಿಸುವ ಪ್ರಾಮಾಣಿಕ ಪಾರದರ್ಶಕ ಹಾಗೂ ದಕ್ಷ ಆಡಳಿತವನ್ನು ನೀಡುವುದು ನನ್ನ ಸರ್ಕಾರದ ಆದ್ಯ ಕರ್ತವ್ಯ" ಎಂದು ಮಾನ್ಯ ರಾಜ್ಯಪಾಲರ ಮುಖೇನ ನಾವು ಹೇಳಿ ಆಗಿದೆ.

ಇದು ಏನು ತೋರಿಸುತ್ತದೆಂದರೆ, ಭ್ರಷ್ಟಾಚಾರವನ್ನು ತೊಡೆದುಹಾಕಬೇಕಾದಂಥ ಕೆಲಸದಲ್ಲಿ

ನಿಶ್ಚಿತವಾದ ಒಂದು ಕಾರ್ಯಕ್ರಮ ಹಾಕಿಕೊಂಡು ಒಂದುಬಳ್ಳಿಯ ವ್ಯವಸ್ಥೆ ತರುತ್ತೇವೆ ಎನ್ನುವ ಮಾತನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರ, ಹಿಂದುಳಿದ ವರ್ಗದವರ ಪರವಾಗಿ ಬಹಳಷ್ಟು ಕೆಲಸ ಮಾಡುತ್ತೇವೆಂದು ಹೇಳಿದಂಥ ತಾವು ಆ ಸಂದರ್ಭದಲ್ಲಿ ಮಾಡಿರುವ ಕೆಲಸದ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಗಂಗ ಕಲ್ಯಾಣ ಯೋಜನೆ ಇದುವರೆವಿಗೂ ಜಾರಿಯಾಗುತ್ತಿದೆ. ಸದರಿ ಯೋಜನೆಯಡಿ 1989ರಲ್ಲಿ ಕೊಳವೆ ಬಾವಿಗಳನ್ನು ಕೊರೆದಿದ್ದು ಒಂದೂ ಕೊಳವೆ ಬಾವಿಗೆ ಇದುವರೆವಿಗೂ ವಿದ್ಯುತ್ ಸೌಕರ್ಯ ಒದಗಿಸುವುದಕ್ಕೆ ಸಾಧ್ಯವಾಗಿಲ್ಲ. ಪಂಪುಸೆಟ್ಟುಗಳನ್ನು ಕೊಟ್ಟಿಲ್ಲ. ಇದರ ಜೊತೆಗೆ ದಶಲಕ್ಷ ಬಾವಿ ಯೋಜನೆಯನ್ನು ಜಾರಿಗೆ ತಂದರು. ಆ ಯೋಜನ ಏನಾಯಿತು ? ಧಾರವಾಡ ಜಿಲ್ಲೆಯೊಂದರಲ್ಲಿಯೇ ಸುಮಾರು 28 ಲಕ್ಷ ರೂಪಾಯಿಗಳು ಅಪವ್ಯಯವಾಗಿರುವುದರ ಬಗ್ಗೆ ವಿಧಾನಸಭೆಯಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ಪ್ರಸ್ತಾಪಿಸುವ ಸಲುವಾಗಿ ಆಗಿನ ವಿರೋಧ ಪಕ್ಷದ ನಾಯಕರ ಜೊತೆ ಮಾತನಾಡಿ ಪ್ರಸ್ತಾಪ ಮಾಡಿದ್ದೇನೆ. ಇದರ ಬಗ್ಗೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ? ಆಗ ಆಗಿರುವಂಥ ಕಾರ್ಯಕ್ರಮವಾದರೂ ಏನು ?

ಒಬ್ಬ ಮಾನ್ಯ ಸದಸ್ಯರು:– ಮಾನ್ಯ ಸದಸ್ಯರಾದ ಉದಾಸಿಯವರು ನಮ್ಮ ಕಾಂಗ್ರೆಸ್ ಪಕ್ಷದ ನೀತಿ ನಿಯಮಗಳ ಕುರಿತು ಟೀಕೆಗಳನ್ನು ಮಾಡುವುದಕ್ಕೆ ಹೊರಟಿದ್ದಾರೋ ಅಥವಾ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುತ್ತಿದ್ದಾರೋ ತಿಳಿಯದಾಗಿದೆ.ತಾವು ದಯಮಾಡಿ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಇ. ಮಾರುತಿರಾವ್ ಪವಾರ್:– ನಾನು ಸಹಕಾರಿ ಬ್ಯಾಂಕಿನ ಚುನಾವಣೆ ಕುರಿತು ಒಂದು ವಿಚಾರ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸದಸ್ಯರು ಸಹಕಾರಿ ಸಂಘಗಳ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರ ತುಂಬಾ ಅವ್ಯವಹಾರ ಮಾಡಿದೆ, ಅವರು ಚುನಾವಣೆ ನಡೆಸಲಿಲ್ಲವೆನ್ನುವ ಮಾತನ್ನು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳು 12ನೇ ತಾರೀಖು ಪ್ರಮಾಣ ವಚನ ಸ್ವೀಕರಿಸಿದ ದಿವಸವೇ ಒಂದು ಆದೇಶವನ್ನು ಕಳುಹಿಸಿದ್ದಾರೆ. ಯಾವುದೇ ಸಹಕಾರಿ ಸಂಘಗಳ ಚುನಾವಣೆ ಇರಬಹುದು ಅಥವಾ ವಾರ್ಷಿಕ ಸಭೆಗಳಿರಬಹುದು. ಇದನ್ನು ಈ ತಕ್ಷಣ ಮುಂದೂಡಬೇಕೆಂದು ಆದೇಶವನ್ನು ಹೊರಡಿಸಿದ್ದಾರೆ. 12ನೇ ತಾರೀಖು ಆದೇಶ ಹೊರಡಿಸಿದರೂ ಸಹ ಮೈಸೂರು ನಗರದಲ್ಲಿರುವ ಒಂದು ಸಿಟಿ ಕೋ–ಅಪರೇಟಿವ್ ಬ್ಯಾಂಕ್ ಏನಿದೆ, ಇದರ ಚುನಾವಣ 18ನೇ ತಾರೀಖು ನಡೆಯಬೇಕಾಗಿತ್ತು. ಇವರು ಆ ಆದೇಶವನ್ನು ಚುನಾವಣಾಧಿಕಾರಿಗಳಿಗೆ 17ನೇ ತಾರೀಖಿನಂದು ಕಳುಹಿಸಿದ್ದಾರೆ. ಅಂದರೆ, 12ನೇ ತಾರೀಖು ಸರ್ಕಾರ ಹೊರಡಿಸಿರತಕ್ಕಂಥ ಆದೇಶ ಮೈಸೂರಿನಲ್ಲಿರುವ ಸಿಟಿ ಕೋ–ಅಪರೇಟಿವ್ ಬ್ಯಾಂಕಿಗೆ 17ನೇ ತಾರೀಖು ತಲುಪಿದೆ. ಅಷ್ಟರೊಳಗೆ ಅವರು ಚುನಾವಣೆಗೆ ಎಲ್ಲಾ ವ್ಯವಸ್ಥೆಗಳನ್ನು ಮಾಡಿದ್ದರು. ಸದರಿ ಬ್ಯಾಂಕ್ ಚುನಾವಣೆಗೋಸ್ಕರ 1.65 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ಈಗಾಗಲೇ 7 ಲಕ್ಷ ರೂಪಾಯಿಗಳ ನಷ್ಟ ಅನುಭವಿಸುತ್ತಿದ್ದು ಚುನಾವಣೆಗೋಸ್ಕರ ಖರ್ಚು ಮಾಡಿರುವ ಹಣವನ್ನು ಸೇರಿಸಿಕೊಂಡರೆ ಒಟ್ಟು 8.65 ಲಕ್ಷ ರೂಪಾಯಿಗಳಾಗುತ್ತದೆ. ಸಹಕಾರಿ ಬ್ಯಾಂಕ್ ಇಷ್ಟು ನಷ್ಟ ಅನುಭವಿಸುತ್ತಿರುವ ಬಗ್ಗೆ ಏನಾದರೂ ಗಮನವಿದೆಯೇ ? ಸಹಕಾರಿ ಬ್ಯಾಂಕಿನ ಚುನಾವಣೆಗಳನ್ನು ಮುಂದೂಡುವಂಥ ಅವಶ್ಯಕತೆಯಾದರೂ ಏನಿತ್ತು ? ಇದನ್ನು ಏತಕ್ಕೋಸ್ಕರ ಸರ್ಕಾರ ಮಾಡಿತು ? ಜನತಾ ದಳ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಜನತೆಗೆ ಕೊಟ್ಟಿರತಕ್ಕಂಥ ಕೊಡುಗೆಯೇ ಇದು ? ಇವೊತ್ತು ಸಹಕಾರಿ ಬ್ಯಾಂಕುಗಳಲ್ಲಾಗಿರತಕ್ಕ ನಷ್ಟವನ್ನು ಸರ್ಕಾರ ಸಂಪೂರ್ಣವಾಗಿ ಭರಿಸಿಕೊಡುತ್ತದೆಯೇ ? ಎಂಬುದನ್ನು ಸನ್ಮಾನ್ಯ ಸಚಿವರು ಹೇಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಸದಸ್ಯರಾದ ಉದಾಸಿಯವರನ್ನು ಸದಸ್ಯರಾದ ಮಾರುತಿರಾವ್ ಪವಾರ್‌ರವರು ಏತಕ್ಕೆ 'ಮಾನ್ಯ ಮಂತ್ರಿಗಳು' ಎಂದು ಹೇಳುತ್ತಿದ್ದಾರೆಂದರೆ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದ ನಂತರ ತಮ್ಮ ಮಂತ್ರಿಮಂಡಲದ ಸದಸ್ಯರ ಪರಿಚಯ ಮಾಡಿಸಬೇಕಾಗಿತ್ತು, ಮಾಡಿಸಿಲ್ಲ. ಈಗ ಒಂದು ರೀತಿಯ ಗೊಂದಲವುಂಟಾಗಿ ಎಲ್ಲರೂ ಮಂತ್ರಿಗಳು ಎನ್ನುವಂಥ ಪರಿಸ್ಥಿತಿಯಾಗಿದೆ. ಮಾನ್ಯ ಸದಸ್ಯರು ಉದಾಸಿಯವರನ್ನು 'ಮಂತ್ರಿಗಳು' ಎಂದು ಕರೆಯುವುದರಲ್ಲಿ ಅರ್ಥವಿದೆ. ಆದುದರಿಂದ, ಈಗಾಲಾದರೂ ನಾನುಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುವುದೇನೆಂದರೆ, ತಮ್ಮ ಮಂತ್ರಿ ಮಂಡಲದ ಸದಸ್ಯರುಗಳನ್ನು ತಾವು ಸದನಕ್ಕೆ ಪರಿಚಯ ಮಾಡಿಸಿಕೊಡಬೇಕು. ಕಾರಣವೇನೆಂದರೆ, ನನ್ನ ಸದಸ್ಯ ಸ್ನೇಹಿತರೊಬ್ಬರು ಸಿ.ಎಂ. ಉದಾಸಿಯವರನ್ನು 'ಸಚಿವರು ಈ ರೀತಿ ಉತ್ತರ ಕೊಡಬಾರದು' ಎಂದು ಹೇಳುತ್ತಿದ್ದರು. ಇಂತಹ ಪರಿಸ್ಥಿತಿ ನಿರ್ಮಾಣವಾಗದಂತೆ ದಯಮಾಡಿ ತಮ್ಮ ಮಂತ್ರಿಮಂಡಲದ ಸದಸ್ಯರನ್ನು ಈ ಸದನಕ್ಕೆ ಪರಿಚಯ ಮಾಡಿಸಿಕೊಡಬೇಕು. ಲೋಕಸಭೆಯಲ್ಲಿ ಈ ಪರಿಪಾಠವಿದೆ. ಇಲ್ಲಿಯೂ ಕೂಡ ಆ ಪದ್ಧತಿಯನ್ನು ಪಾಲಿಸಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಇ. ಮಾರುತಿರಾವ್ ಪವಾರ್: ಇದು ನೇರವಾಗಿ 70 ಸಹಕಾರಿ ಬ್ಯಾಂಕುಗಳಿಗೆ ಅನ್ವಯವಾಗುತ್ತದೆ.

ಅಧ್ಯಕ್ಷರು:- ವಾಟಾಳ್ ನಾಗರಾಜ್‌ರವರೆ, ನಿಮಗಿರುವ ದೂರದೃಷ್ಟಿ ಇಲ್ಲಿ ಯಾರಿಗೂ ಇಲ್ಲ. ಅದಕ್ಕೋಸ್ಕರ ಪ್ರತಿ ಸಾರಿ ನೀವೊಬ್ಬರೇ ಗೆದ್ದು ಬರುತ್ತಿದ್ದೀರಿ, ನಿಮ್ಮ ಪಕ್ಷವನ್ನು ಬೆಳೆಸಿಕೊಂಡು ಬರುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನಾನು ಒಬ್ಬನಿದ್ದರೆ 50 ಜನರಿದ್ದಂತೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಯವರು):- ಈಗ ಅತ್ಯಂತ ಉತ್ತಮವಾದ ಸಲಹೆಯನ್ನು ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಕೊಟ್ಟಿದ್ದಾರೆ. ಉತ್ತಮವಾದ ಸಲಹೆ ಆದರೆ ಸ್ವಲ್ಪ ಕಾಲಮಿಂಚಿ ಹೋಗಿರುವುದರಿಂದ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿ.ಎಂ. ಉದಾಸಿ:- ದಶ ಲಕ್ಷ ಬಾವಿಗಳ ಯೋಜನೆಯ ಬಗ್ಗೆ ಹೇಳುವಾಗ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆ ಅವರಿಗೂ ಸ್ವಲ್ಪ ಗಮನಕ್ಕೆ ಬಂದಿದ್ದು ಒಂದು ಬಾವಿಯನ್ನು ತೋಡುವ ಸಲುವಾಗಿ ಎಷ್ಟು ಹಣ ಖರ್ಚು ಮಾಡಿದರು ಅಂದರೆ, ಇದರ ಬಗ್ಗೆ ಅವರು ಪಂಚಾಯತ್ ರಾಜ್ ಸಚಿವರು ಇದ್ದಾಗ ಈ ಪ್ರಶ್ನೆ ಅವರಿಗೆ ಕೇಳಿದ್ದೆ. ದಶ ಲಕ್ಷ ಬಾವಿ ಯೋಜನಯಲ್ಲಿ ಏನು ಆಗಿತ್ತು ಅಂದರೆ ಒಂದು ಬಾವಿಗೆ ಅಂದಾಜು ವೆಚ್ಚ 18 ಸಾವಿರ ರೂಪಾಯಿ. ಇದು ಪರಿಶಿಷ್ಟವರ್ಗದವರಿಗೆ ಮಾಡಿಕೊಡಬೇಕಾದ ಬಾವಿ. ಅಂದಾಜು ಮಾಡಿದ್ದುದು 18ಸಾವಿರ ಅಲ್ಲಿ ಖರ್ಚು ಆಗಿದ್ದುದು ಕೇವಲ ಎರಡು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಬಾವಿಗೆ 16 ಸಾವಿರ ರೂಪಾಯಿಗಳನ್ನು ನುಂಗಿ ಹಾಕಿದ್ದಾರೆ. ಇಂತಹ 144 ಬಾವಿಗಳನ್ನು ಧಾರವಾಡ ಜಿಲ್ಲೆಯಲ್ಲಿ ಮಾಡಿದ್ದಾರೆ. ಇದರ ಬಗ್ಗೆ ಯೋಗ್ಯ ವಿಚಾರಣೆ ಮಾಡಬೇಕು ಎಂದು ಹೇಳಿದರು. ಈ ವಿಚಾರಣೆಯಾಗಿ ಹರಿಜನ-ಗಿರಿಜನರ ಬಗ್ಗೆ ಚಿಂತನೆ ಮಾಡಿದಂತಹ ಅಂದಿನ ಬಸವಲಿಂಗಪ್ಪನವರು ಪಂಚಾಯತ್ ರಾಜ್ ಸಚಿವರಿದ್ದರು. ಆ ಸಂದರ್ಭದಲ್ಲಿ ವಿಚಾರಣೆ ಮಾಡಿ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಹೇಳಿದರೆ, ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡರೇ ಹೊರತು ಅಧಿಕಾರೇತರರು ಯಾರು ಅದರಲ್ಲಿ ಭಾಗಿಗಳಾಗಿದ್ದರು, ಜಿಲ್ಲಾಪರಿಷತ್ತಿನ ಸದಸ್ಯರು ಪರಿಶಿಷ್ಟವರ್ಗದವರು ಅವರ ಮೇಲೂ ಕ್ರಮ ತೆಗೆದುಕೊಳ್ಳಲಿಲ್ಲ.

ಸಂದರ್ಭದಲ್ಲಿ ಜಿಲ್ಲಾಪರಿಷತ್ತಿನ ಸದಸ್ಯರಾಗಿ ಇಲ್ಲಿ ಶಾಸಕರಾಗಿ ಬಂದವರು, ಅವರೂ ಸಹಿತ ಪರಿಶಿಷ್ಟವರ್ಗದವರು. ಅವರ ಮೇಲೆ ಕ್ರಮ ಕೈಗೊಳ್ಳಲಿ ಎಂದು ನಾನು ಹೇಳಿದೆ. ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದಕ್ಕಿಂತ ಅಧಿಕಾರೇತರರ ಮೇಲೆ ಕ್ರಮ ಕೈಗೊಂಡಿದ್ದೇ ಆದರೆ, ಭ್ರಷ್ಟಾಚಾರವನ್ನು ತಡೆಯಲ್ಲಿಕ್ಕೆ ಸಾಧ್ಯ ಎನ್ನುವ ಮಾತನ್ನು ಅವರ ಗಮನಕ್ಕೆ ತಂದರೆ, ಅವರು ಏನು ಮಾಡಿದರು ಅಂದರೆ, ಕೊನೆಗೆ 11 ಜನ ಸರ್ಕಾರಿ ನೌಕರರನ್ನು ಅಮಾನತ್ತಿನಲ್ಲಿ ಇಟ್ಟರು. ಇವತ್ತು ಅದು ಲೋಕಾಯುಕ್ತದ ವಿಚಾರಣೆಯಲ್ಲಿ ಇದೆ. ಅಲ್ಲಿ ಕೇವಲ ಅಧಿಕಾರಿಗಳ ಮೇಲೆ ಮಾತ್ರ ವಿಚಾರಣೆ ಜಾರಿಯಲ್ಲಿದೆ ಹೊರತು ಅಧಿಕಾರೇತರರ ಮೇಲೆ ಇಲ್ಲ. ಪರಿಶಿಷ್ಟವರ್ಗದವರಿಗೆ, ಪರಿಶಿಷ್ಟ ಪಂಗಡ ಮತ್ತು ಜಾತಿಯವರ ಬಗ್ಗೆ ಅವರಿಗೆ ಚಿಂತನೆ ಇರಲಿಲ್ಲ. ಇದನ್ನು ಹೋಗಲಾಡಿಸುವ ವಿಚಾರದಲ್ಲಿ, ಭ್ರಷ್ಟಾಚಾರ ಹತ್ತಿಕ್ಕುವ ವಿಚಾರದಲ್ಲಿ ನಮ್ಮ ಮುಖ್ಯ ಮಂತ್ರಿಗಳು ಪಾರದರ್ಶಕವಾದಂತಹ ಸರ್ಕಾರವನ್ನು, ದಕ್ಷ ಆಡಳಿತವನ್ನು ಕೊಡತಕ್ಕಂತಹ ಮಾತನ್ನು ಹೇಳಿದ್ದಾರೆಂದು ನಾನು ಭಾವಿಸಿಕೊಂಡಿದ್ದೇನೆ. ಅಲ್ಪ ಸಂಖ್ಯಾಂತರ ಬಗ್ಗೆ ಅವರಿಗೆ ಬಹಳಷ್ಟು ಕಡೆ ಮಸೀದಿಗಳಿಗಾಗಿ ಮತ್ತು ಈದ್ಗಾಗಳಿಗಾಗಿ ಮತ್ತು ಮೈದಾನಗಳಿಗಾಗಿ ಹಣ ಕೊಡುತ್ತೇವೆ ಎನ್ನುವ ಮಾತನ್ನು ಎಲ್ಲಾ ಕಡೆಯಿಂದಲೂ ಮಂಜೂರಾತಿ ಕೊಟ್ಟಿದ್ದಾರೆಯೇ ಹೊರತು ಹಣ ಯಾರಿಗೂ ಬಿಡುಗಡೆ ಮಾಡಲಿಲ್ಲ. ಇನ್ನು ಬೇಕಾದಷ್ಟು ಉದಾಹರಣೆಗಳು ನಮ್ಮಲ್ಲಿವೆ. ಇಂತಹ ಉದಾಹರಣೆಗಳು ನಮ್ಮ ತಾಲ್ಲೂಕಿನಲ್ಲಿ ಬೇಕಾದಷ್ಟು ಇವೆ. ಅವರು ಕೊಟ್ಟಿರುವಂತಹ ಭರವಸೆಗಳನ್ನು ನಾವು ನೋಡಿದರೆ 25 ಲಕ್ಷ ರೂಪಾಯಿಗಳಿಗಿಂತ ಹೆಚ್ಚಿಗೆ ಭರವಸೆಗಳನ್ನು ಕೊಟ್ಟು ಮಂಜೂರು ಮಾಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆಯೇ ಹೊರತು ಇವತ್ತಿನವರೆಗೂ ಆ ಹಣ ಯಾರಿಗೂ ಬಿಡುಗಡೆಯಾಗಿಲ್ಲ. ಕೇವಲ ಕಣ್ಣು ಒರೆಸುವ ತಂತ್ರವನ್ನು ಮಾಡಿದ್ದರಿಂದಲೇ ಇವತ್ತು ಜನ ಅವರ ಬಗ್ಗೆ ಅರಿತುಕೊಂಡಿದ್ದಾರೆಂದು ನಾನು ಭಾವಿಸಿಕೊಂಡಿದ್ದೇನೆ. ಇಂತಹ ಕೆಲಸ ಕಾರ್ಯಗಳ ಬಗ್ಗೆ ನಾವು ವಿಶೇಷ ಆಸಕ್ತಿ ವಹಿಸಿ ಜನ ಕೊಟ್ಟಿರುವಂತಹ ತೀರ್ಮಾನಕ್ಕೆ ನಾವು ಬದ್ಧರಾಗಿ ನಡೆಯಬೇಕಾಗಿದೆ. ಮುಖ್ಯವಾಗಿ ಹಿಂದುಳಿದ ವರ್ಗಗಳ ಸಲುವಾಗಿ ಹಾಗೂ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳ ಸಲುವಾಗಿ, ಗ್ರಾಮೀಣ ಅಭಿವೃದ್ಧಿ ಸಲುವಾಗಿ ಅಭಿವೃದ್ಧಿ ಸಾಧಿಸಲು ಅನೇಕ ಹೆಚ್ಚುವರಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಕೆಲಸ ಮಾಡಬೇಕಾಗಿದೆ. ಏಕೆಂದರೆ ಸಂಪನ್ಮೂಲದ ಪ್ರಶ್ನೆ ನಮ್ಮ ಮುಂದೆ ದೊಡ್ಡದಿದೆ. ಆದಾಯವನ್ನು ಹೆಚ್ಚಿಸಲು ಕರ ಭಾರವನ್ನು ಹಾಕಿದರೆ ಕರ ಸೋರಿ ಹೋಗುವುದನ್ನು ತಡೆಯುವ ಕೆಲಸ ಮಾಡಬೇಕಾಗಿದೆ. ಕೆಲವು ಮೂಲ ಆದಾಯಗಳು ಶ್ರೀಮಂತರಿಂದ, ಇನ್ನಿತರ ವರ್ಗದವರಿಂದ ಬರಬೇಕಾಗಿದ್ದಂತಹ ಆದಾಯವನ್ನು ಹೆಚ್ಚು ಕ್ರೋಢೀಕರಿಸಿ ನಾವು ಬಡವರ ಕಲ್ಯಾಣ ಕಾರ್ಯಕ್ರಮ ಮಾಡಬೇಕಾಗಿದೆ. ಆ ಕೆಲಸವನ್ನು ನಾವು ವಿಶೇಷವಾಗಿ ಮಾಡಲು ಇವತ್ತು ಜನತೆಗೆ ಒಂದು ಒಳ್ಳೆಯ ಕಾರ್ಯಕ್ರಮ ಹಾಕಿಕೊಡಬೇಕಾಗಿದೆ. ಇದಲ್ಲದೆ, ಲಂಬಾಣಿ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುತ್ತೇವೆ ಎನ್ನುವ ಮಾತನ್ನು ಹಿಂದೆ ಹೇಳಿದಿರಿ. ಆ ಕಂದಾಯ ಗ್ರಾಮಗಳನ್ನು ಮಾಡದೆ ಇರುವುದರಿಂದ ಇವತ್ತು ಬಹಳ ಕಡೆ ಆ ಲಂಬಾಣಿ ತಾಂಡಗಳಲ್ಲಿರುವವರು ತಮಗೆ ಸಿಗಬೇಕಾದ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಆ ಗ್ರಾಮಗಳ ಹೆಸರುಗಳು ಆ ತಾಂಡಾಕ್ಕೆ ಹೊಂದಿರುವುದರಿಂದ ಆ ತಾಂಡಗಳಲ್ಲಿ ಇರುವಂತಹ ಜನರು ತಮಗೆ ಸಿಗಬೇಕಾದ ಸೌಲಭ್ಯಗಳಿಂದ ವಂಚಿತರಾಗಿರುವುದರಿಂದ, ಆ ಕೆಲಸವನ್ನು ಮಾಡುತ್ತೇವೆ ಎನ್ನುವ ಭರವಸೆಯನ್ನು ಹಿಂದೆ ಕೊಟ್ಟು ಮಾಡದೆ ಇರುವುದರಿಂದ ಇವತ್ತು ಆ ಜನರಿಗಾಗಿ ಅದರಲ್ಲೂ ವಿಶೇಷವಾಗಿ ತಾಂಡಗಳಲ್ಲಿ ವಸತಿ

ಮಾಡುವಂತಹ ಪರಿಶಿಷ್ಟವರ್ಗದವರಿಗೆ ಅನ್ಯಾಯವಾಗಿದ್ದನ್ನು ಸರಿಪಡಿಸಬೇಕಾಗಿದೆ. ಅದನ್ನು ನಮ್ಮ ಸರ್ಕಾರ ಸರಿಪಡಿಸುತ್ತದೆ ಎನ್ನುವ ಭರವಸೆಯನ್ನು ನಾನು ಇಟ್ಟುಕೊಂಡಿದ್ದೇನೆ.

ಇನ್ನು ಆಹಾರಧಾನ್ಯಗಳ ವಿತರಣೆಯ ಬಗ್ಗೆ ಇವತ್ತು ವಿಶೇಷವಾದಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಆಹಾರಧಾನ್ಯಗಳು ಬಹಳಷ್ಟು ಅಪವ್ಯಯವಾಗಿ ಜನರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಆಹಾರದ ವಿತರಣೆಯ ಬಗ್ಗೆ ವಿಶೇಷವಾದ ವ್ಯವಸ್ಥೆ ಮಾಡಲು ಗಮನಕೊಡಬೇಕಾಗುತ್ತದೆ. ಇನ್ನು ಮಹಿಳೆಯರಿಗೆ ವಿಧಾನ ಸಭೆಯಲ್ಲಿ ಶೇಕಡ 30 ರಷ್ಟು ಸದಸ್ಯತ್ವವನ್ನು ನೀಡುವ ವಿಚಾರವಾಗಿ ಮುಖ್ಯಮಂತ್ರಿಗಳು ಗಂಭೀರವಾಗಿ ಪರಿಗಣನೆ ಮಾಡಿರತಕ್ಕದ್ದು, ಅದನ್ನು ಈ ಸದನ ಒಪ್ಪಿಕೊಂಡು ತೀರ್ಮಾನ ಮಾಡಬೇಕಾಗಿದೆ. ಇದರ ಬಗ್ಗೆಯೂ ಸಹ ಮುಖ್ಯಮಂತ್ರಿಗಳು ಮಾಡುವುದಾಗಿ ಭರವಸೆಯನ್ನು ಕೊಟ್ಟಿರುತ್ತಾರೆ. ಇಷ್ಟು ಹೇಳಿ ರಾಜ್ಯಪಾಲರ ಭಾಷಣಕ್ಕೆ ಬೆಂಬಲ ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೃಷ್ಣ (ಕೃಷ್ಣರಾಜಪೇಟೆ):– ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನರ್ಪಿಸಲು ಮಂಡಿಸಿರತಕ್ಕ ಸೂಚನೆಯನ್ನು ಅನುಮೋದಿಸಿ ತಮ್ಮ ಅನುಮತಿಯನ್ನು ಪಡೆದು ಎರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಜನತಾದಳ ಸರ್ಕಾರ 1983 ರಿಂದ 89ರವರೆಗೆ ಏನು ಒಳ್ಳೆಯ ಕೆಲಸವನ್ನು ಮಾಡಿತ್ತು ಅದು ಕುಡಿಯುವ ನೀರಿನ ಕಾರ್ಯಕ್ರಮವಾಗಿರಬಹುದು, ಅಧಿಕಾರ ವಿಕೇಂದ್ರಿಕರಣವಾಗಿರಬಹುದು ಮತ್ತು ಸುಸ್ತಿ ಬಡ್ಡಿಯ ಮನ್ನಾ ಮಾಡತಕ್ಕದ್ದಾಗಿರಬಹುದು. ರೈತರ ಪರವಾಗಿ, ದುರ್ಬಲ ವರ್ಗದವರ ಪರವಾಗಿ, ಹಿಂದುಳಿದವರ ಪರವಾಗಿ ತೆಗೆದುಕೊಂಡು ನಿರ್ಣಯಗಳನ್ನು ಕರ್ನಾಟಕ ರಾಜ್ಯದ ಮಹಾಜನತೆ ನೆನೆಸಿಕೊಂಡು 1989 ರಿಂದ 94ರ ವರೆಗೆ ಏನು ಹಿಂದಿನ ಸರ್ಕಾರವಿತ್ತು ಆ ಸರ್ಕಾರದ ಆಶ್ವಾಸನೆಗಳು, ಸಾಧನೆಗಳನ್ನು ಮತ್ತು ನಮ್ಮ ಸರ್ಕಾರದ ಸಾಧನೆಗಳನ್ನು ತುಲನೆ ಮಾಡಿ ಈ ಪಕ್ಷಕ್ಕೆ ಅಭೂತಪೂರ್ವ ವಿಜಯವನ್ನು ತಂದುಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ನಿಮ್ಮ ಒಬ್ಬರು ನಾಯಕರು ನನಗೋಸ್ಕರ ಸರ್ಕಾರ ಬಂದಿದೆ ಎಂದು ಹೇಳಿರುವುದು ಬಂದಿದೆ. ಆದರೆ ನೀವು ನಿಮ್ಮ ಸರ್ಕಾರದ ಸಾಧನೆಯಿಂದ ಅಭೂತಪೂರ್ವವಾಗಿ ಜಯ ಬಂದಿದೆ ಎಂದು ಹೇಳುತ್ತಿದ್ದೀರಿ. ಇದರಲ್ಲಿ ಯಾವುದು ಸರಿ ?

ಶ್ರೀ ಕೃಷ್ಣ:– ಜನಸಾಮಾನ್ಯರನ್ನು ಮತ್ತು ಅವರ ಅಗತ್ಯತೆಗಳಿಗೆ ಸ್ಪಂದಿಸತಕ್ಕ ಪ್ರಾಮಾಣಿಕ, ಪಾರದರ್ಶಕ ಮತ್ತು ದಕ್ಷ ಆಡಳಿತವನ್ನು ಕೊಡುವುದಾಗಿ ರಾಜ್ಯಪಾಲರು ಭಾಷಣದಲ್ಲಿ ಹೇಳಿದ್ದಾರೆ. ನಮ್ಮ ಸರ್ಕಾರ ಪ್ರಾಮಾಣಿಕವಾದ ಸರ್ಕಾರವನ್ನೇನು ಕೊಡುತ್ತದೆಂದು ಹೇಳಿದೆ ಬಹುಶಃ ಆ ಸರ್ಕಾರವನ್ನು ಕೊಡುವುದು ಎಷ್ಟರಮಟ್ಟಿಗೆ ಕಷ್ಟ ಎಂಬುದನ್ನು ಚೆನ್ನಾಗಿ ವಿಚಾರ ಮಾಡಿ ಈ ಮಾತನ್ನು ರಾಜ್ಯಪಾಲರ ಮುಖಾಂತರ ಹೇಳಿಸಿದ್ದಾರೆಂದು ಹೇಳಬಯಸುತ್ತೇನೆ. ಇವತ್ತು ಭ್ರಷ್ಟಾಚಾರ ಮುಗಿಲೆತ್ತರಕ್ಕೆ ಹೋಗಿದೆ. ಶ್ರೀಮತಿ ಇಂದಿರಾಗಾಂಧಿಯವರು ಭ್ರಷ್ಟಾಚಾರವನ್ನು ಇಂಟರ್‌ನ್ಯಾಷನಲ್ ಫಿನಾಮಿನ ಎಂದು ಹೇಳಿದರು. ಅದು ಎಷ್ಟರಮಟ್ಟಿಗೆ ಆಗಿದೆ ಎಂದರೆ ಅದು ವೇ ಆಫ್ ಆಗಿದೆ. ಅದು ರಾಜಕಾರಣದಲ್ಲಿರಬಹುದು, ಅಧಿಕಾರದಲ್ಲಿರಬಹುದು, ಬೇರೆ ವರ್ಗದಲ್ಲಾಗಿರಬಹುದು. ಇವತ್ತು ಎಷ್ಟು ಜನರು ಪ್ರಾಮಾಣಿಕರಿದ್ದಾರೆ ಎಂಬುದನ್ನು ಹುಡುಕತಕ್ಕ ಕಾಲಕ್ಕೆ ನಾವು ತಲುಪಿದ್ದೇವೆ.

ಇವೆಲ್ಲವನ್ನೂ ಸರಿಪಡಿಸಬೇಕಾದರೆ ನಮ್ಮ ಪ್ರಜಾಪ್ರಭುತ್ವದಲ್ಲಿ ಈ ರಾಜಕೀಯ ಭ್ರಷ್ಟಾಚಾರವನ್ನು ಮೊದಲು ತೊಲಗಿಸತಕ್ಕಂಥಾದ್ದು ಅಗತ್ಯ. ರಾಜಕೀಯ ಭ್ರಷ್ಟಾಚಾರವನ್ನು ತೊಲಗಿಸಬೇಕಾದರೆ ಚುನಾವಣೆಗಳು ಸರಳವಾಗಿ ನಡೆಯಬೇಕು. ಅತಿಯಾದ ವೆಚ್ಚ ಇರಕೂಡದು. ಜನ ಸಾಮಾನ್ಯರು

ಅದರಲ್ಲಿ ಭಾಗವಹಿಸುವ ರೀತಿಯಲ್ಲಿ ಇರಬೇಕು. ಹಾಗಾದರೆ ಮಾತ್ರ ಈ ರಾಜಕೀಯ ಭ್ರಷ್ಟಾಚಾರವನ್ನು ತಡೆಯಲಿಕ್ಕೆ ಸಾಧ್ಯವಾಗುತ್ತದೆ. ಆದರೆ ನಮ್ಮಲ್ಲಿ ಈ ಚುನಾವಣೆಗೆ ಸಂಬಂಧಪಟ್ಟ ಹಾಗೆ ಅನೇಕ ಸುಧಾರಣೆಗಳನ್ನು ತರುತ್ತೇವೆ ಎಂದು ಕೇಂದ್ರದಲ್ಲಿ ಇರತಕ್ಕಂಥ ಸರ್ಕಾರ, ಅದು ಇಂತಹುದೇ ಸರ್ಕಾರ, ಇಂತಹುದೇ ಪಕ್ಷ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಈ ರೀತಿ ಹೇಳುತ್ತಾ ಬಂದಿದ್ದರೂ ಸಹ ಈ ದಿಕ್ಕಿನಲ್ಲಿ ಸುಮಾರು 40 ವರ್ಷದಿಂದ ಮಾತನಾಡಿಕೊಂಡು ಬಂದಿದ್ದಾರೆಯೇ ಹೊರತು ಒಂದೂ ಗಮನಾರ್ಹವಾದ ಸುಧಾರಣೆಯನ್ನು ತರುವುದಕ್ಕೆ ಪ್ರಯತ್ನ ಮಾಡಿಲ್ಲ. ಈ ದಿಕ್ಕಿನಲ್ಲಿ ಒಂದು ಪ್ರಯತ್ನ ಆಗದೇ ಇದ್ದರೆ ಈ ರಾಜಕೀಯ ಭ್ರಷ್ಟಾಚಾರವನ್ನು ತೊಲಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಸ್ನೇಹಿತರೆ ಹೇಳುತ್ತಾರೆ. ಏನು ಮಾಡೋದು ಚುನಾವಣೆಗೆ ನಾನು ಹತ್ತು ಲಕ್ಷ ರೂಪಾಯಿ ಖರ್ಚು ಮಾಡಿ ಬಂದಿದ್ದೇನೆ. ಇಪ್ಪತ್ತು ಲಕ್ಷ ರೂಪಾಯಿ ಖರ್ಚು ಮಾಡಿ ಬಂದಿದ್ದೇನೆ. ಮುಂದೆ ಕೂಡ ಚುನಾವಣೆ ಎದುರಿಸಬೇಕು ಎಂದು ಹೇಳುತ್ತಾರೆ. ಅದು ವಾಸ್ತವ ಇಲ್ಲ ಎಂದು ಯಾರೂ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ ಅಥವಾ ಅಧಿಕಾರಿಗಳು ಮೇಲೆ ಏನಾದರೂ ಅಪಾದನೆ ಬಂದರೆ ಅವರು ಏನ್ರಿ ಮಾಡೋದು ಮೇಲು ವರ್ಗಕ್ಕೆ ಹೋಗಬೇಕಾದರೆ ಇದೆಲ್ಲಾ ಆಗುತ್ತದೆ. ನನಗೆ ಏನು ಉಳಿಯುತ್ತದೆ ಎಂದು ಹೇಳುತ್ತಾನೆ. ಇವೆಲ್ಲಾ ಸಮಾಜದಲ್ಲಿ ಏನು ತೋರಿಸುತ್ತವೆ ? ಇದರಲ್ಲಿ ಸುಧಾರಣೆಯನ್ನು ಯಾವ ರೀತಿ ಮಾಡುವುದು ? ರಾಜಕೀಯ ಸುಧಾರಣೆ ಆಗದಿದ್ದರೆ ನಮ್ಮ ಆಡಳಿತವನ್ನು ನಮ್ಮ ಕರ್ಮಚಾರಿಗಳನ್ನು ಸರಿಪಡಿಸುವುದು ಸಾಧ್ಯವಾಗುವುದಿಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇವೆಲ್ಲವನ್ನೂ ಸಹ ವಿಚಾರ ಮಾಡಿ, ಈ ಮಾತುಗಳನ್ನು ಹೇಳಿಸಿದ್ದಾರೆ ಎಂದು ನಾನು ಭಾವಿಸುತ್ತೇನೆ. ಇವತ್ತು ಭ್ರಷ್ಟಾಚಾರವನ್ನು ತೊಡೆದು ಹಾಕಬೇಕದರೆ ಪ್ರಜಾಪ್ರಭುತ್ವದಲ್ಲಿ ಯಮಧ್ಯೆರ್ಯ ಬೇಕು. ಅಲ್ಲಿ ಎಲ್ಲಾ ರೀತಿಯ ಒತ್ತಡಗಳು ಇರುತ್ತವೆ. ಅಂತಹ ಒತ್ತಡಗಳನ್ನು ಮೆಟ್ಟಿ ನಿಲ್ಲತಕ್ಕಂಥ ಆ ಯಮಧ್ಯೆರ್ಯ ಇರತಕ್ಕಂಥವರು ಮಾತ್ರ ಸ್ವಲ್ಪಮಟ್ಟಿನ ಸುಧಾರಣೆ ತರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಮುಖ್ಯಮಂತ್ರಿಗಳು ಈ ನಿರ್ಧಾರವನ್ನು ಮಾಡಿದ್ದಾರೆ ಎನ್ನುವ ಮಾತನ್ನು ಇಲ್ಲಿ ನಾನು ಹೇಳುವುದಕ್ಕೆ ಇಚ್ಛೆಮಾಡುತ್ತೇನೆ. ಇವತ್ತು ಸಮಾಜದಲ್ಲೂ ಸಹ ಈ ಭ್ರಷ್ಟಾಚಾರದ ಬಗ್ಗೆ ಏನೇನು ಅಂತಹ ವಿರೋಧ ಇಲ್ಲ. ಸುಮ್ಮನೆ ಪತ್ರಿಕೆಗಳಲ್ಲಿ ಕುಳಿತಾಗ ನಿಂತಾಗ ಭ್ರಷ್ಟಾಚಾರದ ಬಗ್ಗೆ ಹೇಳುತ್ತಾರೆಯೇ ಹೊರತು ನಮ್ಮ ಹಳ್ಳಿಗಳಲ್ಲಿ ಯಾವ ಅಭಿಪ್ರಾಯ ಇದೆ ಎಂದರೆ ಯಾರಾದರೂ ಒಬ್ಬ ಕಂಡಕ್ಟರ್ ಅಥವಾ ಯಾವುದಾದರೂ ಕೆಲಸದಲ್ಲಿ ಸಂಪಾದನೆ ಮಾಡಿ, ಹಳ್ಳಿಗಳಲ್ಲಿ ನಾಲ್ಕಾರು ಎಕರೆ ಭೂಮಿಯನ್ನು ತೆಗೆದರೆ ಅಥವಾ ಮನೆ ಕಟ್ಟಿಸಿದರೆ ಅವನಿಗೆ ಎಂತಹ ಒಳ್ಳೆಯ ಮಗ ಹುಟ್ಟಿದನಪ್ಪ ಎಂದು ಹೇಳುತ್ತಾರೆ. ಆದರೆ ಅವನೊಬ್ಬ ಮೇಸ್ಟರಾಗಿ ಅಥವಾ ಇನ್ನೇನೋ ಆಗಿ ಕಷ್ಟಪಟ್ಟು ಮನೆಗೆ ಏನೂ ಕೊಡದೆ ಇದ್ದರೆ, ಅವನಿಗೆ ಆನೆ ಹೊಟ್ಟೆಯಲ್ಲ, ಅದು ಮರಿ ಹುಟ್ಟಿದಂಗೆ ಹುಟ್ಟಿದ, ಇವನು ಏನೂ ಪ್ರಯೋಜನ ಇಲ್ಲವೆಂದು ಹೇಳುತ್ತಾರೆ. ಸಾಮಾಜಿಕವಾಗಿ ಆ ರೀತಿಯ ಭಾವನೆ ನಮ್ಮ ಸಮಾಜದಲ್ಲಿ ಬೆಳೆಯುತ್ತಿದೆ. ಇದು ಎಲ್ಲಾಕ್ಕಿಂತ ಬಹಳ ಅಪಾಯಕಾರಿಯಾದುದ್ದು ಇದನ್ನು ಬದಲಾವಣೆ ಮಾಡುವ ರೀತಿಯಲ್ಲಿ ಏನಾದರೂ ಕ್ರಮ ತೆಗೆದುಕೊಳ್ಳದೆ ಹೋದರೆ ಬಹುಶಃ ಇನ್ನೂ ವೇಗವಾಗಿ ನಮ್ಮ ಸಮಾಜದ ಅವನತಿ, ಈ ಸಮಾಜದ ನಾಶವನ್ನು ನಾವು ಬಹಳ ಹತ್ತಿರದಲ್ಲಿ ಕಾಣಬೇಕಾಗುತ್ತದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಮಾಡುತ್ತೇನೆ. ಈ ಭ್ರಷ್ಟಾಚಾರ ನಿರ್ಮೂಲನದಲ್ಲಿ ಹಣದ ಪಾತ್ರ ಬಹಳ ದೊಡ್ಡದು ಇದೆ. ಅದು ಎಲ್ಲರಿಗೂ ಗೊತ್ತಿದೆ. ಇತ್ತೀಚೆಗೆ ನಮ್ಮ ಆಡಳಿತದಲ್ಲಿ ಜಾತಿ ಬಹಳ ದೊಡ್ಡ ಕೆಲಸ ಮಾಡುತ್ತಿದೆ. ನನ್ನ ಸಣ್ಣ ಅನುಭವದಲ್ಲಿ ಹೇಳುವುದಾದರೆ ಯಾರು ಭ್ರಷ್ಟ ಅಧಿಕಾರಿಗಳು ಕಳ್ಳ

ಅಧಿಕಾರಿಗಳು ಇರುತ್ತಾರೆ. ಅವರು ದುಡ್ಡು ಹೊಡೆಯದೆ ಇರತಕ್ಕಂಥ ಎಂಎಲ್‌ಎಗಳ ಹತ್ತಿರ ಬಂದು ಅವರ ಹಿಂಬಾಲಕರನ್ನೆಲ್ಲಾ ಕಟ್ಟಿಕೊಂಡು ಕಟ್ಟಿಕೊಂಡು ಬಂದು, ಅವರೆಲ್ಲಾ ಆರ್ಗನೈಸ್ ಮಾಡಿ ಅವರೆಲ್ಲಾ ಸಹಿ ತೆಗೆದುಕೊಂಡು ಮಂತ್ರಿಗಳ ಹತ್ತಿರ ಹೋಗುವುದಕ್ಕೆ ಆಗುವುದಿಲ್ಲ. ಅದು ತಮಗೆ ಗೊತ್ತು. ಈ ಭ್ರಷ್ಟಾಚಾರಕ್ಕೂ ಇದ್ದಾರಲ್ಲ ಇವರು ಎಲ್ಲಾ ತರಹದ ಕೆಲಸ ಮಾಡುತ್ತಾರೆ. ಅವರು ಜಾತಿಯನ್ನು ಒಂದು ಪ್ರಬಲವಾದ ಅಸ್ತ್ರವನ್ನಾಗಿ ಮಾಡಿಕೊಂಡಿದ್ದಾರೆ. ಇದನ್ನು ನಿಲ್ಲಿಸದೆ ಇದ್ದರೆ ಈ ದಿಕ್ಕಿನಲ್ಲಿ ನಾವು ಮುಂದೆ ಕಾಲಿಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ನಾನು ಇಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈಗ ಈ ನಿಟ್ಟಿನಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಲೋಕಾಯುಕ್ತವನ್ನು ಬಲಪಡಿಸತಕ್ಕಂಥ ಮಾತನ್ನು ಆಡಿದ್ದಾರೆ. ಇದು ಬಹಳ ಸ್ವಾಗತಾರ್ಹವಾದಂತಹ ವಿಚಾರ. ಅದೇ ರೀತಿಯಲ್ಲಿ ಜಾಗೃತ ದಳಕ್ಕೆ ಖಚಿತವಾದ ನಿಯಮಾವಳಿಗಳನ್ನು ರಚನೆ ಮಾಡಬೇಕು. ದಕ್ಷರಾದಂತಹ, ಪ್ರಾಮಾಣಿಕರಾದಂತಹ ಅಧಿಕಾರಿಗಳನ್ನು ಜಾಗೃತ ದಳಕ್ಕೆ ಹಾಕಬೇಕು ಎಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅದೂ ಅಲ್ಲದೆ ಪಾರದರ್ಶಕ ಸರ್ಕಾರವನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಪಾರದರ್ಶಕ ಅಂದರೆ ಒಪನ್ ಗೌವರ್ನಮೆಂಟ್, ಎಲ್ಲರಿಗೂ ಕಾಣತಕ್ಕಂಥದ್ದು, ಆದರೆ ಹಗರಣಗಳಿಂದ ಮುಕ್ತವಾಗಿರತಕ್ಕಂಥ ಸರ್ಕಾರವನ್ನು ಅಂದರೆ ಒಂದು ಖಚಿತವಾದ ಆಶ್ವಾಸನೆಗಳನ್ನು ರಾಜ್ಯಪಾಲರ ಭಾಷಣದಲ್ಲಿ ಕೊಟ್ಟಿದೆ ಎಂದು ನಾನು ಹೇಳಲಿಚ್ಛಿಸುತ್ತೇನೆ. ಹಗರಣಗಳಿಂದ ಮುಕ್ತವಾದಂತಹ ಜನರಿಗೆ ಸಮೀಪವಾದಂತಹ, ಜನರು ನೇರವಾಗಿ ಕಾಣತಕ್ಕಂಥ ಸರ್ಕಾರವನ್ನು ಕೊಡುತ್ತೇವೆ ಎನ್ನುವ ಈ ಮಾತನ್ನು ಎಲ್ಲರೂ ಸ್ವಾಗತ ಮಾಡಬೇಕಾದಂಥ ಮಾತು ಎನ್ನುವುದನ್ನು ನಾನು ಹೇಳಲಿಚ್ಛಿಸುತ್ತೇನೆ. ಇತ್ತೀಚಿಗೆ ಅಧಿಕಾರದಲ್ಲಿರುವಂಥವರು ಅಧಿಕಾರಿಗಳಾಗಿರಬಹುದು. ಸಚಿವರುಗಳಾಗಿರಬಹುದು. ಬೇರೆ ಯಾರೆ ಆಗಿರಬಹುದು. ಅವರನ್ನು ದಾರಿ ತಪ್ಪಿಸುವಂತಹ ಒಂದು ಪಡೆ ಹುಟ್ಟಿಕೊಂಡುಬಿಟ್ಟಿದೆ. ಹಿಂದೆ ಅವರನ್ನು ಕೆಟ್ಟ ಹೆಸರಿನಿಂದ ಕರೆಯುತ್ತಿದ್ದರು. ಬೊಫೋರ್ಸ್‌ನಲ್ಲಿ ವಿನ್‌ಚಡ್ಡಾ ಹೇಳಿದಾನಲ್ಲಾ ಅಂದರೆ ಅವನು ಕೆಲಸಕ್ಕೆ ನಾನು ಕಮೀಷನ್ ತೆಗೆದುಕೊಳ್ಳುತ್ತೇನೆ ಎಂದು. ಅದು ಎಂಥ ಕೆಲಸವಾದರೂ ಆಗಬಹುದು. ಎಂಥ ಕಚಡಾ ಕೆಲಸವಾದರೂ ಅದು ಅವರಿಗೆ ಗೌರವ ಎನ್ನುವ ಹೆಸರು ಬಂದುಬಿಟ್ಟಿದೆ. ಅದು ತಪ್ಪಬೇಕು. ನಮ್ಮ ಸಚಿವರುಗಳು ಅಂತಹ ರಾಜಕೀಯ ದಲ್ಲಾಳಿಗಳಿಂದ ದೂರ ಇರುವಂತಹ ಮತ್ತು ಅಂತಹ ದಲ್ಲಾಳಿಗಳನ್ನು ಹತ್ತಿರಕ್ಕೆ ಸೇರಿಸದೆ ಇರುವಂತಹ ದೃಢ ನಿರ್ಧಾರ ಮಾಡಿದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಸಿದಂತಹ ಮಾತು ಏನು ಇದೆ ಅದಕ್ಕೆ ಬೆಲೆ ಬರುತ್ತದೆ, ಒಂದು ಮಹತ್ವ ಬರುತ್ತದೆ ಎನ್ನುವಂತಹ ಮಾತನ್ನು ಸಹ ಇಲ್ಲಿ ಹೇಳಲಿಚ್ಛಿಸುತ್ತೇನೆ. ಒಂದ ದಕ್ಷ ಪ್ರಾಮಾಣಿಕ, ಪಾರದರ್ಶಕ ಸರ್ಕಾರ ಕೊಡುತ್ತೇನೆಂದು ಹೇಳಿದ್ದಾರೆ. ಈ ದಕ್ಷ ಸರ್ಕಾರ, ನಮ್ಮ ಮಂತ್ರಿಗಳ ದಕ್ಷತೆ ಆಯಾ ಇಲಾಖೆಯ ಅಧಿಕಾರಿಗಳಲ್ಲಿ ಪ್ರತಿಬಿಂಬಿತವಾಗಬೇಕು. ಮಾನ್ಯ ಮುಖ್ಯಮಂತ್ರಿಗಳ ದಕ್ಷತೆ, ಪ್ರಾಮಾಣಿಕತೆ, ಇಡೀ ಈ ರಾಜ್ಯದ ನೌಕರರಲ್ಲಿ, ಸಾಮಾನ್ಯ ನೌಕರರಲ್ಲಿ, ಪ್ರತಿಬಿಂಬಿತವಾಗಬೇಕು. ಅದೇ ರೀತಿ ಹಿಂದಿನ ಉಪ ಮುಖ್ಯಮಂತ್ರಿಗಳು ಶ್ರೀ ಎಸ್.ಎಂ. ಕೃಷ್ಣರವರು ನಮ್ಮ ಜಿಲ್ಲೆಯವರೆ, ಅವರು ನಮ್ಮ ಊರಿಗೆ ಬಂದಾಗ ನಾನು ನೀರಿಗಂಟಿ ಮತ್ತು ಲೈನ್ ಮನ್ ಆಗಿ ಕೆಲಸ ಮಾಡುತ್ತೇನೆಂದು ಹೇಳಿದ್ದರು. ಪಾಪ, ಅವರು ನೀರಿಗಂಟಿಯು, ಲೈನ್‌ಮನ್‌ನಾಗಿಯೂ ಕೆಲಸ ಮಾಡಲಿಲ್ಲ. ಈಗ ನಮ್ಮ ಉಪಮುಖ್ಯಮಂತ್ರಿಗಳು ಇದ್ದಾರೆ. ಅವರಿಗೆ ನೀರಾವರಿ ಇಲಾಖೆ ಇಲ್ಲ. ಅವರು ನೀರಿಗಂಟಿ ಕೆಲಸ ಮಾಡುವುದಕ್ಕೆ, ಆದರೆ ಲೈನ್ ಮನ್ ಕೆಲಸ ಮಾಡುವುದಕ್ಕೆ ಅವಕಾಶವಿದೆ.

ಆದರೆ ಅವರು ಲೈನ್‌ಮನ್ ಕೆಲಸ ಮಾಡಬೇಕೆಂದು ನಾನು ಹೇಳುವುದಿಲ್ಲ. ಅಂದರೆ ಇವರ ದಕ್ಷತೆ ಒಬ್ಬ ಸಾಮಾನ್ಯ ಲೈನ್‌ಮನ್ ಇದ್ದಾರಲ್ಲಾ ಅವರಲ್ಲಿ ಪ್ರತಿಬಿಂಬಿತನಾಗಬೇಕು. ಅವನು ಕರಾರುವಾಕ್ಕಾಗಿ ದಕ್ಷತೆಯಿಂದ ಕೆಲಸ ಮಾಡಬೇಕು. ಆಗ ನಮ್ಮ ಉಪಮುಖ್ಯಮಂತ್ರಿಗಳ ದಕ್ಷತೆ ನಮಗೆ ಗೊತ್ತಾಗುತ್ತದೆ. ಇವರು ಹೇಗೆ ನಡೆದುಕೊಂಡರು.' ಫೈಲ್ ವಿಲೆವಾರಿ ಏನು ಮಾಡಿದರು. ನಿರ್ಣಯಗಳನ್ನು ಏನು ತೆಗೆದುಕೊಂಡರು ಎಂಬುದು, ಅದಕ್ಕಿಂತ ಮುಖ್ಯವಾಗಿ ಜನರು ಕಾಣತಕ್ಕದ್ದು ಅವರ ಇಲಾಖೆಯ ನೌಕರರಲ್ಲಿ ಏನು ಬದಲಾವಣೆಯಾಗಿದೆ ಎನ್ನುವುದು. ಅದೇ ರೀತಿಯಲ್ಲಿ ರೆವಿನ್ಯೂ ಮಂತ್ರಿಗಳಾಗಿ ಹಿರಿಯರಾದ ಶ್ರೀ ಜಾಲಪ್ಪನವರು ಬಂದಿದ್ದಾರೆ. ಈ ಇಲಾಖೆ ರೈತರಿಗೆ ಮುಖ್ಯವಾದ ಇಲಾಖೆ. ನಮ್ಮಲ್ಲಿ ವಿಲೇಜ್ ಅಕೌಂಟೆಂಟರ್‌ಗಳು ಇದ್ದಾರಲ್ಲಾ, ಅವರು ನಮ್ಮ ರೈತರ ಹಣೆಬರಹವನ್ನು ಬರೆಯುವಂಥವರು. ಅವರು ಏನೆಂದರೆ ಡೆಟರ್ ಒಂದು ರೀತಿ ಪಹಣಿ ಕೊಡುತ್ತಾರೆ. ಕ್ರೆಡಿಟರ್‌ಗೆ ಇನ್ನೊಂದು ರೀತಿ ಪಹಣಿ ಕೊಡುತ್ತಾರೆ. ಏನು ಬೇಕಾದರೂ ಮಾಡುವರು. ಯಾವುದೇ ವಿಲೇಜ್ ಅಕೌಂಟೆಂಡರ್‌ಗಳು ಅವರ ಕೇಂದ್ರ ಸ್ಥಾನದಲ್ಲಿ ಇಲ್ಲ. ಒಂದು ಸಣ್ಣ ಇನ್‌ಕಮ್ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾದರೆ ಇವತ್ತು ರೈತರು ಅಲೆದಾಡಬೇಕು ಮತ್ತು ನೂರಾರು ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಇಂಥ ಒಂದು ಪರಿಸ್ಥಿತಿ ಇದೆ. ಆದ್ದರಿಂದ ಎಲ್ಲ ವಿಲೇಜ್ ಅಕೌಂಟೆಂಟ್ಸ್ ಕೇಂದ್ರ ಸ್ಥಾನದಲ್ಲಿ ಕಡ್ಡಾಯವಾಗಿರುವಂತಾಗಬೇಕು. ಅದನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ಸರ್ಕಾರದವರು ನಾಡಕಛೇರಿಗಳನ್ನು ಆರಂಭ ಮಾಡುತ್ತಿದ್ದಾರೆ. ಈ ನಾಡಕಚೇರಿಗಳನ್ನು ಆರಂಭ ಮಾಡುವುದಕ್ಕಿಂತ ಒಬ್ಬ ಡೆಪ್ಯೂಟಿ ತಹಶೀಲ್ದಾರರಿಗೆ ತಾಲ್ಲೂಕು ಕಛೇರಿಗೆ ಇನ್ನೊಂದು ಸೀಟು ಕೊಡಬೇಕು. ಇವತ್ತು ಆಡಳಿತ ವಿಕೇಂದ್ರೀಕರಣವಾಗಿದೆ. ಪಂಚಾಯತ್‌ಗಳ ಚುನಾವಣೆಯಾಗಿದೆ. ಪಂಚಾಯತ್‌ಗಳು ರಚನೆಯಾಗಿದೆ. ಪಂಚಾಯತ್ ಕೇಂದ್ರಗಳಿಗೆ ಪ್ರತಿ ತಿಂಗಳು ಈ ರೆವಿನ್ಯೂ ಇಲಾಖೆಯ ಅಧಿಕಾರಿಗಳು ಹೋಗಿ ಅಲ್ಲಿ ಅರ್ಜಿಗಳನ್ನು ಸ್ವೀಕಾರ ಮಾಡಿ ಅಲ್ಲೇ ವಿಷಯ ತೀರ್ಮಾನವಾಗುವಂತಹ ಒಂದು ಪರಿಪಾಠ ಬೆಳೆಸಿಕೊಂಡರೆ, ರೈತರಿಗೆ ಅವರ ಚುನಾಯಿತ ಪ್ರತಿನಿಧಿಗಳ ಎದುರು ಅವರಿಗೆ ಹತ್ತಿರವಾಗಿರತಕ್ಕ ಸ್ಥಳದಲ್ಲಿ ಅವರ ಕೆಲಸಕಾರ್ಯಗಳು ಆಗುವುದಕ್ಕೆ ಸಹಾಯಕವಾಗುತ್ತದೆ. ಅದರ ಜೊತೆಗೆ ಈ ಚುನಾಯಿತ ಪ್ರತಿನಿಧಿಗಳು, ಪಂಚಾಯಿತಿ ಅಧ್ಯಕ್ಷರುಗಳು, ಸದಸ್ಯರುಗಳು ಅದು ಸ್ಥಳದಲ್ಲೇ ಇರುವುದರಿಂದ, ಹತ್ತಿರದಲ್ಲೇ ಇರುವುದರಿಂದ ಆ ಒಂದು ಸಂಬಂಧ ಸಂಪರ್ಕವೂ ಬೆಳೆಯುತ್ತದೆ. ಅವರೂ ಒಂದು ರೀತಿಯ ಉಸ್ತುವಾರಿ ಕೆಲಸವನ್ನು ಸಹ ಮಾಡಿದಂತಾಗುತ್ತದೆ. ಇದನ್ನು ಮಾಡುವುದಕ್ಕೆ ಈ ದಿಕ್ಕಿನಲ್ಲಿ ಯೋಜನೆ ಮಾಡಬೇಕೆಂದು ನಾನು ಮಾನ್ಯ ಕಂದಾಯ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅದಲ್ಲದೆ ಎಲ್ಲಾ ಸಚಿವರೂ, ಈಗ ಹಣಕಾಸಿನ ಸಚಿವರು ಇದ್ದಾರೆ, ನಮ್ಮ ಸ್ನೇಹಿತರು ಗಣಿ ಸಚಿವರಿದ್ದಾರೆ, ಅಬಕಾರಿ ಸಚಿವರಿದ್ದಾರೆ, ಅವರ ದಕ್ಷತೆ ನಮಗೆ ಹೇಗೆ ಗೊತ್ತಾಗಬೇಕು ಎಂದರೆ, ಈಗ ಖಜಾನೆ ಖಾಲಿಯಾಗಿ ಬಿಟ್ಟಿದೆ. ಸುಮಾರು ಇನ್ನೂರ ಐವತ್ತು ಕೋಟಿ ರೂಪಾಯಿಗಳ ಪೆಂಡಿಂಗ್ ಬಿಲ್ ಇದೆಯೆಂದು ಕೇಳಿದ್ದೇನೆ. ಸುಮಾರು ಮುನ್ನೂರು ಐವತ್ತು ಕೋಟಿ ರೂಪಾಯಿಗಳನ್ನು ಪಿಯರ್‌ಲೆಸ್‌ನಿಂದ ಬೇರೆ ಬೇರೆ ಬ್ಯಾಂಕುಗಳಿಂದ ಸಾಲ ಮಾಡಿದ್ದಾನೆ ಎಂದು ನಾನು ಕೇಳಿದ್ದೇನೆ. ಅವೆಲ್ಲವನ್ನೂ ತುಂಬತಕ್ಕಂಥ ಕೆಲಸ ದಕ್ಷತೆ ಅದರಲ್ಲಿ ಕಾಣಬೇಕು. ನಮ್ಮ ಸ್ನೇಹಿತರಾದ ಜಯರಾಮುರವರು ಈಗ ಇಲ್ಲ. ನಮ್ಮ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಆಗಾಗ ಈ ಗ್ರಾನೈಟ್ ಹಗರಣದ ಬಗ್ಗೆ ಹೇಳುತ್ತಿದ್ದರು. ಈ ಗ್ರಾನೈಟ್‌ನಲ್ಲಿ ಇನ್ನೂರು ಮುನ್ನೂರು ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ನಮ್ಮ ಅಧಿಕಾರಿಗಳ ಅಥವಾ ಸಚಿವರ ಮರ್ಜಿಯಿಂದ ಅದು ತಪ್ಪಿಹೋಗಿಬಿಡುತ್ತಿದೆ ಎನ್ನುವ ಮಾತನ್ನು ಅವರು ಬಹಳ ಸಾರಿ

ಹೇಳಿದ್ದಾರೆ. ಈ ದಿಕ್ಕಿನಲ್ಲಿ ಒಂದು ಕೆಲಸ ಆಗಬೇಕು ಒಂದು ಚಿಕ್ಕಾಸೂ ಕೂಡ ಸೋರಿಹೋಗದ ರೀತಿಯಲ್ಲಿ ನಮ್ಮ ಖಜಾನೆಯನ್ನು ತುಂಬತಕ್ಕಂಥ ಕೆಲಸವನ್ನು ಮಾನ್ಯ ಮಂತ್ರಿಗಳು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ನಮ್ಮ ಮಾನ್ಯ ಗೃಹಸಚಿವರು ಇಲ್ಲೇ ಇದ್ದಾರೆ. ನಮ್ಮ ಪೊಲೀಸ್ ಪೇದೆ ಇದ್ದಾನಲ್ಲ......,

ಶ್ರೀ ರಮಾನಾಥ ರೈ:– ಸನ್ಮಾನ್ಯ ಅಧ್ಯಕ್ಷರೆ, ಈ ಸೋರಿಕೆ ನಿಮ್ಮ ಕಾಲದಲ್ಲೆ ನಿಂತಿತ್ತು. ಆದರೆ ನಿಮ್ಮ ಕಾಲದಲ್ಲಿ ಇರಲಿಲ್ಲ ಎಂದು ಕಾಣುತ್ತದೆ.

ಶ್ರೀ ಕೃಷ್ಣ:– ನಿಮ್ಮ ಸರ್ಕಾರದಲ್ಲಿ ದೊಡ್ಡದಾಗಿ ಇತ್ತು. ಈಗ ಮುನ್ನೂರ ಐವತ್ತು ಕೋಟಿ ರೂಪಾಯಿ ಸಾಲ ಮಾಡಿದ್ದುದು ನಿಜ. ಇನ್ನೂರ ಐವತ್ತು ಕೋಟಿ ರೂಪಾಯಿಗಳ ಪೆಂಡಿಂಗ್ ಬಿಲ್ಸ್ ಇದೆ. ಅದು ನಮ್ಮ ಸರ್ಕಾರದಲ್ಲಿ ನಿಲ್ಲಿಸಿದ್ದರೆ ಸಿಕ್ಕುತ್ತಿತ್ತು. ನಿಮ್ಮ ಸರ್ಕಾರದಲ್ಲಿ ಅದೂ ಆಗುತ್ತಿರಲಿಲ್ಲ.

ಶ್ರೀ ರಮಾನಾಥ ರೈ:– ಪ್ರಾಮಾಣಿಕತೆ, ದಕ್ಷತೆಯ ಬಗ್ಗೆ ನಮ್ಮ ಕೃಷ್ಣರವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಆದರೆ ನಿಮ್ಮಲ್ಲಿರುವ ಅಭಿಪ್ರಾಯ ಎಲ್ಲರಲ್ಲೂ ಇದೆ ಎಂಬುದನ್ನು ನೀವು ತಿಳಿದುಕೊಂಡು ಮಾತನಾಡಬೇಕು. ಸುಮ್ಮನೆ ಭಾಷಣ ಮಾಡಲಿಕ್ಕೆ....

ಶ್ರೀ ಎಂ. ವರದೇಗೌಡ:– ರಮಾನಾಥ ರೈ ಯವರು ಭ್ರಷ್ಟಾಚಾರ ಎಷ್ಟರಮಟ್ಟಿಗೆ ಇತ್ತು ಎಂದು ಹೇಳುತ್ತಿದ್ದಾರೆ, ನೀವೇ ನೆನಪು ಮಾಡಿಕೊಳ್ಳಬಹುದು ನೀವೇ ಒಂದು ಇಲಾಖೆಯ ಮಂತ್ರಿಯಾಗಿದ್ದರೆ ಆಗ ಎಷ್ಟು ಭ್ರಷ್ಟಾಚಾರ ಆಗುತ್ತದೆ ಎಂಬುದು ತಮಗೆ ಗೊತ್ತಾಗುತ್ತಿತ್ತು.

ಶ್ರೀ ರಾಮಾನಾಥ ರೈ:– ನಾನು ಒಬ್ಬ ಮಂತ್ರಿಯಾಗಿ ಕೆಲಸ ಮಾಡಿದವನು, ನಾವು ಪ್ರಾಮಾಣಿಕವಾಗಿ ಇದ್ದೆವು ಎನ್ನುವುದನ್ನು ಜನತೆ ತೋರಿಸತಕ್ಕಂಥದ್ದು. ಅದು ಮುಂದಕ್ಕೆ ನೆನಪಾಗಬಹುದು.

ಅಧ್ಯಕ್ಷರು:– ನಿಮ್ಮ ಆಕ್ಷೇಪಣೆ ಒಂದು ದಕ್ಷತೆ ಪ್ರಾಮಾಣಿಕತೆ ಬಗ್ಗೆ ಮಾತನಾಡಲಿ ಈ ಸೋರಿಕೆ ಬಗ್ಗೆ ಬೇಡ ಎಂದು ಅಲ್ಲವೆ, ಈ ಸೋರಿಕೆ ಬಗ್ಗೆ ಅವರು ಮಾತನಾಡುತ್ತಾರೆ, ಪ್ರಾಮಾಣಿಕತೆ ಬಗ್ಗೆ ನೀವು ಮಾತನಾಡುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಕೃಷ್ಣರವರು ಈ ನಮ್ಮ ಕಾಂಗ್ರೆಸ್ ಸರ್ಕಾರ ಇದ್ದಾಗ ಮಾತ್ರ ಸೋರಿಕೆ ಇತ್ತು ಎಂದು ಹೇಳುತ್ತಿದ್ದಾರೋ ಅಥವಾ ಯಾವುದು ಎಂದು ಅವರಿಗೆ ಅರ್ಥವಾಗಲಿಲ್ಲವೆ.

ಶ್ರೀ ಸಿ.ಹೆಚ್. ವಿಜಯಶಂಕರ್ (ಹಣಸೂರು):– ಈ ನಾಡಕಛೇರಿಗಳ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ, ಈ ನಾಡಕಛೇರಿಗಳ ಬದಲಾಗಿ ಗ್ರಾಮಪಂಚಾಯಿತಿಗಳು ಏನು ಇದೆ ಅಲ್ಲಿಗೆ ಹೋಗಿ, ಉಪತಹಸೀಲ್ದಾರ್‌ರವರಾಗಲೀ ಅಥವಾ ಅದಕ್ಕೆ ಸಂಬಂಧಪಟ್ಟಂಥ ಸಿಬ್ಬಂದಿಯಾಗಲಿ ಅಲ್ಲಿ ಕುಳಿತುಕೊಂಡು ಕೆಲಸ ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರಕ್ಕೆ ತಾವು ವರದಿಯನ್ನು ಕೊಡುತ್ತಿದ್ದೀರಿ. ನಾನು ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಈ ನಾಡಕಛೇರಿಗಳು ಕಡ್ಡಾಯವಾಗಿ ಇರಬೇಕು. ಅದರ ಜೊತೆಯಲ್ಲಿ ಉಪತಹಸೀಲ್ದಾರ್ ಎಂದು ಸರ್ಕಾರ ಏನು ಮಾಡಿದೆ ಅವರಿಗೆ ಬೇಕಾದರೆ ಸರ್ಕಾರ ಕಡ್ಡಾಯವಾಗಿ ಸೂಚನೆ ಕೊಡಲಿ, ಅವರು ಪಂಚಾಯಿತಿ ಕಛೇರಿಗಳಿಗೆ ಇಂತಿಂಥ ದಿವಸ ಹೋಗಿ ಕುಳಿತುಕೊಂಡು ಕೆಲಸಮಾಡುವಂಥ ಸೂಚನೆ ಉಪತಹಸೀಲ್ದಾರ್‌ರವರಿಗೆ ಇರಲಿ. ಆದರೆ ನಾಡಕಛೇರಿ ಮಾತ್ರ ಮುಂದುವರಿಯುವುದು ಸೂಕ್ತ ಎಂದು ಹೇಳಿ ತಮ್ಮ ವಿಚಾರದಲ್ಲಿ ನನ್ನ ಸಲಹೆಯನ್ನು ಸೇರಿಸುತ್ತಿದ್ದೇನೆ.

ಶ್ರೀ ವಿಜಯಕುಮಾರ್:- ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಮುಂಚೆ ತಾವು ಆಡಳಿತ ಪಕ್ಷದಲ್ಲಿದ್ದೇವೆ ಎನ್ನುವುದನ್ನು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಅವರ ಮಾತನ್ನು ಮಾತ್ರ ನಾವು ಕೇಳುತ್ತಿದ್ದೇವೆ. ಹೆಚ್ಚಾಗಿ ಅವರು ತಮ್ಮ ಸಚಿವರಿಗೆ ಹಾಗೂ ತಮ್ಮ ಬಳಗದವರಿಗೆ ಬುದ್ಧಿವಾದ ಹೇಳುತ್ತಿದ್ದಾರೆ. ಈ ಕೆಲಸವನ್ನು ಅವರು ಸಿ.ಎಲ್.ಪಿ. ಮೀಟಿಂಗ್‌ನಲ್ಲಿ ಮಾಡಬಹುದು. ಈಗ ಮುಖ್ಯವಾಗಿ ಅವರು, ತಮ್ಮ ಧೋರಣೆಗಳು ಏನು? ಯಾವ ರೀತಿಯಲ್ಲಿ ಜನತೆಗೆ ಸಹಾಯವಾಗುವ ರೀತಿಯಲ್ಲಿ ಸರ್ಕಾರವನ್ನು ನಡೆಸುತ್ತೇವೆ ಎಂಬುದನ್ನು ವಿವರವಾಗಿ ಹೇಳಿದರೆ ಒಳ್ಳೆಯದೆಂದು ಮತ್ತು ಆ ಕಡೆ ಗಮನ ಹರಿಸಬೇಕೆಂದು ನಾನು ಹೇಳುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ):- ಮಾನ್ಯ ಅಧ್ಯಕ್ಷರೇ, ಈ ಕಡೆಯಿಂದ ಇನ್ನೊಬ್ಬರು ಸಹ ಸದಸ್ಯರು ಹೇಳಿದ ಹಾಗೆ ರೈತರು ತಾಲ್ಲೂಕು ಆಫೀಸಿಗೆ ಹೋಗದೇ ಇರತಕ್ಕ ಹಾಗೆ ಒಂದು ಪಾಸ್ ಬುಕ್ ಕೊಟ್ಟರೆ ಸಾಕು. ಯಾವುದೇ ಕಾರಣಕ್ಕೂ ರೈತರು ತಾಲ್ಲೂಕು ಆಫೀಸಿಗೆ ಹೋಗಲೇಬಾರದು. ವರ್ಷಕ್ಕೆ ಒಂದು ಸಾರಿ ಎಂಟ್ರಿ ಮಾಡಬೇಕು. ಇದರಿಂದ ಸರ್ಕಾರದ ಹೊರೆಯೂ ಕಡಿಮೆಯಾಗುತ್ತದೆ. ಒಂದು ಪಾಸ್ ಬುಕ್‌ನಲ್ಲಿ ಅವರ ಆಸ್ತಿಯ ಪೂರ್ಣವಿವರ ಇರಬೇಕು. ವರ್ಷಕ್ಕೆ ಒಂದು ಸಾರಿ ನಾವು ಜಾನುವಾರುಗಳು ಎಷ್ಟಿವೆ? ದನಗಳು, ಕುರಿಗಳು, ಎಮ್ಮೆಗಳು ಎಲ್ಲವನ್ನೂ ಲೆಕ್ಕ ಹಾಕುವಂತಹ ಒಂದು ಪರಿಪಾಠ ಇಟ್ಟುಕೊಂಡಿದ್ದೇವೆ. ಜವಾಬ್ದಾರಿಯುತವಾಗಿ ರೆವಿನ್ಯೂ ಮಂತ್ರಿಗಳು ಆಲೋಚನೆ ಮಾಡಿ ಒಂದು ಪಾಸ್ ಬುಕ್ ಕೊಟ್ಟು ವರ್ಷಕ್ಕೆ ಒಂದು ಸಾರಿ ಎಂಟ್ರಿ ಮಾಡುವಂತಹ ಕಾರ್ಯಕ್ರಮ ಹಾಕಿಕೊಳ್ಳಬೇಕು. ಆಗ ವಿಲೇಜ್ ಅಕೌಂಟೆಂಟ್ ಹುದ್ದೆಯೇ ಬೇಕಾಗಿಲ್ಲ ಎಂದು ನನಗನಿಸುತ್ತದೆ. ಈ ಸಮಸ್ಯೆ ಬಹಳ ಗಂಭೀರವಾದ ಸಮಸ್ಯೆಯಾಗಿ ಹಳ್ಳಿಗಳಲ್ಲಿ ಕಾಡುತ್ತಿದೆ. ತಾಲ್ಲೂಕು ಆಫೀಸು ಸಿಬ್ಬಂದಿಗೆ ಸರ್ಕಾರ ಕೊಡತಕ್ಕಂತಹ ಸಂಬಳ 15 ಲಕ್ಷ ರೂಪಾಯಿ ಆಗುತ್ತದೆ. ನಾವೆಲ್ಲಾ ರೈತರು ತಾಲ್ಲೂಕು ಆಫೀಸಿಗೆ ಹೋಗಿ ಕೆಲಸಮಾಡಿಸಿಕೊಂಡು ಹೋಗುವಷ್ಟರಲ್ಲಿ ಒಂದೂವರೆ ಕೋಟಿ ರೂಪಾಯಿಯಷ್ಟು ವೆಚ್ಚವಾಗಿರುತ್ತದೆ. ಒಂದು ಕೆಲಸಕ್ಕೆ ಮೂರು ಸಾರಿ ತಾಲ್ಲೂಕು ಕಛೇರಿಗೆ ಬರುವುದರಿಂದ ರೈತರಿಗೆ ವರ್ಷಕ್ಕೆ ಒಂದೂವರೆ ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಹೊಸದಾಗಿ ಆಸ್ತಿತ್ವಕ್ಕೆ ಬಂದಿರುವ ಈ ಸರ್ಕಾರಕ್ಕೆ ರೈತರ ಬಗ್ಗೆ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕೆನ್ನುವ ಅಭಿಮಾನ ಇದ್ದರೆ ರೈತರು ತಾಲ್ಲೂಕು ಆಫೀಸಿಗೆ ಹೋಗದೇ ಇರತಕ್ಕ ಹಾಗೆ ಒಂದು ಪಾಸ್ ಬುಕ್‌ನ್ನು ತಾವು ಕೊಟ್ಟರೆ ರೈತರ ಸಮಸ್ಯೆ ಕಡಿಮೆಯಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ನನ್ನ ಸ್ನೇಹಿತರು ಹೇಳಿದ್ದನ್ನು ನಾನು ಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಈಗಿರುವ ವಿಲೇಜ್ ಅಕೌಂಟೆಂಟ್‌ಗಳಿಂದ ಜನತೆಗೆ ಬಹಳಷ್ಟು ಉಪಯೋಗ ಆಗುತ್ತಿಲ್ಲ ಹಾಗೂ ಅವರಿಂದ ಕಿರುಕುಳ ಜಾಸ್ತಿಯಾಗುತ್ತಿದೆ. ಈ ಪಾಸ್ ಬುಕ್ ನೀಡುವ ಬಗ್ಗೆ ಮೊದಲು ನಮ್ಮ ಸರ್ಕಾರದವರೇ ಯೋಜನೆ ಹಾಕಿದ್ದರು. ನಂತರ ಕಾಂಗ್ರೆಸ್ ಸರ್ಕಾರದವರು ಪಾಸ್ ಬುಕ್‌ಗಳನ್ನು ಪ್ರಿಂಟ್ ಮಾಡಿಕೊಟ್ಟಿದ್ದಾರೆ. ಈಗ ನಮ್ಮ ಸರ್ಕಾರದ ಯೋಚನೆ ಏನಿದೆ ಎಂದರೆ, ಕೆಲವೊಂದು ಪಾಸ್ ಬುಕ್‌ಗಳನ್ನು ತರಿಸಿ ನೋಡುತ್ತೇವೆ. ಅವರು ಹೇಳಿದ ಹಾಗೆ ನಮ್ಮ ಉದ್ದೇಶ ಏನಿದೆ ಎಂದರೆ, ಪ್ರತಿಯೊಂದು ಸಾರಿ ಜಮೀನನ್ನು ಕೊಂಡರೆ ಅಥವಾ ಮಾರಿದರೆ, ಕೊಂಡುಕೊಳ್ಳುವವನ ಪಾಸ್ ಬುಕ್‌ನಲ್ಲೂ ಆ ಬಗ್ಗೆ ಎಂಟ್ರಿಯಾಗಬೇಕು. ಈ ಮಾರುವವನ ಪಾಸ್ ಬುಕ್‌ನಲ್ಲೂ ಎಂಟ್ರಿಯಾಗಬೇಕು. ಇದರಿಂದಾಗಿ 'ರಿಜಿಸ್ಟ್ರೇಷನ್', 'ಕಾಪೀಸ್ ತರಬೇಕು' ಎನ್ನುವುದೆಲ್ಲಾ ತಪ್ಪುತ್ತವೆ. ಸಾಲ ತೆಗೆದುಕೊಳ್ಳುವಾಗ ಪ್ರತಿಯೊಂದು ಎಂಟ್ರಿಯಾಗಬೇಕು. ಸಾಲ ತೀರಿದಾಗಲೂ ಅದು ಎಂಟ್ರಿಯಾಗಬೇಕು. ಅಷ್ಟಲ್ಲದೆ ವರ್ಷಕ್ಕೆ ಒಂದು ಸಾರಿ ಪಹಣಿ ಎಂಟ್ರಿ ಮಾಡಬೇಕು. ಇಷ್ಟೆಲ್ಲಾ ಮಾಡಿದರೆ ತಾಲ್ಲೂಕು ಕಛೇರಿ ಸಹವಾಸವೇ ಬೇಡವೆಂದು ಈ ಕೆಲಸ

ಮಾಡಬೇಕೆಂದು ಇದ್ದೇವೆ. ಸಾಧ್ಯವಾದಷ್ಟು ಒಂದು ವರ್ಷದೊಳಗೆ ಇದನ್ನು ಪೂರ್ಣಗೊಳಿಸಲಿಕ್ಕೆ ನಾನು ಪ್ರಯತ್ನ ಪಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):– ಈಗ ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳು, ಬ್ಯಾಂಕುಗಳವರು ಈ ಪಾಸ್ ಬುಕ್‌ಗಳನ್ನು ಮಾನ್ಯ ಮಾಡುತ್ತಿಲ್ಲ. ಮಾನ್ಯ ಮಾಡುವಂತೆ ಸರ್ಕಾರ ಅವುಗಳಿಗೆ ಸೂಕ್ತ ನಿರ್ದೇಶನ ಕೊಡಬೇಕು.

ಶ್ರೀ ಆರ್.ಎಲ್. ಜಾಲಪ್ಪ:– ಇದು ನಮ್ಮ ಗಮನಕ್ಕೆ ಬಂದಿದೆ. ಸಹಕಾರಿ ಸಂಸ್ಥೆಗಳವರು ಪಾಸ್ ಬುಕ್‌ಗಳನ್ನು ಮಾನ್ಯ ಮಾಡಲೇಬೇಕು ಮತ್ತು ಕೇಂದ್ರ ಬ್ಯಾಂಕುಗಳು ಏನಿವೆ ಅವುಗಳು ಕೂಡ ಪಾಸ್ ಬುಕ್‌ಗಳನ್ನು ಮಾನ್ಯ ಮಾಡಬೇಕೆಂದು ಅವರನ್ನು ಕೋರುತ್ತೇವೆ ಮತ್ತು ಈ ಬಗ್ಗೆ ಒಂದು ಆಕ್ಟ್ ಮಾಡಿದ್ದೇವೆ.

ಅಧ್ಯಕ್ಷರು:– ಈ ಬಗ್ಗೆ ಸಂಬಂಧಿಸಿದವರಿಗೆ ಇನ್‌ಸ್ಟ್ರಕ್ಷನ್ಸ್ ಕೊಡಿ.

ಶ್ರೀ ಬಿ. ವಿಜಯಕುಮಾರ್:– ಯಾವ ವಿಲೇಜ್ ಅಕೌಂಟೆಂಟ್ ಕೂಡ ಬೆಳಿಗ್ಗೆ ಹೋಗಿ ಅಲ್ಲಿ ಪರಿಶೀಲನೆ ಮಾಡಿ ಆರ್.ಟಿ.ಸಿ. ಬರೆಯುವಂತಹ ಅಭ್ಯಾಸ ಇಟ್ಟುಕೊಂಡಿಲ್ಲ. ಇದು ಬಹಳ ಸ್ಪಷ್ಟವಾಗಿರುವಂತಹ ವಿಚಾರ. ದಯವಿಟ್ಟು ಸರ್ಕಾರ ಸ್ಪಷ್ಟವಾದ ಸೂಚನೆ ನೀಡಬೇಕು, ಯಾವ ಗ್ರಾಮ ಲೆಕ್ಕಿಗರೇ ಆಗಲೀ ಸ್ಥಳದಲ್ಲಿಯೇ ಪರಿಶೀಲನೆ ಮಾಡಿ ಆರ್.ಟಿ.ಸಿ.ಯನ್ನು ಬರೆಯುವಂತಹ ಅಭ್ಯಾಸ ಮಾಡಿಕೊಳ್ಳಬೇಕು. ಇದರ ಜೊತೆಯಲ್ಲಿ ಇನ್ನೊಂದು ಬಹಳ ಮುಖ್ಯವಾದ ವಿಚಾರ ಏನೆಂದರೆ ತಹಶೀಲ್ದಾರ್ ಅನುಮತಿ ಇಲ್ಲದ ಹೊರತು ಖಾತಾ ಬದಲಾವಣೆ ಮಾಡಬಾರದೆಂದು ಆದೇಶವಿದ್ದರೂ ಕೆಲವು ಗ್ರಾಮ ಲೆಕ್ಕಿಗರು ಆ ಆದೇಶವನ್ನು ಓವರ್‌ಟೇಕ್ ಮಾಡಿ ತಮ್ಮ ಇಚ್ಛಾನುಸಾರ ಖಾತಾ ಬದಲಾವಣೆ ಮಾಡುವಂತಹ ಕೆಲವು ವಿಧಾನಗಳಿವೆ. ತಹಶೀಲ್ದಾರ್ ಅನುಮತಿ ಇಲ್ಲದೇ ಯಾವುದೇ ಖಾತಾ ಬದಲಾವಣೆ ಮಾಡಬಾರದು ಎಂಬ ಬಗ್ಗೆ ಸ್ಪಷ್ಟವಾದ ಸೂಚನೆಯನ್ನು ಸರ್ಕಾರ ಕೊಡಬೇಕು.

ಶ್ರೀ ಆರ್.ಎಲ್. ಜಾಲಪ್ಪ:– ಇದೆಲ್ಲಾ ಯೋಚನೆ ಮಾಡಿದ್ದೇವೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳು ಪ್ರತಿ ತಾಲ್ಲೂಕಿನಲ್ಲೂ ಬೆಳಿಗ್ಗೆಯಿಂದ ಸಂಜೆಯವರೆಗೆ ಕಟ್ಟುನಿಟ್ಟಾಗಿ ಇರಬೇಕೆಂದು ನಾನು ಸೂಚನೆ ಕೊಡುತ್ತೇನೆ. ಒಂದೊಂದು ತಾಲ್ಲೂಕಿನಲ್ಲೂ ಬೆಳಿಗ್ಗೆಯಿಂದ ಸಂಜೆಯವರೆಗೆ ಇರಬೇಕು. ಜನರ ಸಮಸ್ಯೆಗಳನ್ನು ಕೇಳಬೇಕು. ಅಲ್ಲೇ ಏನೇನು ತೀರ್ಮಾನ ಮಾಡಬಹುದೋ ಅವುಗಳನ್ನು ಅಲ್ಲೇ ತೀರ್ಮಾನ ಮಾಡಬೇಕೆಂದು ನಾವು ಸೂಚನೆಗಳನ್ನು ಕೊಡುತ್ತಿದ್ದೇವೆ.

ಶ್ರೀ ಕೃಷ್ಣ:– ಮಾನ್ಯ ಅಧ್ಯಕ್ಷರೆ, ಬಹಳ ಹಿಂದೆ ಚಿನ್ನಕ್ಕಾಗಿ ಬಹಳ ದೂರದವರೆಗೆ ಹೋಗಿ ಗಣಿಗಳನ್ನು ತೋಡಿ ಚಿನ್ನವನ್ನು ತೆಗೆದುಕೊಂಡು ಬರುತ್ತಿದ್ದರು. ಮೆಕೆನಸ್ ಗೋಲ್ಡ್ ಎಂಬ ಒಂದು ಸಿನಿಮಾವನ್ನು ನಾನೂ ನೋಡಿದ್ದೇನೆ, ತಾವೂ ಕೂಡ ನೋಡಿದ್ದೀರಿ. ಆದರೆ ಈಗ ಈ ಚಿನ್ನ ಎಲ್ಲಿದೆ ಎಂದರೆ, ನಗರಗಳ ಸುತ್ತಮುತ್ತ ಇದೆ. ಇತ್ತೀಚಿಗೆ ಚಿನ್ನದ ಗಣಿಗಳೆಲ್ಲಾ ಹೊರಟು ಹೋದುವು. ಈಗ ಆ ಚಿನ್ನವನ್ನು ತರುವುದಕ್ಕಾಗುವುದಿಲ್ಲ. ನಮ್ಮಲ್ಲಿನ ಹೊಸ ಸಾಹಸಿಗಳು ಯಾರಿದ್ದಾರೆ ಅವರು ಈ ಚಿನ್ನವನ್ನು ಕಬಳಿಸಲು ಬಹಳ ಸಾಹಸವನ್ನು ಮಾಡುತ್ತಿದ್ದಾರೆ. ಅನೇಕ ಭೂ ಹಗರಣಗಳಾಗುತ್ತಿವೆ. ಅದು ಯಾವುದೇ ಇರಬಹುದು. ಜಾಫರ್ ಷರೀಫ್‌ರವರ ಭೂ ಹಗರಣ ಎಂದು ಹೇಳುತ್ತಾರೆ. ಅನೇಕಸಾರಿ ಪತ್ರಿಕೆಗಳಲ್ಲಿ ಖೋಡೇಸ್‌ರವರ ಬಗ್ಗೆ ಬಂದಿತ್ತು. ಅವರು ಸಾವಿರಾರು ಎಕರೆ ಭೂಮಿಯನ್ನು ಅಕ್ರಮವಾಗಿ ಹೊಂದಿದ್ದಾರೆ ಆತ. ಇದೇರೀತಿ ನಮ್ಮಲ್ಲಿರತಕ್ಕ ಕೆರೆಗಳನ್ನು ಆಜೂಬಾಜಿನ ಒತ್ತುವರಿ ಮಾಡಿಕೊಂಡು ಬಿಟ್ಟಿದ್ದಾರೆ, ಕೆರೆಗಳನ್ನೇ ತಮ್ಮದನ್ನಾಗಿಸಿಕೊಂಡಿದ್ದಾರೆಂದು ಬಂದಿತ್ತು.

ಇಂಥಾದ್ದರ ಬಗ್ಗೆ ನಿರ್ದಾಕ್ಷಿಣ್ಯವಾಗಿ ವಿಚಾರಣೆ ಮಾಡಿ ಅವರು ಎಷ್ಟೇ ದೊಡ್ಡ ವ್ಯಕ್ತಿಗಳಾಗಿರಲಿ, ಎಷ್ಟೇ ರಾಜಕೀಯ ಪ್ರಭಾವವನ್ನು ಹೊಂದಿರಲಿ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಕೆಲಸವನ್ನು ಮಾನ್ಯ ಕಂದಾಯ ಮಂತ್ರಿಗಳು, ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಪೋಲೀಸ್ ಇಲಾಖೆ ಬಗ್ಗೆ ಹೇಳುವುದಾದರೆ, ಇವತ್ತು ಜನಸಾಮಾನ್ಯರಿಗೆ ಯಾವುದೇ ರೀತಿಯಿಂದಲೂ ಆರಕ್ಷಕ ಠಾಣೆಯಿಂದ ಸರಿಯಾದ ರಕ್ಷಣೆ ದೊರಕುತ್ತಿಲ್ಲ. ನಮ್ಮ ನೂತನ ಗೃಹಮಂತ್ರಿಗಳು ಈ ಇಲಾಖೆಯನ್ನು ವಹಿಸಿಕೊಂಡಿರುವುದರಿಂದ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಇದು ಒಂದು ಜನಪರವಾದ ಇಲಾಖೆಯಾದ್ದರಿಂದ ಜನಪರ ಕೆಲಸವನ್ನು ಮಾಡಬೇಕೆಂದು ಮಾನ್ಯ ಗೃಹ ಮಂತ್ರಿಗಳಲ್ಲಿ ನಾನು ಪ್ರಾರ್ಥಿಸುತ್ತೇನೆ. ಪ್ರತಿಯೊಬ್ಬ ಮಂತ್ರಿಯೂ ತಮ್ಮ ತಮ್ಮ ಇಲಾಖೆಗಳ ನೌಕರರಲ್ಲಿ ದಕ್ಷತೆಯನ್ನು ಪ್ರತಿಬಿಂಬಿಸಬೇಕು. ಆಗಮಾತ್ರ ಇವರು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕೆಲವೊಂದು ವಿಚಾರಗಳನ್ನು ಹೇಳಿಸಿದ್ದಾರೆ, ಅದಕ್ಕೆ ಒಂದು ಸರಿಯಾದ ಅರ್ಥ ಬರುತ್ತದೆಂದು ಹೇಳಬಯಸುತ್ತೇನೆ. ಮಾನ್ಯ ಸದಸ್ಯರಾದ ಉದಾಸಿಯವರು ಮಾತನಾಡುತ್ತಾ ನಾವು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ನಮ್ಮ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ. ಆದರೆ ಈಗ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವ ನಿರ್ಧಾರವನ್ನು ನಮ್ಮ ಸರ್ಕಾರ ತೆಗೆದುಕೊಂಡಿದೆ. ಇದರಿಂದಾಗಿ ನಮ್ಮ ಸರ್ಕಾರದ ಮೇಲೆ ಸುಮಾರು 130 ಕೋಟಿ ರೂಪಾಯಿ ಹೊರೆ ಬೀಳುತ್ತದೆ. ಈಗಿನ ಆರ್ಥಿಕ ಪರಿಸ್ಥಿತಿ ಹೇಗೇ ಇದ್ದರೂ ಕೂಡ ನಮ್ಮ ಬಡ ರೈತ ಬಹಳ ಕಷ್ಟದಲ್ಲಿದ್ದಾನೆ. ಅವನ ನೆರವಿಗೆ ಹೋಗಬೇಕೆಂಬ ದೃಢ ನಿರ್ಧಾರ ಏನಿದೆ ಇದನ್ನು ನಮ್ಮ ಇಡೀ ರೈತ ಸಮೂಹ ಸ್ವಾಗತ ಮಾಡುತ್ತೆದೆಂಬ ಮಾತನ್ನು ಹೇಳಬಯಸುತ್ತೇನೆ. ಬಡ್ಡಿ, ಸುಸ್ತಿ ಬಡ್ಡಿ, ಸಾಲ ಮನ್ನಾ.......

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಇವರು ಬಡ್ಡಿಯನ್ನು ಯಾವ ಉದ್ದೇಶಕ್ಕೆ ಮನ್ನಾ ಮಾಡುತ್ತಿದ್ದಾರೆಂಬ ಬಗ್ಗೆ ನಮಗೆ ಕ್ಲ್ಯಾರಿಫಿಕೇಷನ್ ಬೇಕಾಗಿದೆ. ಈ ವಿಷಯದ ಬಗ್ಗೆ ಮಾತನಾಡಬೇಕಾದರೆ ಸಂಬಂಧಪಟ್ಟ ಹಣಕಾಸಿನ ಮಂತ್ರಿಯವರು ಇಲ್ಲಿರಬೇಕು. 130 ಕೋಟಿ ರೂಪಾಯಿಗಳ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಅವರು ಹೇಳಬೇಕಾದರೆ ಕಾರಣ ಬೇಕಲ್ಲಾ. ಎಲ್ಲಾ ರೈತರಿಗೆ ಇದು ಅನುಕೂಲವಾಗುತ್ತದೆ, ಇದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆಂದು ಮಾನ್ಯ ಕೃಷ್ಣಾರವರು ಮಾತನಾಡುತ್ತಾ ಹೇಳುತ್ತಿದ್ದಾರೆ. ನಮ್ಮ ಸರ್ಕಾರದ ನಿಲುವು ಆರೀತಿ ಇದೆ ಎಂದು ಹೇಳಲಿ.

ಶ್ರೀ ಕೃಷ್ಣ:- ರೈತ ಸಂಘದವರು ಒಪ್ಪದೇ ಇರಬಹುದು. ರೈತರಿಗೆ ಬೇಕಾದ ಎಲ್ಲಾ ಅನುಕೂಲಗಳೂ ಆಗದೇ ಇರಬಹುದು. ಆದರೆ ಆ ದಿಕ್ಕಿನಲ್ಲಿ ಒಂದು ಪ್ರಾಮಾಣಿಕ ಪ್ರಯತ್ನವನ್ನು ಇಂಥ ಆರ್ಥಿಕ ಪರಿಸ್ಥಿತಿಯಲ್ಲೂ ಈ ಸರ್ಕಾರ ಮಾಡುತ್ತಿರುವುದನ್ನು ನಿಜವಾಗಿಯೂ ರೈತ ಸಮೂಹ ಸ್ವಾಗತಿಸುತ್ತದೆಂಬುದನ್ನು ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ತಿಳಿದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಜಯರಾಮ್ ಶೆಟ್ಟಿ:- ಮಾನ್ಯ ಅಧ್ಯಕ್ಷರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸಾರಿ ಮಳೆಗಾಲದಲ್ಲಿ ವಿಪರೀತ ಮಳೆ ಬಿದ್ದು ರೈತ ಏನು ಬೆಳೆಯನ್ನು ಬೆಳೆದಿದ್ದ ಅದೆಲ್ಲಾ ನಷ್ಟವಾಗಿದೆ. ಇದಕ್ಕೆ ಒಂದು ಎಕರೆಗೆ 200 ರೂಪಾಯಿಗಳಂತೆ ಸರ್ಕಾರ ಪರಿಹಾರವನ್ನು ಘೋಷಣೆ ಮಾಡಿದೆ. ಆದರೆ ಆ ಹಣ ಇದುವರೆಗೂ ನಷ್ಟಕ್ಕೊಳಗಾದ ರೈತರಿಗೆ ಸಿಕ್ಕಿಲ್ಲ. ಸುಮಾರು 6.5 ಲಕ್ಷ ರೂಪಾಯಿ ನಷ್ಟು ಪರಿಹಾರ ಧನ ರೈತರಿಗೆ ಮುಟ್ಟಬೇಕಾಗಿದೆ. ಈ ವಿಚಾರದಲ್ಲಿ ನಾನು ಮಾನ್ಯ ಸರ್ಕಾರದಲ್ಲಿ ವಿನಂತಿ ಮಾಡುತ್ತೇನೆ. ಪುನಃ ರೈತರಿಗೆ ಸಾಲವನ್ನು ಕೊಡುವಾಗ ಬಡ್ಡಿರಹಿತವಾಗಿ ಕೊಡಬೇಕೆಂದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ರೈತರ ಪರವಾಗಿ ವಿನಂತಿಸುತ್ತೇನೆ.

ಶ್ರೀ ಕೃಷ್ಣ:- ಜನಸಾಮಾನ್ಯರಿಗೆ ನಮ್ಮ ಪ್ರಣಾಳಿಕೆಯಲ್ಲಿ ಹೇಳಿರತಕ್ಕಂಥ ಕಾರ್ಯಕ್ರಮ. ಹಿಂದ ನಮ್ಮ ಸರ್ಕಾರ ಇದ್ದಾಗ ಹಸಿರು ಕಾರ್ಡುಗಳನ್ನು ಹಂಚಿದೆವು. ಆಗ ಕೆಲವು ಲೋಪದೋಷಗಳು ಆಗಿರಬಹುದು. ಲೋಪದೋಷಗಳಾಗಿಲ್ಲವೆಂದು ಯಾರೂ ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಈ ನಿರ್ಧಾರದ ಹಿಂದೆ ಇರತಕ್ಕ ನಮ್ಮ ಸರ್ಕಾರದ ಮನೋಭಾವವನ್ನು ಮೆಚ್ಚಬೇಕು. ಈಗ ಆ ರೈತರಿಗೆ ರಿಯಾಯಿತಿ ದರದಲ್ಲಿ ಅಕ್ಕಿಯನ್ನು ಕೊಡತಕ್ಕ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ. ಈ ಮಾತನ್ನು ನಮ್ಮ ಸರ್ಕಾರ ಮಾನ್ಯ ರಾಜ್ಯಪಾಲರ ಭಾಷಣದ ಮೂಲಕ ಹೇಳಿದೆ. ಈ ಯೋಜನೆಗೆ ಸುಮಾರು 80 ಕೋಟಿ ರೂಪಾಯಿ ಖರ್ಚಾಗುತ್ತದೆ. ಆದರೂ ಕೂಡ ಇಂಥ ಹಣಕಾಸಿನ ಪರಿಸ್ಥಿತಿಯಲ್ಲೂ ಕೂಡ ನಾವು ಬಡವರಿಗೆ ನೆರವನ್ನು ನೀಡಬೇಕೆಂಬ ಕಳಕಳಿ ಈ ನಿರ್ಧಾರದಲ್ಲಿ ಎದ್ದು ಕಾಣಿಸುತ್ತದೆನ್ನುವ ಮಾತನ್ನು ಹೇಳಬಯಸುತ್ತೇನೆ. ಈ ದಿಸೆಯಲ್ಲಿ ನ್ಯಾಯಬೆಲೆ ಅಂಗಡಿಗಳು ಸರಿಯಾದ ರೀತಿಯಲ್ಲಿ ತಮ್ಮ ಕಾರ್ಯವನ್ನು ನಿರ್ವಹಿಸುವಂತೆ ಮಾಡಬೇಕಾದುದು ಅಗತ್ಯವಿದೆ. ನಮ್ಮ ಸ್ನೇಹಿತರೊಬ್ಬರು ಮಾತನಾಡುತ್ತಾ ಅವರಿಗೆ ಎರಡು ನ್ಯಾಯಬೆಲೆ ಅಂಗಡಿಗಳಿವೆ ಎಂದು ಹೇಳಿದರು. ನ್ಯಾಯಬೆಲೆ ಅಂಗಡಿಗಳು ಎಂದರೆ, ಎರಡು ಮನೆ ಇವೆ, ಅಲ್ಲೆಲ್ಲೋ ಇಪ್ಪತ್ತು ಎಕರೆ ಗದ್ದೆ ಇದೆಯೆಂದು ಹೇಳುತ್ತಾರಲ್ಲಾ ಹಾಗೆ. ಆ ರೀತಿ ಎರಡು ನ್ಯಾಯಬೆಲೆ ಅಂಗಡಿಗಳಿವೆ ಎಂದರು. ಒಂದು ನ್ಯಾಯಬೆಲೆ ಅಂಗಡಿ ಎಂದರೆ ಲಕ್ಷಾಂತರ ರೂಪಾಯಿ ಆದಾಯ ತರತಕ್ಕ ಒಂದು ಆಸ್ತಿ ಎನ್ನತಕ್ಕ ರೀತಿಯಲ್ಲಿ ಒಂದು ವ್ಯಾಖ್ಯಾನ ಮಾಡಲಾಗುತ್ತಿದೆ. ಅಂದರೆ ಅದರ ಆದಾಯ ಅಷ್ಟುಮಟ್ಟಿಗೆ ಇದೆ ಎಂಬ ಅಭಿಪ್ರಾಯವಿದೆ. ಆದರೆ ಆ ರೀತಿ ಆಗಬಾರದು. ನ್ಯಾಯಬೆಲೆ ಅಂಗಡಿಗಳ ಮುಖಾಂತರ ವಸ್ತುಗಳು ಕೇವಲ ಕಡು ಬಡವರಿಗೆ ಮಾತ್ರ ಸಿಕ್ಕಬೇಕು. ಕಾರ್ಡುಗಳ ಹಂಚಿಕೆಯಲ್ಲಾಗಿರುವ ಲೋಪದೋಷದ ಬಗ್ಗೆ ಸರಿಯಾದ ರೀತಿಯಲ್ಲಿ ತಪಾಸಣೆ ಮಾಡುವಂಥಾದ್ದು ಅಗತ್ಯವಿದ್ದರೆ ಅದನ್ನು ಮಾಡಬೇಕು. ಕಡು ಬಡವರಿಗೆ ಎಲ್ಲಾ ರೀತಿಯ ವಸ್ತುಗಳೂ ರಿಯಾಮಿತಿ ದರದಲ್ಲಿ ಸಿಕ್ಕುವಂತೆ ಆಗಬೇಕೆಂದು ಹೇಳಬಯಸುತ್ತೇನೆ.

ಇನ್ನು ನೀರಾವರಿ ಸಂಬಂಧಪಟ್ಟಂತೆ ಹೇಳುವುದಾದರೆ, 2 ಸಾವಿರದ ಇಸವಿಯೊಳಗೆ ಬಚಾವತ್ ತೀರ್ಪಿನ ಪ್ರಕಾರ ಕೃಷ್ಣಾನದಿ ನೀರಿನ ಪಾಲನ್ನು ಏನು ನಾವು ಉಪಯೋಗ ಮಾಡಿಕೊಳ್ಳಬೇಕು. ಅದರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದ ಮೂಲಕ ಹೇಳಿಸಿದ್ದಾರೆ.

ಆದಕ್ಕೆ ಒಂದು ಖಚಿತವಾಗಿ, ಅದರ ಹೊಣೆ ನಮ್ಮ ಸರ್ಕಾರದ ಮೇಲಿದೆ. ಅದರ ವೆಚ್ಚ ಎಷ್ಟು, ಯಾವರೀತಿಯಲ್ಲಿ ಆಗಬೇಕು. ಹಣಕಾಸನ್ನು ಯಾವರೀತಿ ರೂಢಿಸಿಕೊಳ್ಳಬೇಕು ಎನ್ನುವ ಪೂರ್ಣ ಹೊಣೆ ಇದೆ ಎಂಬ ಮಾತುಗಳನ್ನು ಇಲ್ಲಿ ಹೇಳಿರತಕ್ಕದ್ದು ಬಹಳ ಸ್ತುತ್ಯಾರ್ಹವಾದುದು. ಇನ್ನು ನೀರಾವರಿ ಇಲಾಖೆಯಲ್ಲಿ ಬಹಳಷ್ಟು ಸೋರಿಹೋಗುತ್ತದೆ ಎಂಬ ಆರೋಪ ಇದೆ. ನೀರಾವರಿಗೆ ಆದ್ಯತೆ ನಾವು ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಯಾವಾಗಲೂ ಅದರ ಬಗ್ಗೆ ಮೊದಲಿನಿಂದ ಹೋರಾಟ ಮಾಡಿಕೊಂಡು ಬಂದಿದ್ದಾರೆ. ನೀರಾವರಿಗೆ ಆದ್ಯತೆ ಕೊಡುವುದರ ಜೊತೆಗೆ ನೀರಾವರಿ ಬಾಬಿಗೆ ಎಷ್ಟು ಹಣ ಇಡುತ್ತೇವೆ. ಅದರ ಕೊನೆಯ ಪೈಸೆಯವರೆಗೆ ಸರಿಯಾದ ರೀತಿಯಲ್ಲಿ ಉಪಯೋಗವಾಗಬೇಕು. ನಮ್ಮ ಗೆಳೆಯರಾದ ಪುಟ್ಟೇಗೌಡರು ಇದ್ದರು. ಮೊನ್ನೆ ಅವರ ಕ್ಷೇತ್ರದವರು ಬಂದಿದ್ದರು. 5 ತಿಂಗಳು ಹಿಂದೆ ಐದಾರು ಲಕ್ಷ ರೂಪಾಯಿನಲ್ಲಿ ಕಟ್ಟಿರತಕ್ಕ ಒಂದು ಎಂಬ್ಯಾಂಕ್‌ಮೆಂಟ್ ಒಡೆದುಹೋಗಿದೆ. ಇದರಿಂದ ನೂರಾರು ಎಕರೆಗೆ ನಷ್ಟ ಆಯಿತು ಎಂದು ಬಂದಿದ್ದರು. ಈ ರೀತಿ ಕಳಪೆ ಕೆಲಸ ಮಾಡಿದರೆ ಹೇಗೆ? ಅಥವಾ ನಮ್ಮಲ್ಲಿ ಹೇಮಾವತಿ ಎಡದಂಡೆ ಹರಿಯುತ್ತದೆ. ನೀರು ಸರಾಗವಾಗಿ ಕೊನೆಯವರೆಗೂ ಹೋಗಬೇಕೆಂದು ಸಿಮೆಂಟ್ ಲೈನಿಂಗ್ ಕೆಲಸ ಮಾಡಿದ್ದಾರೆ. ಸಿಮೆಂಟ್ ಲೈನಿಂಗ್ ಕೆಲಸ ಮಾಡಿ ಒಂದು ಒಂದೂವರೆ ವರ್ಷ ಆಗಿಲ್ಲ. ಆಗಲೇ ಅದು ಕಿತ್ತುಹೋಗಿದೆ. ನಾನು ಅನೇಕ ಕಡೆ, ಕಬಿನಿ, ಹಾರಂಗಿ ಅಲ್ಲೆಲ್ಲಾ ನೋಡಿದೆ. ಎಲ್ಲಾ ಕಡೆಯೂ ಅದೇ ಕಥೆಯೇ. ಹತ್ತಾರು

ವರ್ಷ ಬರಬೇಕಾದ ಲೈನಿಂಗ್ ಕೆಲಸ ಒಂದು ಎರಡು ವರ್ಷದಲ್ಲೇ ಕಿತ್ತುಹೋದರೆ ಇದು ಯಾರಿಗೆ ಪ್ರಯೋಜನ? ಏತಕ್ಕೋಸ್ಕರ ಲೈನಿಂಗ್ ಕೆಲಸ ಮಾಡಬೇಕು? ಆ ನೀರಾವರಿಗೆ ಇಷ್ಟೊಂದು ಹಣ ಇಡತಕ್ಕ ಅಗತ್ಯವಾದರೂ ಏನು ಎಂಬ ಭಾವನೆ ರೈತರಲ್ಲಿ ಬೆಳೆದರೆ ಆಶ್ಚರ್ಯವಿಲ್ಲ ಆ ದಿಕ್ಕಿನಲ್ಲಿ ಒಂದು ಪ್ರಾಮಾಣಿಕ ಪ್ರಯತ್ನ ಆಗಬೇಕು. ಕೊನೆಯ ಪೈಸೆಯವರೆಗೆ ಸರಿಯಾದ ರೀತಿಯಲ್ಲಿ ಉಪಯೋಗಿಸುವ ಪ್ರಯತ್ನ ಆಗಬೇಕು ಎಂಬ ಮಾತುಗಳನ್ನು ಹೇಳುತ್ತೇನೆ. ಇನ್ನು ಶಿಕ್ಷಣ ಬಗ್ಗೆ ಹೇಳುತ್ತಾ ಯೋಗ್ಯ ಶಿಕ್ಷಣ ಕೊಡತಕ್ಕ ಮಾತನ್ನು ನಮ್ಮ ರಾಜ್ಯಪಾಲರು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ. ಈಗ ನಮ್ಮ ಶಿಕ್ಷಣದಲ್ಲಿ ಪ್ರಾಥಮಿಕ ಹಂತದಲ್ಲಿ ಸ್ಕೂಲ್ ಇದ್ದರೆ ಕಟ್ಟಡ ಇಲ್ಲ. ಕಟ್ಟಡ ಇದ್ದರೆ ಮಾಸ್ಟರ್‌ಗಳು ಇಲ್ಲ ಎನ್ನುವ ಪರಿಸ್ಥಿತಿ ಗ್ರಾಮಾಂತರ ಪ್ರದೇಶಗಳಲ್ಲಿದೆ. ಇದು ಸರಿಹೋಗಬೇಕು. ಅದಲ್ಲದೆ ಇತ್ತೀಚೆಗೆ ಅನೇಕ ಕಡೆ, ಎಲ್ಲಾ ಕಡೆ ಇರಬಹುದು. ನನ್ನ ಕ್ಷೇತ್ರದಲ್ಲಿ ಶಾಲಾ ಕೊಠಡಿಗಳನ್ನು ಕಟ್ಟಿದ್ದಾರೆ. ಅವನ್ನು ಆರಂಭವೇ ಮಾಡಿಲ್ಲ. ಆಗಲೇ ಗೆದ್ದಲು ಹತ್ತಿ ಕೆಳಗೆ ಬೀಳುತ್ತಿವೆ. ನಾವು ಕೆಲವು ಕಡೆ ಹೋದಾಗ ನೋಡಿದ್ದೇನೆ. ಶಿಕ್ಷಕರು ಆ ಕೊಠಡಿಯಲ್ಲಿ ಮಕ್ಕಳನ್ನು ಕೂರಿಸದೇ ಏನಾದರೂ ಬಿದ್ದುಹೋಗಿ ಯಾರಾದರೂ ಮಕ್ಕಳು ಸತ್ತುಹೋಗಬಹುದು ಎಂದು ಹೇಳಿ ಹಳೆಯ ಕೊಠಡಿಯ ಜಗಲಿ ಮೇಲೆ ಕೂರಿಸಿ ಪಾಠ ಮಾಡತಕ್ಕ ಕೆಲಸ ನಡೆಯುತ್ತಿದೆ.

ಈ ರೀತಿಯ ಎಲ್ಲಾ ಅವ್ಯವಹಾರಗಳು ನಿಲ್ಲಬೇಕು. ಇದೆಲ್ಲಾ ನಿಲ್ಲದಿದ್ದರೆ ಸುಮ್ಮನೆ ಏನೂ ಪ್ರಯೋಜನವಾಗುವುದಿಲ್ಲ. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಕೆಲಸ ಮಾಡುತ್ತದೆ ಎನ್ನುವ ಮಾತುಗಳನ್ನು ಹೇಳುತ್ತೇನೆ. ವೃತ್ತಿ ಶಿಕ್ಷಣಕ್ಕೂ ಸಹ ಆದ್ಯತೆಯನ್ನು ಕೊಡಬೇಕು. ವೃತ್ತಿ ಶಿಕ್ಷಣಕ್ಕೆ ಆದ್ಯತೆಯನ್ನು ಕೊಡದೇ ಇದ್ದರೆ.......

ಶ್ರೀ ಬಿ. ವಿಜಯಕುಮಾರ್:- ಒಂದು ವಿಚಾರ ನಾನು ಹೇಳುತ್ತೇನೆ ಸ್ವಾಮಿ. ತಾವು ಶಾಲಾ ವ್ಯವಸ್ಥೆ ಬಗ್ಗೆ ಹೇಳಿದಿರಿ ಶಾಲಾ ಕೊಠಡಿಗಳು ಬಿದ್ದುಹೋಗಿವೆ ಎಂಬ ವಿಚಾರವನ್ನು ತಾವು ಏನು ಹೇಳುತ್ತಾ ಇದ್ದೀರಿ ಬಹುಶಃ ಅದರ ಬಗ್ಗೆ ಸರ್ಕಾರ ವಿಶೇಷವಾದ ತನಿಖೆಯನ್ನು ಮಾಡಿಸಿದರೆ ತಪ್ಪಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಲ್ಯಾಂಡ್ ಆರ್ಮಿ ಹೋದವರ್ಷ ಮತ್ತು ಆಚೆ ವರ್ಷ ಏನು ಶಾಲಾ ಕಟ್ಟಡಗಳನ್ನು ಕಟ್ಟಿದೆಯೋ ಅದರಲ್ಲಿ ಬಹುಶಃ 100ಕ್ಕೆ 60 ಭಾಗ ಬಿದ್ದುಹೋಗಿದೆ. 100ಕ್ಕೆ 95 ಭಾಗ ದುರಸ್ಥಿತಿ ಸ್ಥಿತಿಯಲ್ಲಿದೆ. ಹಿಂದೆ ಒಂದೆರಡು ವರ್ಷಗಳಲ್ಲಿ ಅನೇಕ ಶಾಲಾ ಮಕ್ಕಳು ಓದುವ ಸಮಯದಲ್ಲಿ ದಸಕ್ ಅಂತ ಬಿದ್ದಿದೆ ಮತ್ತು ಸೋರುವಂಥ ವ್ಯವಸ್ಥೆ 100ಕ್ಕೆ 100ರಷ್ಟು ಶಾಲೆಗಳಲ್ಲಿದೆ. ಹೋದ ವರ್ಷ ಮತ್ತು ಆಚೆ ವರ್ಷ ಕಟ್ಟಿದ ಶಾಲೆಗಳಲ್ಲಿ ಇದು ಇದೆ. ಇದರ ಬಗ್ಗೆ ಸರ್ಕಾರ ವಿಶೇಷವಾದ ತನಿಖೆ ಮಾಡಿಸಿದರೂ ತಪ್ಪಿಲ್ಲ. ಎರಡನೆಯದು, ಲ್ಯಾಂಡ್ ಆರ್ಮಿ ಕೆಲಸ ಏತಕ್ಕೆ ಇಷ್ಟು ಕಳಪೆಯಾಗುತ್ತಿದೆ ಎಂಬ ವಿಚಾರದಲ್ಲಿ ಸರ್ಕಾರ ಬಹಳ ಗಹನವಾಗಿ ಗಮನಹರಿಸಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ ಸ್ವಾಮಿ. ಏಕೆಂದರೆ ಅಲ್ಲಿ ಕಟ್ಟಿರುವಂಥ ಶಾಲೆಯಲ್ಲಿ ಪಾಪ ನಿರಪರಾಧಿ ಮಕ್ಕಳು ಓದುವಂಥ ವ್ಯವಸ್ಥೆ ಅದು. ತುಂಬಾ ಅಕ್ರಮವಾಗಿ ಕಾಣುತ್ತದೆ. ಅದರ ಬಗ್ಗೆ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಬಹುಶಃ ಮಣ್ಣಿನಲ್ಲಿ ಲೋಪದೋಷ ಇರಬೇಕು. ಮಣ್ಣು ಪರೀಕ್ಷೆ ಮಾಡಿಸೋಣ. ಬಹಳ ಕಡೆ ಹೀಗಾಗಿದೆ.

ಶ್ರೀ ಕೃಷ್ಣ:- ಶಿಕ್ಷಣದಲ್ಲಿ ವೃತ್ತಿ ಶಿಕ್ಷಣಕ್ಕೆ ಆದ್ಯತೆಯನ್ನು ಕೊಡಬೇಕು ಎನ್ನುವುದು ಎಲ್ಲರೂ ಒಪ್ಪತಕ್ಕ ವಿಚಾರ. ಇವತ್ತು ಕಿರಿಯ ಕಾಲೇಜುಗಳಲ್ಲಿ.......

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಈಗ ವಂದನಾ ನಿರ್ಣಯದ ಬಗ್ಗೆ ಶ್ರೀಮಾನ್ ಉದಾಶಿಯವರು ಭಾಷಣ ಮಾಡಿದರು. ಅವರ ನಂತರ ಶ್ರೀ ಕೃಷ್ಣರವರು ಮಾತನಾಡುತ್ತಿದ್ದಾರೆ.

ಮುಂದೆ ವಿರೋಧ ಪಕ್ಷದ ನಾಯಕರು ಮಾತನಾಡುವವರು ಇದ್ದಾರೆ. ಹೊಸ ಸರ್ಕಾರ ಬಂದು 18 ದಿವಸಗಳಾಗಿವೆ. ಈ ಶಾಸನ ಸಭೆ 26ನೇ ತಾರೀಖಿನಿಂದ ಪ್ರಾರಂಭವಾಗಿದೆ. ಅಧಿಕಾರಿಗಳ ಗ್ಯಾಲರಿಯಲ್ಲಿ ಮುಂದಿನ ಸಾಲಿನಲ್ಲಿ ಅಧಿಕಾರ ವರ್ಗದವರು ಒಬ್ಬರಾದರೂ ಇಲ್ಲ, ಹಿರಿಯ ಅಧಿಕಾರಿಗಳು ಒಬ್ಬರೂ ಇಲ್ಲ. ಈ ಸಭೆಯ ಗಾಂಭೀರ್ಯ ಈ ಸಭೆಯಲ್ಲಿ ಆಗತಕ್ಕ ವಿಚಾರಗಳನ್ನು ಕೇಳಬೇಕು. ಇಲ್ಲಿ ಅನೇಕ ಸದಸ್ಯರು ಮಾತನಾಡುತ್ತಿದ್ದಾರೆ. ಅವುಗಳನ್ನು ನೋಟ್ ಮಾಡಿಕೊಳ್ಳಬೇಕು. ಏನೇನು ಸಲಹೆಗಳನ್ನು ನೀಡುತ್ತಾರೋ ಅವುಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎನ್ನುವುದು ಇಲ್ಲ. ಇದಕ್ಕಿಂತ ಅವಹೇಳನ ಬೇರೊಂದು ಇಲ್ಲ. ಅಧಿಕಾರವರ್ಗದವರಿಗೆ ಅತಿರೇಕವಾದ ವರ್ತನೆ ಏನು ಇದೆ ಅದನ್ನು ನಾನು ಅನೇಕ ಬಾರಿ ಈ ಸಭೆಯಲ್ಲಿ ಖಂಡಿಸಿದ್ದೇನೆ. ಇದು ಸರಿಯಲ್ಲ. ಸರಿಯಾದ ಮಾರ್ಗವೇ ಅಲ್ಲ. ಇದು ಅತ್ಯಂತ ಅಪರಾಧ, ಪ್ರಜಾಪ್ರಭುತ್ವಕ್ಕೆ ಅಪರಾಧ. ಆ ಗ್ಯಾಲರಿ ಏಕೆ ಇದೆ? ಅಧಿಕಾರಿಗಳ ಗ್ಯಾಲರಿ ಇರುವುದು ಯಾರೋ 4 ಜನ ಬಂದು ಕುಳಿತುಕೊಳ್ಳುವುದಕ್ಕಲ್ಲ. ಹಿರಿಯ ಅಧಿಕಾರಿಗಳು ಐ.ಎ.ಎಸ್. ಅಧಿಕಾರಿಗಳು, ಮುಖ್ಯ ಕಾರ್ಯದರ್ಶಿಗಳು ಮಟ್ಟದವರು ಅಲ್ಲಿ ಬಂದು ಕುಳಿತುಕೊಳ್ಳಬೇಕು. ಇದು ಪುರಸಭೆ ಕೆಟ್ಟುಹೋಯಿತೆ? ದಯಮಾಡಿ ತಾವು ಅವರಿಗೆ ತೀವ್ರವಾದ ಎಚ್ಚರಿಕೆಯನ್ನು ಕೊಟ್ಟು ಎಲ್ಲಿದ್ದರೂ ಕರೆಸಬೇಕು. ಈ ಸದನ ಇರುವುದು ಅವರು ಆರಾಮವಾಗಿ ಆಫೀಸ್‌ನಲ್ಲಿ ಕುಳಿತು ಕೊಳ್ಳುವುದಕ್ಕಲ್ಲ ಅವರು ಭಾಷಣ ಮಾಡುತ್ತಿದ್ದಾರೆ. ಅಮೂಲ್ಯವಾದ ವಿಚಾರಗಳನ್ನು ಹೇಳುತ್ತಿದ್ದಾರೆ. ಮಾನ್ಯ ಜಾಲಪ್ಪನವರೆ ತಾವು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ನಿಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ. ಅಧಿಕಾರಿಗಳು ಮೊದಲಿನಿಂದಲೂ ಇಂತಹದ್ದನ್ನೇ ಮಾಡುತ್ತಿದ್ದಾರೆ. ಸಾಮಾನ್ಯವಾಗಿ ಹತ್ತಾರು ಬಾರಿ ಹೇಳಿದ್ದೇನೆ. ತಾವು ಪೀಠಕ್ಕೆ ಬಂದಿದ್ದೀರಿ ಅನೇಕ ಬಾರಿ ಈ ಶಾಸನ ಸಭೆಯಲ್ಲಿ ಈ ಪ್ರಶ್ನೆಯನ್ನು ನಾನು ಎತ್ತಿದ್ದೇನೆ. ಅಧಿಕಾರಿಗಳ ಆ ಪೀಠ ಏತಕ್ಕೆ ಇರತಕ್ಕದ್ದು? ಈ ಸದನದಲ್ಲಿ ಅಮೂಲ್ಯವಾದ ಸಲಹೆಗಳನ್ನು ಸದಸ್ಯರು ಕೊಡುತ್ತಾರೆ. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಅನೇಕ ಸದಸ್ಯರು ಅಮೂಲ್ಯವಾದ ವಿಚಾರಗಳನ್ನು ಹೇಳುತ್ತಿರುವಾಗ ಒಬ್ಬ ಐ.ಎ.ಎಸ್. ಹಿರಿಯ ಅಧಿಕಾರಿ ಇಲ್ಲ ಅಂದರೆ ಈ ಸಭೆಯ ಘನತೆ ಏನು? ಘನತೆ, ಗಾಂಭೀರ್ಯದ ಪ್ರಶ್ನೆ ಬರುತ್ತದೆ. ಈ ಸದನದ ಹಕ್ಕು ಬರುತ್ತದೆ. ಅವರ ಮೇಲೆ ಅಂದರೆ ಮುಖ್ಯ ಕಾರ್ಯದರ್ಶಿಗಳ ಮೇಲೆ ಹಕ್ಕು ಚ್ಯುತಿ ತರಬೇಕಾದ ಪರಿಸ್ಥಿತಿ ಬರುತ್ತದೆ ಎನ್ನುವ ಮಾತನ್ನು ತಮ್ಮ ಮೂಲಕ ಸರ್ಕಾರದವರಿಗೆ ಹೇಳುತ್ತಿದ್ದೇನೆ. ಸರ್ಕಾರದವರು ಅವರು ಮಾಡಿದ್ದೇ ಸರಿ ಎಂದು ಹೇಳುವುದಾದರೆ ಅದಕ್ಕೆ ನನ್ನ ಅಭ್ಯಂತರ ಏನೂ ಇಲ್ಲ. ತಾವು ಸರಿಯಾಗಿ ಅವರಿಗೆ ಹೇಳಬೇಕು.

ಅಧ್ಯಕ್ಷರು:- ಇಲ್ಲ. ಕಂದಾಯ ಮಂತ್ರಿಗಳು ಹೇಳುತ್ತಾರೆ.

ಶ್ರೀ ಆರ್.ಎಲ್. ಜಾಲಪ್ಪ:- ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ್ದನ್ನು ಪೂರ್ಣವಾಗಿ ನಾನು ಒಪ್ಪುತ್ತೇನೆ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳ ಹಾಗೂ ಮುಖ್ಯ ಕಾರ್ಯದರ್ಶಿಗಳ ಗಮನಕ್ಕೆ ತಂದು ಅವರು ಇಲ್ಲಿಗೆ ಬಂದು ಉಪಸ್ಥಿತವಿರುವ ಹಾಗೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಸನ್ಮಾನ್ಯ ಜಾಲಪ್ಪನವರು ಅವರಿಗೆ ಮನವಿ ಮಾಡಿಕೊಳ್ಳಬೇಕಾಗಿಲ್ಲ. ಅವರು ಇಲ್ಲಿಗೆ, ಈ ಸದನಕ್ಕೂ ಚಾಚೂ ತಪ್ಪದೆ ಬರಬೇಕು. ಅವರು ಎಲ್ಲಿದ್ದಾರೋ ಕರೆಯಿಸಿ. ಯಾವ್ಯಾವ ಅಧಿಕಾರಿಗಳು ಯಾವ್ಯಾವ ಕಾರ್ಯಾಲಯಗಳಲ್ಲಿ ಏನೇನು ಮಾಡುತ್ತಿದ್ದಾರೆ, ಅವರನ್ನು ಕರೆಯಿಸಬೇಕು. ಮಾನ್ಯ ಅಧ್ಯಕ್ಷರು ತಾವು ಸರ್ಕಾರಕ್ಕೆ ಅವರನ್ನು ಕರೆಸುವಂತೆ ಹೇಳಬೇಕು. ಅಧಿಕಾರಿಗಳು ಕೂಡಲೇ ಬರಬೇಕು. ಏನು ಹುಡುಗಾಟ. ಇಷ್ಟು ಬೇಜವಾಬ್ದಾರಿಯಿಂದ ಯಾವುದೇ ಅಧಿಕಾರಿಗಳು ನಡೆದು ಕೊಳ್ಳುವುದಾದರೆ, ಇದು ಸರಿಯಾದುದಲ್ಲ. ಸರಿಯಾದ ಮಾರ್ಗವೇ ಇಲ್ಲ. ನಾನು ಅನೇಕ ಸಲ ಹೇಳಿದ್ದೇನೆ. ಇಲ್ಲಿ ಅನೇಕ ಬಾರಿ ನನಗೆ ನೋವಾಗಿದೆ. ಕೆಲವು ಭದ್ರವಾದ

ಮಂತ್ರಿಗಳು ಅಲ್ಲಿಗೆ ಹೋದಾಗ ಎದ್ದುನಿಂತುಕೊಂಡು ಮಾತನಾಡುತ್ತಾರೆ. ಸ್ವಲ್ಪ ಸೌಜನ್ಯ ಇದ್ದರೆ ಕುಳಿತುಕೊಂಡೇ ಮಾತನಾಡುತ್ತಾರೆ. ಇನ್ನೂ ಸ್ವಲ್ಪ ವ್ಯತ್ಯಾಸ ಇದ್ದರೆ ಸಿಗರೇಟು ಸೇದಿ ಮಂತ್ರಿಗಳ ಮುಖಕ್ಕೇ ಬಿಡುತ್ತಾರೆ. ಇದನ್ನು ಅನೇಕ ಸಲ ನಾನು ನೋಡಿದ್ದೇನೆ. ಇದು ಒಳ್ಳೆಯದಲ್ಲ. ಈ ಅಧಿಕಾರಿ ವರ್ಗದವರ ಈ ನೀತಿ ಹೋಗಬೇಕು. ಇದು ಅಧಿಕಾರಿಶಾಹಿ ಅಲ್ಲ. ಪ್ರಜಾಪ್ರಭುತ್ವದಲ್ಲಿ ಹೊಸದಾಗಿ ಚುನಾವಣೆಯಾಗಿ, ಹೊಸದಾಗಿ ಸರ್ಕಾರ ನೇಮಕವಾಗಿ ಬಂದಿದೆ. ಈ ಸರ್ಕಾರದ ಪ್ರಥಮ ಸಭೆಯಲ್ಲೇ ಅಧಿಕಾರಿಗಳ ಗುಂಡಾವರ್ತನೆ, ಅಧಿಕಾರಿಗಳ ಬೇ-ಜವಾಬ್ದಾರಿತನ ಏನಿದೆ ಇದನ್ನು ನಾವು ಒಪ್ಪತಕ್ಕದ್ದಲ್ಲ. ಯಾವ ಕೃಪೆಯಿಲ್ಲ. ಅಧಿಕಾರಿಗಳಿಂದ ನಮಗೆ ಏನಾಗಬೇಕಾಗಿದೆ ? ಇದು ನಮ್ಮ ಹಕ್ಕು ಆದ್ದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಅನೇಕ ಅಮೂಲ್ಯವಾದ ವಿಚಾರಗಳನ್ನು ಶ್ರೀಮಾನ್ ಕೃಷ್ಣರವರು ಹೇಳಿದ್ದಾರೆ. ಶ್ರೀಮಾನ್ ಉದಾಸಿಯವರು ಹೇಳಿದ್ದಾರೆ. ಇಲ್ಲಿ ಅನೇಕರು ನಾವೆಲ್ಲ ಹೇಳಿದ್ದೇವೆ. ಅದನ್ನು ಸಂಪೂರ್ಣವಾಗಿ ಬರೆದುಕೊಳ್ಳುವವರು ಯಾರು ? ಅದನ್ನು ತೆಗೆದುಕೊಳ್ಳುತ್ತಿದ್ದಾರೆ ? ನಾಳೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾದರೆ, ಅವರ ಕಡೆ ಯಾರು ಬರೆದುಕೊಳ್ಳುತ್ತಿದ್ದಾರೆ. ಸರ್ಕಾರವನ್ನು ಒಪ್ಪಿಸುವುದಕ್ಕೆ ನಾವು ಬರೆದುಕೊಳ್ಳುತ್ತಿದ್ದೇವೆ ಎಂದು ಇವರು ಹೇಳಬಹುದು. ಅಧಿಕಾರಿಗಳು ತೀವ್ರವಾದ ಕರ್ತವ್ಯ ಲೋಪ ಮಾಡುತ್ತಿದ್ದಾರೆ. ಈ ಕರ್ತವ್ಯ ಲೋಪದ ಬಗ್ಗೆ ತಾವು ನೋಡಿದ್ದೀರಿ. ಅನೇಕ ಸಾರಿ ಕೇಳಿದ್ದೀರಿ.

ಒಬ್ಬ ಮಾನ್ಯ ಸದಸ್ಯರು:- ಅದರ ಪರವಾಗಿ ಅವರ ಸ್ಟೆನೋ ಬರೆದುಕೊಳ್ಳುತ್ತಿರಬಹುದು.

ಶ್ರೀ ವಾಟಾಳ್ ನಾಗರಾಜ್:- ಇದು ಯಾವುದೋ ಪಕ್ಷದ ವಿಚಾರ ಮಾತನಾಡುತ್ತಿಲ್ಲ. ಈ ಸದನಕ್ಕೆ, ಈ ಸಭೆಗೆ ಗೌರವ ಬರಬೇಕು ಒಂದು. ಮತ್ತೆ ಈ ಸಭೆಯ ಹಕ್ಕು, ಅಧಿಕಾರಿಗಳು ಬರಬೇಕಾದುದು. ಯಾರೋ ತಮ್ಮ ಕೈಕೆಳಗೆ ಇರತಕ್ಕ ಅಧಿಕಾರಿಗಳನ್ನು ನೀವು ಹೋಗಿ ಅಲ್ಲಿ ಕುಳಿತುಕೊಂಡು ಬರೆದುಕೊಂಡು ಬಾ ಎಂದು ಹೇಳುವುದಲ್ಲ. ಇದು ಸರಿಯಾದುದಲ್ಲ. ಈ ಸಭೆಯ ಗೌರವ, ಘನತೆ ದೃಷ್ಟಿಯಿಂದ ಹೇಳಬೇಕಾದರೆ, ಈ ಸಭೆ ಅತೀ ಎತ್ತರದ್ದು. ಈ ರಾಜ್ಯದ ಮಹೋನ್ನತ ಸಭೆ, ಪ್ರಜಾಪ್ರಭುತ್ವದಲ್ಲಿ ಕರ್ನಾಟಕ ರಾಜ್ಯವಾಗಲಿ, ಯಾವುದೇ ರಾಜ್ಯವಾಗಲಿ, ಶಾಸನಸಭೆ ಮಹತ್ತರವಾದ ಸಭೆ. ಅಂತಹ ಶಾಸನ ಸಭೆಯಲ್ಲಿ ಯಾವ ಹಿರಿಯ ಅಧಿಕಾರಿಗಳು ಇಲ್ಲಿ ಇರಬೇಕಾದುದು ಅವರ ಕರ್ತವ್ಯ. ಅದರಲ್ಲೂ ಹೊಸ ಸರ್ಕಾರ ಬಂದಿದೆ. ಹೊಸದಾಗಿ ರಾಜ್ಯಪಾಲರ ಭಾಷಣ ಮಂಡನೆಯಾಗಿದೆ. ಅದರ ಬಗ್ಗೆ ಚರ್ಚೆಯಾಗುತ್ತಿರುವಾಗ, ಒಬ್ಬ ಹಿರಿಯ ಅಧಿಕಾರಿಗಳು ಇಲ್ಲ ಎಂದು ಹೇಳಿದರೆ ನಾಚಿಕೆಯಾಗಬೇಕು. ತಲೆತಗ್ಗಿಸಬೇಕಾದ ಪರಿಸ್ಥಿತಿ ಎಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು):- ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ್ದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ಅನೇಕ ಜನ ಹೊಸ ಸದಸ್ಯರು ಎರಡೂ ಕಡೆಗೆ ಆಯ್ಕೆಯಾಗಿ ಬಂದಿದ್ದಾರೆ. ತಾವು ನೋಡಿದ ಹಾಗೆ ಮತ್ತು ನಾನು ನೋಡಿದಂತೆ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಇಷ್ಟು ಸಮಯದವರೆಗೂ ಹೌಸ್‌ನಲ್ಲಿ ಕುಳಿತು ಕೊಂಡಂತಹ ಹೊಸ ಪದ್ಧತಿಯನ್ನು ನೋಡುತ್ತಿದ್ದೇವೆ. ಇದನ್ನು ಅನುಸರಿಸಬೇಕೆನ್ನುವುದು ನಮ್ಮ ಅಪೇಕ್ಷೆಯಿದೆ. ತಾವು ಮಂತ್ರಿಗಳನ್ನು ಕರೆಯಿಸಿ. ನಿಜವಾಗಲೂ ಸರ್ಕಾರಕ್ಕೆ ಕಳಕಳಿ ಇದ್ದರೆ, ಆ ಮನೆಯಲ್ಲಿ ಸಂಬಂಧಪಟ್ಟ ಮಂತ್ರಿಗಳು ಇದ್ದರೆ ನನ್ನದು ಅಭ್ಯಂತರ ಇಲ್ಲ. ಆದರೆ ಶಾಸನಸಭೆ ನಡೆಯಬೇಕಾದರೆ ಸಂಬಂಧಪಟ್ಟ ಹಿರಿಯ ಸಚಿವರು ಕಳಕಳಿಯಿದ್ದು ಇಲ್ಲಿ ಕುಳಿತುಕೊಂಡರೆ ಅದಕ್ಕೆ ಗಾಂಭೀರ್ಯತೆ ಬರುತ್ತದೆ. ನಮಗೂ ಮಾತನಾಡಲಿಕ್ಕೆ ಹುಮ್ಮಸ್ಸು ಬರುತ್ತದೆ. ಅಧಿಕಾರಿಗಳು ನೋಟ್ ಮಾಡಿಕೊಂಡು ಅದನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನ ಮಾಡುತ್ತಾರೆ. ಕಳೆದ ನಾಲ್ಕೈದು ವರ್ಷಗಳಲ್ಲಿ ಇದೇ ಪರಿಸ್ಥಿತಿ ಮುಂದುವರಿಯಿತು. ಜನತಾದಳದ ಹೊಸ ಸರ್ಕಾರ ಇದಕ್ಕೆಲ್ಲ

ಕಡಿವಾಣವನ್ನು ಹಾಕಬೇಕು. ಅಧಿಕಾರಿಗಳನ್ನು ನಿಮ್ಮ ಹದ್ದುಬಸ್ತಿನಲ್ಲಿಟ್ಟುಕೊಳ್ಳುವ ಪ್ರಯತ್ನ ಮಾಡದಿದ್ದರೆ ಜನ ನಿಮ್ಮನ್ನು ಯಾವ ನಿರೀಕ್ಷೆ ಮಾಡಿ ಅಧಿಕಾರಕ್ಕೆ ತಂದಿದ್ದಾರೋ ಅದು ವಿಫಲವಾಗುತ್ತದೆ. ಬಹುಶಃ ತಾನು ದೊಡ್ಡ ಅಪರಾಧ ಮಾಡಿದಂತಾಗುತ್ತದೆ. ಮತ್ತೆ ಮತ್ತೆ ಮಾನ್ಯ ವಾಟಾಳ್ ನಾಗರಾಜ್‌ರವರು ಆಗಲೀ, ಈ ಕಡೆಗೆ ಕುಳಿತಿರುವ ನಾವು ಯಾರೇ ಆಗಲಿ ಮತ್ತೆ ಇದನ್ನು ಪ್ರಸ್ತಾಪ ಮಾಡದಹಾಗೆ ಮಾನ್ಯ ಅಧ್ಯಕ್ಷರು ಸಭಾ ನಾಯಕರಿಗೆ ಸೂಚನೆಯನ್ನು ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್:- ಈ ಸಭೆಯಲ್ಲಿ ಇಷ್ಟೊಂದು ಜನ ಕುಳಿತುಕೊಂಡಿರುವುದು ನನಗೂ ಬಹಳ ಸಂತೋಷ. ಇಷ್ಟೊಂದು ಜನ ಸದಸ್ಯರು ಅವರು ಯಾವುದೇ ಪಕ್ಷದವರು ಇರಲಿ, ಪ್ರಪ್ರಥಮವಾಗಿ ಸದನದ ತುಂಬಾ ಇರತಕ್ಕದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಕೆಲವು ಸಂದರ್ಭಗಳಲ್ಲಿ ಸದಸ್ಯರು ಬರಲಿಲ್ಲವೆಂದು ಗಂಟೆ ಬಾರಿಸಬೇಕಾಗಿತ್ತು. ಕೋರಂ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿತ್ತು. ಇವತ್ತು ನಮಗೆ ಬಹಳ ಸಂತೋಷವಾಗಿದೆ. ಇಷ್ಟೊಂದು ಜನ ಸದಸ್ಯರು ಬಹುಸಂಖ್ಯೆಯಲ್ಲಿ ಕುಳಿತಿರತಕ್ಕದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಇಂತಹ ಸಂದರ್ಭದಲ್ಲಿ ನಡೆದುಕೊಳ್ಳತಕ್ಕದ್ದು ಒಳ್ಳೆಯ ನೀತಿಯಲ್ಲ. ಸರ್ಕಾರವಾಗಲೀ ತಾವಾಗಲೀ ತಮಗೆ ಕೆಲವು ಅಧಿಕಾರಗಳಿವೆ. ತಾವು ಅಧಿಕಾರವನ್ನು ಚಲಾಯಿಸಿ, ಅಧಿಕಾರಿಗಳಿಗೆ ಕಡಿವಾಣವನ್ನು ಹಾಕಬೇಕು. ತಕ್ಷಣಕ್ಕೆ ತಾವೇನು ಮಾಡುತ್ತೀರಿ ಎಂಬುದನ್ನು ಸಭೆಗೆ ಹೇಳಬೇಕು.

ಶ್ರೀ ಎ.ಟಿ. ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗುತ್ತಿದೆ. ವಿಸ್ತಾರವಾಗಿ ಚರ್ಚೆ ಮಾಡುವಾಗ ಎಲ್ಲಾ ಇಲಾಖೆಗಳ ಮುಖ್ಯಸ್ಥರು ಇರತಕ್ಕದ್ದು ಅತ್ಯಗತ್ಯ. ಎಷ್ಟೋ ಸಾರಿ ನಮ್ಮ ಹೋಮ್ ಮಿನಿಸ್ಟರ್ ಈ ಕಡೆಗೆ ಕುಳಿತುಕೊಂಡಾಗ ಹೇಳಿದ್ದಾರೆ. ನಾವು ಯಾರಿಗೆ ಮಾತನಾಡಬೇಕು, ಏಕೆ ಮಾತನಾಡಬೇಕು ? ಯಾರು ಕೇಳುತ್ತಾರೆಂದು ಹೇಳಿದ್ದಾರೆ. ಅದು ಕಡತಕ್ಕೆ ಹೋಗಿದೆ. ಇಷ್ಟು ಬೇಗ ಹೀಗೆ ಆಗುತ್ತದೆಂದು ನಾವು ನಿರೀಕ್ಷೆ ಮಾಡಿರಲಿಲ್ಲ. ಹೀಗೆ ಆಗಬಾರದು ? ಹೋಮ್ ಮಿನಿಸ್ಟರ್ ನೀವೇ ಮಾತನಾಡಿದ್ದೀರಿ. ಎಲ್ಲಾ ಇಲಾಖೆಗಳ ಮೇಲೆ ಚರ್ಚೆಯಾಗುತ್ತಿದೆ. ಯಾರು ಇದ್ದಾರೆ ನೀವೇ ಹೇಳಿ ? ನೀವು ಅನೇಕ ಬಾರಿ ಚರ್ಚೆ ಮಾಡಿದ್ದೀರಿ ದಯಮಾಡಿ ಇದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಶಿವರಾಮು:- ಕೋರಂ ಇಲ್ಲದೆ ಹೇಗೆ ಸಭೆ ನಡೆಸುವುದಕ್ಕೆ ಬರುವುದಿಲ್ಲವೋ ಹಾಗೆಯೇ ಸದನ ಪ್ರಾರಂಭವಾಗುವುದಕ್ಕೆ ಮೊದಲು ಇಲ್ಲಿ ಇಷ್ಟು ಜನ ಅಧಿಕಾರಿಗಳು ಕೊಡಬೇಕು. ಇರಬೇಕೆನ್ನುವ ವ್ಯವಸ್ಥೆಯನ್ನು, ಶಿಸ್ತನ್ನು ತರತಕ್ಕಂಥಾದ್ದನ್ನು ತಾವು ಮಾಡಬೇಕು. ಶಿಸ್ತು ನಮಗಷ್ಟೇ ಅಲ್ಲ ಅಧಿಕಾರಿಗಳಿಗೂ ಬರಬೇಕು. ತಾವೇನು ದಕ್ಷತೆ ಮತ್ತು ಪ್ರಾಮಾಣಿಕತೆಯ ಬಗ್ಗೆ ಮಾತನಾಡುತ್ತೀರಿ. ಅದು ಅನುಷ್ಠಾನಕ್ಕೆ ಬರಬೇಕಾದರೆ ಇದನ್ನು ಕ್ರಮಬದ್ಧವಾಗಿ ಮಾಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಹಿರಿಯ ಸಚಿವರಾದ ಮಾನ್ಯ ಜಾಲಪ್ಪನವರು ಈಗಾಗಲೇ ಸಭೆಗೆ ಭರವಸೆಯನ್ನು ಕೊಟ್ಟಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಇತರೆ ಸದಸ್ಯರು ಮಾತನಾಡತಕ್ಕ ಸಂದರ್ಭದಲ್ಲಿ, ಮುಖ್ಯಮಂತ್ರಿಗಳು ಮತ್ತು ಇತರೆ ಮಂತ್ರಿಗಳು ಇರಬೇಕಾದದ್ದು ಅವಶ್ಯಕತೆಯಿದೆ. ಅದು ನಮ್ಮ ಕರ್ತವ್ಯವಾಗುತ್ತದೆ. ನಾವೆಲ್ಲರೂ ಇರುತ್ತೇವೆ. ಆ ಭರವಸೆಯನ್ನು ನಾನೂ ಸಹ ಕೊಡುತ್ತೇನೆ. ಜೊತೆಗೆ ಅಧಿಕಾರಿಗಳೂ ಈ ಸಭೆಯಲ್ಲಿರಬೇಕು. ಮಾನ್ಯ ಸದಸ್ಯರುಗಳು ವಿರೋಧಪಕ್ಷದವರಾಗಲೀ, ಆಡಳಿತ ಪಕ್ಷದವರಾಗಲೀ ಹೇಳತಕ್ಕ ಸಲಹೆಗಳನ್ನು ತಾವು ತಿಳಿದುಕೊಂಡು ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ತುರ್ತುಕ್ರಮವನ್ನು ತೆಗೆದುಕೊಳ್ಳಬೇಕು. ನಾವು ಆ ಕಡೆಗೆ ಇದ್ದಾಗ ಅನೇಕ ಬಾರಿ ಈ ಮಾತನ್ನು ಹೇಳಿದ್ದೇವೆ. ನಾನು ಮತ್ತೊಮ್ಮೆ ತಮಗೆ ಭರವಸೆಯನ್ನು ಕೊಡುತ್ತೇನೆ. ಯಾವುದೋ ಕಾರಣದಿಂದ ನಾಲ್ಕು ಜನ ಅಧಿಕಾರಿಗಳು ಬಾರದೇ

ಇರಬಹುದು. ಅವರು ಬರುವಹಾಗೆ ಮಾಡುವುದಕ್ಕೆ ಸೂಕ್ತಕ್ರಮವನ್ನು ನಾವು ತಕ್ಷಣ ತೆಗೆದುಕೊಳ್ಳುತ್ತೇವೆ. ಆದರ ಬಗ್ಗೆ ಇಷ್ಟು ಬೇಗ ತೀರ್ಮಾನಕ್ಕೆ ಬರುವುದು ಅಷ್ಟೊಂದು ಸರಿಯಲ್ಲ. ಇದರ ಬಗ್ಗೆ ಅವರಿಗೆ ಭರವಸೆ ಇರಲಿ. ಅಧಿಕಾರಿಗಳು ಜನರ ಅಭಿಪ್ರಾಯಕ್ಕೆ ಸ್ಪಂಧಿಸುವ ಹಾಗೆ ಮಾಡುವುದು ನಮ್ಮ ಕರ್ತವ್ಯ, ಅದನ್ನು ನಾವು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:– ಈ ರೀತಿ ಹೇಳಿದರೆ ಏನೂ ಪ್ರಯೋಜನವಾಗುವುದಿಲ್ಲ. ಮಾನ್ಯ ಸಿಂಧ್ಯಾರವರು ಗೃಹಮಂತ್ರಿಗಳಾಗಿದ್ದಾರೆ. ಇನ್ನೇನು ಮಾಡಬೇಕೆಂದು ಅವರಿಗೆ ಕೋಪ ಬರುತ್ತಿದೆ. ನನಗೆ ಕೋಪ ಬರಬೇಕು. ನಿಮಗೆ ಕೋಪ ಬರಬಾರದು. ನಾವು ಹೇಳುವುದನ್ನು ಶಾಂತಿಯಿಂದ ಕೇಳಿ. ಇಲ್ಲಿ ಕುಳಿತಿದ್ದಾಗ ನೀವು ಅದೇನು ಕೂಗಾಡುತ್ತಿದ್ರಿ, ಅದು ಬಹಳ ದಿವಸ ಆಗಿಲ್ಲ. ನಾಲ್ಕು ತಿಂಗಳು ಬೇಡ, ಎರಡು ತಿಂಗಳ ಹಿಂದೆ ಇಲ್ಲಿ ಕುಳಿತುಕೊಂಡು ಎಷ್ಟು ಕೂಗಾಟ, ಕೂಗಿ ಕೂಗಿ ಗದ್ದಲ ಎಬ್ಬಿಸುತ್ತಾ ಇದ್ದರು. ಅದನ್ನು ಮರೆತಿದ್ದೀರಾ ? ಅದೆಲ್ಲಾ ಬೇಡ. ಇನ್ನು ಏನು ಮಾಡಬೇಕೆಂದರೆ, ತಕ್ಷಣ ನಿಮ್ಮ ಅಧಿಕಾರವನ್ನು ಚಲಾಯಿಸಿ, ಅಧಿಕಾರಿಗಳೇನು ಲಂಡನ್‌ನಲ್ಲಿಲ್ಲ ಈ ಕಟ್ಟಡದಲ್ಲಿಯೇ ಕುಳಿತಿದಿದ್ದಾರೆ. ನಾಲ್ಕು ಜನ ಅಧಿಕಾರಿಗಳನ್ನು ಕರೆಯಿಸಿ. ಇನ್ನೇನು ಮಾಡಬೇಕೆಂದು ನೀವು ಹೇಳುವುದೇ ?

ಶ್ರಿ ಬಿ.ಬಿ. ಶಿವಕುಮಾರ್:– ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದ ನಾಯಕರು ಗೌರವಾನ್ವಿತ ಸದಸ್ಯರು ಹೇಳುವಂತದ್ದನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ನಾವು ನೀವು ಎಲ್ಲರೂ ಮೇಲ್ಮನೆಯಲ್ಲಿ ವಿರೋಧಪಕ್ಷದಲ್ಲಿದ್ದುಕೊಂಡು ಮಾಡಿದಂತಹ ಕೆಲಸವನ್ನು ಅವರು ಇಂದು ಮಾಡತಕ್ಕದ್ದು ಸ್ವಾಗತಾರ್ಹವಾದುದು. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಎಲ್ಲಾ ಪಕ್ಷಗಳಿಂದ ಹೊಸದಾಗಿ ಆರಿಸಿ ಬಂದಿರತಕ್ಕವರ ಪರವಾಗಿ ಹೇಳುತ್ತಿದ್ದೇನೆ. ಮುಂದಿನ ಚರ್ಚೆಗಳಲ್ಲಿ ನಮಗೆ ಹೆಚ್ಚಿನ ಅವಕಾಶವನ್ನು ಕೊಡಬೇಕು. ಹೊಸಬರುಗಳಲ್ಲಿರತಕ್ಕ ಪ್ರತಿಭೆಯನ್ನು ತೋರಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಮತ್ತೊಂದು ಬಹಳ ಮುಖ್ಯವಾದದ್ದು ಏನೆಂದರೆ, ಶಾಸನಸಭೆ ನಡೆಯುವಾಗ ಸರ್ಕಾರದ ಪಂಚೇಂದ್ರಿಯಗಳೆಲ್ಲ ಕೆಲಸ ಮಾಡುತ್ತೇವೆ ಎನ್ನುವ ಅಂಶ ಸತ್ಯ ಶಾಸನ ಸಭೆ ನಡೆಯುವಾಗ ಸರ್ಕಾರ ಬಾಯಿ ತೆರಯುತ್ತದೆ. ಕಣ್ಣು ತೆರೆಯುತ್ತದೆ.

ಶ್ರೀ ರಮಾನಾಥ ರೈ:– ಮಾನ್ಯ ಅಧ್ಯಕ್ಷರೇ, ತಮಗೆ ಪರಮಾಧಿಕಾರವಿದೆ ಅದನ್ನು ಉಪಯೋಗಿಸಿ, ಅಧಿಕಾರಿಗಳನ್ನು ಸಭೆಗೆ ಕರೆಯಿಸಿತಕ್ಕ ಕೆಲಸ ಮಾಡಿದರೆ ಒಳ್ಳೆಯದು.

ಅಧ್ಯಕ್ಷರು:– ಪರಮಾಧಿಕಾರ ಅಂದರೆ ಹೈ ಕಮಾಂಡ್ ತರವೇ ?

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ಸೂಚನೆಯನ್ನು ಕಳುಹಿಸಿದ್ದೇವೆ. ಅಧಿಕಾರಿಗಳು ಬರುತ್ತಾರೆ.

ಶ್ರೀ ಜಿ.ಬಿ. ಶಿವಕುಮಾರ್:– ಮಾನ್ಯ ವಿರೋಧಪಕ್ಷದವರು ಹೇಳುವುದನ್ನು ನಾನು ಬೆಂಬಲಿಸುತ್ತೇನೆ. ಅಧಿಕಾರಿಗಳನ್ನು ಸಭೆಗೆ ಕರೆಯಿಸಿದರೆ ಅಭಿಪ್ರಾಯ ಸಂಗ್ರಹಿಸಲಿಕ್ಕೆ ಸರಿಹೋಗುತ್ತದೆ. ಒಂದು ಸತ್ಯವಾಗಿದೆ, ಅಧಿಕಾರಿಗಳು ಮತ್ತು ಸರ್ಕಾರ ಬಾಯಿ ತೆರೆಯುವುದು, ಕಣ್ಣು ತೆರೆಯುವುದು ಕೇವಲ ಅಧಿವೇಶನ ನಡೆಯುವಾಗ ಎಂದು. ಹೊಸ ಸದಸ್ಯರುಗಳ ಪರವಾಗಿ ನಾನು ಹೇಳುತ್ತಿದ್ದೇನೆ. ಹೆಚ್ಚಿನ ಅವಕಾಶವನ್ನು ನಮಗೆ ಕೊಡಿ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳುತ್ತಿದ್ದರು. 180 ಮಂದಿ ಆಡಳಿತ ಪಕ್ಷದವರು ಇದ್ದರೂ ಕೋರಂ ಗಂಟೆಯನ್ನು ಬಾರಿಸುತ್ತಿದ್ದರು ಎಂದು. ಒಂದು ಮಾತು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಒಂದೆರಡು ಸಾರಿ ಆಯ್ಕೆಯಾದವರನ್ನು ಮತದಾರರು ಮನೆಗೆ ಕಳುಹಿಸುವುದು ಗ್ಯಾರಂಟಿ. ಆದ್ದರಿಂದ ಈಗಲೇ ಹೊಸಬರಿಗೆ ಹೆಚ್ಚು ಹೆಚ್ಚು ಅವಕಾಶವನ್ನು ಕೊಟ್ಟರೆ

ಅವರು ತಮ್ಮ ಪ್ರತಿಭೆಯನ್ನು ತೋರಿಸುವುದಕ್ಕೆ ಅವಕಾಶವಾಗುತ್ತದೆ. ದಯವಿಟ್ಟು ತಾವು ಹೆಚ್ಚು ಸಮಯ ಕೊಟ್ಟು ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಕೃಷ್ಣ:- ಮಾನ್ಯ ಅಧ್ಯಕ್ಷರೆ, ವೃತ್ತಿ ಶಿಕ್ಷಣಕ್ಕೆ ಆದ್ಯತೆಯನ್ನು ಪ್ರಾಧಾನ್ಯತೆಯನ್ನು ಕೊಡಬೇಕೆಂದು ಸಂಬಂಧಪಟ್ಟವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಶಾಲೆಗಳಲ್ಲಿ ಶಿಕ್ಷಕರು ಇಲ್ಲ. ಅದಕ್ಕೆ ವಿಡಿಯೋ ಕ್ಯಾಸೆಟ್‌ಗಳನ್ನು ಮಾಡಿ, ಅವುಗಳನ್ನು ಉಪಯೋಗಿಸಿ ಪಾಠ ಹೇಳತಕ್ಕ ಪ್ರಯೋಗವನ್ನು ಮಾಡಬಹುದು. ಗಣಿತ ಆಗಬಹುದು. ಮತ್ತೊಂದು ವಿಷಯವಾಗಬಹುದು ಒಂದಲ್ಲ ಎರಡು ಸಾರಿ ಆ ಕ್ಯಾಸೆಟ್‌ಗಳನ್ನು ಮತ್ತೆ ಮತ್ತೆ ಪ್ರಯೋಗ ಮಾಡಬಹುದು. ಹೀಗೆ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ. ಒಂದೊಂದು ಶಾಲೆಗಳಲ್ಲಿ ಒಬ್ಬರು ಇಬ್ಬರು ಉಪಾಧ್ಯಾಯರು ಇದ್ದರೆ ಅವರು ಆರು ಏಳು ತರಗತಿಗಳನ್ನು ನೋಡಿಕೊಳ್ಳಬೇಕಾಗುತ್ತದೆ. ನಮ್ಮ ಕಡೆಗೆ 7ನೇ ತರಗತಿಯವರೆಗೆ ಇಬ್ಬರೇ ಉಪಾಧ್ಯಯರು ಇರುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ ವಿಡಿಯೋ ಕ್ಯಾಸೆಟ್‌ಗಳನ್ನು ಉಪಯೋಗಿಸಿ ಪಾಠಗಳನ್ನು ಹೇಳತಕ್ಕ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರೆ ಅದು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಗ್ರಾಮಾಂತರ ಪ್ರದೇಶಗಳ ಮಕ್ಕಳಿಗೆ ಹೆಚ್ಚು ಅನುಕೂಲವಾಗುತ್ತದೆ. ಆ ದಿಕ್ಕಿನಲ್ಲಿ ತಜ್ಞರ ಸಮಿತಿಯನ್ನು ಮಾಡಿ ಒಂದು ಕಾರ್ಯಕ್ರಮವನ್ನು ರೂಪಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಈ ದೇಶದಲ್ಲಿ ನಿರುದ್ಯೋಗ ಬಹಳಷ್ಟು ಬೆಳೆದಿದೆ. ನಿರುದ್ಯೋಗದಿಂದ ಆಗಬಾರದ್ದು, ಈ ಸಮಾಜದಲ್ಲಿ ಆಗುತ್ತಿದೆ. ಅದಕ್ಕೂ ಈ ಶಿಕ್ಷಣಕ್ಕೂ ನೇರವಾದ ಸಂಬಂಧವಿದೆ. ನೀವು ವೃತ್ತಿ ಶಿಕ್ಷಣಕ್ಕೆ ಆದ್ಯತೆಯನ್ನು ಕೊಡದಿದ್ದರೆ, ಬೇಕಾದಷ್ಟು ವಿಶ್ವವಿದ್ಯಾನಿಲಯಗಳನ್ನು ಮಾಡುವುದರಿಂದ ಏನು ಪ್ರಯೋಜನವಾಗುತ್ತಿದೆ. ಅದರಿಂದ ಯಾರಿಗೆ ಪ್ರಯೋಜನವಾಗುತ್ತಿದೆ. ವಿಶ್ವವಿದ್ಯಾನಿಲಯಗಳಿಂದ ಪದವಿ ಪಡೆದವರಿಂದ ಸಮಾಜಕ್ಕೆ ಎಷ್ಟು ಉಪಯೋಗವಾಗುತ್ತಿದೆ ? ಇವುಗಳನ್ನು ವಿಚಾರ ಮಾಡತಕ್ಕ ಅಗತ್ಯವಿದೆ. ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರವಾದ ಬದಲಾವಣೆಯನ್ನು ಮಾಡದಿದ್ದರೆ ನಮ್ಮ ಪಾಲಿನ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲವೆಂದು ಹೇಳುತ್ತೇನೆ. ಈ ದಿಕ್ಕಿನಲ್ಲಿ ಕಠಿಣ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಮುಖವಾಗಿ ಆರೋಗ್ಯ ರಕ್ಷಣೆಯ ಬಗ್ಗೆ ಹೇಳಿದ್ದಾರೆ. ನಮ್ಮ ಹಳ್ಳಿಗಳಲ್ಲಿ ಬೇಕಾದಷ್ಟು ಆಸ್ಪತ್ರೆಗಳಿವೆ. ಆದರೆ ಡಾಕ್ಟರುಗಳಿಲ್ಲ, ಬೇರೆ ಸಿಬ್ಬಂದಿಗಳಿಲ್ಲ, ಸಿಬ್ಬಂದಿ ಕೊರತೆ ಇದೆ. ಇದರ ಬಗ್ಗೆ ಏನಾದರೂ ಒಂದು ತುರ್ತು ಕ್ರಮವನ್ನು ತೆಗೆದುಕೊಳ್ಳಬೇಕು. ನಮ್ಮಲ್ಲಿ ಕಾನೂನು ಅಡ್ಡಿ ಬರುತ್ತದೆ. ನಾನು ಕೇಳಿದ್ದೇನೆ, ಎಷ್ಟೋ ಜನ ಡಾಕ್ಟರುಗಳು, ಬಹುಶಃ ಇತ್ತೀಚೆಗೆ ಕಡಿಮೆಯಾಗಿರಬಹುದು. ಅವರು ರಜವನ್ನು ಹಾಕಿರುವುದಿಲ್ಲ, ಏನೂ ಮಾಡಿರುವುದಿಲ್ಲ, ಮಿಡ್ಲ್ ಈಸ್ಟ್‌ಗೆ ಹೊರಟುಹೋಗುತ್ತಾರೆ. ಎರಡು ವರ್ಷ ಮೂರು ವರ್ಷ ಅಲ್ಲಿ ಕೆಲಸ ಮಾಡಿಬೇಕಾದಷ್ಟು ಪೆಟ್ರೋಡಾಲರ್‌ಗಳನ್ನು ಸಂಪಾದನೆ ಮಾಡಿಕೊಂಡು ಇಲ್ಲಿ ಬರುತ್ತಾರೆ. ಇಲ್ಲಿ ಬಂದಮೇಲೆ ಯಾರದ್ದೋ ಪ್ರಭಾವ ಉಪಯೋಗಿಸಿ ನೌಕರಿಗೆ ಸೇರಿಕೊಂಡು ಬಿಡುತ್ತಾರೆ. ಅದಕ್ಕೋಸ್ಕರ ಯಾರು ಹೋಗಿದ್ದಾರೆ, ಯಾರು ರಜ ಹಾಕಿ ಹೋಗಿದ್ದಾರೆ, ಯಾರು ಅನಧಿಕೃತ ಗೈರುಹಾಜರಿದ್ದಾರೆ ಎಂಬುದು ಇಲಾಖೆಗೆ ಗೊತ್ತಾಗುತ್ತದೆಯೋ ಹೇಗೆ ? ಇದು ಇಲಾಖೆಗೆ ಗೊತ್ತಿರಲೇಬೇಕು. ಅಂದರೆ ಮೇಲಾಧಿಕಾರಿಗಳು ಎಷ್ಟರಮಟ್ಟಿಗೆ ಈ ವ್ಯವಹಾರದಲ್ಲಿ ಶಾಮೀಲಾಗಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ. ಇದು ಆಗದಹಾಗೆ ಮಾಡಬೇಕು. ಒಂದು ಕಠಿಣವಾದ ಶಿಸ್ತನ್ನು ತರಬೇಕು. ಎಲ್ಲಾ ಆಸ್ಪತ್ರೆಗಳಿಗೆ ಡಾಕ್ಟರುಗಳನ್ನು ನೇಮಕ ಮಾಡಬೇಕು. ಅಷ್ಟೇ ಅಲ್ಲ, ಗ್ರಾಮಾಂತರ ಪ್ರದೇಶಗಳಲ್ಲಿ ಅವರಿಗೆ ಮನೆಗಳನ್ನು ಒದಗಿಸಿಕೊಡತಕ್ಕದ್ದು ಮುಖ್ಯವಾದುದು. ನನಗೆ ಒಂದು ವಿಷಯ ನೆನಪು ಬರುತ್ತದೆ. ಹಿಂದೆ ನಾನು ಶಾಸಕನಾಗಿದ್ದಾಗ ಯಾರೋ ಒಬ್ಬರು ಸ್ನೇಹಿತರ ತಮ್ಮನನ್ನು ಒಂದು ಹಳ್ಳಿಗೆ ಹಾಕಿಸಿದ್ದೆ. ಸ್ವಲ್ಪ ಚೆನ್ನಾಗಿಯೇ ಅಲ್ಲಿ ಅವರು ಕೆಲಸ ಮಾಡಿದರು.

ಒಂದು ವರ್ಷವಾದ ಮೇಲೆ ಅವರು ನನ್ನ ಹತ್ತಿರ ಪುನಃ ಬಂದರು. ವರ್ಗಾವಣೆ ಏಕೆ ಎಂದರೆ, 'ಅವರ ಹೆಂಡತಿ ಆ ಊರಿಗೆ ಬರುವುದಿಲ್ಲ ಎಂಬುದು' ಏಕೆ ಅವರು ಬರುವುದಿಲ್ಲವೆಂದರೆ, ಹಳ್ಳಿಗಳ ಪರಿಸ್ಥಿತಿ ತಮಗೆ ಗೊತ್ತಿದೆ. ಅಲ್ಲಿ ಕಕ್ಕಸ್ಸು ಇಲ್ಲ. ಇವರು ಪಟ್ಟಣದವರು. ಅಂದರೆ ಈ ಒಂದು ಅನುಕೂಲದ ಕೊರತೆ ಇರುವುದರಿಂದ ಎಷ್ಟೋ ಜನ ವೈದ್ಯಾಧಿಕಾರಿಗಳು ಹಳ್ಳಿಗಳಿಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಆದ್ದರಿಂದ ಹಿಂದೆ ನಾವು ಹುಡ್ಕೋ ನೆರವಿನಿಂದ ಎಲ್ಲಾ ಕಡೆ ಡಾಕ್ಟರುಗಳು ಮತ್ತು ಇತರೆ ಸಿಬ್ಬಂದಿಯವರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ಕಾರ್ಯಕ್ರಮ ಮಾಡುತ್ತೇವೆ ಎಂದು ಹಿಂದಿನ ಸರ್ಕಾರದವರು ಹೇಳಿದ್ದರು. ಇದು ತಕ್ಷಣವೇ ಆಗಬೇಕು. ಇಲ್ಲದಿದ್ದರೆ ಏನೂ ಪ್ರಯೋಜನ ಆಗುವುದಿಲ್ಲ; ಹಳ್ಳಿಗಳಿಗೆ ವೈದ್ಯರುಗಳು ಹೋಗುವುದಿಲ್ಲ. ಈಗ ಹಳ್ಳಿಗಳಿಗೆ ವೈದ್ಯರುಗಳನ್ನು ನೇಮಕ ಮಾಡುವುದು ಎಷ್ಟು ಅಗತ್ಯವೋ, ಅಷ್ಟೇ ಅವರಿಗೆ ಅಲ್ಲಿ ವಾಸ ಮಾಡುವುದಕ್ಕೆ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ಕೆಲಸವನ್ನು ಮಾಡಬೇಕಾಗಿದೆ. ಇದರ ಜೊತೆಗೆ ಇತ್ತೀಚೆಗೆ ನಮ್ಮ ತಾಲ್ಲೂಕಿನಲ್ಲಿ ಡಾಕ್ಟರು ಹೇಳುತ್ತಿದ್ದರು.

ಶ್ರೀ ಕೆ. ಜಯರಾಮಶೆಟ್ಟಿ:– ಸ್ವಾಮಿ, ನನ್ನ ಕ್ಷೇತ್ರ ಉಳ್ಳಾಲದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಉಂಟು. ಆ ಕೇಂದ್ರದಲ್ಲಿ ಎಲ್ಲಾ ರೀತಿಯ ವೈದ್ಯರಿದ್ದಾರೆ, ಅಲ್ಲಿ ಎಲ್ಲಾ ವ್ಯವಸ್ಥೆಗಳೂ ಉಂಟು. ಆದರೆ ನಾನು ಮೊನ್ನೆ ಅಲ್ಲಿಗೆ ಹೋದಾಗ ಅಲ್ಲಿಯ ವೈದ್ಯರು ಏನು ಅಭಿಪ್ರಾಯ ಹೇಳಿದ್ದಾರೆ ಎಂದರೆ, ಅಲ್ಲಿ ಯಾರೂ ಶುಶ್ರೂಷೆಗೆ ಬರುತ್ತಿಲ್ಲ ಎಂದು ಇದು ಅವರ ಗೋಳು. ಅಲ್ಲಿಯ ಮಹಿಳಾವೈದ್ಯರು ಸಹ ಹಾಗೆಯೇ ಹೇಳಿದರು. ಏಕೆ ಜನರು ಬರುತ್ತಿಲ್ಲ ಎಂದರೆ, ಅಲ್ಲಿ ವೈದ್ಯರುಗಳು ಇದ್ದರೂ ಕೂಡ ಬೇಕಾದ ಸೌಲಭ್ಯ, ಸವಲತ್ತುಗಳು ಇಲ್ಲ. ಹೀಗಾದಾಗ ಜನರು ಸ್ವಾಭಾವಿಕವಾಗಿ ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಾರೆ. ಆದ್ದರಿಂದ ಈ ಆಸ್ಪತ್ರೆಗಳಿಗೆ ಸವಲತ್ತುಗಳನ್ನು ಕೊಡದೆ, ಈಗಿನ ಆಧುನೀಕರಣ ವ್ಯವಸ್ಥೆ ಮಾಡದೆ ಕೇವಲ ಪ್ರಾಥಮಿಕ ಆರೋಗ್ಯ ಕೇಂದ್ರ ಎಂದು ಮಾಡಿದರೆ ಜನರು ಯಾರೂ ಕೂಡ ಅಲ್ಲಿಗೆ ಹೋಗುತ್ತಿಲ್ಲ. ಆದ್ದರಿಂದ ಈ ದೃಷ್ಟಿಯಲ್ಲಿ ಸರ್ಕಾರ ಆಸಕ್ತಿ ತೆಗೆದುಕೊಳ್ಳಬೇಕೆಂದು ನನ್ನದೊಂದು ವಿನಂತಿ.

ಶ್ರೀ ಕೃಷ್ಣ:– ಹಳ್ಳಿಗಳಲ್ಲಿ ಇರತಕ್ಕಂಥ ಆಸ್ಪತ್ರೆಗಳ ಪರಿಸ್ಥಿತಿ ಹೀಗೆ ಇರಬೇಕಾದರೆ ನಗರಗಳಲ್ಲಿ ಇರುವ ಆಸ್ಪತ್ರೆಗಳ ಪರಿಸ್ಥಿತಿ ಹೇಗಿದೆ ಎಂದರೆ, ಮಾನ್ಯ ಸದಸ್ಯರು ಹೇಳಿದಹಾಗೆ, ಜನರು ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಾರೆಯೇ ಹೊರತು ನಮ್ಮ ಜನರಿಗೆ ಸರ್ಕಾರಿ ಆಸ್ಪತ್ರೆಗಳ ಮೇಲೆ ನಂಬಿಕೆಯೇ ಇಲ್ಲ. ಅಲ್ಲಿ ಹೋಗತಕ್ಕಂಥವರು ಯಾರು ಎಂದರೆ ಭಿಕಾರಿಗಲು, ಏನೂ ಗತಿ ಇಲ್ಲದೇ ಇರತಕ್ಕಂಥವರು, ಏನೂ ಆಶ್ರಯ ಇಲ್ಲದೇ ಇರತಕ್ಕಂಥವರು. ಇಂತಹ ಒಂದು ಪರಿಸ್ಥಿತಿ ಇದೆ. ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಒಳ್ಳೆಯ ಬುದ್ಧಿವಂತರು ಇದ್ದಾರೆ; ಕ್ವಾಲಿಫೈಡ್ ಡಾಕ್ಟರ್‌ಗಳು ಇದ್ದಾರೆ. ಇದೆಲ್ಲಾ ಇದ್ದರೂ ಅವರು ಖಾಸಗಿ ನರ್ಸಿಂಗ್‌ಹೋಮ್ ಅಥವಾ ಖಾಸಗಿ ಆಸ್ಪತ್ರೆಗಳಲ್ಲಿ ಕನ್ಸಲ್ಟೆನ್ಸಿ ಇಟ್ಟುಕೊಂಡಿರುತ್ತಾರೆ. ಇದರ ಬಗ್ಗೆ ಯಾವುದಾದರೂ ಕಠಿಣ ಕಾರ್ಯಕ್ರಮ ಹಾಕದೇ ಇದ್ದರೆ, ಸುಮ್ಮನೆ ಆರೋಗ್ಯದ ಬಗ್ಗೆ ಮಾತನಾಡಿ ಪ್ರಯೋಜನ ಇಲ್ಲ. ಈ ದಿಕ್ಕಿನಲ್ಲಿ ಒಂದು ಶಿಸ್ತು ಇರಬೇಕು. ಒಂದು ಸ್ಪಷ್ಟವಾದ ಕಾರ್ಯಕ್ರಮ ಇರಬೇಕು. ಈಗ ಕೆಲವು ಆಸ್ಪತ್ರೆಗಳು, ಅದು ಬೌರಿಂಗ್ ಆಸ್ಪತ್ರೆ ಇರಬಹುದು, ವಿಕ್ಟೋರಿಯಾ ಆಸ್ಪತ್ರೆ ಇರಬಹುದು. ಮೈಸೂರಿನ ಕೆ.ಆರ್. ಆಸ್ಪತ್ರೆ ಇರಬಹುದು. ಅಲ್ಲಿ ಡಾಕ್ಟರ್‌ಗಳು, ಹಿರಿಯ ವೈದ್ಯರುಗಳು ಇರುವುದಿಲ್ಲ. ಅವರು ಎಲ್ಲಿ ಹೋಗಿರುತ್ತಾರೋ ಗೊತ್ತಿಲ್ಲ. ಈ ರೀತಿಯಾಗಬಾರದು. ಇದರ ಬಗ್ಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿಮಾಡುತ್ತೇನೆ.

ಈಗ ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ನಮ್ಮ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

ದಿವಂಗತ ನಜೀರಸಾಬ್ ಅವರು ಇಡೀ ದೇಶಕ್ಕೇ ಮಾದರಿಯಾದಂಥ ವಿಕೇಂದ್ರೀಕರಣ ವ್ಯವಸ್ಥೆಯ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ತಂದಿದ್ದರು. ನಮ್ಮ ಹಿಂದಿನ ಸರ್ಕಾರ ಕೆಲವು ಬದಲಾವಣೆಗಳನ್ನು ಮಾಡಿದೆ. ಅದು ಸರಿಯೋ ಇಲ್ಲವೋ ಎಂದು ನಾನು ಅದರ ಬಗ್ಗೆ ಚರ್ಚೆಗೆ ಹೋಗುವುದಿಲ್ಲ. ಆದರೆ ಮುಂದೆ ಪಂಚಾಯತ್ ಚನಾವಣೆ ಬರುತ್ತದೆ. ಈ ಗ್ರಾಮಪಂಚಾಯತಿಯಲ್ಲಿ ಪಕ್ಷದ ಆಧಾರದಮೇಲೆ ಚುನಾವಣೆಗಳು ನಡೆದಿಲ್ಲ. ಆದರೆ ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿಗಳಲ್ಲಿ ಪಕ್ಷದ ಆಧಾರದಮೇಲೆ ಚುನಾವಣೆಗಳು ನಡೆಯುತ್ತವೆ. ಇದರಲ್ಲಿ ಎಲ್ಲ ರಾಜಕೀಯ ಪಕ್ಷಗಳ ಜವಾಬ್ದಾರಿ ಹೆಚ್ಚು ಇದೆ. ಯೋಗ್ಯರನ್ನು ಮತ್ತು ಕೆಲವು ತತ್ವಗಳಿಗೆ ಕಮಿಟ್‌ಮೆಂಟ್ ಆಗಿರತಕ್ಕಂಥವರನ್ನು ಸ್ಪರ್ಧಿಗಳನ್ನಾಗಿ ನಿಲ್ಲಿಸದಿದ್ದರೆ ಬಹುಶಃ ಪ್ರಾಥಮಿಕ ಹಂತದಲ್ಲಿ ಯೋಗ್ಯ ನಾಯಕತ್ವ ಬೆಳೆಯುವುದಕ್ಕೆ ತೊಂದರೆಯಾಗುತ್ತದೆ. ಯೋಗ್ಯ ನಾಯಕತ್ವವನ್ನು ರೂಪಿಸತಕ್ಕಂಥ ಹೊಣೆ, ಈ ಹಂತತಲ್ಲಿ ಜನರಿಗಿಂತ ಹೆಚ್ಚಾಗಿ ರಾಜಕೀಯ ಪಕ್ಷಗಳ ಮೇಲಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕೈಗಾರಿಕರಣ ಬಗ್ಗೆ ನಮ್ಮ ವಿದೇಶಿ ಬಂಡವಾಳ ಹೂಡಿಕೆ ಅಭಿವೃದ್ಧಿ ಮಂಡಳಿ ಏನು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಇದೆ, ಅದರ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಏನೊಂದು ಗೊಬ್ಬರ ಇದೆ. ಅಕ್ಕಿ ಇದೆ, ಬಡವರಿಗೆ ಒದಗಿಸತಕ್ಕಂಥ ವಸ್ತುಗಳ ಮೇಲೆ ಸಬ್ಸಿಡಿ ಕೊಡಬಾರದು ಎನ್ನುವುದನ್ನು ನಾನು ವಿರೋಧ ಮಾಡುತ್ತೇನೆ. ಉಳಿದಿದ್ದಕ್ಕೆ ಏನು ಲಿಬರಲೈಸೇಶನ್ ಅಂತ ಮಾರ್ಕೆಟ್ ಎಕಾನಮಿ ಬಂದಿದೆಯಲ್ಲ, ಅದರ ಬಗ್ಗೆ ಒಪ್ಪಿಗೆ ಇದೆ ಎಂಬ ಮಾತನ್ನು ಕೂಡ ಅವರು ಹೇಳಿದ್ದಾರೆ. ಇವತ್ತು ಮಾರ್ಕೆಟ್ ಎಕಾನಮಿ ಏನಿದೆ. ಅದು ಮಿತಿಯೊಳಗೆ ಇಲ್ಲವೇನೋ ಎನ್ನತಕ್ಕಂಥ ಹಂತವನ್ನು ತಲುಪಿಬಿಟ್ಟಿದೆ. ನಮ್ಮಲ್ಲಿ ಒಂದು ಲಕ್ಷ ನಾಲ್ವತ್ತೈದು ಸಾವಿರ ಕೋಟಿ ರೂಪಾಯಿ ಈ ಕೈಗಾರಿಕೆಗಳ ಮೇಲೆ ಅಂದರೆ ಪಬ್ಲಿಕ್ ಸೆಕ್ಟರ್‌ಗಳ ಮೇಲೆ ಬಂಡವಾಳ ಇದೆಯೆಂದು ನಾನು ಒಂದು ಕಡೆ ಓದುತ್ತಿದ್ದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿಕೆಗೆ ಬರತಕ್ಕಂಥ ಲಾಭ 87 ಕೋಟಿ ರೂಪಾಯಿಗಳು ಮಾತ್ರ. ಈ ರೀತಿ ಕೈಗಾರಿಕೆಗಳನ್ನು ನಡೆಸಿದರೆ, ನಮ್ಮಲ್ಲಿ ಈ ಕೈಗಾರಿಕೆಗಳಲ್ಲಿ ಇದ್ದಾರಲ್ಲ ಜನ, ಅವರಿಗೆ ಹಣಹುಟ್ಟೆಗಾರರು ಎಂದು ಹೇಳುತ್ತಾರೆ. ಯಾವುದೋ ಕಾಲದಲ್ಲಿ ಇವರು ನೌಕರಿಗೆ ಸೇರಿಕೊಂಡು ಬಿಟ್ಟರು. ಈ ನೌಕರರನ್ನು ಸಾಕುವುದಕ್ಕೆ ಜನಸಾಮಾನ್ಯರಿಂದ ತೆರಿಗೆ ವಸೂಲಿ ಮಾಡಿ ಇವರನ್ನು ಸಾಕಬೇಕು. ನಮ್ಮ ಹಳ್ಳಿಗಳಲ್ಲಿ ಏನಾಗುತ್ತದೆ ಎಂದರೆ, ಮಗ ಎಂಬಿಬಿಎಸ್, ಬಿ.ಎ, ಬಿಸ್ಸಿ ಮಾಡಿಬಿಡುತ್ತಾನೆ ಮತ್ತು ನಿರುದ್ಯೋಗಿಯಾಗಿರುತ್ತಾನೆ. ಅವನನ್ನು ಸಾಕತಕ್ಕಂಥ ಕೆಲಸ ವೃದ್ಧ ತಂದೆಯ ಮೇಲಿರುತ್ತದೆ. ಈ ತರಹ ಈ ನೌಕರರನ್ನು ಸಾಕತಕ್ಕಂಥ ಕೆಲಸ ಇವತ್ತು ಜನಸಾಮಾನ್ಯರ ಮೇಲೆ ಬಿದ್ದಿದೆ. ಈ ಲಿಬರ್‌ಲೈಸೇಶನ್ ಮಾಡುತ್ತೇವೆ ಎಂದು ಯಾವುದೇ ಒಂದು ಸಾರಿಗೆ ಸಂಸ್ಥೆ ಇರಬಹುದು, ಕಾರ್ಖಾನೆ ಇರಬಹುದು, ಮತ್ತೊಂದು ಆಗಬಹುದು. ಇವುಗಳನ್ನು ಏಕೆ ಸರ್ಕಾರಿ ಕಚೇರಿಗಳಿಗೆ ವಿಸ್ತಾರ ಮಾಡಬಾರದು? ಏಕೆಂದರೆ ಸಬ್‌ರಿಜಿಸ್ಟ್ರಾರ್ ಅವರ ಕಚೇರಿಯನ್ನು ಆ್ಯಕ್ಷನ್ ಹಾಕಬೇಕು; ಕೊಂಡುಕೊಳ್ಳುವವರು ಇದ್ದಾರೆ. ಲಿಬರ್ಲೈಸೇಶನ್‌ನಲ್ಲಿ ಬಹಳಷ್ಟು ತೊಂದರೆಗಳು ಇವೆ. ಇದರಿಂದ ಜನಸಾಮಾನ್ಯ ಮೇಲೆ ಹೊಡೆತ ಬಿದ್ದಿದೆ. ಇದರ ಬಗ್ಗೆ ಸಹ ತಾವು ಸ್ವಲ್ಪ ಯೋಜನೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಈಗ ವಿದ್ಯುಚ್ಛಕ್ತಿ ಬಗ್ಗೆ ವಿದೇಶಿ ಬಂಡವಾಳವನ್ನು ಹೂಡುತ್ತಾರೆ, ಹೆಚ್ಚು ಉತ್ಪಾದನೆ ಆಗುತ್ತದೆ ಎಂಬ ಕಾರಣದಿಂದ. ಈಗ ಅನೇಕ ಜನ ತಜ್ಞರು ಹೇಳಿದ್ದಾರೆ. ಇವರೇನು ಬಂಡವಾಳ ಹೂಡುತ್ತಾರೆ. ಆ ಬಂಡವಾಳದ ಮೇಲೆ ಶೇಕಡಾ 15–18–12ರಷ್ಟು ಲಾಭ ಸಿಗಬೇಕು. ಆದರೆ ಇದು ಏನಾಗಿದೆ ಎಂದರೆ ವಿದೇಶಿ ಬಂಡವಾಳಗಾರರು 1000 ಕೋಟಿ ರೂಪಾಯಿ ಬಂಡವಾಳ ಹಾಕಿದರೆ, 1400

ಕೋಟಿ ಎಂದು ಸೇರಿಸಿಬಿಡುತ್ತಾರೆ. ಇದರಿಂದ 1000 ಕೋಟಿಗೆ ಬದಲು 1400 ಕೋಟಿಗೆ ನಾವು ವಿದ್ಯುತ್ ದರವನ್ನು ಕೊಡುತ್ತಾ ಹೋಗುತ್ತೇವೆ. ಈ ರೀತಿಯಾಗಿದೆ ಹಿಂದೆ ಏನೊಂದು ಗೊಬ್ಬರ ಕಾರ್ಖಾನೆ ಜೊತೆ ಸರ್ಕಾರ ಒಪ್ಪಂದ ಮಾಡಿ ಒಂದು ದರವನ್ನು ನಿರ್ಧಾರ ಮಾಡಿತ್ತು. ಆ ತರಹ ಆಗಿದೆ ಎಂಬ ಮಾತನ್ನು ನಮ್ಮ ಮಾಜಿ ಪ್ರಧಾನಿಯಾಗಿದ್ದ ಶ್ರೀ ವಿ.ಪಿ. ಸಿಂಗ್ ಅವರು ಒಂದು ಕಡೆ ಹೇಳಿದ್ದಾರೆ.

ಇದು ಆಗಬಾರದು. ಈ ಹೊರೆ ಜನಸಾಮಾನ್ಯರ ಮೇಲೆ ಬೀಳಬಾರದು. ಜನಸಮಾನ್ಯರ ಮೇಲೆ ಇದು ಬೀಳದ ರೀತಿಯಲ್ಲಿ ನೋಡಿಕೊಳ್ಳತಕ್ಕಂಥ ಕರ್ತವ್ಯ ಸರ್ಕಾರದ ಮೇಲಿದೆ. ಕಟ್ಟುನಿಟ್ಟಾಗಿ ಆ ಕೆಲಸವನ್ನು ಸರ್ಕಾರ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆಮೇಲೆ ಈ ವಿದುಚ್ಛಕ್ತಿ ಮತ್ತು ನೀರಿನ ಬಗ್ಗೆ ಒಂದು ಯೋಗ್ಯವಾದ ರೀತಿಯಲ್ಲಿ ಬಳಕೆದಾರರಿಗೆ ಶುಲ್ಕ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಾಲಾಗಿದೆ. ಈ ದೇಶದ ನಮ್ಮ ಸಮಾಜದಲ್ಲಿ ಅತ್ಯಂತ ನಿಕೃಷ್ಟ ಎಂದರೆ, ರೈತ. ಅವನನ್ನು ಕೇಳುವವರೇ ಇಲ್ಲ. ಟಿಬೆಟಿಯನ್ ರೆಫ್ಯೂಜಿಸ್ ತರಹ ರೈತರುಗಳನ್ನು ಟ್ರೀಟ್ ಮಾಡುವ ಅಗತ್ಯ ಇದೆ. ಅವರಿಗೆ ವಿಶೇಷ ಸವಲತ್ತುಗ್ಗಳನ್ನು ಕೊಡುವಂಥ ಅಗತ್ಯ ಇದೆ. ವಿದ್ಯುಚ್ಛಕ್ತಿ ದರವನ್ನು ಯಾರ ಮೇಲಾದರೂ ಹಾಕಿ, ಅದರಿಂದ ರೈತನನ್ನು ಪಾರು ಮಾಡಬೇಕೆಂದು ನಾನು ಹೇಳುತ್ತೇನೆ. ನಮ್ಮ ರೈತರುಗಳ ಪಂಪುಸೆಟ್ಟುಗಳಿಗೆ ಯಾವ ರೀತಿ ವಿದ್ಯುಚ್ಛಕ್ತಿಯನ್ನು ಕೊಡಲಾಗುತ್ತಿದೆ ? ಕ್ವಾಲಿಟಿ ಕರೆಂಟ್ ಕೊಡುತ್ತಿದ್ದೀರಾ ನೀವು ? ವೋಲ್ಟೇಜ್‌ನಲ್ಲಿ ಏರುಪೇರಾಗಿ ಪಂಪುಸೆಟ್ಟುಗಳೆಲ್ಲಾ ಸುಟ್ಟುಹೋಗುತ್ತಿವೆ. ಸುಟ್ಟುಹೋದರೆ ಯಾರು ಹೊಣೆ ? ನೀವು ರಿಪೇರಿ ಮಾಡಿಸಿಕೊಡುತ್ತೀರಾ ? ಕೆ.ಇ.ಬಿ. ನವರು ಮತ್ತು ಕೆ.ಪಿ.ಸಿ.ನವರು ಮಾಡಿರತಕ್ಕಂಥ ಮಜಕ್ಕೆ ನಾವು ದಂಡ ತೆರಬೇಕಾದ ಅಗತ್ಯ ಇಲ್ಲ. ಈ ನಿಗಮಗಳು ಎಷ್ಟರಮಟ್ಟಿಗೆ ನಡೆಯುತ್ತಿವೆಯೆಂದು ಎಲ್ಲರಿಗೂ ಗೊತ್ತು. ಇವರು ಮಾಡತಕ್ಕಂಥ ಉಡಾಫೆ ಕೆಲಸಗಳಿಗೆ, ದರ್ಬಾರುಗಳಿಗೆ ಇವತ್ತು ಕಷ್ಟ ಬಡವ ಬೆಲೆ ತೆರುವುದಕ್ಕೆ ಸಾಧ್ಯವಾಗುವುದಿಲ್ಲ. ಮೊದಲು ಇವರುಗಳನ್ನು ಕಟ್ಟುನಿಟ್ಟಿನ ಶಿಸ್ತಿಗೆ ಒಳಪಡಿಸಲಬೇಕು. ರೈತರುಗಳಿಗೆ ಕ್ವಾಲಿಟಿ ಕರೆಂಟ್ ಕೊಡಬೇಕು. ಕ್ವಾಲಿಟಿ ಕರೆಂಟ್ ಕೊಟ್ಟ ಮೇಲೆ ದರ ಹಾಕತಕ್ಕಂಥಾದ್ದಕ್ಕೆ ಯೋಚನೆ ಮಾಡಬಹುದೆಂದು ಹೇಳಿ, ಒಟ್ಟಿನಲ್ಲಿ ಮಾನ್ಯ ರಾಜ್ಯಪಾಲರು ಹೇಳಿರುವ ರೀತಿಯಲ್ಲಿ ಒಂದು ಪ್ರಾಮಾಣಿಕ, ಪಾರದರ್ಶಕ, ದಕ್ಷ ಸರ್ಕಾರವನ್ನು ಕೊಡಬೇಕು ಹಾಗೂ ಕೊಡುತ್ತಾರೆಂದು ಹೇಳುತ್ತಾ, ಈ ರಾಜ್ಯಪಾಲರ ವಂದನಾ ನಿರ್ಣಯಕ್ಕೆ ಅನುಮೋದನೆ ಮಾಡಿ ಕೆಲವು ವಿಚಾರಗಳನ್ನು ನಾನು ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೆ,ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿ ಇಲ್ಲ. ಇದರ ಬಗ್ಗೆ ಮಾನ್ಯ ಘೋರ್ಪಡೆಯವರು ಏನು ಹೇಳುತ್ತಾರೋ ಗೊತ್ತಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ:– ಮಾನ್ಯ ಅಧ್ಯಕ್ಷರೆ, ನಾನು 1967ರಲ್ಲಿ ಈ ಸಭೆಯಲ್ಲಿದ್ದೆ. ಎಸ್. ಶಿವಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದರು, ಆ ಕಡೆ ಮಾನ್ಯ ನಿಜಲಿಂಗಪ್ಪನವರು ಇದ್ದರು. ಪ್ರಮುಖ ವಿಚಾರಗಳ ಬಗ್ಗೆ ವಿರೋಧಪಕ್ಷದ ನಾಯಕರು ಮಾತನಾಡುವಾಗ ಶಿಷ್ಟಾಚಾರದ ಪ್ರಕಾರ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಇರಬೇಕು. ಇಷ್ಟು ಲಘುವಾಗಿ ಅವರು ಪರಿಗಣಿಸುವುದಾದರೆ ನಾವು ನಮ್ಮ ಮುಖಂಡರಿಗೆ ಭಾಷಣ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಈಗ ಆ ಕಡೆಯ ಯಾರಾದರೂ ಸದಸ್ಯರೇ ಮಾತನಾಡಿಕೊಳ್ಳಲಿ, ಮುಖ್ಯ–ಮಂತ್ರಿಗಳು ಇದ್ದಾಗ ನಾವು ಮಾತನಾಡುತ್ತೇವೆ. ಅದೂ ಅಲ್ಲದೆ ನಾವು ಮಾತನಾಡಲೇಬೇಕೆಂಬ ಚಪಲ ಇಲ್ಲ. ಪೊಲಿಟಿಕಲ್ ಈಕ್ವೇಷನ್ ಬಗ್ಗೆ ಆಳುವ ಪಕ್ಷದವರು ಅರ್ಥ ಮಾಡಿಕೊಳ್ಳಬೇಕು. ಮೊದಲು ದೇವೇಗೌಡರು ವಿರೋಧಪಕ್ಷದ ನಾಯಕರಾಗಿದ್ದಾಗ ಮುಖ್ಯ ಮಂತ್ರಿಗಳು ಇಲ್ಲದೇ ಇದ್ದಾಗ ಅವರು

ಮಾತನಾಡುತ್ತಲೇ ಇರಲಿಲ್ಲ. ಅದ್ದರಿಂದ. ಇವತ್ತು ಮಾತನಾಡುವುದು ಬೇಡ ಎಂದು ನಮ್ಮ ಮುಖಂಡರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಆಡಳಿತ ಪಕ್ಷದವರೇ ಮಾತನಾಡಿಕೊಳ್ಳಲಿ. ಏಕೆ ನಾವು ಮಾತನಾಡಬೇಕು ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮುಖ್ಯ ಮಂತ್ರಿಗಳು ಬರುತ್ತಾರೆ.

ಶ್ರೀ ಹೆಚ್.ಎನ್. ನಂಜೇಗೌಡ:- ಹಿಂದೆ ಸನ್ಮಾನ್ಯ ನಿಜಲಿಂಗಪ್ಪನವರು, ವಿರೋಧ ಪಕ್ಷದ ನಾಯಕರು ಯಾವ ಟೈಮ್‌ಗೆ ಮಾತನಾಡುತ್ತಾರೋ ಆಗ ನಾನು ಅಡ್ಜೆಸ್ಟ್ ಮಾಡಿಕೊಂಡು ಬರುತ್ತೇನೆಂದು ಹೇಳಿ ಹೋಗುತ್ತಿದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆ ಅನಾವಶ್ಯಕ. ಮಾನ್ಯ ನಂಜೇಗೌಡರು ಹಿರಿಯ ಸದಸ್ಯರು. ಅವರು ಏನು ಹೇಳಿದ್ದಾರೋ ಅದನ್ನು ಸರ್ಕಾರ ಅರ್ಥ ಮಾಡಿಕೊಳ್ಳುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಕಾರ್ಯ ನಿಮಿತ್ತ ಇಲ್ಲೇ ಇದ್ದಾರೆ, ತಕ್ಷಣ ಬರುತ್ತಾರೆ, ವಿರೋಧ ಪಕ್ಷದ ನಾಯಕರು ಚರ್ಚೆ ಪ್ರಾರಂಭ ಮಾಡುವ ಹೊತ್ತಿಗೆ ಅವರು ಬರುತ್ತಾರೆ.

ಶ್ರೀ ವೈ. ರಾಮಕೃಷ್ಣ:- ಒಂದು ತಿಂಗಳು ಹಿಂದೆಯಷ್ಟೇ ಎಲೆಕ್ಷನ್ ಆಗಿ ವಿಧಾನ ಸಭೆಗೆ ಯುವಕರು ಆರಿಸಿ ಬಂದಿದ್ದಾರೆ. ಇವರು ಮಾತನಾಡತಕ್ಕಂಥ ವಿಷಯದ ಬಗ್ಗೆ ಅಧಿಕಾರಿಗಳಿಗೆ, ಮಂತ್ರಿಗಳಿಗೆ ಹಾಗೂ ಮುಖ್ಯ ಮಂತ್ರಿಗಳಿಗೆ ಕಾತರ ಇರಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ನ್ಯೂನತೆಗಳ ಬಗ್ಗೆ, ಬೆಳೆಗಳ ಬಗ್ಗೆ, ಶಾಲಾ ಕಟ್ಟಡಗಳ ಬಗ್ಗೆ ಮಾತನಾಡುವ ವಿಷಯವನ್ನು ಯಾರು ಕೇಳಬೇಕು ? ಇದನ್ನೆಲ್ಲಾ ಸರಿಪಡಿಸತಕ್ಕಂಥವರು ಯಾರು ? ಅವರೇ ಇಲ್ಲಿ ಇಲ್ಲವೆಂದ ಮೇಲೆ ನಮ್ಮ ನಾಯಕರು ಯಾರಿಗೋಸ್ಕರ ಮಾತನಾಡಬೇಕು ? ಇಂಥ ಪ್ರಸಂಗಗಳು ಹಿಂದೆ ಬಂದಿದ್ದಾಗ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ರೆಫ್ಯೂಸ್ ಮಾಡಿದ ಉದಾಹರಣೆ ಇವೆ. 108 ಜನ ಸದಸ್ಯರು ಇರತಕ್ಕಂಥ ವಿರೋಧ ಪಕ್ಷದ ಸದಸ್ಯರುಗಳು ಹೇಳತಕ್ಕಂಥ ವಿಷಯವನ್ನು ಕೇಳುವುದಕ್ಕೆ ಅಧಿಕಾರಿಗಳೂ ಇಲ್ಲ, ಮಂತ್ರಿಗಳೂ ಇಲ್ಲವೆಂದರೆ, ಈ ಮನೆಯನ್ನು ಅವರು ಎಷ್ಟು ಲಘುವಾಗಿ ನೋಡುತ್ತಿದ್ದಾರೆಂದು ತಾವು ಇದರ ಬಗ್ಗೆ ಆಲೋಚನೆ ಮಾಡಿ. ಅದಕ್ಕೋಸ್ಕರ ನಮ್ಮ ನಾಯಕರು ಈಗ ಭಾಷಣ ಮಾಡಬಾರದೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ:- ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಪಕ್ಷದ ವತಿಯಿಂದಲೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇವೆ. ವಿರೋಧ ಪಕ್ಷದ ನಾಯಕರು ಹಾಗೂ ಈ ಕಡೆ ಇರುವ ಸದಸ್ಯರುಗಳು ಮಾತನಾಡುವಾಗ ಮುಖ್ಯ ಮಂತ್ರಿಗಳು ಇಲ್ಲದೆ ಇರುವುದು ಸತ್ಸಂಪ್ರದಾಯವಲ್ಲ. ಕೆಲವು ಸಲ ಪ್ರಾರಂಭದಿಂದ ಕೊನೆಯವರೆಗೂ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಇರಲಿಕ್ಕಾಗುವುದಿಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಕನಿಷ್ಟ ಪಕ್ಷ ಚರ್ಚೆ ಪ್ರಾರಂಭವಾಗುವಾಗ ಮಾನ್ಯ ಮುಖ್ಯ ಮಂತ್ರಿಗಳು ಇರಬೇಕಾಗುತ್ತದೆ. ಆದ್ದರಿಂದ ತಾವು ಅದರ ಬಗ್ಗೆ ಒಂದು ಎಚ್ಚರಿಕೆ ಮಾತನ್ನು ಹೇಳುವುದು ಸೂಕ್ತವೆಂದು ನನಗನಿಸುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರುಗಳು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೋ ಅದನ್ನು ನಾನು ಪೂರ್ಣವಾಗಿ ಒಪ್ಪುತ್ತೇನೆ. ಇದು ಮೊದಲನೆಯ ಸಾರಿ ಏನಲ್ಲ. ಹಿಂದೆ ನಾವು ಮಾತನಾಡುವಾಗಲೂ ಮುಖ್ಯ ಮಂತ್ರಿಗಳು ಇರುತ್ತಿರಲಿಲ್ಲ. ಆಮೇಲೆ ನಾವು ಗಲಾಟೆ ಮಾಡಿ ಹೇಳಿ ಕಳುಹಿಸಿದ ಮೇಲೆ ಬರುತ್ತಿದ್ದರು. ಈಗ ನಾವು ಹೇಳಿ ಕಳುಹಿಸಿದ್ದೇವೆ. ತಾವು ಚರ್ಚೆ ಪ್ರಾರಂಭ ಮಾಡಿ. ಇನ್ನು ಐದು ನಿಮಿಷದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಗೆ ಬರುತ್ತಿದ್ದಾರೆ.

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡಲಿ. I will ensure CM's presence here within five minutes.

ಶ್ರೀ ವೈ. ರಾಮಕೃಷ್ಣ:- ಅವರ ಕಡೆಯವರೇ ಯಾರಾದರೂ ಭಾಷಣ ಮಾಡಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಗೃಹ ಇಲಾಖೆಗೆ ಸಂಬಂಧಪಟ್ಟ ಹಾಗೆ, ಒಂದು ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇರುವುದರಿಂದ, ವಿರೋಧ ಪಕ್ಷದ ನಾಯಕರು ಮಾತನಾಡುವ ಮುನ್ನ ನನಗೆ ತಿಳಿಸಿ ಎಂದು ನನಗೆ ಹೇಳಿಹೋಗಿದ್ದಾರೆ. ವಂದನಾ ನಿರ್ಣಯಣದ ಮೇಲೆ ಅನುಮೋದನೆ ಮಾಡುತ್ತಾ ಕೃಷ್ಣಾರವರು ಮಾತನಾಡುತ್ತಿದ್ದಾರೆ. ಇದರ ಬಗ್ಗೆ ಇಷ್ಟೊಂದು ತೀಕ್ಷ್ಣವಾದ ಪ್ರತಿಕ್ರಿಯೆ ನಮ್ಮ ನಾಯಕರುಗಳಿಗೆ ಏಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ಇನ್ನೂ ಮಾತು ಮುಗಿದೇ ಇಲ್ಲ.

ಅಧ್ಯಕ್ಷರು:- ಅವರದು ಮುಕ್ತಾಯವಾಯಿತು.

ಶ್ರೀ ಹೆಚ್.ಎನ್. ನಂಜೇಗೌಡ:- ಗೃಹ ಮಂತ್ರಿಯವರು ಆಗಲೇ ನಿದ್ದೆ ಮಾಡಿ ಮುಗಿಸಿದ್ದಾರೆಂದು ತಿಳಿದುಕೊಂಡಿದ್ದೆ. ಅವರು ಆಗಲೇ ಮಾತು ಮುಗಿಸಿ ಆಯಿತು. ಏಕೆ ಗೊತ್ತಾಗಲಿಲ್ಲವೆ ತಮಗೆ ?

ಅಧ್ಯಕ್ಷರು:- ಚರ್ಚೆಯನ್ನು ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಲಿ.

ಶ್ರೀ ವೈ. ರಾಮಕೃಷ್ಣ:- ಅವರ ಕಡೆಯವರೇ ಮಾತನಾಡಲಿ, ನಾವು ಅದನ್ನು ಕೇಳುತ್ತೇವೆ. ನಂತರ ವಿರೋಧ ಪಕ್ಷದ ನಾಯಕರು ಭಾಷಣ ಮಾಡುತ್ತಾರೆ.

ಅಧ್ಯಕ್ಷರು:- ತಮ್ಮ ಭಾವನೆಗಳನ್ನು ನಾನು ಪೂರ್ಣ ಗೌರವಿಸುತ್ತೇನೆ. ಈ ಸದನದ ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ಇರತಕ್ಕಂಥ ಪ್ರಾಮುಖ್ಯತೆ ಬಗ್ಗೆ ಕೂಡ ನಾನು ತಿಳಿದುಕೊಂಡಿದ್ದೇನೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಇನ್ನು ಕೆಲವೇ ನಿಮಿಷಗಳಲ್ಲಿ ಇಲ್ಲಿಗೆ ಬರಲಿದ್ದಾರೆ. ಕಲಾಪ ನಿಲ್ಲಿಸುವುದು ಬೇಡ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆ ಪ್ರಾರಂಭ ಮಾಡಲಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಮಾತು ಶುರು ಮಾಡುವಷ್ಟು ಹೊತ್ತಿಗೆ ಮುಖ್ಯ ಮಂತ್ರಿಗಳು ಬರುತ್ತಾರೆ. ನಾನು ವಕಾಲತ್ತು ವಹಿಸುತ್ತಿದ್ದೇನೆ. ಇದು ನನ್ನ ಕರ್ತವ್ಯ, ಅವರು ಹಾಜರಾಗುತ್ತಾರೆ. ದಯಮಾಡಿ ಚರ್ಚೆ ಪ್ರಾರಂಭ ಮಾಡಿ. ಅದೋ ಬಂದೇ ಬಿಟ್ಟರು.

(ಸನ್ಮಾನ್ಯ ಮುಖ್ಯ ಮಂತ್ರಿಯವರು ಸದನದೊಳಗೆ ಬಂದರು)

ಶ್ರೀ ಹೆಚ್.ಡಿ. ದೇವೇಗೌಡ:- ಸನ್ಮಾನ್ಯ ಅಧ್ಯಕ್ಷರೆ, ಈ ಸಭೆಗೆ ಅಗೌರವ ತೋರಿಸಬೇಕೆಂಬ ಯಾವುದೇ ಕಾರಣದಿಂದ ನಾನು ಹೊರಗೆ ಇರಲಿಲ್ಲ. ರಷ್ಯನ್ ಡೆಲಿಗೇಷನ್ ಬಂದಿದ್ದು ಅವರಿಗೆ ಅಪಾಯಿಂಟ್‌ಮೆಂಟ್ ಕೊಟ್ಟಿದ್ದರಿಂದ ಅಲ್ಲಿಗೆ ಹೋಗಿದ್ದೇನೆಯೇ ಹೊರತು ಈ ಸಭೆಗೆ ಅಗೌರವ ತೋರಿಸಬೇಕೆಂದು ಅಲ್ಲ.

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನಾನೂ ಕೂಡ ಬೆಂಬಲವನ್ನು ಸೂಚಿಸಬೇಕೆಂಬ ಅಪೇಕ್ಷೆಯೂ ಇದೆ. ಆದರೆ ರಾಜ್ಯದ ಜನರಿಗೆ ಯಾವ ಭರವಸೆಗಳನ್ನು ಕೊಟ್ಟು ಜನತಾದಳದ ಸರಕಾರವು ಅಧಿಕಾರಕ್ಕೆ ಬಂದಿದೆಯೋ ಆ ಸರಕಾರವು ರಾಜ್ಯಪಾಲರ ಭಾಷಣದಲ್ಲಿಯೂ ಕೂಡ ಕೊಟ್ಟಂಥ ಭರವಸೆಗಳನ್ನು ಈಡೇರಿಸುವಂಥ ಯಾವುದೇ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡದೇ ಇರುವುದರಿಂದ ಮತ್ತು ಯಾವುದೇ ಒಂದು ಸ್ಪಷ್ಟವಾದ ಭರವಸೆಗಳನ್ನು ಕೊಡದೇ ಇರುವ ಕಾರಣ ನಾನು ಅನಿವಾರ್ಯವಾಗಿ ರಾಜ್ಯಪಾಲರ ಭಾಷಣವನ್ನು ವಿರೋಧ ಮಾಡಿ ನನ್ನ ಮಾತುಗಳನ್ನು ಪ್ರಾರಂಭ ಮಾಡುತ್ತಾ ಇದ್ದೇನೆ. ಸನ್ಮಾನ್ಯ ಸಭಾ

ನಾಯಕರು ಇಲ್ಲಿಗೆ ಬರುವುದಕ್ಕಿಂತ ಮುಂಚೆ ಇಲ್ಲಿ ಒಂದು ಘಟನೆ ನಡೆಯಿತು. ಮಾನ್ಯ ವಾಟಾಳ್ ನಾಗರಾಜ್‌ರವರು ಕೂಡ ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಈ ಗೌರವಾನ್ವಿತ ಸದನದ ಎರಡೂ ಕಡೆಗಳಲ್ಲಿ ಹೊಸದಾಗಿ ಆಯ್ಕೆಯಾಗಿರತಕ್ಕಂಥ ಸದಸ್ಯರು ಇರತಕ್ಕಂಥ ಈ ಸಂದರ್ಭದಲ್ಲಿ ಸದನದಲ್ಲಿ ಹಿರಿಯ ಸಚಿವರುಗಳು, ಅಧಿಕಾರಿಗಳು ಉಪಸ್ಥಿತರಿಲ್ಲದಿದ್ದರೆ ಅದರಿಂದ ಹೊಸಬರಿಗೆ ಸರಿಯಾದಂಥ ಮಾರ್ಗದರ್ಶನ ಮಾಡಿದಂತಾಗುವುದಿಲ್ಲ. ವಿರೋಧ ಪಕ್ಷದ ನಾಯಕರು ಇಂಥ ಮಹತ್ವದ ವಿಚಾರದ ಮೇಲೆ ತಮ್ಮ ಭಾಷಣವನ್ನು ಪ್ರಾರಂಭ ಮಾಡುವಾಗ ಸಂಬಂಧಪಟ್ಟವರು ಇರತಕ್ಕಂಥಾದ್ದು ನಡೆದುಕೊಂಡು ಬಂದಂಥ ಸತ್‌ಸಂಪ್ರದಾಯ. ಅದನ್ ಅನುಸರಿಸಿಕೊಂಡು ಹೋಗಬೇಕಂಬ ವಿಚಾರಗಳು ವ್ಯಕ್ತವಾಯಿತು. ಆದರೆ ಮಾನ್ಯ ಸಭಾನಾಯಕರು ಯಾವ ಅನಿವಾರ್ಯ ಕಾರಣಗಳಿಂದಾಗಿ ಉಪಸ್ಥಿತರಿರಲಿಲ್ಲ ಎಂಬ ಬಗ್ಗೆ ಅವರು ಈಗ ಬಂದು ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ. ಅದು ಒಪ್ಪತಕ್ಕಂಥ ವಿಚಾರವಾಗಿದೆ. ರಾಜ್ಯದ ಜನತೆಯು ಹೊಸ ವರ್ಷದ ಆರಂಭಕ್ಕೆ ಹೊಸ ಸರಕಾರವನ್ನು ಆಯ್ಕೆ ಮಾಡಿದ್ದಾರೆ. ಹೊಸ ಆಡಳಿತ ವ್ಯವಸ್ಥೆಯನ್ನು ತಂದಿರತಕ್ಕಂಥ ಜನತಾ ಜನಾರ್ಧನರಿಗೆ ನಾನು ಮೊದಲಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಇದ್ದೇನೆ. ಮುಂಬರುವ ಸಂಕ್ರಾಂತಿಯು ಈ ರಾಜ್ಯದ ಜನತೆಗೆ ಸುಖ–ಶಾಂತಿ ಮತ್ತು ಸಮೃದ್ಧಿಯನ್ನು ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಕಳೆದ ಐದು ವರ್ಷಗಳಲ್ಲಿ ಕಾಂಗ್ರೆಸ್ ಸರಕಾರದವರು ನೀಡಿದ ಆಡಳಿತವನ್ನು ಮಹಾಜನತೆಯು ನೋಡಿದ್ದಾರೆ. ಆ ಸಂದರ್ಭದಲ್ಲಿ ಒಂದು ರೀತಿಯ ರಾಜಕೀಯ ಅಸ್ಥಿರತೆಯು ಎಲ್ಲಾ ಸಂದರ್ಭಗಳಲ್ಲಿಯೂ ಕಾಣುತ್ತಿತ್ತು. ಎಲ್ಲಾ ರಂಗಗಳಲ್ಲಿಯೂ ವ್ಯಾಪಕ ಭ್ರಷ್ಟಾಚಾರ ಆರ್ಥಿಕ ಹಿನ್ನಡೆ, ಚುರುಕಿಲ್ಲದ ಆಡಳಿತ ವ್ಯವಸ್ಥೆ ಮುಂತಾದ ಅವ್ಯವಸ್ಥೆಗಳನ್ನು ನೋಡಿದ ಜನರು ಇದ್ದ ಸರಕಾರದ ವಿರುದ್ಧ ತನ್ನದೇ ಆದಂಥ ಅಭಿಪ್ರಾಯವನ್ನು ಚುನಾವಣೆಯ ಮೂಲಕ ವ್ಯಕ್ತಪಡಿಸಿದ್ದಾರೆ. ರಾಜ್ಯದ ಇತಿಹಾದಲ್ಲಿಯೇ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಮೂರನೇ ಸ್ಥಾನಕ್ಕೆ ತಳ್ಳಿದ್ದಾರೆ. ಹಾಗೆಯೇ ಭಾರತೀಯ ಜನತಾ ಪಕ್ಷಕ್ಕೆ ಅಧಿಕೃತ ವಿರೋಧ ಪಕ್ಷವಾಗಿ ಕೆಲಸ ಮಾಡುವಂಥ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಜನರ ಅಣತಿಯಂತೆ ಜನತಾದಳ ಸರಕಾರವು ಅಸ್ತಿತ್ವಕ್ಕೆ ಬಂದಿದೆ. ಈ ಸಂದರ್ಭದಲ್ಲಿ ನಾನು ಇಲ್ಲಿರುವಂಥ ನನ್ನ ಶಾಸಕಮಿತ್ರರುಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾವೆಲ್ಲರೂ ಕೂಡ ಜನರಿಂದ ಪಾಠವನ್ನು ಕಲಿಯಬೇಕಾಗಿದೆ. ನಮ್ಮನ್ನು ಇಲ್ಲಿಗೆ ಆಯ್ಕೆ ಮಾಡಿ ಕಳುಹಿಸಿದ ನಮ್ಮ ಮಾಲೀಕರು ಹೊರಗಡೆ ಇದ್ದಾರೆ. ಅವರು ಈ ಸದನದಲ್ಲಿ ಇಲ್ಲ, ಅವರ ಪ್ರತಿನಿಧಿಗಳಾಗಿ ನಾವು ಇಲ್ಲಿ ಕರ್ತವ್ಯ ನಿರ್ವಹಿಸಬೇಕಾಗಿದೆ. ರಾಜ್ಯ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಜನರ ನೋವು ನಲಿವಿಗೆ ನಾವು ಸ್ಪಂಧಿಸಬೇಕಾಗಿದೆ. ನಾವು ಒಂದೊಂದು ಮಾತನ್ನು ಆಡುವಾಗಲೂ ಕೂಡ ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ ಜನರ ಹಿತಾಸಕ್ತಿಗೆ ಅನುಗುಣವಾಗಿ ಆಡಬೇಕು. ಅದನ್ನು ನಾವೆಲ್ಲರೂ ಗಮನಿಸಿ ಕರ್ತವ್ಯ ನಿರ್ವಹಣೆ ಮಾಡಬೇಕಾಗಿದೆ ಎನ್ನುವ ಮಾತನ್ನು ನಮ್ರವಾಗಿ ಹೇಳಬಯಸುತ್ತೇನೆ.

ನಮ್ಮ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳಲ್ಲಿ ನನ್ನ ವಿನಂತಿ ಏನೆಂದರೆ, ತಾತ್ವಿಕವಾಗಿ ನಮ್ಮಲ್ಲಿ ಅನೇಕ ಭಿನ್ನಾಭಿಪ್ರಾಯಗಳು ಇರಬಹುದು. ಸದನದಲ್ಲಿ 108 ಜನ ಮಾನ್ಯ ಸದಸ್ಯರುಗಳು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಂಡು ಆಡಳಿತ ಪಕ್ಷವನ್ನು, ಅದರ ಕಾರ್ಯವೈಖರಿಯನ್ನು ಮಹಾ ಜನರ ಹಿತಕ್ಕೋಸ್ಕರವಾಗಿ ವಿಮರ್ಶಿಸುವಂಥ ಸಂದರ್ಭದಲ್ಲಿ ನಾವೆಲ್ಲರೂ ಒಂದಾಗಿ ಈ ನಾಡಿನ ಜನರ ಹಿತರಕ್ಷಣೆಯನ್ನು ಪ್ರಾಮುಖ್ಯವಾಗಿ ಪರಿಗಣಿಸಬೇಕು. ನಾಡಿನ ಜನರ ಹಿತರಕ್ಷಣೆಯ ಪ್ರಶ್ನೆಯು ಬಂದಾಗ ನಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ, ಸಮರ್ಥವಾಗಿ ವಿರೋಧಿ ಪಕ್ಷದ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಕರ್ತವ್ಯಶೀಲರಾಗಿರಬೇಕೆಂದು ಹೇಳುತ್ತಾ ಈ ಕಡೆಯಲ್ಲಿ ಕುಳಿತಿರತಕ್ಕಂಥ ಎಲ್ಲಾ ಮಾನ್ಯ ವಿರೋಧಿಪಕ್ಷದ ಸದಸ್ಯರುಗಳ ಸಹಕಾರವನ್ನು ಕೋರುತ್ತೇನೆ. ನಮ್ಮ

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನತಾ ಜನಾರ್ಧನನೇ ನಿಜವಾದ ದೇವರು. ಅವರು ನಮ್ಮನ್ನು ಚುನಾವಣೆಯ ಮೂಲಕ ಆರಿಸಿ ಕಳುಹಿಸಿರುವುದರಿಂದ ನಾವು ಇಲ್ಲಿ ಉಪಸ್ಥಿತರಿದ್ದೇವೆ.

ಚುನಾಯಿತ ಪ್ರತಿನಿಧಿಗಳನ್ನು ಇಲ್ಲಿಗೆ ಕಳುಹಿಸುವ ಜನತೆ ನಮ್ಮ ಪಾಲಿನ ದೇವರು ಎಂದು ತಿಳಿದುಕೊಂಡು ನಾವು ಎಲ್ಲಿಯವರೆಗೆ ಕೆಲಸ ಮಾಡುವುದಿಲ್ಲ ಅಲ್ಲಿಯವರೆಗೆ ಈ ಪ್ರಜಾತಂತ್ರ ವ್ಯವಸ್ಥೆಗೆ ಒಂದು ಅರ್ಥ ಬರುವುದಿಲ್ಲ ಎನ್ನುವ ಮಾತನ್ನು ಅವರು ಪದೇಪದೇ ಹೇಳುತ್ತಿದ್ದರು. ಈಗಲಾದರೂ ನಾವು ಆ ಕಡೆಗೆ ವಿಶೇಷವಾದ ಗಮನವನ್ನು ಕೊಡಬೇಕಾಗುತ್ತದೆ. ಒಂದು ಸಂತೋಷ, ಆ ಕಡೆ ರಾಗಿ ಮುದ್ದೆ ಉಣ್ಣುವಂತಹ ಮುಖ್ಯಮಂತ್ರಿ, ರೈತರ ಹಿನ್ನೆಲೆಯಲ್ಲಿ ಬಂದಿರುವವರು, ಈ ಕಡೆ ನನ್ನಂತಹ ಒಬ್ಬ ಸಾಮಾನ್ಯ ವ್ಯಕ್ತಿ. ನಾನು ವಿದ್ಯಾವಂತನಲ್ಲ, ಮಣ್ಣಿನ ಮಕ್ಕಳ ಸಮಸ್ಯೆಗಳನ್ನು ತೆಗೆದುಕೊಂಡು ಹೋರಾಟ ಮಾಡಿದ ಒಬ್ಬ ಸಾಮಾನ್ಯ ವ್ಯಕ್ತಿ ನಾನು. ನಾನೂ ರಾಗಿ ಮುದ್ದೆ ಉಣ್ಣುವವನು. ಅಂದರೆ ರಾಗಿ ಮುದ್ದೆ ಉಣ್ಣುವಂತಹ ಮುಖ್ಯಮಂತ್ರಿ ಆ ಕಡೆ, ರಾಗಿ ಮುದ್ದೆ ಉಣ್ಣುವಂತಹ ವಿರೋಧ ಪಕ್ಷದ ನಾಯಕರ ಇರುವಂತಹ ಈ ಸಂದರ್ಭದಲ್ಲಿ, ಈ ಮಣ್ಣಿನ ಮಕ್ಕಳಿಗೆ ನ್ಯಾಯ ಈಗಲಾದರೂ ಸಿಗಬಹುದೇನೋ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಅಧ್ಯಕ್ಷರೇ, ಅದು ಸರಿ, ಇಬ್ಬರು ರಾಗಿ ತಿನ್ನುವವರ ಮಧ್ಯದಲ್ಲಿ ರೊಟ್ಟಿ ತಿನ್ನುವವರ ಗತಿಯೇನು ? ಜೋಳದ ರೊಟ್ಟಿಯವರ ಗತಿಯೇನು ?

ಶ್ರೀ ವಾಟಾಳ್ ನಾಗರಾಜ್:– ಇಡೀ ಸದನದಲ್ಲಿ ಎಲ್ಲರೂ ರಾಗಿಮುದ್ದೆ ಊಟಮಾಡುವವರೇ, ಅದರಲ್ಲೇನೂ ಅನುಮಾನವಿಲ್ಲ. ಆದ್ದರಿಂದ ಯಡಿಯೂರಪ್ಪನವರು ಬರೀ ಅವರಿಬ್ಬರಿಗೆ ಹೇಳಿಕೊಂಡರೆ ನಾನಂತೂ ಬಹಳ ಆಕ್ಷೇಪಣೆ ಮಾಡಬೇಕಾಗುತ್ತದೆ ಅಂತಿಮವಾಗಿ ಧರಣಿ ಮಾಡಬೇಕಾಗುತ್ತದೆ ಈ ವಿಚಾರದಲ್ಲಿ.

ಅಧ್ಯಕ್ಷರು:– ವಿರೋಧಪಕ್ಷದವರು ಮಾತನಾಡುವಾಗ ಹೆಚ್ಚು ಇಂಟರಪ್‌ಶನ್ಸ್ ಸಂಪ್ರದಾಯವಲ್ಲ, ನಾನು 12 ವರ್ಷ ಕೆಲಸ ಮಾಡಿ ನೋಡಿದ್ದೇನೆ. ವಿರೋಧಪಕ್ಷದ ನಾಯಕರು ಮಾತನಾಡುತ್ತಾರೆ ಎಂದರೆ ಒಂದ್ಸಾರಿ ಎರಡು ಸಾರಿ ಎದ್ದುನಿಂತುಕೊಳ್ಳುವುದು ಸೂಕ್ತವೇ ವಿನಹ ಪದೇಪದೇ ಎದುನಿಲ್ಲುವುದು ಅಷ್ಟು ಸೂಕ್ತವಲ್ಲ.

ಶ್ರೀ ವಾಟಾಳ್ ನಾಗರಾಜ್:– ಹಾಗಾದರೆ ಅವರು ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳುವಾಗ ನಾವು ಬಾಯಿಯಲ್ಲಿ ಏನು ಹಾಕಿಕೊಂಡಿರಬೇಕು ? ಚೆನ್ನಾಗಿದೆ ನಿಮ್ಮದು.

• ಅಧ್ಯಕ್ಷರು:– ಪರಿಸ್ಥಿತಿಯನ್ನು ಸರಿಯಾಗಿ ಹತೋಟಿಯಲ್ಲಿಟ್ಟು ಕೊಂಡು ಮಾತನಾಡುವ ವಿರೋಧಪಕ್ಷದ ನಾಯಕರಿಗೆ ಜವಾಬ್ದಾರಿ ಇದೆ. ಹಾಗೆಂದು ನಾನು ಭಾವಿಸಿಕೊಳ್ಳುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ವಾಕ್ಯ ಪೂರ್ಣ ಮಾಡಲು ಅವರು ಬಿಡಲೇ ಇಲ್ಲ. ನಾನು ಹೇಳಿದೆ, ರಾಗಿ ಮುದ್ದೆ ಉಣ್ಣುವವರು ಬಹಳ ಜನ ನಾವಿದ್ದೇವೆ. ಗ್ರಾಮೀಣ ಜನ ಹಿನ್ನೆಲೆಯಿಂದ ಬಂದವರು, ಆದರೆ ಮೊದಲನೆಯ ಬಾರಿಗೆ ಆ ಕಡೆ ಕುಳಿತಿರುವ ಸಭಾನಾಯಕರು ರಾಗಿ ಮುದ್ದೆ ಉಣ್ಣುವವರು, ಈ ಕಡೆ ರಾಗಿಮುದ್ದೆ ಉಣ್ಣುವಂತಹ ವಿರೋಧಪಕ್ಷದ ನಾಯಕ ನಾನಿಲ್ಲಿ ಕುಳಿತಾಗ ಈ ರಾಗಿ ಮುದ್ದೆ ಉಣ್ಣುವ ನಾವೆಲ್ಲ ಒಟ್ಟಿಗೆ ಸೇರಿ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಇಡೀ ಉತ್ತರ ಕರ್ನಾಟಕ ಬಿಟ್ಟಹಾಗೆ ಆಗುತ್ತದೆ. ಏಕೆಂದರೆ

ದಕ್ಷಿಣ ಕನ್ನಡ ಕೊಡಗು ಗುಲ್ಬರ್ಗ ಬೀದರ್, ರಾಯಚೂರು, ಬಳ್ಳಾರಿ ಇವೆಲ್ಲ ಬಿಟ್ಟು ನೀವಿಬ್ಬರೇ ಆಳಬೇಕೂಂದರೆ ಬೇರೆ ರಾಜ್ಯವಾಗುತ್ತದೆ ಅಷ್ಟೆ. ಅದಕ್ಕೇ ವಿಚಾರ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅವರು ಹೇಳಿದ್ದುದು ಸರಿ ಇದೆ. ರಾಗಿಮುದ್ದೆ ಉಣ್ಣುವವರು ಜೋಳದರೊಟ್ಟಿ ತಿನ್ನುವವರು. ಇಬ್ಬರೂ ಸೇರಿ ಒಂದು ಬದಲಾವಣೆ ತರುವಂತಹ ಪ್ರಾಮಾಣಿಕ ಪ್ರಯತ್ನ ಮಾಡೋಣ. 224 ಶಾಸಕರು ಇರುವ ಈ ಸದನದಲ್ಲಿ ಆಡಳಿತ ಪಕ್ಷದಲ್ಲಿ 115 ಜನ, ವಿರೋಧಪಕ್ಷದಲ್ಲಿ 108 ಕುಳಿತು ಕೊಳ್ಳುವಂತಹ ವಾದ ಟೀಕೆ ಪರಸ್ಪರ ಚರ್ಚೆ ಮಾಡಿ ಒಂದು ಒಮ್ಮತಾಭಿಪ್ರಾಯಕ್ಕೆ ಬಂದು ಜನಹಿತಕ್ಕಾಗಿ ಪಕ್ಷದ ಪ್ರತಿಷ್ಠೆಗಳನ್ನು ಬಿಟ್ಟು ಆ ದಿಕ್ಕಿನಲ್ಲಿ ಮುಂದೆ ಹೋಗೋಣ. ಹೊಸ ನಾಂದಿಯನ್ನು ಹಾಕುವಂತಹ ಪ್ರಯತ್ನ ಮಾಡೋಣ ಎಂದು ಈ ಸಂದರ್ಭದಲ್ಲಿ ನಾನು ಹೇಳಲು ಇಷ್ಟಪಡುತ್ತೇನೆ. ಅಧ್ಯಕ್ಷರೆ, ನಿನ್ನ ಸಭಾಧ್ಯಕ್ಷರು 10ನೇ ವಿಧಾಸಭೆಯ ನಡವಳಿಕೆಗಳು ಹೇಗಿರಬೇಕೆಂದು ಒಂದು ದಿಕ್ಸೂಚಿಯ ಮಾತು ಹೇಳಿದ್ದಾರೆ. ನಮ್ಮೆಲ್ಲರ ಯಜಮಾನರು ವಿಧಾನಮಂಡಲದ ಹೊರಗಿದ್ದಾರೆ ಅವರು ಬೇಸರಗೊಳ್ಳದಂತೆ, ಪಶ್ಚಾತ್ತಾಪ ಪಡದಂತೆ ನಮ್ಮೆಲ್ಲರ ನಡವಳಿಕೆ ಇರಬೇಕೆಂದು ಹೇಳಿದ್ದಾರೆ, ಮಾತಿನಲ್ಲಿ ಬೆಳಕಿರಲಿ ಬೆಂಕಿ ಬೇಡ ಎಂಬ ಮಾತು ಸಹ ಹೇಳಿದ್ದಾರೆ.

ಅವರು ಏನು ಅಪೇಕ್ಷೆ ವ್ಯಕ್ತಪಡಿಸಿದ್ದಾರೆ. ಆ ಹಿನ್ನೆಲೆಯಲ್ಲಿ ಇಲ್ಲಿಯ ಕಾರ್ಯಕಲಾಪ ನಡೆಯಬೇಕೆಂಬುದು ನನ್ನ ಅಪೇಕ್ಷೆ ಇದು. ಆ ದಿಕ್ಕಿನಲ್ಲಿ ಪ್ರಾಮಾಣಿಕವಾಗಿ ನಾವೆಲ್ಲ ಪ್ರಯತ್ನ ಮಾಡೋಣ. ವಿರೋಧ ಪಕ್ಷದ ನಾಯಕರಾಗಿ ನಾನು ಒಂದು ಭರವಸೆಯನ್ನು ಈ ಸದನದಲ್ಲಿ ಕೊಡಬಯಸುತ್ತೇನೆ. ಕೇವಲ ಟೀಕೆಗಾಗಿ ನಾವು ಟೀಕೆ ಮಾಡುವುದಿಲ್ಲ. ವಿರೋಧ ಮಾಡಬೇಕು ಎನ್ನುವುದಕ್ಕೋಸ್ಕರ ವಿರೋಧ ವ್ಯಕ್ತಪಡಿಸುವಂತಹ ಕೆಲಸ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ರಚನಾತ್ಮಕ ವಿರೋಧ ಪಕ್ಷವಾಗಿ ನಾವು ಕೆಲಸ ಮಾಡುವುದಕ್ಕೆ ಸಿದ್ಧರಿದ್ದೇವೆ. ಸರಕಾರ ನಡೆಸುವವರೂ ಸಹ ಜನ ಹಿತ ನಿರ್ಧಾರವನ್ನು ಕೈಗೊಂಡರೆ ನಿಮ್ಮ ಜೊತೆಯಲ್ಲಿ ನಾವೂ ನಿಲ್ಲುತ್ತೇವೆ. ದಾರಿ ತಪ್ಪಿದರೆ ಜನ ಹಿತ ಮರೆತು ಹಿಂದಿನ ದಾರಿಯಲ್ಲಿ ಹೋಗುವಂತಹ ಪ್ರಯತ್ನ ಮಾಡಿದರೆ ವಿಧಾನ ಮಂಡಲದ ಒಳಗೆ ಹೊರಗೆ ಅನಿವಾರ್ಯವಾಗಿ ನಾವು ವ್ಯಾಪಕವಾಗಿ ಹೋರಾಟ ಮಾಡಬೇಕಾದಂಥಹ ಪರಿಸ್ಥಿತಿಗೆ ತರಬೇಡಿ ಎಂದು ವಿನಂತಿಸುತ್ತೇನೆ. ಜನರ ಹಿತಕ್ಕಾಗಿ ಕಾವಲು ನಾಯಿಯಂತೆ ವಾಚ್ ಡಾಗ್ ತರಹ ವಿರೋಧ ಪಕ್ಷದ ಪಾತ್ರವನ್ನು ನಿರ್ವಹಿಸುವುದಕ್ಕೆ ಸಿದ್ಧರಿದ್ದೇವೆ. ಅಧಿಕೃತ ವಿರೋಧ ಪಕ್ಷ ಅಂದರೆ ಹೇಗೆ ಇರಬೇಕೆಂಬ ಬಗ್ಗೆ ಒಂದು ಮಾತನ್ನು ಪ್ರಮಾಣ ಪೂರ್ವಕವಾಗಿ ಈ ನಾಡಿನ 5 ಕೋಟಿ ಜನರಿಗೆ ಹೇಳಬಯಸುತ್ತೇನೆ. ಸರಕಾರದ ಯಾವುದೇ ಮುಲಾಜಿಗೆ ಒಳಗಾಗದೆ ಈ ನಾಡಿನ ಜನರ ಹಿತಕ್ಕಾಗಿ ನಮ್ಮೆಲ್ಲರ ಈ ಕಡೆ ಕುಳಿತಿರುವ ವಿರೋಧ ಪಕ್ಷದ ಶಾಸಕರ ಸಹಕಾರದೊಂದಿಗೆ ಕೆಲಸ ಮಾಡುತ್ತೇವೆ. ಅಧಿಕೃತ ವಿರೋಧ ಪಕ್ಷ ಹೇಗಿರಬೇಕೆಂದು ಮಾಡಿ ತೋರಿಸುತ್ತೇವೆ. ಸನ್ಮಾನ್ಯ ಮುಖ್ಯಮುಂತ್ರಿಗಳಾದ ದೇವೇಗೌಡರು ಎಷ್ಟು ವರ್ಷ ಅಧಿಕಾರದಲ್ಲಿ ಇರುತ್ತೇವೆ ಎನ್ನುವುದು ಮುಖ್ಯವಲ್ಲ ಎಂದು ಹೇಳಿದ್ದಾರೆ. ಮಾನ್ಯ ದೇವೇಗೌಡರು ರೈತನ ಮಗಾನಾಗಿ ಬಂದಿದ್ದಾರೆ. ಬಹಳ ವರ್ಷಗಳ ನಂತರ ಈ ಸದವಕಾಶ ತಮಗೆ ಸಿಕ್ಕಿದೆ. ಅದಕ್ಕಾಗಿ ನಾನು ಸಂತೋಷ ಆನಂದಪಡುತ್ತೇನೆ. ದೇವೇಗೌಡರ ಬಗ್ಗೆ ಗೌರವ ಇರತಕ್ಕ ವ್ಯಕ್ತಿಗಳು ನಾವು. ಹಿಂದೆ ನಾವೂ ದೇವೇಗೌಡರು ಒಟ್ಟಿಗೆ ಇದ್ದಾಗ ನಾವು ನಿಮ್ಮ ಪರವಾಗಿ ನಿಂತಿದ್ದೇವು; ನಾಡಿನ ಜನರ ಪರವಾಗಿ ಹೋರಾಟ ಮಾಡುತ್ತೀರಿ ಎಂದು ತಿಳಿದುಕೊಂಡು, ಅವತ್ತು ಏನು ಒಳ್ಳೆಯ ಅಭಿಪ್ರಾಯವಿಟ್ಟುಕೊಂಡಿದ್ದೆವು. ಈಗ ಅಧಿಕಾರ ಸಿಕ್ಕಿದಾಗ ಅದೇ ದಾರಿಯಲ್ಲಿ ಹೋಗುವಂತಹ ಪ್ರಾಮಾಣಿಕ ಪ್ರಯತ್ನ ಮಾಡಿ. ನನಗೆ ನೆನಪಿದೆ, ಇಲ್ಲಿ ಮಂತ್ರಿಗಳಾಗಿ ಕುಳಿತಿದ್ದಾಗ ಯಾವುದೋ ಕಾರಣಕ್ಕಾಗಿ ರಾಜಿನಾಮೆ ಕೊಟ್ಟ ಸಂದರ್ಭ ಬಂದಾಗ ಒಂದು ಮಾತನ್ನು ಹೇಳಿದಿರಿ. ಅವತ್ತು ಇದ್ದಂತಹ ನಿಮ್ಮ ಸರ್ಕಾರದ ಮುಖ್ಯ ಮಂತ್ರಿ ನೀರಾವರಿಗೆ ಆದ್ಯತೆ ಕೊಡಲಿಲ್ಲ, ಹೆಚ್ಚು ಹಣ ಬಿಡುಗಡೆ

ಮಾಡಲಿಲ್ಲ. ಈ ಕಾರಣಕ್ಕಾಗಿ ನಾನು ಮಂತ್ರಿಮಂಡಲದಿಂದ ಹೊರಗೆ ಬಂದೆ ಎಂದು ಹೇಳಿದಿರಿ. ನಿಮಗೆ ಎಷ್ಟರ ಮಟ್ಟಿಗೆ ಕಳಕಳಿ ಇದೆ ಅದನ್ನು ಮಾಡಿ ತೋರಿಸುವಂತಹ, ರೈತರ ಜೀವನದಲ್ಲಿ ಸುಧಾರಣೆ ತರುವಂತಹ, ರೈತನ ಹೊಲಕ್ಕೆ ನೀರು ತರುವಂತಹ ಇಲಾಖೆಯನ್ನು ತಾವು ಇಟ್ಟು ಕೊಂಡಿದ್ದೀರಿ. ಅದರಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿ ಯಶಸ್ವಿಯಾಗಿ ಅದಕ್ಕೆ ಬೇಕಾದಂತಹ ಹಣವನ್ನು ತೆಗೆದಿಡಿ ಎಂದು ಹೇಳುತ್ತೇನೆ. ರಾಜ್ಯದ ಮತದಾರ ಅಸ್ಥಿರತೆಯಿಂದ ಬೇಸತ್ತು ಒಂದು ಬದಲಾವಣೆ ತಂದಿದ್ದಾನೆ. ನೊಂದು ಬೆಂದು ಈ ದುರಾಡಳಿತವನ್ನು ಕೊನೆ ಮಾಡುವಂತಹ ಪ್ರಯತ್ನ ಮಾಡಿದ್ದಾನೆ. ರಾಜ್ಯ ಸರಕಾರದ ಖಜಾನೆಯನ್ನು ದಿವಾಳಿಸ್ಥಿತಿಗೆ ತಂದಂತಹ ಪರಿಸ್ಥಿತಿ ವಿರುದ್ಧ ತನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಆಳುವ ಪಕ್ಷದ ಜವಾಬ್ದಾರಿ ಸಹ ಈ ಸಂದರ್ಭದಲ್ಲಿ ದೊಡ್ಡದು ಇದೆ. ನಾನು ನಿಮಗೆ ಮೂರು ಸೂತ್ರಗಳನ್ನು ಹಾಕಿಕೊಳ್ಳಿ ಎಂದು ಸೂಚನೆ ಕೊಡುವುದಕ್ಕೆ ಇಚ್ಛಿಸುತ್ತೇನೆ. ನೀವು ಮುಖ್ಯ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ದಿವಸ ನಡೆದಂತಹ ಘಟನೆ ಏನು ಇದೆ ಅದು ಈ ನಾಡಿನ 4 ಕೋಟಿ ಜನ ತಲೆತಗ್ಗಿಸುವ ಘಟನೆಯಾಗಿದೆ.

ಚೇರ್ಮನ್:– ರಷ್ಯನ್ ಡೆಲಿಗೇಟ್ಸ್ ಬಂದಿದ್ದಾರೆ ಸದನ ಒಪ್ಪಿಗೆ ಕೊಟ್ಟರೆ ಮಾನ್ಯ ಮುಖ್ಯ ಮಂತ್ರಿಗಳು 10–20 ನಿಮಿಷ ಹೋಗಿ ಬರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ದೇವೇಗೌಡರು ಸೂತ್ರ ಕೇಳಿದ್ದರೆ ಚೆನ್ನಾಗಿತ್ತು. ಟೈಂ ಸರಿ ಇಲ್ಲ. ಏಕೆಂದರೆ ಅವರು ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕಾರ ಮಾಡಿದಂತಹ ಟೈಂ ಸರಿ ಇಲ್ಲವೆಂದು.....

ಶ್ರೀ ವಾಟಾಳ್ ನಾಗರಾಜ್:– ನೀವು ಹೇಳುವ ಸೂತ್ರ ಯಾವುದು ಮಂಗಳ ಸೂತ್ರವೋ ಯಾವುದು......

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಗೃಹ ಸಚಿವರು ಇಲ್ಲಿ ಇದ್ದಾರೆ ಅವರು ನೋಟ್ ಮಾಡಿಕೊಳ್ಳುವಂತಹ ಪ್ರಯತ್ನ ಮಾಡಬಹುದು. ತಾವು ದಯವಿಟ್ಟು ಒಗ್ಗಟ್ಟಾಗಿ ಇರಿ, ಒಳಜಗಳ ಕಚ್ಚಾಟ ಮಾಡಬೇಡಿ.

ಈ ಹಿಂದೆ ಮಾಡಿದಂತೆ ಭ್ರಷ್ಟಾಚಾರ, ಅವ್ಯವಹಾರಗಳಿಗೆ ಅವಕಾಶವನ್ನು ಕೊಡಬೇಡಿ. ಸಾಧ್ಯವಾದರೆ ಜನಹಿತ ಮಾಡಿ. ಮಾಡಲೇಬೇಕು ಎಂದು ನಮ್ಮದೇನು ಇಲ್ಲ. ಕನಿಷ್ಟ ಪಕ್ಷ ಇದಿಷ್ಟು ನೀವು ಮಾಡುವಂಥದ್ದನ್ನು ಪ್ರಯತ್ನ ಮಾಡಿದರೆ ಬಹುಶಃ ಜನರ ಅಪೇಕ್ಷೆಗೆ ತಕ್ಕಂತೆ ನೀವು ಮೇಲೆ ಏಳಬಹುದು ಎನ್ನುವಂಥ ಒಂದು ಅಪೇಕ್ಷೆಯನ್ನು ನಾನು ಮಾಡಿಕೊಂಡಿದ್ದೇನೆ. ನಾವು ಎಲ್ಲಾ ರೀತಿಯ ಸಹಕಾರವನ್ನು ನಿಮಗೆ ಕೊಡಬೇಕು ಎಂದು ಯೋಚನೆ ಮಾಡುತ್ತಿದ್ದೆವು. ಆದರೆ ಇಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲರು ಇಲ್ಲ. ಜೆ.ಹೆಚ್. ಪಟೇಲರು ಒಂದು ಮಾತನ್ನು ಹೇಳಿದ್ದಾರೆ. ಬಿಜೆಪಿ ಅಧಿಕೃತ ವಿರೋಧಪಕ್ಷವಾಗಿ ಬೆಳೆದು ನಿಂತಿರುವುದರಿಂದ ಇಲ್ಲಿಗೆ ಬಂದಿರುವುದರಿಂದ ನನಗೆ ಬೇಸರವಾಗಿದೆ. ಕಾಂಗ್ರೆಸ್‌ನವರು ಅಧಿಕೃತ ವಿರೋಧಪಕ್ಷವಾಗಿದ್ದರೆ ಪರವಾಗಿರಲಿಲ್ಲ ಎಂದು ಹೇಳಿ ಒಂದು ರೀತಿಯ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟು ಜನರು ಕೊಟ್ಟಂಥ ತೀರ್ಪಿನ ವಿರುದ್ಧ ಅವರದೇ ಆದ ಒಂದು ದಾಟಿಯಲ್ಲಿ ಅವರು ಮಾತನಾಡಿದ್ದಾರೆ. ಬಹುಶಃ ಮಾನ್ಯ ಪಟೇಲರಿಗೆ ಗೊತ್ತಿಲ್ಲ. ಹೋದ ಸದನದಲ್ಲಿ ಅವರು ಇರಲಿಲ್ಲ. ಈ ಕಾರ್ಯಕಾಲಾಪದ ಮಧ್ಯೆ ಆಯ್ಕೆಯಾಗಿ ಬಂದಿರಲಿಲ್ಲ. ಐದು ವರ್ಷ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿ ಅಧಿಕಾರವನ್ನು ಸ್ವೀಕಾರ ಮಾಡಿದ ಮೊದಲನೇ ದಿವಸ ಅವರು ಕೊಟ್ಟಂಥ ಭರವಸೆ ರೈತರ ಸಾಲವನ್ನು ಮನ್ನಾ ಮಾಡಬೇಕು ಎಂದು ಇತ್ತು. ಅದನ್ನು ಈಡೇರಿಸಬೇಕು ಎಂದು ಧರಣಿ ಕುಳಿತೆವು. ಮೂರು ದಿವಸ ಸದನ ನಡೆಯಲಿಲ್ಲ. ವೀರೇಂದ್ರ ಪಾಟೀಲರು ನಮ್ಮನ್ನು ಅವರ ಛೇಂಬರಿಗೆ ಕರೆಯಿಸಿ ಕಿವಿ ಮಾತನ್ನು

ಹೇಳಿದಾಗಲೂ ಸಹ ನಾಡಿನ ಜನರ ಹಿತದೃಷ್ಟಿಯಿಂದ ನೀವು ಕೊಟ್ಟಂಥ ಭರವಸೆಯನ್ನು ಈಡೇರಿಸಲೇಬೇಕು ಎಂದು ನಾವು ಒತ್ತಾಯ ಮಾಡಿದವು. ಅವತ್ತು ಸಾಲ ವಸೂಲಾತಿಯ ಬಗ್ಗೆ ತಡೆಯಾಜ್ಞೆಯನ್ನು ಕೊಟ್ಟರು. ಎಲ್ಲಾ ಮಾನ ಅಪಮಾನಗಳನ್ನು ಸಹಿಸಿಕೊಂಡು ನಾವು ಹೋರಾಟವನ್ನು ಮಾಡಿದೆವು. ನಾವು ನಾಲ್ಕು ಜನ ಶಾಸಕರು ಅವತ್ತು ಎದ್ದುನಿಂತ ತಕ್ಷಣ ಎಲ್ಲರೂ ಸಹಾ ನಮ್ಮ ಮೇಲೆ ಎರಗಿಬಿದ್ದಂಥ ಸಂದರ್ಭದಲ್ಲೂ ಸಹಾ ನಮ್ಮ ಕರ್ತವ್ಯವನ್ನು ನಾವು ಪಟ್ಟುಹಿಡಿದು ಬಿಡದೆ ಮಾಡಿದ್ದೇವೆ. ಒಂದು ಅಧಿಕೃತ ವಿರೋಧಪಕ್ಷವಾಗಿ ನಮ್ಮ ಜನತಾದಳದ ಸ್ನೇಹಿತರು ಇಲ್ಲಿ ಕಾರ್ಯವನ್ನು ಏನು ನಿರ್ವಹಿಸಬೇಕಾಗಿತ್ತು. ಅದರಲ್ಲಿ ಅವರು ವಿಫಲರಾಗಿ ಒಂದುರೀತಿಯ ಆಡಳಿತ ಪಕ್ಷದ ಕೈಗೊಂಬೆಯಾಗಿ ವರ್ತನೆ ಮಾಡತಕ್ಕಂಥ ಒಂದು ಪರಿಸ್ಥಿತಿ ಬಂದಾಗಲೂ ಸಹ ಈ ಹಿತವನ್ನು ಕಾಪಾಡಿದವರು ನಾವು. ಬಹುಶಃ ನಮ್ಮ ಜೆ.ಹೆಚ್. ಪಟೇಲರಿಗೆ ಅದು ಗೊತ್ತಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಎಲ್ಲರೂ ನಿಮ್ಮ ವಿರುದ್ಧ ಬಿದ್ದರೇ ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಮುಂದೆ ಬರುತ್ತೇನೆ, ನಮ್ಮ ವಾಟಾಲ್ ನಾಗರಾಜ್‌ರವರಂಥ ಕೆಲವು ಹಿರಿಯ ಸದಸ್ಯರನ್ನು ಬಿಟ್ಟು, ವಿಧಾನಮಂಡಲದ ಹೊರಗೆ ಒಳಗಡೆ ಕೃಷಿಕಾರ್ಮಿಕರು, ರೈತರು, ಹರಿಜನ–ಗಿರಿಜನ ಬಂಧುಗಳು, ನಿರುದ್ಯೋಗಿ ಯುವಕರು ಇವರ ಸಮಸ್ಯೆಗಳನ್ನು ತೆಗದುಕೊಂಡು ಹೋರಾಟ ಮಾಡಿದ ಪರಿಣಾಮ ಇವತ್ತು ಅಧಿಕೃತ ವಿರೋಧ ಪಕ್ಷವಾಗಿ ನಾವು ಇಲ್ಲಿ ಕುಳಿತಿದ್ದೇವೆ. ಅಲ್ಲ ಸಭಾನಾಯಕರು ಮಾನ್ಯ ವೀರಪ್ಪಮೊಯಿಲಿಯವರೇ ಕುಳಿತಂತೆ ನನಗೆ ಇನ್ನೂ ಜ್ಞಾಪಕ ಬರುತ್ತದೆ. ಕೊನೆಯ ದಿವಸ ಅವರು ಹೇಳಿದರು. ಯಡಿಯೂರಪ್ಪನವರೇ ನಿಮ್ಮ ಕ್ಷೇತ್ರದಲ್ಲಿ ಗೆದ್ದುಬನ್ನಿ ನೋಡೋಣ, ನಾವೆಲ್ಲರೂ ಒಂದಾಗುತ್ತೇವೆ ಎಂದು ನಿಮ್ಮನ್ನು ತೋರಿಸಿ ಹೇಳಿದ್ದರು. ಏನಾಯಿತು ? ಜನರು ಅಪೇಕ್ಷೆಪಟ್ಟರೆ ಜನರು ವಿಶ್ವಾಸ ಇಟ್ಟರೆ ಇವತ್ತು ಯಾವುದೋ ಒಂದು ಬದಲಾವಣೆಯನ್ನು ಮಾಡುತ್ತಾರೆ ಎಂದು ಗೊತ್ತಾಯಿತು. ಅದನ್ನು ಬಿಟ್ಟು ನಾವು ರಾಜಕಾರಣಿಗಳು ಯಾವುದೋ ಒಂದು ಹಮ್ಮಿನಲ್ಲಿ ಇದ್ದೇವೆ, ಆ ರೀತಿ ಇದ್ದರೆ ಸಾಧ್ಯವಿಲ್ಲ. ಅದಕ್ಕಾಗಿ ನಾನು ಹೇಳಿದೆ, ಈ ನಾಡಿನ ಮಾಲೀಕರು ಯಾರಿದ್ದಾರೆ. ನಮ್ಮ ಯಜಮಾನರುಗಳು ಯಾರು ಇದ್ದಾರೆ ಮತದಾರನು ಅವನು ಏನು ಮಾಡಬೇಕು, ಏನು ಮಾಡಬಾರದು. ಈ ಪ್ರಬುದ್ಧತೆ, ಆ ಪ್ರೌಢತೆ ಇವತ್ತು ನಮ್ಮ ಜನರಿಗೆ ನಮ್ಮ ಮತದಾರರಿಗೆ ಬಂದಿದೆ ಎನ್ನುವುದನ್ನು ನಾವು ತಿಳಿದುಕೊಂಡು ಕೆಲಸವನ್ನು ಮಾಡಬೇಕಾಗಿದೆ. ಆದರೆ ಜೆ.ಹೆಚ್. ಪಟೇಲರು ಜನತೆ ಕೊಟ್ಟಂಥ ತೀರ್ಪನ್ನು ಉದಾರತೆಯಿಂದ ಒಪ್ಪಿಕೊಳ್ಳದೆ ಭಾರತೀಯ ಜನತಾ ಪಾರ್ಟಿ ಇಲ್ಲಿ ಅಧಿಕೃತ ವಿರೋಧಪಕ್ಷವಾಯಿತಲ್ಲ ಎಂದು ಮಮ್ಮಲ ಮರುಗಿದ್ದಾರೆ. ಅದಕ್ಕೆ ಅವರ ಬಗ್ಗೆ ನಮಗೆ ಅನುಕಂಪವಾಗುತ್ತಿದೆ. ನಾನು ರಾತ್ರಿಯಲ್ಲಾ ಯೋಚನೆ ಮಾಡಿದೆ. ಏತಕ್ಕೆ ಅವರು ಈ ರೀತಿ ದುಃಖ ಪಟ್ಟಿದ್ದಾರೆ ? ಏತಕ್ಕೆ ಈ ರೀತಿ ಅವರು ವರ್ತನೆಯನ್ನು ವ್ಯಕ್ತಪಡಿಸಿದ್ದಾರೆ ಎಂದು ಯೋಚಿಸಿದೆ. ಆಗ ನನಗೆ ಅರ್ಥವಾಯಿತು. ನಾವು ಜನತಾದಳದವರು ಇಲ್ಲಿ ವಿರೋಧ ಪಕ್ಷದಲ್ಲಿ ಇದ್ದಾಗ ಆಡಳಿತ ಪಕ್ಷಕ್ಕೆ ಎಷ್ಟೊಂದು ಸಹಕಾರವನ್ನು ಕೊಟ್ಟೆವು. ಇವತ್ತು ನಮ್ಮವರೇ ಅಲ್ಲಿ ಇದ್ದಿದ್ದರೆ ಅಧಿಕೃತ ವಿರೋಧ ಪಕ್ಷದ ಜೊತೆ ಅಡ್ಜಸ್‌ಮೆಂಟ್ ಮಾಡಿಕೊಳ್ಳಬಹುದಾಗಿತ್ತು. ಹೊಂದಿಕೊಂಡು ಹೋಗಬಹುದಾಗಿತ್ತು ಎಂದು ಬಹುಶಃ ಅವರಿಗೆ ದುಃಖವಾಗಿರಬಹುದು. ನನಗೆ ಗೊತ್ತಿಲ್ಲ, ಅವರು ಬಂದ ಮೇಲೆ ಕೇಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ:- ಅವರ ಪಕ್ಷದಲ್ಲಿ ಹೊಂದಾಣಿಕೆ ಮಾಡಿಕೊಂಡಿದ್ದರಲ್ಲ, ಅದನ್ನೇ ಕಂಟಿನ್ಯೂ ಮಾಡಿಕೊಳ್ಳುತ್ತಿದ್ದರು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅದನ್ನೇ ನಾನು ಹೊಂದಾಣಿಕೆ ಎಂದು ಹೇಳಿದ್ದುದು. ಏಕೆಂದರೆ

ನಾನು ಈ ಮಾತನ್ನು ಹೇಳುತ್ತಿಲ್ಲ. ಇಲ್ಲಿ ಅಧಿಕೃತ ವಿರೋಧ ಪಕ್ಷದ ನಾಯಕರ ಮೇಲೆ ನಮ್ಮ ಜನತಾ ದಳ ಸ್ನೇಹಿತರುಗಳೇ ತಿರುಗಿ ನೀವುಗಳು ಆಡಳಿತ ಪಕ್ಷಕ್ಕೆ ಹೊಂದಿಕೊಂಡಿದ್ದೀರಿ ಎಂದು ಬಿದ್ದು ನಾಯಕ ಸ್ಥಾನದಿಂದ ಇಳಿಸಿದರು. ನನ್ನ ಹತ್ತಿರ ಎಲ್ಲಾ ರೆಕಾರ್ಡ್ ಇದೆ. ಅದನ್ನೆಲ್ಲಾ ಇಟ್ಟಿದ್ದೇನೆ. ಮಾನ್ಯ ಸಿಂಧ್ಯಾರವರು ಹೇಳಬಹುದು ಎಂದು ಇಟ್ಟಿದ್ದೇನೆ. ಅದೊಂದು ಕರ್ಮಕತೆ. ಆದರೆ ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಆಡಳಿತಪಕ್ಷದಲ್ಲಿ ಯಾರೂ ಬೇಕಾದರೂ ಇರಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು):– ಮಾನ್ಯ ಅಧ್ಯಕ್ಷರೇ, ನಮ್ಮ ಯಡಿಯೂರಪ್ಪನವರ ಬಂಡವಾಳ ಅವರು ಇಲ್ಲಿ ಕುಳಿತು ಕೊಂಡಾಗ ಐದು ವರ್ಷ ನಮ್ಮನ್ನು ಕಾಂಗ್ರೆಸ್‌ನ ಏಜೆಂಟ್ ಎಂತಲೇ ಕರೆದರು. ನಮಗೂ ಹಾಗೆಯೇ ಹೇಳಿದರು. ನೀವಂತೂ ಕಾಂಗ್ರೆಸ್‌ನ್ನು ಬಿಟ್ಟು ಬಂದರಿ ಬಿಡಿ. (ಮಾನ್ಯ ನಾಗೇಗೌಡರನ್ನು ಉದ್ದೇಶಿಸಿ) ನಾವು ಕಾಂಗ್ರೆಸ್ ಏಜೆಂಟ್ ಅಲ್ಲ, ಕಾಂಗ್ರೆಸ್‌ನ್ನೇ ಸೋಲಿಸಿ ಈ ಕಡೆ ಬಂದರೂ ಸಹಿತ ನಮ್ಮ ಮೇಲೆ ಅವರು ಆಪಾದನೆಯನ್ನು ಮಾಡುವುದು ಬಿಡಲಿಲ್ಲವಲ್ಲ, ಯಾವಾಗ ಇವರಿಗೆ ಬುದ್ಧಿ ಬರುವುದು ?

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಒಬ್ಬ ರೈತನ ಮಗ. ನನಗೆ ಜ್ಞಾಪಕ ಬರುತ್ತಿದೆ. ಮಾನ್ಯ ಅಧ್ಯಕ್ಷರೆ, ತಾವು ಸಹ ರೈತಾಪಿ ಹಿನ್ನೆಲೆಯಲ್ಲಿ ಬಂದಂತಹವರು. ಒಬ್ಬ ರೈತನಿಗೆ ಮೂರು ಜನ ಮಕ್ಕಳು ಇರುತ್ತಾರೆ. ಒಬ್ಬ ನನ್ನಂತಹ ದಡ್ಡ. ಬೆಳಿಗ್ಗೆ ಎದ್ದು ಹೊಲಕ್ಕೆ ಹೋಗುತ್ತಾನೆ, ಬೆಳಿಗ್ಗೆಯಿಂದ ಕೆಲಸ ಆರಂಭ. ನೇಗಿಲು, ಎಂಟೆ ಹೊಡೆಯುತ್ತಾನೆ, ಬಿತ್ತನೆ ಕೆಲಸದಲ್ಲಿ ತಲ್ಲೀನನಾಗಿರುತ್ತಾನೆ. ಇನ್ನೊಬ್ಬ ಉಂಡಾಡಿ ಗುಂಡ. ಮನೆಯಲ್ಲಿಯೇ ಓಡಾಡುತ್ತಿರುತ್ತಾನೆ. ಅಪ್ಪನ ಮುಂದೆ ಓಡಾಡುತ್ತಿರುತ್ತಾನೆ. ಅಪ್ಪ ಅಮ್ಮನ ಪ್ರೀತಿ ಯಾರ ಮೇಲೆ ? ಹೊಲದಲ್ಲಿ ಕೆಲಸ ಮಾಡುವವನ ಮೇಲೆ ಅಲ್ಲ. ಈ ಉಂಡಾಡಿ ಗುಂಡ ಮಗನ ಮೇಲೆ. ಉಂಡಾಡಿ ಗುಂಡನ ಮೇಲೆ ಪ್ರೀತಿ ಬರುತ್ತದೆ, ಹಾಗಾಗಿದೆ ಈ ರಾಜ್ಯದ ಜನರಿಗೆ. ಹೇಗೋ ಮೋಸ ಹೋಗಿ ಬಿಟ್ಟರೋ ಗೊತ್ತಿಲ್ಲ. ಏನು ಆಗಿದೆ ಎಂದರೆ, ಮಾನ್ಯ ಸಿಂಧ್ಯ ಅವರು ಹೇಳದ್ದುದು ನಿಜ ಇದೆ ಎಂದು ನನಗೆ ಅನಿಸಿದೆ. ಸತ್ಯ ಸಂಗತಿ ಏನು ಅಂದರೆ ಮಾನ್ಯ ದೇವೇಗೌಡರು, ರಾಮಕೃಷ್ಣ ಹೆಗಡೆ ಅವರು, ಬೊಮ್ಮಾಯಿ ಅವರು, ಸಿಂಧ್ಯ ಅವರು, ಮಾಜಿ ಸಚಿವರುಗಳು, ಘಟಾನುಘಟಿಗಳು ಮುಖ್ಯಮಂತ್ರಿಗಳು ಆಗಿದ್ದರು, ಮಂತ್ರಿಗಳು ಆಗಿದ್ದವರು, ಶಾಸಕರು ಆಗಿದ್ದವರು, ಇವರು ಯಡಿಯೂರಪ್ಪನವರು ನಾಲ್ಕು ಜನ ಇರುವವರು, ರೈತನ ಹಿನ್ನೆಲೆಯಲ್ಲಿ ಬಂದಂತಹವರು ಇವರು ಅಧಿಕಾರ ನಡೆಸಬಹುದೇನೋ ಎಂದು ಇವರು ಯೋಚನೆ ಮಾಡಿರಬಹುದು. ಒಂದು ಸಾರಿ ಅಧಿಕೃತವಾಗಿ ವಿರೋಧ ಪಕ್ಷವಾಗಿ ಈ ಸರ್ಕಾರ ಏನೇನು ಮಾಡುತ್ತದೆ ಎಂದು ತಿಳಿದುಕೊಳ್ಳಿ, ಅವರು ಬಹಳ ದಿನ ಉಳಿಯುವುದಿಲ್ಲ. ಆದಷ್ಟು ಬೇಗನೇ ನೀವು ಇಲ್ಲಿಗೆ ಬರುವವರು, ಇಲ್ಲಿಂದ ಅನುಭವ ತೆಗೆದುಕೊಳ್ಳಿ ಎಂದು ನಮ್ಮನ್ನು ಇಲ್ಲಿ ಕೂರಿಸಿವರೋ ಏನೋ ಎಂದು ಅನಿಸುತ್ತದೆ, ನೋಡೋಣ. ಆದರೂ ನೀವು ಐದು ವರ್ಷ ಇರಬೇಕು ಎಂದು ನಾನು ಹೇಳುತ್ತೇನೆ. ನನ್ನ ಕಿವಿ ಮಾತು ಏನು ಎಂದರೆ, ಯಾವುದೇ ಕಾರಣಕ್ಕೂ ಜನತಾ ದಳದ ಸ್ನೇಹಿತರು ಹಿಂದೆ ಮಾಡಿದಂತೆ ಕಚ್ಚಾಡಬೇಡಿ. ನನಗೆ ಯಾವುದೋ ವ್ಯಾಮೋಹ. ಜನತಾಪಾರ್ಟಿಯವರಿಗೆ ಬೆಂಬಲ ಕೊಟ್ಟು ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರ ಜೊತೆ, ನಾವು ಹೋರಾಟ ಮಾಡಿದ್ದೇವೆ. ಯಾವುದೋ ಒಂದು ಸಂಬಂಧ ನನ್ನನ್ನು ಕಾಡಿಸುತ್ತಿದೆ. ಕಚ್ಚಾಡ ಬೇಡಿ. ಇನ್ನೂ ಮುಖ್ಯಮಂತ್ರಿಗಳ ಘೋಷಣೆ ಆಗುತ್ತಿದೆ. ಪ್ರಮಾಣ ವಚನ ಸ್ವೀಕಾರ ಮಾಡುವ ಸಮಯದಲ್ಲಿ ಇಂತಹ ಪರಿಸ್ಥಿತಿ ತಂದುಬಿಟ್ಟಿರಲ್ಲ. ಜನ ಏನೆಂದುಕೊಳ್ಳುತ್ತಾರೋ.....

ಶ್ರೀ ಎಸ್. ಶಿವಣ್ಣ:– ತಮಗೆ ಪ್ರತಿಯೊಬ್ಬರಿಗೂ ಯೀಲ್ಡ್ ಆಗುವ ಪ್ರವೃತ್ತಿ ಇದೆ ಎಂದು ನನಗೆ

ಅನಿಸುತ್ತದೆ. ಸಂದರ್ಭ ಬಂದಾಗ ಇನ್ನೊಬ್ಬರಿಗೆ ಯೀಲ್ಡ್ ಆಗುವ ಪ್ರವೃತ್ತಿ ನೀವು ಬೆಳೆಸಿಕೊಂಡಿದ್ದೀರಿ. ಕಟ್ಟಾ ವಿರೋಧ ಮಾಡುವಂತಹ ಶಕ್ತಿಯನ್ನು ತಾವು ಕಳೆದುಕೊಂಡಿದ್ದೀರಿ ಎಂದು ತಾವೇ ಈಗ ಬಹಿರಂಗ ಪಡಿಸಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನೀವು ಹೇಳುವುದು ನಿಜ ಇದೆ. ನಾನು ಏನು ಹೇಳಿದೆ ಎಂದು ಮಾನ್ಯ ಶಿವಣ್ಣನವರು ಅರ್ಥ ಮಾಡಿಕೊಳ್ಳಲಿಲ್ಲ. ನಾನು ಏನು ಹೇಳಿದೆ ಎಂದರೆ ಯಾವುದೋ ವ್ಯಾಮೋಹ, ನನ್ನನ್ನು ಕಾಡುತ್ತಿದೆ. ಯಾವುದಾದರೂ ಒಂದು ಸಂದರ್ಭದಲ್ಲಿ ಈ ಸದನದಲ್ಲಿ ಶಾಸಕನಾಗಿ ಇದ್ದಾಗ ನಾವು ಮಾಡಿರುವಂತಹ ಟೀಕೆಗಳಿಗೆ, ಆ ಸಂದರ್ಭದಲ್ಲಿ ಸರ್ಕಾರದ ಮುಲಾಜಿಗೆ ಒಳಗಾಗಿರುವಂತಹ ಒಂದು ನಿದರ್ಶನ ಕೊಟ್ಟರೆ ನಾನು ಈ ಸ್ಥಾನ ಬಿಟ್ಟು ಹೊರಗೆ ಹೋಗುತ್ತೇನೆ. ಈ ನಾಡಿನ ಜನರಿಗೆ ಗೊತ್ತಾಗಬೇಕಾಗಿದೆ. ಆದ್ದರಿಂದ ನಾವು ಹೇಗೆ ನಡೆದುಕೊಂಡಿದ್ದೇವೆ ಎನ್ನುವುದನ್ನು ಮಾತ್ರ ಮಾನ್ಯ ಶಿವಣ್ಣನವರಿಗೆ ಜ್ಞಾಪಕ ಮಾಡುವುದಕ್ಕೆ ಹೇಳುತ್ತಿದ್ದೇನೆ.

ಶ್ರೀ ಎಸ್. ಶಿವಣ್ಣ:– ಇನ್ನೂ ದಿವಸ ಇದೆ ನೋಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿನ್ನೆಯ ದಿವಸ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಆ ಸಂದರ್ಭದಲ್ಲಿ ನೂತನ ಸರ್ಕಾರದ ಒಂದು ನೀತಿ ನಿರೂಪಣೆ ಮಾಡಿದ್ದಾರೆ. ಆ ಸಂದರ್ಭದಲ್ಲಿ.....

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ:– ನಾನು ಏನು ಹೇಳಿದೆ ಎಂದರೆ, ತಾವು ಪದೇ ಪದೇ ಅವರಿಗೆ ಅಡ್ವೈಸ್ ಮಾಡುತ್ತಿದ್ದೀರಿ. ಐದು ವರ್ಷದ ಅಲ್ಲಿ ಅಧಿಕಾರದಲ್ಲಿ ಇರಿ, ನಾನು ಇಲ್ಲಿ ಇರುತ್ತೇನೆ ಎಂದು. ಥಿಂಕ್ ಟ್ಯಾಂಕ್ ಮಾಡಿ ಅವರ ಅಡ್ವೈಸ್ ತೆಗೆದುಕೊಳ್ಳಿ, ಐದು ವರ್ಷ ಅಧಿಕಾರದಲ್ಲಿ ಹೇಗೆ ಇರಬೇಕು ಎಂದು ನೋಡೋಣ. ಈ ಮಧ್ಯದಲ್ಲಿ ಏನಾದರೂ ಅವಕಾಶ ಬಂದರೆ ಮತ್ತೆ ಬೇರೆ ವಿಚಾರ ಮಾಡಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇಡೀ ರಾಜ್ಯದ ನಾಲ್ಕು ಕೋಟಿ 70 ಲಕ್ಷ ಜನರು ರಾಜ್ಯಪಾಲರ ಭಾಷಣದಲ್ಲಿ ಏನೋ ಹೊಸ ವಿಷಯಗಳು ಬರಬಹುದು, ಇವರು ಕೊಟ್ಟಂತಹ ಭರವಸೆಗಳನ್ನು ಇಟ್ಟುಕೊಂಡಿದ್ದರು. ಆದರೆ ರಾಜ್ಯಪಾಲರ ಭಾಷಣದಲ್ಲಿ ಕೆಲವೇ ತಿಂಗಳುಗಳ ಹಿಂದೆ, ಜನರ ಮುಂದೆ ನೀವು ಏನು ಭರವಸೆಗಳನ್ನು ಕೊಟ್ಟಿದ್ದೀರಿ. ನಿಮಗೆ ಆ ಕಮಿಟ್‌ಮೆಂಟ್ ಇದ್ದರೆ, ಆ ಕಳಕಳಿ ಇದ್ದರೆ ನೀವು ಚುನಾವಣಾ ಪ್ರಣಾಲಿಕೆಯಲ್ಲಿ ಹೇಳಿದ್ದನ್ನು ಒಂದು ಕ್ಷಣ ತಡಮಾಡದೇ ರಾಜ್ಯದ ಜನರಿಗೆ ತಲುಪಿಸಬೇಕು ಎನ್ನುವಂತಹ ಭಾವನೆ ಇದಿದ್ದರೆ ರಾಜ್ಯಪಾಲರ ಭಾಷಣದಲ್ಲಿ ಕೊನೆಯಪಕ್ಷ ಚುನಾವಣೆ ಪ್ರಣಾಲಿಕೆಯಲ್ಲಿ ನೀವು ಹೇಳಿದಂತಹ ಪ್ರಮುಖವಾದ ಅಂಶಗಳನ್ನು ಈ ವರ್ಷ ಜನವರಿ ಒಂದನೇ ತಾರೀಖಿನಿಂದಲೇ ಜಾರಿಗೆ ತರುತ್ತೀರೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿಸುತ್ತೀರಿ ಎಂದು ನಾನು ತಿಳಿದುಕೊಂಡಿದ್ದೆ. ಜನರಿಗೆ ಈ ರಾಜ್ಯಪಾಲರ ಭಾಷಣವನ್ನು ನೋಡಿ ತುಂಬಾ ನಿರಾಸೆ ಆಗಿದೆ. ಬಹುಶಃ ವಿಧಾನಮಂಡಲದ ಇತಿಹಾಸದಲ್ಲಿ ಅತ್ಯಂತ ನೀರಸ, ಅಸ್ಪಷ್ಟ ಭರವಸೆ ರಹಿತ ರಾಜ್ಯಪಾಲರ ಭಾಷಣ ಆಗಿದೆ. ರಾಜ್ಯದ ಜನಜೀವನದ ಅನೇಕ ಪ್ರಮುಖ ಅಂಶಗಳ ಬಗ್ಗೆ ದಿಕ್ಸೂಚಿ ರಹಿತ, ಡೈರೆಕ್ಷನ್ ಲೆಸ್ ರಾಜ್ಯಪಾಲರ ಭಾಷಣ ಆಗಿದೆ.

ಪಾಪ, ರಾಜ್ಯಪಾಲರು ತಾನೇ ಏನು ಮಾಡುತ್ತಾರೆ? ಇವರು ಏನು ಭಾಷಣವನ್ನು ಬರೆದು ಕೊಟ್ಟರೋ ಅದನ್ನು ರಾಜ್ಯಪಾಲರು ಅನಿವಾರ್ಯವಾಗಿ ಓದಿದ್ದಾರೆ. ಬಹುಶಃ ಹಿಂದೆ ಆರು ವರ್ಷಗಳ ಕಾಲ ಅಧಿಕಾರದಲ್ಲಿದ್ದಂಥ ನೀವು ಅನುಭವದ ಆಧಾರದ ಮೇಲೆ ಈ ನಾಡಿನಲ್ಲಿ ಒಂದು ಸ್ಪಷ್ಟವಾದ ಬದಲಾವಣೆ ತರುವಂಥ ಬೆಳಕನ್ನು ರಾಜ್ಯಪಾಲರ ಭಾಷಣದಲ್ಲಿ ಕಾರ್ಯ ರೂಪಕ್ಕೆ ತರುತ್ತೀರೆಂದು

ನಾನು ಭಾವಿಸಿದ್ದೆ. ಈ ಸಂದರ್ಭದಲ್ಲಿ ಸನ್ಮಾನ್ಯ ಗೃಹ ಸಚಿವರು ಗಮನಕೊಡಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಆ ಸಮಯದಲ್ಲಿ ತಾವು (ಸಿಂಧ್ಯ) ಗೃಹ ಸಚಿವರಾಗಿರಲಿಲ್ಲ. ಮುಖ್ಯಮಂತ್ರಿಗಳ ಪ್ರಮಾಣ ವಚನ ಸ್ವೀಕಾರ ಸಂದರ್ಭದಲ್ಲಿ ನಡೆದಂಥ ಅಹಿತಕರ ಘಟನೆಗಳು, ನಾನು ಪ್ರಾರಂಭದಲ್ಲಿ ಹೇಳಿರುವಂತೆ ನಮ್ಮನ್ನು ನಂಬಿ ಅಧಿಕಾರಕ್ಕೆ ತಂದಂಥ ಜನರಿಗೆ ಮಾಡಿದಂಥ ಒಂದು ಅಪಮಾನ, ಮಹಾದ್ರೋಹವೆಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ರಾಮಕೃಷ್ಣ ಹೆಗಡೆಯವರು, ದೇವೇಗೌಡರು ಮತ್ತು ಬೊಮ್ಮಾಯಿಯವರು ಪರಸ್ಪರ ಕೈ ಹಿಡಿದುಕೊಂಡು 'ನಾವೆಲ್ಲರೂ ಒಂದಾಗಿದ್ದೇವೆ' ಎಂದು ಹೇಳಿದರು. ಜನರೂ ನಂಬಿದರು. ಬಹಳ ಸುಲಭವಾಗಿತ್ತಲ್ಲ. ನಿಮ್ಮ ಪಕ್ಷದ ನಾಯಕರನ ಆಯ್ಕೆಯನ್ನು ಬೆಳಿಗ್ಗೆ ಮಾಡಿ ಮುಗಿಸಿದ್ದರೆ ಬಹಳ ಸುಲಭವಾಗಿ ಈ ದುರ್ಘಟನೆಯನ್ನು ತಡೆಯಬಹುದಾಗಿತ್ತು. ಆಕಸ್ಮಾತ್ ರಾಜಕಾರಣದಲ್ಲಿ 'ಮುಖ್ಯಮಂತ್ರಿ' ಎನ್ನುವ ಉನ್ನತ ಪದವಿ ಬೇಕೆಂದಾಗ ಸಹಜವಾಗಿಯೇ ಕೆಲವರು ಸ್ಪರ್ಧಿಗಳಾಗಬಹುದು. ಹಾಗಾದರೆ, ಈ ಜನರನ್ನು ತರುವಂಥ ಕೆಲಸವನ್ನು ಮುಖ್ಯಮಂತ್ರಿಗಳಿಗೆ ಪ್ರಮಾಣ ವಚನ ಸ್ವೀಕಾರ ಸಮಾರಂಭವನ್ನು ಇನ್ನೊಂದು ದಿವಸ ಹಮ್ಮಿಕೊಳ್ಳಬಹುದಿತ್ತಲ್ಲವೇ. ಗಳಿಗೆ ಸರಿಯಿಲ್ಲ, ಗ್ರಹಚಾರ. ಏನೆಲ್ಲಾ ನಡೆದು ಹೋಯಿತು. ಈ ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ದೊಡ್ಡ ದೊಡ್ಡ ನಾಯಕರ ಮೇಲೆ ಚಪ್ಪಲಿ, ಕಲ್ಲು ತೂರಾಟಗಳು ನಡೆದುಹೋಯಿತು.

ಶ್ರೀ ವಾಟಾಳ್ ನಾಗರಾಜ್:– ಗ್ರಹಚಾರ ಯಾರಿಗೆ ಸರಿಯಿಲ್ಲ ಎಂಬುದನ್ನು ಸರಿಯಾಗಿ ಹೇಳಲಿಲ್ಲ. ಇದನ್ನು ತಾವು ಸ್ಪಷ್ಟಪಡಿಸಬೇಕು. ಗಮನಕೊಡಬಹುದೆಂದು ನಾನು ಭಾವಿಸಿದ್ದೆ. ಈ ಸಂದರ್ಭದಲ್ಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಹೇಳುವುದು ತುಂಬಾ ಗಂಭೀರವಾಗಿ ಎಲ್ಲರೂ ಯೋಚನೆ ಮಾಡುವಂಥದ್ದು ಯಾರಿಗಾದರೂ ಸಹ ಈ ಸಂದರ್ಭ ಬರಬಹುದು. ಒಬ್ಬ ಹಿರಿಯ ಮುತ್ಸದ್ದಿಯಾದ ಮಾಜಿ ಮುಖ್ಯಮಂತ್ರಿ ಶ್ರೀಮಾನ್ ರಾಮಕೃಷ್ಣ ಹೆಗಡೆಯಂಥವರು 'ನಾನು ದೇವೇಗೌಡರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಿದ್ದಕ್ಕೆ ಸಿಕ್ಕಂಥ ಬಳುವಳಿ ಚಪ್ಪಲಿ ಏಟು' ಎಂದರು. ಈ ಮಾತು ಪತ್ರಿಕೆಗಳಿಗೆ ಹೋದಾಗ ಸಿಂಧ್ಯರವರೇ ನಾನು ಪ್ರಮಾಣ ಪೂರ್ವಕವಾಗಿ ಹೇಳುತ್ತೇನೆ: ನನ್ನ ಕಣ್ಣಲ್ಲಿ ನೀರು ಬರುತ್ತದೆ. ಇಂತಹ ಘಟನೆಗಳು ನಡೆಯಬಾರದಾಗಿತ್ತು. ತಾವು ಗಮನಿಸಿರಬಹುದು. ನಾವು 40 ಜನರು ಆಯ್ಕೆಯಾಗಿ ಬಂದಿದ್ದರೂ ಸಹ ಈ ಅಹಿತಕರ ಘಟನೆ ನಡೆದಾಗ ಪತ್ರಿಕಾಗೋಷ್ಠಿಯನ್ನು ಕರೆದು ಛೀಮಾರಿ ಹಾಕುವ ಕೆಲಸ ಮಾಡಲಿಲ್ಲ. ಏಕೆಂದರೆ, ಬಹುಶಃ ಹೊಸ ಪ್ರಾರಂಭದ ದಿವಸಗಳಲ್ಲಿ ನಾವು ಆ ಮಟ್ಟಕ್ಕೆ ಹೋಗಬಾರದೆಂದಿದ್ದೇವು. ಆದರೆ, ಸ್ವತಃ ನೊಂದು, ಹೊಡೆತ ತಿಂದಂಥ ಜನರು ಬೇಸರಪಟ್ಟು ಫೋನ್ ಮಾಡಿದಾಗ ಹಿರಿಯರನ್ನು ಸಂಪರ್ಕ ಮಾಡಿ ನಡೆದಂಥ ಘಟನೆ ಬಗ್ಗೆ ಕೇಳಿದಾಗ ಬಹುಶಃ ಎಲ್ಲರೂ ಸಹ ತಲೆ ತಗ್ಗಿಸುವಂಥ ಘಟನೆ ಅವೊತ್ತು ನಡೆದು ಹೋಯಿತು. ಕೆಂಗಲ್ ಹನುಮಂತಯ್ಯನವರಂಥ ಹಿರಿಯರು ಕಟ್ಟಿಸಿದಂಥ ಈ ಭವ್ಯ ಭವನದಲ್ಲೂ ಅಹಿತಕರ ಘಟನೆ ನಡೆಯಿತು. ಘಟನೆ ನಂತರ ಬಹುಶಃ ಅನೇಕ ಶಾಸಕರು ಇಲ್ಲಿಗೆ ಬಂದು ನೋಡಲಿಲ್ಲ. ನಾನು ಬಂದು ನೋಡಿದಾಗ ಸುತ್ತಲೂ ಯಾವುದೇ ಗ್ಲಾಸುಗಳು ಉಳಿದಿರಲಿಲ್ಲ. ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಕುರ್ಚಿಗಳು ಮುರಿದು ಹೋಗಿತ್ತು. ರಾಷ್ಟ್ರಧ್ವಜ ಹಾರಿಸುವಂಥ ಸ್ಥಳದಲ್ಲಿ ಪಕ್ಷ ಧ್ವಜವನ್ನು ಹಾರಿಸುವುದಕ್ಕೆ ಜನರು ಮೇಲೆ ಹತ್ತಿ ನಿಂತುಕೊಂಡಿರುವ ಫೋಟೋಗಳನ್ನು ನಾನು ತಂದಿದ್ದೇ. ಅದನ್ನು ಗೃಹ ಮಂತ್ರಿಗಳಾಗಿರುವ ಸಿಂಧ್ಯರವರಿಗೆ ತೋರಿಸುತ್ತೇನೆ. ಇದು ಗೌರವ ತರುವಂಥ ಘಟನೆಯೇ? ಇದು ತಲೆ ತಗ್ಗಿಸುವಂಥ ಘಟನೆ ತಾನೆ? ಇದರ ಬಗ್ಗೆ ತನಿಖೆ ನಡೆಸುತ್ತೇವೆಂದು ಹೇಳಿದಿರಿ. ಯಾವ ತನಿಖೆ? ಪೋಲೀಸ್ ಕಮೀಷನರ್‌ರವರ ಸಮಕ್ಷಮದಲ್ಲೇ ಅಂತಹ ಅಪಮಾನಕರ ಘಟನೆಗಳಾದಾಗ ಯಾವ ತನಿಖೆಯಾಗುತ್ತದೆ? ಆಡಳಿತ ಪಕ್ಷದ ಪ್ರಭುಗಳ ವಿರುದ್ಧ ಪೋಲೀಸರು

ಯಾವ ಕ್ರಮ ತಾನೇ ತೆಗೆದುಕೊಳ್ಳುವುದಕ್ಕೆ ಸಾಧ್ಯ. ಅಂದರೆ ಯಾವುದೇ ರೀತಿಯಲ್ಲಿ ಅಧಿಕಾರಕ್ಕಾಗಿ ಕಚ್ಚಾಡುವುದಿಲ್ಲವೆಂದು ಹೇಳಿದಂಥ ನೀವುಗಳು ಮುಖ್ಯಮಂತ್ರಿಗಳ ಪ್ರಮಾಣ ವಚನ ಸ್ವೀಕಾರ ಮಾಡುವ ಸಂದರ್ಭದಲ್ಲಿ ಏನು ದುರ್ಘಟನೆ ನಡೆಯಿತು. ಅದು ಬಹುಶಃ ಇದು ನಿಮಗೆ ಗೌರವ ತರುವಂಥ ಸಂಗತಿಯಲ್ಲ. ವಿಧಾನಸೌಧದ ಮುಖ್ಯ ದ್ವಾರದ ಕಬ್ಬಿಣದ ಗೇಟುಗಳನ್ನು ಮುರಿದು ಹಾಕಿದರು. ನೀವು ಅಧಿಕಾರಕ್ಕೆ ಬರುತ್ತಿದ್ದಂತೆ ನಿಮ್ಮ ಕಾರ್ಯ ಲುಕ್ಸಾನದಲ್ಲೇ ಪ್ರಾರಂಭವಾಯಿತು. ಅದಕ್ಕೋಸ್ಕರ ಸನ್ಮಾನ್ಯ ಗೃಹ ಸಚಿವರಿಗೆ ಒಂದು ಕಿವಿ ಮಾತು ಹೇಳುತ್ತೇನೆ. ಇದೊಂದು ಪರಂಪರೆಯಾಗಬಹುದು. ದಯಮಾಡಿ ಈ ಪೀಠೋಪಕರಣಗಳನ್ನು ದುರಸ್ತಿ ಮಾಡುವುದಕ್ಕೆ ಮತ್ತು ಒಡೆದ ಗಾಜುಗಳನ್ನು ರಿಪೇರಿ ಮಾಡುವುದಕ್ಕೆ ಹಾಗೂ ಮುರಿದ ಕಬ್ಬಿಣದ ಗೇಟುಗಳನ್ನು ಮತ್ತೆ ರಿಪೇರಿ ಮಾಡಿಸುವುದಕ್ಕೆ ಎಷ್ಟೆಲ್ಲಾ ಹಣ ಖರ್ಚಾಗಿದೆಯೋ ಅಷ್ಟೂ ಹಣವನ್ನು ಜನತಾ ದಳ ಪಕ್ಷದ ನಿಧಿಯಿಂದ ತುಂಬಿಕೊಟ್ಟರೆ ಬಹುಶಃ ಸ್ವಲ್ಪವಾದರೂ......

ಶ್ರೀ ಡಿ.ಟಿ. ಜಯಕುಮಾರ್:– ಅಧ್ಯಕ್ಷರೆ, ಇದನ್ನು ಜನತಾದಳದವರೇ ಮಾಡಿಸಿದ್ದಾರೆ ಎನ್ನುವುದಕ್ಕೆ ಏನಾದರೂ ಪುರಾವೆ ಇದೆಯೇ ? ಪಟ್ಟಭದ್ರ ಹಿತಾಸಕ್ತಿಗಳು, ನಮ್ಮ ಪಕ್ಷದವರು ಅಲ್ಲದವರು ಈ ಕೃತ್ಯವನ್ನು ಮಾಡಿರಬಹುದು, ಹೆಗಡೆ ಮತ್ತು ದೇವೇಗೌಡರಿಗೆ ತಂದಿಡಲು ಮಾಡಿರಬಹುದು, ಅಭಿಮಾನಿಗಳು ಮಾಡತಕ್ಕ ಕಲಸವಿದಲ್ಲ. ಯಾರೋ ಪಟ್ಟಭದ್ರಹಿತಾಸಕ್ತಿಗಳು ಮಾನ್ಯ ಹೆಗಡೆಯವರು ಮತ್ತು ದೇವೇಗೌಡರಿಗೆ ಮನಸ್ತಾಪವನ್ನು ತಂದಿಡಲು ಮಾಡಿರತಕ್ಕ ಕೃತ್ಯವೇ ಹೊರತು ಇದು ಯಾರೇ ಅಭಿಮಾನಿ ಮಾಡತಕ್ಕ ಕೆಲಸವಿಲ್ಲ. ಅದು ಯಾವುದೇ ಪಕ್ಷದವರಾಗಿರುವ ಕಾಂಗ್ರೆಸ್ ಪಕ್ಷದವರಾಗಿರಲಿ, ನಮ್ಮ ಪಕ್ಷದವರಾಗಿರಲಿ ನಿಜವಾದ ಅಭಿಮಾನಿಗಳು ಮಾಡತಕ್ಕ ಕೃತ್ಯವಿದಲ್ಲ. ಯಾರೋ ಪಟ್ಟಭದ್ರಹಿತಾಸಕ್ತಿಗಳು ಮಾಡಿದ್ದಾರೆ. ಅದನ್ನು ತನಿಖೆ ನಡೆಸಲು ಹೇಳಿದ್ದೇವೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಜನತಾ ದಳದವರು ನಷ್ಟವನ್ನು ತುಂಬಿ ಕೊಡಿ ಎಂದರೆ ಅರ್ಥವೇನು ? ಜನತಾದಳದವರು ತಪ್ಪು ಮಾಡಿದ್ದಾರೆಂದು ನೀವು ಹೇಳತಕ್ಕಂಥ ಮಾತು. ಅದಕ್ಕೆ ನಿಮ್ಮಲ್ಲಿ ಏನಾದರೂ ಪುರಾವೆಗಳು ಇದೆಯೇ ?

ಶ್ರೀ ತಿಪ್ಪೇಸ್ವಾಮಿ (ಅಬ್ಕಾರಿ ಸಚಿವರು):– ಅಧ್ಯಕ್ಷರೆ ವಿರೋಧ ಪಕ್ಷದ ನಾಯಕರು ಹೇಳಿದಂತೆ ಈ ದುರ್ಘಟನೆ ನಡೆದಿರತಕ್ಕದ್ದು ನಮ್ಮ ಮುಖ್ಯಮಂತ್ರಿಗಳ ಚುನಾವಣೆ ಆದಮೇಲೆ. ನಮ್ಮ ಅಭಿಮಾನಿಗಳೇ ಆಗಿದ್ದರೆ ದೇವೇಗೌಡರನ್ನು ಮುಖ್ಯಮಂತ್ರಿಗಳೆಂದು ಘೋಷಣೆ ಮಾಡಿದ ಮೇಲೆ, ನಮ್ಮ ನಾಯಕರಾದಂಥ ರಾಮಕೃಷ್ಣ ಹೆಗಡೆಯವರನ್ನು ಈ ಒಂದು ದುರ್ಘನೆಗೆ ಗುರಿ ಮಾಡುತ್ತಿರಲಿಲ್ಲ. ನಮಗನ್ನಿಸುತ್ತದೆ. ನಾಯಕರನ್ನು ಚುನಾವಣೆ ಮಾಡುವುದಕ್ಕಿಂತ ಮೊದಲು ಈ ಘಟನೆ ನಡೆದಿದ್ದರೆ ಇದರಲ್ಲಿ ನಮ್ಮ ಪಾಲು ಇರುತ್ತಿತ್ತು ಎಂದು ಅನ್ನಿಸುತ್ತಿತ್ತು. ಆದರೆ ನಮ್ಮ ನಾಯಕರಾದ ದೇವೇಗೌಡರನ್ನು ಮುಖ್ಯಮಂತ್ರಿಗಳಾಗಿ ಮಾಡಿದ ಮೇಲೆ ಈ ಘಟನೆ ಆಗಿರುವುದರಿಂದ ಇದರಲ್ಲಿ ಬೇರೆಯವರ ಕೈವಾಡವಿರುತ್ತದೆಂದು ನನ್ನ ಅನಿಸಿಕೆ.

ಶ್ರೀ ರಮಾನಾಥ್ ರೈ:– ಇದು ಜಗತ್ತಿಗೇ ಗೊತ್ತಿರತಕ್ಕ ವಿಚಾರ. ಅದರ ಬಗ್ಗೆ ಯಾವುದೇ ವ್ಯಾಖ್ಯಾನ ಬೇಕಾಗಿಲ್ಲ. ಅದಕ್ಕೆ ಸಿಬಿಐ ಮುಂತಾದ ವಿಚಾರಣೆ ಎಂದು ಹೇಳುತ್ತೀರಿ. ತಾವು ಈ ರೀತಿ ಏಕೆ ಮಾತನಾಡುತ್ತೀರಿ ? ನಿಜ ವಿಚಾರ ಎಲ್ಲರಿಗೂ ಗೊತ್ತಿದೆ ತಾವೇನೆ ಹೇಳಿದರೂ ಜನರು ನಂಬುವುದಿಲ್ಲ.

ಶ್ರೀ ಹೆಚ್.ಎಸ್. ನಂಜೇಗೌಡ:– ಸಾಲಗಾರ ಸುಮ್ಮನಿದ್ದರು ಸಾಕ್ಷಿಗಾರ ಸುಮ್ಮನಿರುವುದಿಲ್ಲವೆಂದು ಒಂದು ಗಾದೆ ಮಾತಿದೆ. ಹೊಡೆಸಿಕೊಂಡವರು ನನಗೆ ಬಹುಮಾನ ಸಿಕ್ಕರುವುದು ಚಪ್ಪಲಿ ಏಟು ಎಂದು ಮಾಜಿ ಮುಖ್ಯಮಂತ್ರಿಗಳು, ಜವಾಬ್ದಾರಿ ಸ್ಥಾನದಲ್ಲಿರತಕ್ಕವರು, ಕರ್ನಾಟಕ ರಾಜ್ಯದಿಂದ ಅಖಿಲ ಭಾರತ ಮಟ್ಟಕ್ಕ ಬೆಳೆದುಕೊಂಡಂಥ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಬಾಯಿ ಮಾತಿನಲ್ಲಿ

ಈ ಮಾತು ಬಂದಿರಬೇಕಾದರೆ ತಾವು ಉಳಿದಿರತಕ್ಕ ಸಾಕ್ಷಿಯನ್ನೆಲ್ಲ ಏಕೆ ಹೇಳುತ್ತೀರಿ ? ಹೇಳಬೇಕಾದ ಅವಶ್ಯಕತೆ ಇದೆಯೇ ?

ಶ್ರೀ ಡಿ.ಟಿ. ಜಯಕುಮಾರ್:- ಎಲ್ಲರಿಗಿಂತ ಹೆಚ್ಚಿನ ಗೌರವ ನಮ್ಮ ನಾಯಕರಾದ ರಾಮಕೃಷ್ಣ ಹೆಗಡೆಯವರ ಮೇಲಿ ನಮಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಇದನ್ನು ಮುಂದುವರಿಸಿಕೊಂಡು ಹೋಗುವುದಿಲ್ಲ. ಆದರೆ ಇಲ್ಲಿ ಕುಳಿತು ನನ್ನ ಕರ್ತವ್ಯವಿದೆ, ಏನು ಅವತ್ತು ಆ ದುರ್ಘಟನೆ ನಡೆಯಿತು ಅದರ ಬಗ್ಗೆ ತನಿಖೆ ಮಾಡುತ್ತೇವೆಂದು ಹೇಳಿದ್ದೀರಿ. ಅದರ ಸತ್ಯ ಸಂಗತಿಯ ವರದಿಯನ್ನು ಇಲ್ಲಿ ಇವತ್ತು ಇಡಬೇಕಾಗುತ್ತದೆ. ಸನ್ಮಾನ್ಯ ನಂಜೇಗೌಡರು ಹೇಳಿದಂತೆ ಅನೇಕ ಪತ್ರಿಕಾ ಗೋಷ್ಠಿಗಳಲ್ಲಿ, ಸಂದರ್ಶನದಲ್ಲಿ ಸ್ವತಃ ರಾಮಕೃಷ್ಣ ಹೆಗಡೆಯವರೇ ಹೇಳಿದಂಥ ವಿವರಗಳು ಈ ದೇಶದ ಜನರಿಗೆ ಗೊತ್ತಿದೆ. ಅದಕ್ಕೆ ಬೇರೆ ಹೇಳಿದರೆ, ಬಹುಶಃ ಸತ್ಯವನ್ನು ಮುಚ್ಚಿಹಾಕಲು ಸಾಧ್ಯವಿಲ್ಲವೆನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ಯಾವ ರೀತಿ ಅವತ್ತು ಅಲ್ಲಿ ಪ್ರಾರಂಭವಾಯಿತು. ಹೇಗೊ ಆತುರವಾಗಿ ದೇವೇಗೌಡರನ್ನು ನಮ್ಮ ಸ್ನೇಹಿತರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಬೇಕಾಗಿತ್ತು. ಮಾಡಿ, ನಿಮಗೆ ಸ್ವಾತಂತ್ರ್ಯ ಇದೆ. ಆದರೆ ನಮ್ಮ ಮುಖ್ಯ ಕಾರ್ಯದರ್ಶಿಯವರಿಗೆ, ಕಾನೂನು ಕಾರ್ಯದರ್ಶಿಯವರಿಗೆ, ಇಲಾಖೆಯವರಿಗೆ, ನಮ್ಮ ಪ್ರಧಾನಿಯವರಿಗೆ ಆತುರವಿತ್ತೇ ? ನಮ್ಮ ದೇಶದ ಇತಿಹಾಸದಲ್ಲಿ ದಾಖಲೆಗಳನ್ನು ತೆಗೆದು ನೋಡಿದರೆ, ಹಿಂದಿನ ವಿಧಾನ ಸಭೆಯನ್ನು ವಿಸರ್ಜನೆ ಮಾಡದೆಯೇ ಹೊಸದಾಗಿ ಮುಖ್ಯ ಮಂತ್ರಿಗಳನ್ನು 9ನೇ ವಿಧಾನ ಮಂಡಲದ ಸದಸ್ಯರು ಅವಧಿ 17ನೇ ತಾರೀಖಿನವರೆಗೆ ಮುಂದುವರೆಯುತ್ತಿದೆ, 11ನೇ ತಾರೀಖು ಮುಖ್ಯ ಮಂತ್ರಿಗಳು ರಾಜಭವನದಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸುತ್ತಾರೆ, ಅದೇ ದಿವಸ ಇದೇ ಸದನದೊಳಗೆ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ ನಡೆಯಿತು. ಇದು ಸನ್ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಗೊತ್ತು. ಅದು 12ನೇ ತಾರೀಖು ನಡೆಯಿತು. ನಾವು ಇದರ ಬಗ್ಗೆ ರಾಜ್ಯಪಾಲರಿಗೆ ಮನವಿಯನ್ನು ಕೊಟ್ಟೆವು. ಸನ್ಮಾನ್ಯ ಹಿರಿಯರಾದಂಥ ಮಾಜಿ ಮುಖ್ಯಮಂತ್ರಿಗಳಾದಂಥ ವೀರಪ್ಪಮೊಯಿಲಿಯವರು ಇಲ್ಲಿ ಇಲ್ಲ. ಆದರೆ ಆವತ್ತು ನಿಜವಾಗಿಯೂ ವಿಧಾನ ಸಭೆಯನ್ನು ವಿಸರ್ಜನೆ ಮಾಡಿ ನನ್ನ ಕಾಲ ಮುಗಿದಿದೆ. ನನ್ನ ಅವಧಿ ಮುಗಿದಿದೆ ಎಂದು ಹೇಳಬೇಕಾಗಿತ್ತು. ಆಕಸ್ಮಾತ್ ಅದನ್ನು ವಿಸರ್ಜನೆ ಮಾಡಲಿಲ್ಲ. ರಾಜ್ಯಪಾಲರ ಕರ್ತವ್ಯ ಇತ್ತು ರಾಷ್ಟ್ರಪತಿಗಳಿಗೆ ವಿಧಾನ ಸಭೆಯ ವಿಸರ್ಜನೆಗೆ ಶಿಫಾರಸ್ಸು ಮಾಡಿ ನಂತರ ಪ್ರಮಾಣ ವಚನ ಸ್ವೀಕರಿಸಬೇಕಾಗಿತ್ತು. ಈಗ ಯಾವ ಪರಿಸ್ಥಿತಿ ಬಂದಿದೆ ಎಂದರೆ, ನೀವು ಆಶ್ಚರ್ಯಪಡತಕ್ಕ ಸ್ಥಿತಿ ಬರಬಹುದು. ಹೈಕೋರ್ಟ್‌ನಲ್ಲಿ ಪಬ್ಲಿಕ್ ಲಿಟಿಗೇಷನ್ ರಿಟ್ ಒಂದು ಫೈಲ್ ಆಗಿದೆ ಅದರ ಪರಿಣಾಮ ಈ ರಾಜ್ಯದ ಮುಖ್ಯ ಮಂತ್ರಿಗಳು ಮತ್ತೆ ಹೊಸದಾಗಿ ಪ್ರಮಾಣ ವಚನ ಸ್ವೀಕಾರ ಮಾಡಬೇಕಾದಂಥ ಪರಿಸ್ಥಿತಿ ಬಂದರೂ ಬರಬಹುದು. ಸ್ವತಃ ರಾಜ್ಯಪಾಲರನ್ನೇ ಭೇಟಿ ಮಾಡಿದಾಗ ಅವರು ಹೇಳಿದರು ಎಲ್ಲಿ ನಮ್ಮ ಈಗ ಇರತಕ್ಕ ಮುಖ್ಯಮಂತ್ರಿಗಳು ಯಾವುದೇ ಪಾಲಿಸಿ ಡಿಸಿಷನ್ ತೆಗೆದುಕೊಳ್ಳುತ್ತಿಲ್ಲವೆಂದರು. ಅವರು ಅಲ್ಲೇ ತೋರಿಸಿದರು ಇಲ್ಲಿ ತಪ್ಪಾಗಿದೆಯೆಂದು ಅರ್ಥವಾಗುತ್ತಿತ್ತು. ತಾರೀಖು 17ರ ನಂತರ ಪ್ರಮಾಣ ವಚನ ಸ್ವೀಕಾರ ಮಾಡಿಸಿ ಎಂದು ನಾವು ಹೇಳಿದೆವು. ಮಾನ್ಯ ರಾಜ್ಯಪಾಲರು ಹೇಳಿದರು, ಹೊಸದಾಗಿ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಏನು ಪಡೆದಿದ್ದಾರೆ ಅವರು ಯಾವುದೇ ಪಾಲಿಸೀ ಡಿಸಿಷನ್ ತೆಗೆದುಕೊಳ್ಳುತ್ತಿಲ್ಲ. ನಾನು ಹೇಳಲಿಲ್ಲ. ಕೊನೆಗೆ ಮುಖ್ಯಮಂತ್ರಿಗಳಿಗೆ ಅರಿವಾಗಿ ಅವರು ಹೇಳಿದರು. ಇಲ್ಲಾ ಈ ಒಂದು ಗೊಂದಲದ ವಾತಾವರಣ ಇರುವುದರಿಂದ ಅವತ್ತಿನ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲಿಯವರು ವಿಧಾನಸಭೆ ವಿಸರ್ಜನೆ ಮಾಡದೆ ಇರುವುದರಿಂದ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವಂಥ ನೋಟಿಫಿಕೇಷನ್ ಹೊರಡಿಸದೆ ಇರುವುದರಿಂದ ನಾನು ಯಾವುದೇ ಪಾಲಿಸಿ ತೆಗೆದುಕೊಳ್ಳುವುದಿಲ್ಲ ಎನ್ನುವ ಮಾತನ್ನು

ಸ್ವತಃ ಮುಖ್ಯಮಂತ್ರಿಗಳೇ ಒಪ್ಪಿಕೊಂಡರು. ಅಂದರೆ ಗಲಭೆಯಿಂದ, ಗೊಂದಲದಿಂದ ಮುಖ್ಯ ಮಂತ್ರಿಗಳ ಪ್ರಮಾಣ ವಚನ ಸ್ವೀಕಾರ ಕಾನೂನು ಬಾಹಿರವಾಗಿ ಎಲ್ಲವನ್ನೂ ಬದಿಗಿಟ್ಟು ಇವತ್ತು ಮುಖ್ಯಮಂತ್ರಿಗಳಾಗಿ ಅವರು ತಮ್ಮ ಸ್ಥಾನವನ್ನು, ಅಧಿಕಾರವನ್ನು ಸ್ವೀಕಾರ ಮಾಡುವಂತಹ ಒಂದು ಪರಿಸ್ಥಿತಿ ಇವತ್ತು ಈ ರಾಜ್ಯದಲ್ಲಿ ನಿರ್ಮಾಣವಾಗಿದೆ. ಸನ್ಮಾನ್ ಮೊಯಿಲಿಯವರು ಯಾವ ಉದ್ದೇಶದಿಂದ ರಾಜೀನಾಮೆ ಕೊಡಲಿಲ್ಲ. ವಿಧಾನಸಭೆಯನ್ನು ವಿಸರ್ಜನೆ ಮಾಡಲಿಲ್ಲ ಇದು ಅವರಿಗೆ ಬಿಟ್ಟಿದ್ದು. ಅವರ ಮೇಲೆ ನಾನು ಆರೋಪ ಹೊರಿಸಲಿಕ್ಕೆ ಸಿದ್ಧ ಇಲ್ಲ. ಈ ಕಡೆ ಅಧಿಕಾರಕ್ಕೆ ಬರುವವರ ಕರ್ತವ್ಯ ಇತ್ತು, ಕಾನೂನು ಪರಿಶೀಲನೆ ಮಾಡಿ ಲೀಗಲ್ ಒಪಿನಿಯನ್ ಪಡೆದು ಅವರು ಪ್ರಮಾಣವಚನ ಸ್ವೀಕರಿಸಬೇಕಾಗಿತ್ತು. ಮಾನ್ಯ ಸಿಂಧ್ಯರವರು ಈ ಕಡೆ ಗಮನಕೊಡಬೇಕು. ಚಿಕ್ಕದಾದ ಚೊಕ್ಕದಾಗ ಮಂತ್ರಿ ಮಂಡಲ ನಮ್ಮದು ಇರುತ್ತದೆ ಎಂದು ಎರಡು ದಿವಸಗಳ ಮುಂಚೆ ಮುಖ್ಯಮಂತ್ರಿಗಳು ಹೇಳಿದರು. ಆ ರೀತಿ ಹೇಳುವ ಅಗತ್ಯವಿಲ್ಲ, 50 ಜನ ಮಾಡಿಕೊಳ್ಳಿ ನಮ್ಮದು ಏನೂ ವಿರೋಧವಿಲ್ಲ. ಐದಾರು ವರ್ಷಗಳಾದ ಮೇಲೆ ಇಲ್ಲಿ ಅಧಿಕಾರಕ್ಕೆ ಬಂದಿದ್ದೀರಿ, ಇಲ್ಲಿ ಕುಳಿತಿದ್ದೀರಿ ಸಾಕಾಗಿದ್ದೀರಿ, 70 ರಿಂದ 80 ಜನ ಮಂತ್ರಿಗಳಾಗುವುದರಲ್ಲಿ ತಪ್ಪು ಏನು ಇದೆ. ಜನ ನಿಮಗೆ ಅಧಿಕಾರ ಕೊಟ್ಟಿದ್ದಾರೆ, ಅದನ್ನು ನಾನು ವಿರೋಧ ಮಾಡುವುದಿಲ್ಲ. ಆದರೆ ನಮ್ಮ ಮುಖ್ಯಮಂತ್ರಿಗಳು ವಿನಾ ಕಾರಣ ಈ ರಾಜ್ಯದ ಜನತೆಗೆ ಹೇಳುವ ಅಗತ್ಯ ಏನು ಇತ್ತು. 30 ಜನರ ಮಂತ್ರಿಮಂಡಲ, ಅದಕ್ಕಿಂತ ಜಾಸ್ತಿ ಆಗುವುದಿಲ್ಲ ಎಂದು ಹೇಳಿ, ಆನೆ ಗಾತ್ರದ ಜಂಬೋ ಜೆಟ್ ಒಂದು ಕ್ಯಾಬಿನೆಟ್‌ನ್ನು ತಾವು ರಚನೆ ಮಾಡಿದಿರಿ. ಅದು ಎಷ್ಟರಮಟ್ಟಿಗೆ ಗೌರವ ಬರುತ್ತದೆ. ಹೇಳಿದ ಯಾವುದಾದರೂ ಮಾತನ್ನು ಪ್ರಾರಂಭದ ದಿವಸಗಳಲ್ಲಿ ಪ್ರಾಮಾಣಿಕವಾಗಿ ಕಾರ್ಯರೂಪಕ್ಕೆ ತರುವ ಪ್ರಯತ್ನ ಮಾಡಿದರೇನು ? ಸನ್ಮಾನ್ಯ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಗಳಿದ್ದಾಗ ನಾನು ಈ ಕಡೆ ಕುಳಿತು ಟೀಕೆ ಮಾಡಿದಾಗ ವೇಗವಾಗಿ ಅಭಿವೃದ್ಧಿ ಕಾರ್ಯ ಮಾಡಬೇಕಾದರೆ ದೊಡ್ಡ ಮಂತ್ರಿಮಂಡಲ ಇರಬೇಕು ಎಂದು ಅವರು ರಾಜಾರೋಷವಾಗಿ ಹೇಳಿದರು. ಆದರೆ ಇವತ್ತು ಖಜಾನೆ ಖಾಲಿ ಆಗಿರಬೇಕಾದರೆ, ಪಿಯರ್ಲೆಸ್ ಕಂಪನಿಯಿಂದ ಬಡ್ಡಿ ಕೊಟ್ಟು ಇನ್ನೂರು ಕೋಟಿ ರೂಪಾಯಿಗಳನ್ನು ಸಾಲ ತಂದು ಸರ್ಕಾರ ನಡೆಸುತ್ತಾ ಇರಬೇಕಾದರೆ, ಇಷ್ಟು ದೊಡ್ಡ ಗಾತ್ರದ ಮಂತ್ರಿಮಂಡಲ ಅಗತ್ಯ ಇತ್ತೇ ? ಜನ ನಿಮ್ಮನ್ನು ಕ್ಷಮಿಸುತ್ತಾರೆಯೇ ? ಈ ಬಗ್ಗೆ ತಾವು ಯೋಚನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಬಹುಶಃ ಆಗಲೇ ನನಗೆ ಅನ್ನಿಸಿತು. ಇಲ್ಲಿಗೆ ಮುಗಿಯಿತೇನೋ ಎಂದು. ನಾನು ಈಗಲಾದರೂ ಜನತಾದಳದ ಶಾಸಕರಿಗೆ ಕಿವಿಮಾತು ಹೇಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಗೋಳುಹೊಯಿದುಕೊಳ್ಳಬೇಡಿ. ರಾಜ್ಯಪಾಲರ ಭಾಷಣ ಏಕೆ ಇಷ್ಟು ಚಿಕ್ಕದು ಆಯಿತು. ಏಕೆ ಚುನಾವಣಾ ಪ್ರಚಾರದಲ್ಲಿ ಹೇಳಿದ ಎಲ್ಲಾ ಸಂಗತಿಗಳನ್ನು ಅಳವಡಿಸಿ ರಾಜ್ಯಪಾಲರ ಭಾಷಣ ತಯಾರು ಆಗಲಿಲ್ಲ ಅಂದರೆ ಅದಕ್ಕೆ ಪುರುಸೊತ್ತಿಲ್ಲ. ಕೊನೆ ಗಳಿಗೆಯಲ್ಲಿ ಅನಿವಾರ್ಯವಾಗಿ 6 ರಿಂದ 7 ಪುಟದ ಕಾಟಾಚಾರದ ಒಂದು ಭಾಷಣ.

ಶ್ರೀ ಆರ್.ಎಲ್. ಜಾಲಪ್ಪ:- ಹೇಗಿದ್ದರೂ ಇನ್ನು ಒಂದು ತಿಂಗಳಲ್ಲಿ ನಾವು ಪುನಃ ಸಭೆ ಸೇರುತ್ತಿದ್ದೇವೆ, ಆಗ ಬಡ್ಜೆಟ್ ಸೆಷನ್ ಸೇರುವ ಮೊದಲು ಪೂರ್ಣ ವಿವರಗಳನ್ನು ಕೊಡಬಹುದು ಎಂದು ಹೇಳಿ ಇದನ್ನು ಚಿಕ್ಕದಾಗಿ ಮಾಡಿದ್ದೇವೆಯೇ ವಿನಃ ಪುರುಸೊತ್ತಿಲ್ಲ ಎಂದು ಅಲ್ಲ. ಇದಕ್ಕೆ ಎಷ್ಟು ಹೊತ್ತು ಬೇಕು, ಒಂದು ಗಂಟೆ ಬೇಕಾಗುತ್ತದೆ. ಒಂದು ಗಂಟೆಯೂ ಪುರುಸೊತ್ತಿಲ್ಲದ ಮುಖ್ಯಮಂತ್ರಿಗಳು ಬಹುಶಃ ಎಲ್ಲೂ ಇರಲಿಕ್ಕಿಲ್ಲ ಎಂದು ಕಾಣುತ್ತದೆ. ನೀವು ದಯವಿಟ್ಟು ಅದನ್ನು ಜಾಸ್ತಿ ಅರ್ಥೈಸಲಿಕ್ಕೆ ಹೋಗಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಜಾಲಪ್ಪನವರು ಹೇಳಿದ ಮೇಲೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಅವರು ಹೇಳಿದ ಮಾತು ನೀವು ಒಪ್ಪಿಕೊಂಡ ಮೇಲೆ ನೀವು ನಿಮ್ಮ ವಿಷಯವನ್ನು ಹಿಂದಕ್ಕೆ ತೆಗೆದುಕೊಂಡಿದ್ದೀರಿ ಎಂದು ಅರ್ಥವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾವು ಹೊಸದಾಗಿ ಕಚ್ಚಾಡುತ್ತಿದ್ದೇವೆ. ಬಹಿರಂಗ ಮಾಡ ಬೇಡಿ ಸ್ವಲ್ಪ ಉಸಿರು ಕಟ್ಟುವ ಸ್ಥಿತಿ ನಮ್ಮದು ಇದೆ. ಸ್ವಲ್ಪ ಸಮಯ ಕೊಡಿ ಎಂದು ಅವರು ಈ ಕಡೆ ಹೇಳುತ್ತಾರೆ. ಕರುಣೆಯಿಂದ ಸ್ವಲ್ಪ ಸಮಯ ಕೊಡುವುದಕ್ಕೆ ನಾವಂತೂ ಸಿದ್ಧರಿದ್ದೇವೆ. ರಾಜ್ಯಪಾಲರ ಭಾಷಣದಲ್ಲಿ ಏನಿದೆ. ತಾವು ಏನಾದರೂ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದಂಥ ಯಾವುದೇ ಸಂಗತಿಯನ್ನು ಅಳವಡಿಸಿದ್ದರೆ, ಯಾವುದೇ ಮಾತನ್ನು ನಾನು ಹೇಳುತ್ತಾ ಇರಲಿಲ್ಲ. ತಮಗೆ ಗೊತ್ತಿದೆ 1989ರಲ್ಲಿ ಸನ್ಮಾನ್ಯ ವಿ.ಪಿ. ಸಿಂಗ್‌ರವರ ನೇತೃತ್ವದ ಜನತಾದಳ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗ ರೈತ, ಕೃಷಿ ಕಾರ್ಮಿಕ, ನೇಕಾರ ಮತ್ತು ಗ್ರಾಮೀಣ ಕರಕುಶಲಕಾರ್ಮಿಕರ 10 ಸಾವಿರ ರೂಪಾಯಿವರೆಗಿನ ಸಾಲ ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಿದಿರಿ.

ಯಾವುದೋ ಒಂದು ಕಾನೂನಿನ ತೊಡಕು, ಬೇರೆಬೇರೆ ಕಾರಣಗಳಿಗೋಸ್ಕರ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ನಮ್ಮ ರಾಜ್ಯದಲ್ಲಿ ಆಗಲಿಲ್ಲ. ಶೇಕಡ 10 ಭಾಗದ ಜನರಿಗೂ ಆ ಸವಲತ್ತು ಸಿಗಲಿಲ್ಲ. ಅವತ್ತಿನಿಂದ ಇವತ್ತಿನವರೆಗೂ ಸತತವಾಗಿ ನಾವು ಹೋರಾಟ ಮಾಡಿಕೊಂಡು ಬಂದೆವು. ಅವೊತ್ತು ಮಾನ್ಯ ವೀರೇಂದ್ರ ಪಾಟೀಲರು ಅಲ್ಲ ಕುಳಿತುಕೊಂಡು ಹೇಳಿದರು, ಯಡಿಯೂರಪ್ಪನವರೆ, ವಿ.ಪಿ. ಸಿಂಗ್ ಸರ್ಕಾರಕ್ಕೆ ಇವತ್ತು ಬೆಂಬಲ ಕೊಟ್ಟಿದ್ದೀರಲ್ಲ, ಅವರು ಘೋಷಣೆ ಮಾಡಿದಂತಹ ಕಾರ್ಯಕ್ರಮಕ್ಕೆ ನೀವು ಡೆಲ್ಲಿಗೆ ಹೋಗಿ ಎಂದು. ಅದು ವಾಟಾಳ್ ನಾಗರಾಜ್‌ರವರಿಗೆ ಜ್ಞಾಪಕ ಇದೆ. ಶ್ರೀಮಾನ್ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ನಾವೆಲ್ಲಾ ಹೋಗಿದ್ದೆವು. ಹಣಕಾಸಿನ ಸಚಿವರನ್ನು ಕನ್‌ವಿನ್ಸ್ ಮಾಡುವಂತಹ ಪ್ರಯತ್ನ ಮಾಡಿದೆವು. ಈ ಕಾನೂನಿನಲ್ಲಿ ಇರುವಂತಹ ತೊಡಕಿನಿಂದ ಈ ಒಂದು ಕಾರ್ಯಕ್ರಮ ಕಾರ್ಯರೂಪಕ್ಕೆ ಬರುತ್ತಿಲ್ಲ. ಇದರಿಂದ ರೈತರಿಗೆ ಅನ್ಯಾಯವಾಗುತ್ತಿದೆ, ಇದನ್ನು ಸರಳಗೊಳಿಸಿ, ರೈತರಿಗೆ ಅನುಕೂಲ ಮಾಡಿಕೊಡುವ ಕಾರ್ಯಕ್ರಮ ಮಾಡಿ ಎಂದು ಹೇಳಿದೆವು. ಸನ್ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ರಾಜ್ಯಪಾಲರ ಭಾಷಣದಲ್ಲಿ 10 ಸಾವಿರ ರೂಪಾಯಿಯವರೆಗೆ ಸಾಲ ಮನ್ನಾ ಆಗಿದೆ ಎಂದು ಘೋಷಣೆಯನ್ನು ಮಾಡಿಬಿಟ್ಟರು. ಆದರೆ ಅದು ಕಾರ್ಯರೂಪಕ್ಕೆ ಬರಲಿಲ್ಲ. ನಾನು ಅಂದುಕೊಂಡಿದ್ದೆ, ಕೊನೆಯ ಪಕ್ಷ ಈ ನಾಡಿನ ಜನರ ಆಶೀರ್ವಾದದದಿಂದ ಅಲ್ಲಿ ಅಧಿಕಾರಕ್ಕೆ ಬಂದಂತಹ ನೀವು ಮೊದಲ ಬಾರಿಗೆ ಬೇಕಾದದ್ದು ಅಡ್ಡಿ ಆತಂಕಗಳು ಬರಲಿ, ಈ ನಾಡಿನ ಜನಕ್ಕೆ ಅನ್ನಕೊಡುವಂತಹ ಅನ್ನದಾತ ಸಾಲದಲ್ಲಿ ಸಾಯುವಂತಹ ಒಂದು ಪರಿಸ್ಥಿತಿ ಏನು ಬಂದಿದೆ ಅವನಿಗೆ ವಿ.ಸಿ. ಸಿಂಗ್ ಹೇಳಿದ ಭರವಸೆಯಂತೆ ಕೊನೇಪಕ್ಷ 10 ಸಾವಿರ ರೂಪಾಯಿಯವರೆಗೂ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡುತ್ತೀರಿ ಎಂದು ನಾನಾದರೂ ತಿಳಿದುಕೊಂಡಿದ್ದೆ. ಆದರೆ ತಾವು ಮಾಡಲಿಲ್ಲ. ನಾನು ಹೇಳುತ್ತೇನೆ, ಈ ಮಣ್ಣಿನ ಮಕ್ಕಳು ನಿಮ್ಮನ್ನು ಕ್ಷಮಿಸುವುದಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದೀರಿ ?

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಯಡಿಯೂರಪ್ಪ ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ತಾವು ಕೊನೇಪಕ್ಷ ಈ ಸಾಲದ ಮೇಲೆ ಇರತಕ್ಕಂಥ ಬಡ್ಡಿ ಮತ್ತು ಚಕ್ರಬಡ್ಡಿಯನ್ನಾದರೂ ಮನ್ನಾ ಮಾಡಿದರೆ ನಾನು ಅದನ್ನು ಸ್ವಾಗತ ಮಾಡುತ್ತೇನೆ ಎನ್ನುವಂತಹ ಮಾತನ್ನು ಹೇಳಿದ್ದಿರಿ. ನಾವು ಯಾವ ರೀತಿ ಚುನಾವಣಾ ಪ್ರಣಾಳಿಕೆಯಲ್ಲಿ ಮಾತು ಕೊಟ್ಟಿದ್ದೇವೋ ಅದೇ ತರಹ ಇವತ್ತು ಮನ್ನಾ ಮಾಡತಕ್ಕಂಥ ಕ್ರಮವನ್ನು ನಾವು ಮಾಡಿದ್ದೇವೆ. ಅದನ್ನಾದರೂ ತಾವು ಸ್ವಾಗತ ಮಾಡುವುದು ಬೇಡವೇ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಸಿಂಧ್ಯರವರು ಪತ್ರಿಕೆಯನ್ನು ಓದಲಿಲ್ಲ. ನೀವು

ಪತ್ರಿಕೆಯಲ್ಲಿ ನೋಡಿ. ನಾನು ಈಗ ಸ್ವಾಗತ ಮಾಡುತ್ತಿದ್ದೆ. ಈಗ ಇಲ್ಲಿ ಮಾಡುತ್ತೇನೆ. ನಾನು ಏನು ಹೇಳುವುದಕ್ಕೆ ಹೊರಟೆ ಎಂದರೆ ಅದು ನಿಮ್ಮ ಆದ್ಯಕರ್ತವ್ಯ ಇತ್ತು, ಅವತ್ತು ನೀವು ಕೊಟ್ಟಂತಹ ಭರವಸೆಯನ್ನು ಈಡೇರಿಸುವಂತಹ ಒಂದು ಕರ್ತವ್ಯವನ್ನು ಮಾಡಬೇಕಾಗಿತ್ತು ಎನ್ನುವುದು ಮೊದಲನೆಯದು. ಎರಡೆಯದು ನಿಮ್ಮ ಸಾಲ ಮನ್ನಾ ಯೋಜನೆ ಹೇಗೆ ಇದೆ. ಸುಸ್ತಿ ಬಡ್ಡಿ ಮನ್ನಾ ಯೋಜನೆ ಹೇಗೆ ಇದೆ. ಇಲ್ಲಿ ರೈತಾಪಿ ಹಿನ್ನಲೆಯಲ್ಲಿ ಬಂದಿರತಕ್ಕ ಶಾಸಕರು ನಾವೆಲ್ಲಾ ಇದ್ದೇವೆ. ಯಾರು ವಿಲ್‌ಫುಲ್ ಡಿಫಾಲ್ಟರ್ ಇದ್ದಾರೆ, ಒಂದಲ್ಲ ಒಂದು ಕಾರಣಕ್ಕಾಗಿ ಸಹಕಾರ ಸಂಘಗಳಿಗೆ ಸಾಲ ಕಟ್ಟುವುದಿಲ್ಲ, ಅದರಲ್ಲಿ ಕೆಲವರು ಬಡವರು ಇರಬಹುದು. ಕಟ್ಟುವುದಕ್ಕೆ ಶಕ್ತಿ ಇಲ್ಲದೆ ಇರುವವರು ಇರಬಹುದು, ಕೆಲವರು ಇದೇ ಒಂದು ಪದ್ಧತಿಯನ್ನು ಅನುಸರಿಸಿ ಕೊಂಡು ಬಂದವರು ಇರಬಹುದು. ಅವರಿಗೆ ಇದರಿಂದ ಅನುಕೂಲವಾಗುತ್ತದೆ. ಅದಕ್ಕೆ ತಾವು ಈ ಒಂದು ಯೋಜನೆಯನ್ನು ಜಾರಿಗೆ ತರುವುದಕ್ಕೆ ಮುಂಚೆ ಕೊನೇಪಕ್ಷ ನಿಮಗೆ 10 ಸಾವಿರ ರೂಪಾಯಿವರೆಗೆ ರೈತನ ಸಾಲ ಮನ್ನಾ ಮಾಡುವುದಕ್ಕೆ ಸಾಧ್ಯವಿಲ್ಲದೆ ಇರುವಂತಹ ಒಂದು ಹಣಕಾಸಿನ ಪರಿಸ್ಥಿತಿ ಹದಗೆಟ್ಟಿದೆ ಎನ್ನುವುದಾದರೆ ಸಹಕಾರ ಸಂಘಗಳಿಂದ ಪಡೆದಿರುವಂತಹ ಎಲ್ಲಾ ರೈತರ ಎಲ್ಲಾ ರೀತಿಯ ಸಾಲದ ಮೇಲೆ ಏನು ಬಡ್ಡಿ ಸುಸ್ತಿ ಬಡ್ಡಿಯನ್ನು ನೀವು ಮನ್ನಾ ಮಾಡಿದ್ದೀರಿ ಅದೇ ರೀತಿ ರಾಷ್ಟ್ರೀಕೃತ ಬ್ಯಾಂಕುಗಳಿಂದಲೂ ರೈತ ಕೃಷಿ ಕಾರಣಕ್ಕಾಗಿ ಸಾಲ ಪಡೆದಿದ್ದಾನೆ. ಇವತ್ತು ಸಭಾನಾಯಕರು ಗಮನಕೊಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಯಾವಾಗ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಕೃಷಿ ಕಾರಣಕ್ಕಾಗಿ ರೈತ ಸಾಲವನ್ನು ಪಡೆದಿದ್ದಾನೆ ಅವನ ಸಾಲವನ್ನು ಅದರ ಮೇಲಿರುವಂತಹ ಬಡ್ಡಿಯನ್ನು ಸರ್ಕಾರ ತುಂಬಿಕೊಡಬೇಕು ಎಂದು ಸಭಾನಾಯಕರಿಗೆ ನಾನು ಒತ್ತಾಯ ಮಾಡುತ್ತೇನೆ. ಸಹಕಾರ ಸಂಘಗಳಿಗೂ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಗೂ ಏನೂ ವ್ಯತ್ಯಾಸ ಇಲ್ಲ. ಅಲ್ಲಿ ಏನು ಸವಲತ್ತು ಇದೆ, ಯಾವ ಬ್ಯಾಂಕಿನಿಂದ ಅವನು ಸಾಲ ತೆಗೆದುಕೊಂಡಿದ್ದಾನೆ ಆ ಸಾಲ ಕಟ್ಟುವುದಕ್ಕೆ ಆಗಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ:– ಸಹಕಾರ ಸಂಸ್ಥೆಗಳಿಗೆ ಮಾರ್ಜಿನ್ ಬಹಳ ಕಡಿಮೆ ಇದೆ. ಅರ್ಧ ಪರ್ಸೆಂಟ್, 1 ಪರ್ಸೆಂಟ್ ಮತ್ತು ಅಲ್ಟಿಮೇಟ್ ಬಾರೋಅರ್‌ಗೆ ಪ್ರೈಮರಿ ಸೊಸೈಟಿಯಿಂದ ಕೊಡುವಾಗ 2 ಪರ್ಸೆಂಟ್ ಬಹಳ ಕಡಿಮೆ ಮಾರ್ಜಿನ್ ಇದೆ. ಆದರೆ ಈ ರಾಷ್ಟ್ರೀಕೃತ ಬ್ಯಾಂಕುಗಳ ಮಾರ್ಜಿನ್ ಬಹಳ ಜಾಸ್ತಿ ಇದೆ. ಆ ಮಾರ್ಜಿನ್‌ನಲ್ಲಿ ಅವರು ಸಾಲ ಬಿಡಬಹುದು. ಇನ್ನು 3 ಅಥವಾ 6 ತಿಂಗಳಿಗೆ ಒಂದು ಸಾರಿ ಬಡ್ಡಿ ಸಲೀಸಾಗಿ ಬರದಿದ್ದಾರೆ ಅದನ್ನು ಕ್ಯಾಪಿಟಲೈಸ್ ಮಾಡಿ ಅದರ ಮೇಲೆ ಬಡ್ಡಿ ಅವರು ತೆಗೆದುಕೊಳ್ಳುತ್ತಾರೆ. ಆದುದರಿಂದ ರೈತರು ಬೇಕಾದರೆ ಅಲ್ಲಿ ಗಲಾಟೆ ಮಾಡಿ ಬಡ್ಡಿ ಬಿಡಿಸಿಕೊಳ್ಳುವುದಕ್ಕೆ ಟ್ರೈ ಮಾಡಬಹುದು. ಇಲ್ಲಿ ನೀವು ಸಾಲ ಮನ್ನಾ ಮಾಡಿ ಎಂದು ಹೇಳುತ್ತೀರಿ. ಸಾಲ ಮನ್ನಾ ಮಾಡುವುದಕ್ಕೆ ಸಾಧ್ಯವಿಲ್ಲದ ಕೆಲಸ. ಏಕೆಂದರೆ, ಇದು ಡೆಪಾಸಿಟರ್ ದುಡ್ಡು, ಅವರು ಒಪ್ಪುವುದಿಲ್ಲ. ಇದು ನಬಾರ್ಡ್‌ನಲ್ಲಿ ಸಾಲ ಮಾಡಿರುವ ದುಡ್ಡು. ಅವರು ಒಪ್ಪುವುದಿಲ್ಲ. ಈ ಬಡ್ಡಿಗೆ ಒಪ್ಪುವುದಿಲ್ಲ. ನಿಮ್ಮ ಸಹಕಾರ ನಮಗೆ ಬೇಕಾಗುತ್ತದೆ. ಇವತ್ತು ನಾವು ಏನು ಕೆಲಸ ಮಾಡಿದ್ದೇವೆ ಒನ್ ಟೈಂ ಅಪರೇಷನ್ ಎಂದು ಕನ್‌ವಿನ್ಸ್ ಮಾಡಿಸಬೇಕು ಎಂದು ನಾವು ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಹೆಚ್.ಡಿ. ದೇವೇಗೌಡ:– ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವುದನ್ನೆಲ್ಲಾ ತೆಗೆದುಕೊಳ್ಳಬೇಕು. ಅವರು ಕೊಡುವುದನ್ನೆಲ್ಲಾ ನಾನು ಸ್ವೀಕಾರ ಮಾಡುತ್ತೇನೆ. ನಾನು ಕೊಡುವಾಗ ಅವರು ಸ್ವೀಕಾರ ಮಾಡಲು ಸಿದ್ಧರಾಗಿರಬೇಕು. ನನಗೆ ಗೊತ್ತಿದೆ. ನಾನೇನು ಈ ಸಭೆಗೆ ಹೊಸಬನಲ್ಲ. ನೀವು ಕೊಡುವುದನ್ನೆಲ್ಲಾ ಆನಂದದಿಂದ ಸ್ವೀಕಾರ ಮಾಡುತ್ತೇನೆ. ನಾನು ಇಲ್ಲದೇ ಇದ್ದಾಗ ಸಭೆಯ ಹೊರಗಡೆ ನಡೆದಿರುವುದನ್ನೆಲ್ಲಾ ಹೇಳಿದ್ದೀರಿ. ಬೇಕಾದರೆ ನೀವು ಈ ಸಭೆಯಲ್ಲೇ ಕುಳಿತುಕೊಳ್ಳಿ ಅದರ ಬಗ್ಗೆ ಅನಂತರ ಮಾಹಿತಿ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಮುಖ್ಯಮಂತ್ರಿಗಳೇನು ನಮಗೆ ಬೆದರಿಕೆ ಹಾಕುತ್ತಿದ್ದೀರಾ ? ನಾವು ಇಲ್ಲಿ ಕುಳಿತೇ ಕುಳಿತುಕೊಳ್ಳುತ್ತೇವೆ. ನಾವೇನು ಹೆದರಿ ಓಡಿಹೋಗುವವರಲ್ಲ.

ಶ್ರೀ ಹೆಚ್.ಡಿ. ದೇವೇಗೌಡ:– ನಾವು ನಿಮಗೆ ಎಳ್ಳಷ್ಟೂ ಅಡಚಣೆ ಮಾಡುವುದಿಲ್ಲ. ನೀವು ಏನು ಬೇಕಾದರೂ ಈ ಸಭೆಯ ಕಾರ್ಯಕಲಾಪಗಳ ವ್ಯಾಪ್ತಿಯಲ್ಲಿ ಟೀಕೆ ಮಾಡಿ, ಅದನ್ನು ನಾನು ಆನಂದದಿಂದ ಸ್ವೀಕಾರ ಮಾಡುತ್ತೇನೆ. ಉಳಿದುದನ್ನು ಉತ್ತರ ಕೊಡುವಾಗ ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂಥ ಮಾತು ಸರಿಯಾಗಿದೆ. ಇವತ್ತು ಈ ವಿರೋಧ ಪಕ್ಷದಲ್ಲಿ ನಾವು ಈ ಸ್ಥಾನದಲ್ಲಿ ಕುಳಿತುಕೊಂಡು ಈ ರಾಜ್ಯದಲ್ಲಿ ಏನೋ ಎಲ್ಲಾ ಆಗುಹೋಗುಗಳು ಆಗುತ್ತದೆ.

ಶ್ರೀ ಹೆಚ್.ಎನ್. ನಂಜೇಗೌಡ:– ಮುಖ್ಯಮಂತ್ರಿಗಳು ಸುಮ್ಮನೆ ನೊಂದುಕೊಂಡು ಎಮೋಷನಲ್ ಆಗಿಬಿಡುತ್ತೀರಲ್ಲ ಏಕೆ ? ಅಷ್ಟೊಂದು ಸೆನ್‌ಸಿಟೀವ್ ಆಗಬೇಡಿ.

ಶ್ರೀ ಹೆಚ್.ಡಿ. ದೇವೇಗೌಡ:– ನಾನು ನಿಮಗಲ್ಲ ಹೇಳಿದ್ದುದು ಆ ರೀತಿ, ನಮ್ಮ ಸ್ನೇಹಿತರಿಗೆ ಹೇಳಿದ್ದುದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಈ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ:– ಯಾವುದೇ ಒಂದು ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ನಾವು ಅಡ್ಡಿ ಬರಬಾರದು. ಯಾವುದಾದರೂ ಅನ್ ಪಾರ್ಲಿಮೆಂಟರಿ ವಿಚಾರ ಬಂದಾಗ ಅದನ್ನು ತೀರ್ಮಾನ ಮಾಡುವ ಹಕ್ಕು ಅಧ್ಯಕ್ಷರಿಗೆ ಸೇರಿದ್ದುದು. ಆದ್ದರಿಂದ ನಾನು ಹೇಳುತ್ತೇನೆ, ತಾವು ರಾಜ್ಯಪಾಲರ ಭಾಷಣದ ಮೇಲೆ ಏನು ಬೇಕಾದರೂ ಮಾತನಾಡಬಹುದು, ಚರ್ಚೆ ಮಾಡಬಹುದು. ಅದಕ್ಕೆ ನನ್ನದೇನೂ ತಕರಾರಿಲ್ಲ. ಹೊರಗಡೆ ಏನೇನು ಘಟನೆಗಳಾಗಿದೆ ಅದು ಈ ರಾಜ್ಯಕ್ಕೆ, ರಾಷ್ಟ್ರಕ್ಕೇ ಗೊತ್ತಿದೆ. ಅದರ ಬಗ್ಗೆ ಸಂದರ್ಭ ಬಂದಾಗ ಹೇಳೋಣ. ಅದಕ್ಕೆ ತಮ್ಮ ಸಹೊದ್ಯೋಗಿಗಳು ಸಹಕರಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಆದ್ದರಿಂದ ರೈತರ ಈ ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡತಕ್ಕ ಸಂದರ್ಭದಲ್ಲಿ ಸರ್ಕಾರದ ಆದ್ಯ ಕರ್ತವ್ಯವಿದೆ. ಯಾವುದೇ ಕಾರಣಕ್ಕೆ ಸಹಕಾರಿ ಸಂಘಗಳು ಬೇರೆ ರಾಷ್ಟ್ರೀಕೃತ ಬ್ಯಾಂಕುಗಳು ಬೇರೆ ಎಂಬುದನ್ನು ರೈತರ ದೃಷ್ಟಿಯಿಂದ ಬೇರ್ಪಡಿಸಬೇಡಿ. ಎಲ್ಲಿ ಸಹಕಾರ ಸಂಘಗಳಿಲ್ಲ. ಸಾಲ ಸಿಗಲಿಲ್ಲ ಅಲ್ಲಿ ಬ್ಯಾಂಕ್‌ನಿಂದ ಕೃಷಿ ಕಾರ್ಯಕ್ಕಾಗಿ ರೈತ ಸಾಲವನ್ನು ಪಡೆದಿದ್ದಾನೆ. ಇವತ್ತು ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಇದು ಆಗುವುದಿಲ್ಲ. ರೈತರೇನು ಅಪರಾಧ ಮಾಡಿದ್ದಾರೆ ? ಅದಕ್ಕಾಗಿ ನಾನು ಈ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಜಿ.ಬಿ. ಶಿವಕುಮಾರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಈಲ್ಡ್ ಆದರೆ.....

ಛೇರ್ಮನ್:– ಮಾನ್ಯ ಶಿವಕುಮಾರ್‌ರವರೆ, ವಿರೋಧ ಪಕ್ಷದ ನಾಯಕರು ಮಾತನಾಡತಕ್ಕ ಸಮಯದಲ್ಲಿ ಮಧ್ಯ ಪ್ರವೇಶಮಾಡಬೇಕಾದರೆ ಅವರು ಈಲ್ಡ್ ಆದಾಗ ಮಾಡುವುದು ಒಂದು ಸಂಪ್ರದಾಯ. ಆದರೆ ಪದೇ ಪದೇ ಎದ್ದು ನಿಂತುಕೊಳ್ಳುವುದು ಒಳ್ಳೆಯದಲ್ಲ. ಶಿವಕುಮಾರ್‌ರವರೆ ಅವರು ಈಲ್ಡ್ ಆಗಿಲ್ಲ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅದಕ್ಕಾಗಿ ಈ ರೈತರ ಪರವಾಗಿ ಮೂರು ಒತ್ತಾಯಗಳನ್ನು ಮಾಡುತ್ತಿದ್ದೇನೆ. ಕೊನೆಯ ಪಕ್ಷ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಕೃಷಿ ಕಾರ್ಯಕ್ಕಾಗಿ ಪಡೆದಿರತಕ್ಕ ರೈತರ

ಸಾಲದ ಬಗ್ಗೆ ಬಡ್ಡಿ ಸುಸ್ತಿ ಬಡ್ಡಿಯನ್ನು ಸರ್ಕಾರ ಆ ರೈತನ ಪರವಾಗಿ ತುಂಬಿಕೊಟ್ಟು ರೈತನು ಸಹ ನೆಮ್ಮದಿಯಿಂದ ಜೀವನವನ್ನು ಮಾಡಲು ಅವಕಾಶವನ್ನು ಮಾಡಿಕೊಡಬೇಕು. ಮೂರನೆಯದಾಗಿ, ಯಾವ ವಿ.ಪಿ. ಸಿಂಗ್‌ರವರ ಈ ಯೋಜನೆ ಬಂದಮೇಲೆ ಸಾಲ ಮನ್ನಾ ಆಗುತ್ತದೆಯೋ ಇಲ್ಲವೋ ಎಂದು ಹೇಳಿ ಬೇರೆ ಕಡೆಯಿಂದ ಭಿಕ್ಷೆ ತಂದಾದರೂ, ಮನೆ ಜಾನುವಾರುಗಳನ್ನು ಮಾರಿಯಾದರೂ ಆ ಬಡ್ಡಿಯನ್ನು, ಅಸಲನ್ನೇನು ತುಂಬಿದ್ದಾನೆ ಅವನು ಮಾಡಿರತಕ್ಕ ಅಪರಾಧವೇನು ? ಅದಕ್ಕಾಗಿ ಈ ಒಂದು ವಿ.ಪಿ. ಸಿಂಗ್‌ರವರು ಕಾರ್ಯಕ್ರಮ ಜಾರಿಗೆ ಬಂದನಂತರ ಯಾರು ಸಹಕಾರಿ ಸಂಘಗಳಿಗೆ, ಬ್ಯಾಂಕ್‌ಗೆ ಬಡ್ಡಿಯನ್ನು ತುಂಬಿ ಕೊಟ್ಟಿದ್ದಾನೆ ಅದನ್ನು ಸರ್ಕಾರದ ಬೊಕ್ಕಸದಿಂದ ತುಂಬಿಕೊಡಬೇಕು. ಇಲ್ಲದಿದ್ದರೆ ಅನಿವಾರ್ಯವಾಗಿ ಈ ರಾಜ್ಯದ ರೈತ ಕೃಷಿ ಕಾರ್ಮಿಕ ಮತ್ತೆ ತಿರುಗಿ ಬೀಳುತ್ತಾನೆ. ಆ ಮೀನುಗಾರ ಇರಬಹುದು. ಆ ನೇಕಾರ ಇರಬಹುದು. ಆ ಕೃಷಿ ಕಾರ್ಮಿಕ ಇರಬಹುದು. ಅವನು ಈ ರೀತಿ ಸಾಲದಲ್ಲಿ ಸಿಕ್ಕು ಸಾಯುತ್ತಿದ್ದಾನೆ. ಆ ರೀತಿ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡತಕ್ಕ ಯೋಜನೆ ಅಂದು ವಿ.ಪಿ. ಸಿಂಗ್ ಸರ್ಕಾರದ ಕಾರ್ಯಕ್ರಮದಲ್ಲಿ ಸೇರಿಸಿಯಾಗಿತ್ತು. ರೈತರೆಂದರೆ ಇವರೆಲ್ಲರೂ ಸಹ ಅಲ್ಲಿ ಸೇರುತ್ತಾರೆ. ಅದಕ್ಕಾಗಿ ಅವರಿಗೂ ಸಹ ಈ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಕಾರ್ಯಕ್ರಮದ ಯೋಜನೆಯನ್ನು ಅವರಿಗೂ ಅಳವಡಿಸಬೇಕು ಎನ್ನತಕ್ಕ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ಸನ್ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ತಾವು ಅತ್ಯಂತ ಪ್ರಮುಖವಾಗಿರತಕ್ಕಂಥ ಕೃಷ್ಣ ಕಾವೇರಿ ಜಲಾನಯನ ಪ್ರದೇಶದಲ್ಲಿ ಪೂರ್ಣ ನೀರನ್ನು ಉಪಯೋಗಿಸಿಕೊಳ್ಳುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ. ನಿಮ್ಮ ರಾಜ್ಯಪಾಲರ ಭಾಷಣವನ್ನು, ಕೇಳಿದಾಗ, ಓದಿದಾಗ ಒಂದು ರೀತಿ ಈ ವಿಷಯದ ಬಗ್ಗೆ ಹಾಸ್ಯಾಸ್ಪದವಾದಂಥ ಒಂದು ಹೇಳಿಕೆ ಇದಾಗಿದೆ.

ನೀವೇನು ಹೇಳುತ್ತೀರಾ ? ನೀರಾವರಿ ಬಾಂಡ್‌ಗಳನ್ನು ತೆಗೆದುಕೊಂಡು ಅದನ್ನು ತೊಡಗಿಸಿ ಆ ಹಣದ ಮೂಲಕ ಎರಡು ಸಾವಿರ ವರ್ಷದ ಇಸವಿಯೊಳಗಾಗಿ ಬಚಾವತ್ ತೀರ್ಪಿನ ಪ್ರಕಾರ ಆ ಜಲಾನಯನ ಪ್ರದೇಶದ ನದಿ ನೀರನ್ನು ಉಪಯೋಗ ಮಾಡಿಕೊಳ್ಳುತ್ತೇವೆ ಎಂದು ತಾವು ಹೇಳಿದ್ದೀರಿ ಸ್ವಾಮಿ ಏನಾಗಿದೆ ಎಂದರೆ, ಕೃಷ್ಣ ಜಲಾನಯನ ಪ್ರದೇಶದಲ್ಲಿ ನಮಗೆಲ್ಲರಿಗೂ ಗೊತ್ತಿರುವಂತೆ 35 ಲಕ್ಷ ಎಕರೆಗೆ ನಾವು ನೀರಾವರಿ ಕೊಡಬಹುದಾಗಿತ್ತು. ಇದುವರೆವಿಗೂ ನಾವು ನೀರನ್ನು ಒದಗಿಸಿದ್ದುದು ಕೇವಲ 15 ಲಕ್ಷ ಎಕರೆ ಭೂಮಿಗೆ ಮಾತ್ರ. ಇನ್ನು ನಾವು ಸುಮಾರು 20 ಲಕ್ಷ ಎಕರೆ ಭೂಮಿಗೆ ನೀರನ್ನು ಒದಗಿಸಿಕೊಡಬೇಕಾಗಿದೆ. ಕಾವೇರಿ ಜಲಾನಯನ ಪ್ರದೇಶಗಳೂ ಸಹ ಈಗಿರುವಂಥ ಹನ್ನೊಂದುವರೆ ಲಕ್ಷ ನೀರಾವರಿ ಪ್ರದೇಶದಲ್ಲಿ ತಾವು ಇನ್ನು ಮನಸ್ಸು ಮಾಡಿದರೆ ಆರೇಳು ಲಕ್ಷ ಎಕರೆಗೆ ನೀರನ್ನು ಕೊಡಬಹುದಾಗಿದೆ. ನೀರಾವರಿಯ ಬಾಂಡನ್ನು ನಂಬಿಕೊಂಡು ಅಥವಾ ಜಾಗತಿಕ ಬ್ಯಾಂಕಿನಿಂದ ಅಥವಾ ಕೇಂದ್ರ ಸರ್ಕಾರದಿಂದ ಹಣ ಸಿಗುತ್ತದೆ ಎಂದು ನಂಬಿಕೊಂಡು ನೀವು ಕುಳಿತರೆ ಎರಡು ಸಾವಿರ ವರ್ಷದೊಳಗಾಗಿ ಬಚಾವತ್ ಆಯೋಗದ ತೀರ್ಪಿನ ಪ್ರಕಾರ ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಪಕ್ಕದಲ್ಲೆ ನಮ್ಮ ನೀರಾವರಿ ಸಚಿವರು, ಉಪಮುಖ್ಯಮಂತ್ರಿಗಳು ಕುಳಿತಿದ್ದರು, ಅವರ ಭಾಷಣ ಇಲ್ಲಿ ರೆಕಾರ್ಡ್ ಆಗಿದೆ. ಯಾವ್ಯಾವ ವರ್ಷಕ್ಕೆ ಎಷ್ಟೆಷ್ಟು ಹಣ ಖರ್ಚು ಮಾಡುತ್ತೇವೆ. ಎರಡು ಸಾವಿರ ವರ್ಷಕ್ಕೆ ಯಾವರೀತಿ ಮುಟ್ಟಿ ಇದನ್ನು ಪೂರ್ಣ ಮಾಡುತ್ತೇವೆ ಎಂದು ಹಿಂದಿನ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಹೇಳಿದರು. ಅವರು ಹೇಳಿದಂತೆ ಐದು ವರ್ಷಗಳಲ್ಲಿ ಒಂದು ವರ್ಷ ಸಹ ಆಯವ್ಯಯದಲ್ಲ ಆಲೋಕೇಷನ್ ಏನು ಮಾಡಿದ್ದಾರೆ ಅದರಲ್ಲಿ ಅರ್ಧದಷ್ಟು ಹಣವನ್ನು ಖರ್ಚುಮಾಡಿಲ್ಲ. ಆ ಅಂಕಿಅಂಶಗಳನ್ನು ಬಹುಶಃ ನೀವು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಕೊಡಬಹುದು. ಅಂದರೆ ಈ ರೀತಿ ಈ ನಾಡಿನ ರೈತರ ಮಕ್ಕಳಿಗೆ ಸುಳ್ಳು ಭರವಸೆಗಳನ್ನು ಕೊಟ್ಟ ಹೇಗೋ ಅಧಿಕಾರದಲ್ಲಿ ಮುಂದುವರೆದುಕೊಂಡು ಕಾಲ ಕಳೆಯುವಂತಹ ಒಂದು ಪ್ರವೃತ್ತಿಯನ್ನು ಇದುವರೆಗೆ ನಾವು ಏನು ಕಾಣುತ್ತಿದ್ದೇವೆ ? ಅದಕ್ಕೆ ಸನ್ಮಾನ್ಯ ದೇವೇಗೌಡರ ಕಾಲದಲ್ಲಿ ಮಂಗಳವನ್ನು

ಹಾಡಬೇಕು. ನೀವೇ ನೀರಾವರಿ ಸಚಿವರಾಗಿ ಅದರ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಕ್ಕೆ ನನಗೆ ಬಹಳ ಸಂತೋಷವಾಗಿದೆ. ಎಲ್ಲಿಂದ ಹಣ ತರುತ್ತೀರಿ? ಹೇಗೆ ಮಾಡಬೇಕಾಗಿದೆ ಆದರ ಯೋಚನೆಯನ್ನು ಮಾಡಿ, ಬೇರೆ ಅನಗತ್ಯ ಕಾರ್ಯಕ್ಕೆ ಹಣ ತೊಡಗಿಸುವುದನ್ನು ಕಡಿಮೆ ಮಾಡಿ. ಈ ಕೃಷ್ಣ ಕಾವೇರಿ ಬೇಸ್‌ನಲ್ಲಿ ನೀರನ್ನು ಪೂರ್ಣ ಉಪಯೋಗಿಸಿಕೊಳ್ಳುವುದಕ್ಕೋಸ್ಕರ ಆದ್ಯತೆಯನ್ನು ಕೊಡಬೇಕು. ಈ ದಿಕ್ಕಿನಲ್ಲಿ ವಿಶೇಷವಾದಂಥ ಪ್ರಯತ್ನ ಮಾಡಬೇಕು. ಕಾವೇರಿ ಟ್ರಿಬ್ಯೂನಲ್‌ನಲ್ಲಿ ಏನಾಗಿದೆಯೆಂದರೆ, ಕಾವೇರಿ ಟ್ರಿಬ್ಯೂನಲ್‌ನಲ್ಲಿ ದೊಡ್ಡ ಅನಾಹುತವಾಯಿತು. ಈ ಮಣ್ಣಿನ ಮಕ್ಕಳಿಗೆ ಅಲ್ಲಿ ದ್ರೋಹವಾಯಿತು. ಶಾಸಕರು, ಸರ್ಕಾರ ರಾಜೀನಾಮೆ ಕೊಡುವವರೆಗೆ ನಾವು ಯೋಚನೆಯನ್ನು ಮಾಡಿದೆವು. ತಿಂಗಳುಗಟ್ಟಲೆ ಈ ಸದನದಲ್ಲಿ ಚರ್ಚೆ ಮಾಡಿದೆವು. ಇವತ್ತು ಇದು ಇಲ್ಲಿಗೆ ಬಂದು ನಿಂತಿದೆ. ವೀರಾವೇಶದಲ್ಲಿ ಆ ದಿನ ನಾವು ಮಾತನಾಡಿದೆವು. ನಮ್ಮನ್ನು ನಂಬಿಕೊಂಡಿರತಕ್ಕ ಕಾವೇರಿ ಜಲಾನಯನ ಪ್ರದೇಶದ ರೈತರಿಗೆ ಇವತ್ತಲ್ಲ ನಾಳೆ ಅನ್ಯಾಯ ಕಾದಿದೆ. ನೀರು ತುಂಬಿ ಹರಿದಾಗ ನಾವು ನೀರನ್ನು ಕೊಟ್ಟಿರಬಹುದು. ಆದರೆ ಬರಗಾಲದಿಂದ ನೀರಿಲ್ಲದಂಥ ಸಂದರ್ಭ ಬಂದಾಗ ಬಚಾವತ್ ಆಯೋಗದ ತೀರ್ಪಿನ ಪ್ರಕಾರ ನೀರನ್ನು ಕೊಡಬೇಕು ಎಂದು ಒತ್ತಾಯ ಬಂದಾಗ ಈ ನಾಡಿನ ರೈತ ಸಮುದಾಯಕ್ಕೆ ನಾವು ದ್ರೋಹ ಮಾಡಿದಂತಾಗುತ್ತದೆ. ಅದಕ್ಕಾಗಿ ನಿಮ್ಮ ದಿಟ್ಟ ಕ್ರಮ ಏನು? ಆ ದಿಕ್ಕಿನಲ್ಲಿ ಏನು ಪ್ರಯತ್ನ ಮಾಡಿದ್ದೀರಿ? ಎಲ್ಲಿಗೆ ಬಂದಿದೆ ಎನ್ನುವುದನ್ನು ತಮ್ಮ ಉತ್ತರದಲ್ಲಿ ತಿಳಿಸುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಆಂಧ್ರ, ಮಹಾರಾಷ್ಟ್ರಗಳಲ್ಲಿ ನೀರಾವರಿ ಯೋಜನೆಗೆ ಯಾವ ರೀತಿ ಆದ್ಯತೆಯನ್ನು ಕೊಟ್ಟಿದ್ದಾರೋ ಅದೇ ರೀತಿ ಮೊದಲ ಪ್ರಾಶಸ್ತ್ಯವನ್ನು ಇದಕ್ಕೆ ಕೊಡುವಂಥ ಕಳಕಳಿಯನ್ನು ತಾವು ವ್ಯಕ್ತಪಡಿಸಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಸಿಗುವಂತಹ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಈ ಯೋಜನೆಯ್ನು ಪೂರ್ಣ ಮಾಡುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕಾಗುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಹಣಕಾಸಿನ ಪರಿಸ್ಥಿತಿಯ ಇತಿಮಿತಿ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದೀರಿ. ಆದರೆ ಸಂಪನ್ಮೂಲಗಳ ಕ್ರೋಢೀಕರಣದ ಬಗ್ಗೆ ಯಾವುದೇ ಒಂದು ಶಬ್ದ ಹೇಳಿಲ್ಲ. ಅಬಕಾರಿ ತೆರಿಗೆ, ಮಾರಾಟ ತೆರಿಗೆ ಸೋರಿಹೋಗುತ್ತಿದೆ. ವ್ಯಾಪಾರಸ್ಥರ ಸುಲಿಗೆ ಮಾತ್ರ ನಿರಂತರವಾಗಿ ನಡೆದಿದೆ. ವಿದ್ಯುಚ್ಛಕ್ತಿ ಮಂಡಳಿಗೆ ಏಳುನೂರ ಐವತ್ತು ಕೋಟಿ ರೂಪಾಯಿಗಳು ಬಾಕಿ ಬರಬೇಕಾಗಿದ. ಅದನ್ನು ವಸೂಲು ಮಾಡುವಂತಹ ಯಾವುದೇ ಪ್ರಾಮಾಣಿಕ ಪ್ರಯತ್ನ ನಿಮ್ಮ ಕಡೆಯಿಂದ ಆಗುತ್ತಿಲ್ಲ. ಸಾರಿಗೆ ಸಂಸ್ಥೆಯಲ್ಲಿ ಸೋರಿಹೋಗುತ್ತಿದೆ. ಕೋಟಿಗಟ್ಟಲೆ ಲೂಟಿಯಾಗುತ್ತಿದೆ. ಅದರಲ್ಲಿ ಪ್ರಯಾಣ ಮಾಡುವಂಥ ಸಾಮಾನ್ಯ ವ್ಯಕ್ತಿಗಳು ಹಣ ಕೊಟ್ಟುಕೊಳ್ಳುವಂಥ ಟಿಕೇಟ್ ನಕಲಿ ಟಿಕೇಟ್ ಎನ್ನುವಂಥದ್ದು ಈ ಸದನದಲ್ಲಿ ಬಹಿರಂಗವಾಗಿದೆ. ಕೊಟ್ಯಾಂತರ ರೂಪಾಯಿ ಬೆಲೆ ಬಾಳುವಂಥ ಸಾರಿಗೆ ಟಿಕೇಟ್‌ನ್ನು ಪ್ರಿಂಟ್ ಮಾಡಿದಂಥ ಪ್ರಿಂಟಿಂಗ್ ಮಿಷನ್‌ಗಳನ್ನು ಸೀಜ್ ಮಾಡಿ ಆಯಿತು. ಆದರೆ ಇದನ್ನು ಸರಿಪಡಿಸುವುದಕ್ಕೆ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ ಎಂದು ಹೇಳಿಲ್ಲ. ಸಾರ್ವಜನಿಕ ಉದ್ಯಮಗಳು ಕೊಳೆತು ನಾರುತ್ತಿವೆ. ಅಲ್ಲಿರುವಂಥ ಅಧಿಕಾರಿಗಳು ಕೊಳ್ಳೆಹೊಡೆಯುತ್ತಿದ್ದಾರೆ. ನಮ್ಮ ಸಾರ್ವಜನಿಕ ಹೆಮ್ಮೆಯ ಉದ್ಯಮಗಳನ್ನು ಮಾರುವಂಥ ಒಂದು ದುಸ್ಥಿತಿಗೆ ಬಂದಿದೆ. ಅದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟವಾದಂಥ ನಿರ್ದಿಷ್ಟವಾದಂಥ ನಿಮ್ಮ ನಿಲುವನ್ನು ಅಲ್ಲಿ ವ್ಯಕ್ತಪಡಿಸಿಲ್ಲ. ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಬಲಗೊಳಿಸುವುದಕ್ಕಾಗಿ ಸೂಕ್ತ ತಿದ್ದುಪಡಿಯನ್ನು ತರುತ್ತೇವೆ ಎಂದು ಹೇಳಿದ್ದೀರಿ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚು ಅಧಿಕಾರ ಕೊಡಬೇಕು ಎನ್ನುವ ಮಾತನ್ನು ಇಲ್ಲಿದ್ದಾಗ ನಾವು ಹೇಳಿದ್ದೆವು. ಅವೊತ್ತು ಅಲ್ಲಿ ಕುಳಿತಂಥ ಸರ್ಕಾರದ ಕಿವಿಗೆ ನಮ್ಮ ಮಾತು ಕೇಳಲಿಲ್ಲ. ಆದರೆ ನಾನು ಸಭಾನಾಯಕರಿಗೆ

ಹೇಳುತ್ತೇನೆ. ನಿಮಗೆ ನಿಜವಾಗಿಯೂ ಕಳಕಳಿ ಇದ್ದರೆ ಯಾವ ತಿದ್ದುಪಡಿ ಅಗತ್ಯ ಇದೆಯೋ ನಾವೆಲ್ಲ ಒಟ್ಟಾಗಿ ಕುಳಿತು ಆ ತಿದ್ದುಪಡಿಗೆ ಬೆಂಬಲ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ.

ಸದನದ ಸಮಿತಿ ಮಾಡಿ ಏನು ತಿದ್ದುಪಡಿ ತರಬೇಕಾಗಿದೆ ಅದರ ಬಗ್ಗೆ ಚರ್ಚೆ ಮಾಡೋಣ. ಬರುವ ಜನವರಿ ಕೊನೆಯ ಭಾಗದಲ್ಲಿ ನೀವು ಅಧಿವೇಶನ ಕರೆಯುವ ಸಂದರ್ಭದಲ್ಲಿ ತಿದ್ದುಪಡಿಯನ್ನು ಸದನದಲ್ಲಿ ಪಾಸ್ ಮಾಡಿ ಮಾರ್ಚ್ 31 ರೊಳಗೆ ತಾಲ್ಲೂಕು ಪಂಚಾಯತ್ ಜಿಲ್ಲಾ, ಪಂಚಾಯತ್ ಚುನಾವಣೆಯನ್ನು ಮಾಡಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತಿದ್ದೇವು. ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಕುರಿತ ಚರ್ಚೆಯ ಸಂದರ್ಭದಲ್ಲಿ ಈಗ ಅಲ್ಲಿ ಕುಳಿತಂಥ ಆಡಳಿತ ಪಕ್ಷದ ಸದಸ್ಯರು ಇಲ್ಲಿ ಕುಳಿತಿದ್ದಾಗ ಬಹಳ ಮಾತನಾಡಿದ್ದರು. ಸನ್ಮಾನ್ಯ ಘೋರ್ಪಡೆಯವರಂತಹ ಪ್ರಾಮಾಣಿಕ ವ್ಯಕ್ತಿಯನ್ನು ನಾವು ನೋಡಲಿಲ್ಲ. ಆ ಸ್ಥಾನದಲ್ಲಿ ಕುಳಿತಾಗ ಚುನಾವಣೆ ನಡೆಯಲಿಲ್ಲ ಎನ್ನುವ ಒಂದೇ ಕಾರಣಕ್ಕೋಸ್ಕರ ರಾಜೀನಾಮೆ ಕೊಟ್ಟು ಹೊರ ಬಂದರು. ನನ್ನ ಅಪೇಕ್ಷೆ ಇತ್ತು. ಅವರು ಬಹಳ ವರ್ಷಗಳ ಕಾಲ ಕಾಂಗ್ರೆಸ್‌ನಲ್ಲಿದ್ದರು, ಕಾಂಗ್ರೆಸ್ ಬಿಟ್ಟು ಬರುವುದಕ್ಕೆ ಅವರ ಮನಸ್ಸು ಒಪ್ಪಿರಲಿಕ್ಕಿಲ್ಲ. ಆದರೆ ಅವತ್ತು ರಾಜ್ಯದ ಜನತೆ ಅಪೇಕ್ಷೆಪಟ್ಟಿದ್ದರು. ಶ್ರೀ ಘೋರ್ಪಡೆಯವರು ಕಾಂಗ್ರೆಸ್ ಬಿಟ್ಟು ಹೊರ ಬಂದಿದ್ದರೆ ಇಲ್ಲಿರುವಂತಹ ಇಷ್ಟು ಜನ ಉಳಿಯುತ್ತಿರಲಿಲ್ಲ. ನಿಮ್ಮಿಂದ ಕೆಲವರು ಬಂದಿದ್ದಾರೆ ಇರಿ, ನಾನು ಬೇಡವೆಂದು ಹೇಳುವುದಿಲ್ಲ.

ಶ್ರೀ ಎಂ.ವೈ. ಘೋರ್ಪಡೆ:– ತಮ್ಮ ಮೂಲಕ ಒಂದು ಮಾತು ಹೇಳುವುದಕ್ಕೆ ಬಯಸುತ್ತೇನೆ. ಪಂಚಾಯತ್ ರಾಜ್ ಎಂದರೆ ಈ ಪಕ್ಷಾತೀತ ಮನೋಭಾವನೆಯಿಂದಲೇ ನಾವು ಇರಬೇಕಾಗುತ್ತದೆ. ಆದಕಾರಣ ಅವರು ಏನಾದರೂ ಹೇಳಿದರೆ ಅದು ತಪ್ಪು ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಎರಡನೆಯದಾಗಿ ಮಹಾನಗರಪಾಲಿಕೆ, ನಗರಸಭೆ ಮತ್ತು ಪುರಸಭೆಗಳ ಚುನಾವಣೆಯನ್ನು ಸಹ ತಾವು ತಕ್ಷಣ ಮಾಡಬೇಕಾಗುತ್ತದೆ. ಜನರಿಗೆ ಕೊಟ್ಟಿರುವಂಥ ಈ ಭರವಸೆಯನ್ನು ಈಡೇರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಸನ್ಮಾನ್ಯ ಅಧ್ಯಕ್ಷರೆ, ದುಃಖವಾಗತಕ್ಕಂಥ ಇನ್ನೊಂದು ಸಂಗತಿ ತಾವು ನೋಡಿರಬಹುದು. ಏನು ಹೇಳಿದಿರಿ ನೀವು ? ಪತ್ರಿಕೆಗಳಲ್ಲಿ ಎಲ್ಲಾ ಕಡೆ ಪ್ರಚಾರ ಮಾಡಿದಿರಿ. ಏನೆಂದರೆ, ಬಡವರಿಗೆ ಹಸಿರು ಕಾರ್ಡು ಹೊಂದಿರುವಂಥವರಿಗೆ ಒಂದು ಕೆ.ಜಿ.ಗೆ ರೂ. 3.20 ಪೈಸೆಯಂತೆ ತಿಂಗಳಿಗೆ ಹತ್ತು ಕೆ.ಜಿ. ಅಕ್ಕಿ ಕೊಡುತ್ತೇವೆಂದು ಹೇಳಿದ್ದೀರಿ. ಆದರೆ, ಈ ಚುನಾವಣೆಯ ನಂತರ ಸನ್ಮಾನ್ಯ ದೇವೇಗೌಡರು, ರಾಮಕೃಷ್ಣ ಹೆಗಡೆಯವರು ದೂರದರ್ಶನದ ಒಂದು ಸಂದರ್ಶನ ಸಂದರ್ಭದಲ್ಲಿ ಈ ಘೋಷಣೆಯನ್ನು ಏತಕ್ಕೆ ಮಾಡಿದ್ದು ? ಅದು ಅಷ್ಟೊಂದು ಉಪಯುಕ್ತತೆ ಇದೆಯೆಂದು ಹೇಳಿದಿರಿ. ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದೀರೆಂದರೆ, ರಿಯಾಯಿತಿ ದರದಲ್ಲಿ ಇದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು. ಏನು ಸ್ವಾಮಿ ಹಾಗೆಂದರೆ ? ಈ ನಾಡಿನ ಜನರಿಗೆ ಹಸಿರು ಕಾರ್ಡು ಹೊಂದಿರುವವರಿಗೆ ರೂ. 3.20 ಪೈಸೆಯಂತೆ ತಿಂಗಳಿಗೆ 10 ಕಿಲೋ ಅಕ್ಕಿ ಕೊಡುತ್ತೇವೆಂದು ಸ್ಪಷ್ಟವಾಗಿ ಹೇಳಿದ ನಂತರ ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲಿ ನೂತನವಾಗಿ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಎನ್.ಟಿ. ರಾಮರಾಯರು ಪಾನನಿಷೇಧ ಜಾರಿಗೆ ತರುತ್ತೇವೆಂದು ಹೇಳಿದರು ಮತ್ತು ಎರಡು ರೂಪಾಯಿಗಳಿಗೆ ಪ್ರತಿ ತಿಂಗಳು 20–25 ಕಿಲೊ ಅಕ್ಕಿ ಕೊಡುತ್ತೇವೆಂದು ಘೋಷಣೆ ಮಾಡಿ ದಿನಾಂಕವೂ ನಿಶ್ಚಯವಾಗಿದೆ ಹಾಗೂ ಕಾರ್ಯರೂಪಕ್ಕೂ ಬಂದಿದೆ. ಆದರೆ, ಇವೊತ್ತು ನಾನು ಹೇಳುತ್ತೇನೆ: ನಿಮಗೆ ಯಾವ ನೈತಿಕ ಹಕ್ಕು ಇದೆ ? ಅಧಿಕಾರಕ್ಕೆ ಬಂದ 30 ದಿವಸಗಳಲ್ಲಿ ನೀವು ಕೊಟ್ಟಂಥ ಭರವಸೆಗಳನ್ನು ಈಡೇರಿಸದೆ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವಂತೆ ಹಸಿರು ಕಾರ್ಡು ಹೊಂದಿರುವಂಥವರಿಗೆ ಸ್ಪಷ್ಟವಾಗಿ ಜನವರಿ ಒಂದನೇಯ ತಾರೀಖಿನಿಂದ ಕಿಲೋಗೆ ರೂ. 3.20

ಪೈಸೆಯಂತೆ ತಿಂಗಳಿಗೆ ಹತ್ತು ಕೆ.ಜಿ. ಅಕ್ಕಿಯನ್ನು ಪ್ರತಿ ಕುಟುಂಬಕ್ಕೆ ಕೊಡುವಂಥ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವ ಒಂದು ತೀರ್ಮಾನದ ಬಗ್ಗೆ ನೀವು ಉತ್ತರ ಕೊಡುವ ಸಂದರ್ಭದಲ್ಲಿ ಹೇಳದೇ ಇದ್ದರೆ ನಾವು ಧರಣಿ ಮಾಡುವುದಿಲ್ಲವೆಂದು ನಿಶ್ಚಯಿಸಿದ್ದೇವೆ. ನೀವುಗಳು ಧರಣಿ ಮಾಡಿ ಎಂದರೂ ನಾವು ಧರಣಿ ಮಾಡುವುದಿಲ್ಲವೆಂದು ನಿಶ್ಚಯಿಸಿದ್ದೇವೆ. ನೀವುಗಳು ಧರಣಿ ಮಾಡಿ ಎಂದರೂ ನಾವು ಮಾಡುವುದಿಲ್ಲ. ಏಕೆಂದರೆ, ನಾವು 40 ಜನರಿದ್ದೇವೆ. ವಿರೋಧ ಪಕ್ಷದವರೆಲ್ಲರೂ ಸೇರಿದರೆ ಒಟ್ಟು 108 ಜನರಿದ್ದಾರೆ. ಈ ಕಡೆ ಇರುವಂಥ ಎಲ್ಲ ವಿರೋಧ ಪಕ್ಷದ ಸದಸ್ಯರೂ ಒಂದಾಗಿ ನಿಲ್ಲುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಇದು ಬಹಳ ಅಪಾಯಕಾರಿಯಾದ ಮಾತು. ದಯವಿಟ್ಟು ತಾವು ನಮ್ಮ ರಕ್ಷಣೆಗೆ ಬರಬೇಕು. ನಾವು ವಿವಿಧ ಪಕ್ಷಗಳಿಗೆ ಸೇರಿದವರಿದ್ದೇವೆ. ಮಾನ್ಯ ಯಡಿಯೂರಪ್ಪನವರು ವಿರೋಧಪಕ್ಷದ ನಾಯಕರಿಂದಂದಿನಿಂದ ಈ ಕ್ಷಣದವರೆಗೂ ಒಂದು ಶಿಷ್ಟಾಚಾರಕ್ಕಾದರೂ, ನೀತಿಗಾದರೂ ಅವರು ನಮ್ಮನ್ನೆಲ್ಲಾ ಕರೆದು 'ನೀವೆಲ್ಲಾ ಬನ್ನಿ, ನಾನು ಅಧಿಕೃತ ವಿರೋಧ ಪಕ್ಷದ ನಾಯಕನಾಗಿದ್ದೇನೆ. ನೀವು ಅಧಿಕೃತ ವಿರೋಧ ಪಕ್ಷದ ನಾಯಕರಾಗಲೇ ಇದ್ದರೂ ಕೆಲವು ವಿಚಾರದಲ್ಲಿ ನಾವು-ನೀವು ಹೊಂದಾಣಿಕೆ ಮಾಡಿ ಕೊಳ್ಳೋಣ ಎನ್ನುವ ಸೌಜನ್ಯ ಸಹವಾದರೂ ತೋರಿಸಲಿಲ್ಲ. ಮಾನ್ಯ ಮುಖ್ಯಮಂತ್ರಿಗಳಾದರೂ ಪ್ರಮಾಣ ವಚನ ಸ್ವೀಕರಿಸುವಾಗ ವಿರೋಧ ಪಕ್ಷ ಈ ರಾಜ್ಯದಲ್ಲಿದೆಯೆಂದು ಅವರಿಗೂ ಗೊತ್ತಾಗಿಲ್ಲ. ಅವರೂ ಸಹ ಶಿಷ್ಟಾಚಾರ ಮರೆತರು. ಈ ರೀತಿ ಆಡಳಿತ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ನಾಯಕರಿಬ್ಬರೂ ಶಿಷ್ಟಾಚಾರ ಮರೆತರೆ ನಮ್ಮ ಗತಿ ಏನಾಗಬೇಕು ? ಈಗ ಬಹಿರಂಗವಾಗಿ ನಾವೆಲ್ಲಾ ಒಟ್ಟಾಗಿದ್ದೇವೆ ಎಂದರೆ ಏನರ್ಥ ? ಇದನ್ನು ನಾನು ಖಂಡಿತವಾಗಿಯೂ ಒಪ್ಪುವುದಿಲ್ಲ. ಶ್ರೀಮಾನ್ ಯಡಿಯೂರಪ್ಪನವರು ಖಂಡಿತವಾಗಿ ಈ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ನಮ್ಮ ಜೊತೆ ಮಾತುಕತೆಯಾಡಿದ ನಂತರ ತೀರ್ಮಾನಕ್ಕೆ ಬರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಹಿರಿಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿರುವಂತೆ ನಾನು ವಿರೋಧ ಪಕ್ಷದ ನಾಯಕನಾಗಿ ಅಧ್ಯಕ್ಷರು ಘೋಷಣೆ ಮಾಡಿದರೂ ಸಹ ಇವೊತ್ತು ನನ್ನ ಕೊಠಡಿಗೆ ಹೋಗಿ ಪೂಜೆ ಮಾಡಿ 'ದೇವರೆ, ನಾವು ತೆಗೆದುಕೊಂಡಿರುವಂಥ ಕಾರ್ಯಕ್ಕೆ ಯಶಸ್ಸು ಸಿಗಲಿ, ಜನಹಿತ ಮಾಡುವಂಥ ಶಕ್ತಿ ಕೊಡಲೆಂದು ರಾಮನಲ್ಲಿ, ಶಿವನಲ್ಲಿ ಮತ್ತು ನಾಡಿನ ಜನತಾ ಜನಾರ್ಧನನಲ್ಲಿ ಪ್ರಾರ್ಥನೆ ಮಾಡಿ ಇವೊತ್ತು ನಾವುಗಳೆಲ್ಲರೂ ಬಂದಿದ್ದೇವೆ. ಎಲ್ಲಾ ವಿರೋಧ ಪಕ್ಷದ ನಾಯಕರ ಸಭೆಯನ್ನು ಕರೆಯುವವರಿದ್ದೇವೆ.

ಶ್ರೀ ಬಿ.ಬಿ. ಶಿವಪ್ಪ:- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಯಾವ ದೇಶದಲ್ಲಿದ್ದಾರೋ ಗೊತ್ತಿಲ್ಲ. ಭಾರತ ದೇಶದಲ್ಲಿರುವಂಥ ಪ್ರತಿಯೊಬ್ಬರೂ ಹಿಂದೂಗಳು. ಯಾವುದೇ ದೇವರಿಗೆ ಅವರು ಪೂಜೆ ಮಾಡಿದರೂ ಅದು ದೇವರೇ. ಅದು ರಾಮ ಇರಬಹುದು, ಕೃಷ್ಣ ಇರಬಹುದು, ಶಿವ ಇರಬಹುದು, ಗಣಪತಿ ಇರಬಹುದು, ಲಕ್ಷ್ಮಿ ಇರಬಹುದು. ಹಲವಾರು ದೇವರುಗಳಿಗೆ ಪೂಜೆ ಮಾಡತಕ್ಕಂಥ ಎಲ್ಲಾ ಜನರೂ ಸೇರಿ ಹಿಂದೂಗಳಾಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಯಡಿಯೂರಪ್ಪನವರು ರಾಮನನ್ನು ಪೂಜೆಮಾಡಿ ಬಂದೆ ಎಂದರು. ಇದನ್ನು ನಾನು ಒಪ್ಪುವುದಿಲ್ಲ. ಶಿವನನ್ನು ಏಕೆ ಪೂಜೆ ಮಾಡುವುದಿಲ್ಲ ?

ಶ್ರೀ ಬಿ.ಎಸ್. ಯಡಿಯೂರಪ್ಪ:- ವಿಧಾನ ಸಭೆಯಲ್ಲಿ ಶೇಕಡ 30ರಷ್ಟು ಸ್ಥಾನಗಳನ್ನು ಮಹಿಳೆಯವರು ಸ್ಪರ್ಧಿಸಲು ಮೀಸಲಾಡುತ್ತೇವೆಂದು ಹೇಳಿದ್ದಿರಿ. ತಮಗೆ ಗೊತ್ತಿದೆ, ಕಳೆದ 2ವರ್ಷಗಳ ಹಿಂದೆ ಬರೋಡದಲ್ಲಿ ಬಿ.ಜೆ.ಪಿಯ ನ್ಯಾಷನಲ್ ಎಕ್ಸಿಕ್ಯುಟಿವ್‌ನಲ್ಲಿ ಚರ್ಚೆ ಮಾಡಿ ವಿಧಾನ ಸಭೆಗಳಲ್ಲಿ ಸ್ಪರ್ಧೆ ಮಾಡುವುದಕ್ಕೆ ಮಹಿಳೆಯರಿಗೆ 30 ಪರ್ಸೆಂಟ್ ಸ್ಥಾನ ಇರಬೇಕೆಂಬುದನ್ನು ನಾವೂ ಕೂಡ

ನಿರ್ಣಯ ಮಾಡಿದ್ದೇವೆ. ಆದರೆ ತಾವು ಈ ವಿಚಾರವನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿಸುವಂಥ ಅಗತ್ಯವಿತ್ತೆ? ಸರ್ವಾನುಮತದ ನಿರ್ಣಯ ಮಾಡುವುದಕ್ಕೆ ನಮ್ಮದೇನೂ ವಿರೋಧವಿಲ್ಲ. ನಾವು ಇದರ ಪರವಾಗಿದ್ದೇವೆ. ಆದರೆ ಸಂವಿಧಾನಕ್ಕೆ ತಿದ್ದುಪಡಿಯಾಗದೇ, ಲೋಕಸಭೆಯಲ್ಲಿ ನಿರ್ಣಯವಾಗದೇ ಇದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವೇ ಇಲ್ಲವೆಂಬುದು ನಿಮಗೆ ಗೊತ್ತಿದ್ದರೂ ಕೂಡ ಮಹಿಳೆಯರನ್ನು ಉದ್ಧಾರ ಮಾಡುತ್ತೇವೆ ಎನ್ನತಕ್ಕ ಮಾತನ್ನು ನೀವು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದೀರಿ. ನಿಮ್ಮ ಪ್ರಕಾರ ಎಷ್ಟು ಜನರಿಗ ಈ ಮೀಸಲಾತಿ ಪ್ರಯೋಜನ ಸಿಕ್ಕುತ್ತದೆ. ಶೇಕಡ 30ಪರ್ಸೆಂಟ್ ಮೀಸಲಾತಿ ಕೊಟ್ಟರೆ ಆ ಮಹಿಳೆಯರ ಚಳುವಳಿಗೆ ಪ್ರತಿನಿಧಿಸುವ ಅವಕಾಶ ಸಿಕ್ಕುತ್ತದೆಯೇ ಹೊರತು ಬೇರೆ ಇಲ್ಲ. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕ 4.75 ಕೋಟಿ ಜನರ ಪೈಕಿ ಅರ್ಧಕ್ಕೂ ಹೆಚ್ಚು ಜನ ಮಹಿಳೆಯರಿದ್ದಾರಲ್ಲಾ ಅವರ ಬಗ್ಗೆ ನಿಮ್ಮ ಕಾರ್ಯಕ್ರಮ ಏನಿದೆ? ಇಲ್ಲಿ ನೀವು ಏನು ಹೇಳಿದ್ದೀರಿ. ಮಹಿಳೆಯರ ಮೇಲೆ ನಿಂತರ ಪೈಶಾಚಿಕ ಕೃತ್ಯ ನಡೆಯುತ್ತಿದೆ. ಹಲ್ಲೆಗಳು ನಡೆಯುತ್ತಿದೆ. ಮಾನಹರಣವಾಗುತ್ತಿದೆ, ಪೋಲಿಸ್ ದೌರ್ಜನ್ಯ ನಡೆಯುತ್ತಿದೆ. ಇದರ ಬಗ್ಗೆ ತಾವೇನೂ ಹೇಳಿಲ್ಲ. ಎಲ್ಲೋ ಒಂದು ಮೂಲೆಯಲ್ಲಿ ಹಳ್ಳಿಗಳಲ್ಲಿ ಮಹಿಳಾ ಸಂಘಟನೆಯನ್ನು ಕಟ್ಟಿಕೊಂಡು ಕೆಲಸಮಾಡುತ್ತಿರುವ ಮಹಿಳಾ ಸಂಘಟನೆಗಳಿಗೆ ನಿಶ್ಚಿತ ಕಾರ್ಯಕ್ರಮಗಳನ್ನು ರೂಪಿಸಲು ಸ್ವಾತಂತ್ರ್ಯ ಬಂದು 47 ವರ್ಷಗಳಾದರೂ ನಿಮ್ಮಿಂದ ಆಗಿಲ್ಲ. ಕೈಗೆ ಕೆಲಸವಿಲ್ಲದೆ, ರಸ್ತೆಯಲ್ಲಿ ತಿರುಗುವ ಮಹಿಳೆಯರಿಗೆ, ದುಡಿಯುವ ಕೈಗಳಿಗೆ ಕೆಲಸವನ್ನು ಕೊಡುವಂಥ ಯಾವುದೇ ಕಾರ್ಯಕ್ರಮದ ಘೋಷಣೆಯನ್ನೂ ನೀವು ಮಾಡಲಿಲ್ಲ. ಕೇವಲ ತೋರಿಕೆಗೋಸ್ಕರ ಹಿಂದೆ ಯಾವ ಸರ್ಕಾರಗಳು ತಪ್ಪುಗಳನ್ನು ಮಾಡಿದುವೋ ಆ ರೀತಿಯ ತಪ್ಪುಗಳನ್ನು ಮಾಡುವುದರಿಂದ, ಪ್ರಚಾರಗಳಿಂದ ಯಾವುದೇ ಪ್ರಯೋಜನವೂ ಇಲ್ಲ. ಜನರು ಇವತ್ತು ಜಾಗೃತರಾಗಿದ್ದಾರೆಂಬ ಎಚ್ಚರಿಕೆಯ ಮಾತುಗಳನ್ನೂ ಕೂಡ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇಲ್ಲಿ ಒಂದು ಪತ್ರಿಕೆಯನ್ನು ತೋರಿಸುತ್ತಿದ್ದೇನೆ. ಇಲ್ಲಿ ಮಾನ್ಯ ಸಭಾ ನಾಯಕರಾದ ದೇವೇಗೌಡರು ರಾಮಕೃಷ್ಣ ಹೆಗಡೆಯವರು, ಮಾನ್ಯ ಬೊಮ್ಮಾಯಿಯವರೆಲ್ಲರೂ ಸಹಿ ಮಾಡಿ ಪ್ರಚಾರವನ್ನು ಮಾಡುತ್ತಿದ್ದಾರೆ. ಸ್ವಾಮಿ, 26ನೇ ತಾರೀಖು ಚುನಾವಣೆ ನಡೆಯುತ್ತದೆ. ಆದರೆ 25ನೇ ತಾರೀಖು ಪತ್ರಿಕೆಯಲ್ಲಿ ನಿಮ್ಮ ಪ್ರಚಾರ. ನೀವು ಇದರಲ್ಲಿ ಏನು ಹೇಳಿದ್ದೀರಿ ಎಂದರೆ, ಒಂದೇ ವರ್ಷದಲ್ಲಿ ಖಾಲಿ ಇರುವ 1 ಲಕ್ಷ ಸರ್ಕಾರಿ ಹುದ್ದೆಗಳನ್ನು ತುಂಬ ಗ್ರಾಮೀಣ ನಿರುದ್ಯೋಗಿಗಳಿಗೆ ಶೇಕಡ 70ರಷ್ಟು ಮೀಸಲಾತಿಯನ್ನು ನೀಡುತ್ತೇವೆ. ಇದನ್ನು ತಮಗೇ ಕಳುಹಿಸಿಕೊಡುತ್ತೇನೆ. ತಾವು ಕೇಳುತ್ತೀರಿ ಎಂದು ತಿಳಿದೇ ಇದನ್ನು ತಂದಿದ್ದೇನೆ. ಚುನಾವಣೆಗೆ 24 ಗಂಟೆ ಮುಂಚಿತವಾಗಿ ನೀವು ಘೋಷಣೆ ಮಾಡಿದಂಥ ಕಾರ್ಯಕ್ರಮ. ಮಾನ್ಯ ಬೊಮ್ಮಾಯಿಯವರು, ಮಾನ್ಯ ಹೆಗಡೆಯವರು ಮಾನ್ಯ ದೇವೇಗೌಡರೂ ಒಟ್ಟಿಗೆ ಜಂಟಿಯಾಗಿ ಸಹಿ ಮಾಡಿಕೊಟ್ಟಿರುವಂಥ ಹೇಳಿಕೆ. ಆದರೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇದರ ಬಗ್ಗೆ ಒಂದೇ ಒಂದು ಶಬ್ದ ಇಲ್ಲ. ಆದ್ದರಿಂದ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರಲ್ಲಿ ಅಕ್ಕಿಯ ವಿಚಾರ ಕೂಡ ಇದೆ. ನಾನು ತಮ್ಮನ್ನು ಒತ್ತಾಯ ಮಾಡುತ್ತಿದ್ದೇನೆ. ಇನ್ನು 1 ವರ್ಷದೊಳಗೆ 1 ಲಕ್ಷ ಜನ ನಿರುದ್ಯೋಗಿ ಯುವಕರಿಗೆ ಸರ್ಕಾರಿ ಹುದ್ದೆಗಳಿಗೆ ಭರ್ತಿ ಮಾಡುತ್ತೇವೆ ಎಂಬ ಸ್ಪಷ್ಟವಾದ ಮಾತನ್ನು ಹೇಳಿದ್ದೀರಿ. ಈ ಮಾತು ನಿಜವಾಗಬೇಕಾದರೆ ಬರುವ ಜನವರಿ ತಿಂಗಳಲ್ಲಿ ನೀವು ಕನಿಷ್ಟ 10 ಸಾವಿರ ಜನರಿಗಾದರೂ ಉದ್ಯೋಗವನ್ನು ಕೊಡಬೇಕಲ್ಲ. ಈ ದಿಸೆಯಲ್ಲಿ ನಿಮ್ಮ ಕಾರ್ಯಕ್ರಮ ಏನೆಂಬುದನ್ನು ನೀವು ಉತ್ತರಕೊಡತಕ್ಕ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. 1983 ಮತ್ತು 1985ರಲ್ಲಿ ಚುನಾವಣೆಗೆ ಮಾಡಲು ಮನೆಗೊಂದು ಉದ್ಯೋಗವನ್ನು ಕೊಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದಿರಿ. ಜನರು ನಂಬಿ ನಿಮ್ಮನ್ನು ಅಧಿಕಾರಕ್ಕೆ ತಂದಿದ್ದರು. ಆದರೆ ಅದನ್ನು ನೀವು ಕಾರ್ಯರೂಪಕ್ಕೆ ತರಲಿಲ್ಲವೆಂದು ನಿಮ್ಮನ್ನು ಅಧಿಕಾರಕ್ಕೆ

ತಂದಿದ್ದರು. ಆದರೆ ಅದನ್ನು ನೀವು ಕಾರ್ಯರೂಪಕ್ಕೆ ತರಲಿಲ್ಲವೆಂದು ನಿಮ್ಮನ್ನು ಮನಗೆ ಕಳುಹಿಸಿದರು. ಅದನ್ನು ಮರೆತು ನಿಮಗೆ ಮತ್ತೊಮ್ಮೆ ಅಧಿಕಾರವನ್ನು ಜನತೆ ಕೊಟ್ಟಿರುವ ಸಂದರ್ಭದಲ್ಲಿ ಈಗೇನು ಈ ನಿರುದ್ಯೋಗಿ ಯುವಕರ ಬಗ್ಗೆ ಭರವಸೆಯನ್ನು ಕೊಟ್ಟಿದ್ದೀರಿ ಆ ಭರವಸೆಯನ್ನು ಈಡೇರಿಸುವ ಬಗ್ಗೆ ವಿಶೇಷವಾದ ಕಾರ್ಯಕ್ರಮವನ್ನು ರೂಪಿಸಬೇಕು. ಅದಕ್ಕೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಡಬೇಕೆಂದು ಹೇಳಬಯಸುತ್ತೇನೆ.

ಇನ್ನು ನಮ್ಮ ಕರ್ನಾಟಕದಲ್ಲಿ ಸುಮಾರು 270 ಕಿ.ಮೀ. ಉದ್ದದ ಕರಾವಳಿ ಪ್ರದೇಶವಿದೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಸಮೃದ್ಧ ಜಿಲ್ಲೆಗಳಾಗಿವೆ. ಅಲ್ಲಿ ಲಕ್ಷಾಂತರ ಮೀನುಗಾರರಿದ್ದರೂ ಅವರ ಅಭಿವೃದ್ಧಿಯ ಬಗ್ಗೆ ಒಂದೇ ಒಂದು ಮಾತನ್ನೂ ಹೇಳಿಲ್ಲ. ಅದೇರೀತಿ ನೇಕಾರರೂ ಕೂಡ ಲಕ್ಷಾಂತರ ಜನರಿದ್ದಾರೆ. ಅವರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿಸುವ ನೆನಪು ನಿಮಗೆ ಬರಲಿಲ್ಲ. ಹೈದರಾಬಾದ್ ಅಭಿವೃದ್ಧಿ ಮಂಡಲಿ, ಮಲೆನಾಡು ಅಭಿವೃದ್ಧಿ ಮಂಡಲ ಬಗ್ಗೆ ನಿಮಗೆ ಎಷ್ಟು ಅಭಿಮಾನ ಇದೆ, ಅದನ್ನು ನೀವು ಇಟ್ಟುಕೊಳ್ಳುತ್ತೀರೋ, ಬಿಡುತ್ತೀರೋ, ಅದರ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಶಿಕ್ಷಣ ಮತ್ತು ಕಾರ್ಮಿಕ ಕ್ಷೇತ್ರಗಳಂಥ ಮಹತ್ವದ ಕ್ಷೇತ್ರಗಳ ಬಗ್ಗೆ ಯಾವುದೇ ಒಂದು ಪ್ರಸ್ತಾಪ ಇಲ್ಲ. ಮಾನ್ಯ ರಾಜ್ಯಪಾಲರ ಭಾಷಣ ಎಷ್ಟುಮಟ್ಟಿಗೆ ಅಪೂರ್ಣ ಎಂಬುದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳನ್ನು ಮತ್ತು ಮಾನ್ಯ ಗೃಹ ಮಂತ್ರಿಗಳನ್ನು ಸ್ವಾಗತಿಸುವಂಥ ವಿಚಾರ ಎಂದರೆ, ಇಲ್ಲಿರತಕ್ಕ ಅಲ್ಪಸಂಖ್ಯಾತ ಶಾಸಕರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾವೆಲ್ಲರೂ ಒಂದಾಗಿ, ಜಾತಿ, ಕುಲ ಗೋತ್ರಗಳನ್ನೆಲ್ಲಾ ಮರೆತು ಈ ನಾಡಿನ ಅಭಿವೃದ್ಧಿಗಾಗಿ ದುಡಿಯಬೇಕಾಗಿದೆ. ಅದಕ್ಕೆ ನಾವು ಕಂಕಣಬದ್ಧವಾಗಿದ್ದೇವೆ. ಅಲ್ಪಸಂಖ್ಯಾತ ಬಂಧುಗಳ ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಿದೆ. ನಿಮಗೆ ಅವರ ಓಟು ಬೇಕೇ ಹೊರತು ಅವರ ಜೀವನದಲ್ಲಿ ಒಂದು ಬದಲಾವಣೆಯನ್ನು ತಂದು, ಅವರು ಗೌರವದಿಂದ ಬದುಕಲು ಬೇಕಾದಂಥ ವ್ಯವಸ್ಥೆ ಬಗ್ಗೆ ಯಾವುದೇ ಒಂದು ಕಾರ್ಯಕ್ರಮ ಇಲ್ಲ. ಮಾನ್ಯ ರಾಜ್ಯಪಾಲಕ ಭಾಷಣದಲ್ಲಿ ಯಾವುದೇ ಪ್ರಸ್ತಾಪವನ್ನು ಇದರ ಬಗ್ಗೆ ಮಾಡಿಲ್ಲ. ಆದರೆ ಮಾನ್ಯ ಗೃಹ ಮಂತ್ರಿಗಳ ನಿಲುವನ್ನು ನಾನು ಮೆಚ್ಚಿ ಸ್ವಾಗತ ಮಾಡುತ್ತೇನೆ. ಕಿತ್ತೂರು ರಾಣಿ ಚೆನ್ನಮ್ಮ ಮೈದಾನ ಅಥವಾ ಈದ್‌ಗಾ ಮೈದಾನವೆಂದು ಕರೆಯುತ್ತಾರೆ. ಅಲ್ಲಿ ಕಳೆದ 3-4 ವರ್ಷಗಳಿಂದ ನಿರಂತರವಾಗಿ ಪೊಲೀಸರ ಸರ್ಪ ಕಾವಲನ್ನು ಹಾಕಿ ಜನಜೀವನವನ್ನು ಅಸ್ತವ್ಯಸ್ತಮಾಡಿ ಒಂದು ರೀತಿಯ ಮಿಲಿಟರಿ ಆಡಳಿತವನ್ನು ಪ್ರತಿ ಜನವರಿ 26 ಮತ್ತು ಆಗಸ್ಟ್ 15ರಂದು ತರುತ್ತಿರುವ ಪ್ರಯತ್ನಗಳನ್ನು ಹಿಂದಿನ ಸರ್ಕಾರಗಳು ಮಾಡುತ್ತಾ ಬಂದುವು. ಆ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಅವರು ಅನುಭವಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಂದರೆ ಈದ್‌ಗಾ ಮೈದಾನದಲ್ಲಿ ನೀವು ಹೋಗಿ ಫ್ಲ್ಯಾಗ್ ಹಚ್ಚಬೇಕಾಗಿತ್ತೆ?

ಶ್ರೀ ಬಿ.ಎಸ್. ಯಡಿಯೂರಪ್ಪ:- ನೀವು ಉತ್ತರವನ್ನು ಕೊಡಬೇಕಾದರೆ ಆಗ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಂದರೆ ಯಾರ ಯಾರ ಪಾಪಕ್ಕೆ ಯಾರ್ಯಾರು ಗುರಿಯಾಗುತ್ತಾರೋ ನೋಡೋಣ. ಆದರೆ ನೀವು ಆ ಈದ್‌ಗಾ ಮೈದಾನಕ್ಕೆ ಹೋಗಿ ಫ್ಲ್ಯಾಗ್‌ನ್ನು ಹಾರಿಸುತ್ತೇವೆಂದು ಹೋಗಿ ನೂರಾರು ಜನರ ರಕ್ತದ ಕಾಲುವೆಯನ್ನು ಹರಿಸಬೇಕಾಗಿತ್ತೆ? ಅಲ್ಲಿಗೆ ಪೊಲೀಸರು ಸಕಾಲದಲ್ಲಿ ಹೋಗದೇ ಇದ್ದಿದ್ದರೆ ಇನ್ನೂ ನೂರಾರು ಜನರು ಸಾಯುತ್ತಿದ್ದರು. ನೀವು ಮಾತನಾಡುವಾಗ ನಾನು ಇಂಟರ್‌ಫಿಯರ್ ಮಾಡಲಿಲ್ಲ. ಆದರೆ ಈಗ ತಾವು ಏನನ್ನು ಹೇಳುತ್ತಿದ್ದೀರಿ ಇದೇರೀತಿ ನೀವು ಪ್ರಚೋದನೆಯನ್ನು ಮಾಡುತ್ತಾ ಹೋದರೆ ಮತ್ತೆ ನೂರಾರು ಜನರ

ಕೊಲೆಯಾಗುತ್ತದೆ. ಮತ್ತೆ 26ನೇ ಜನವರಿಗೆ ನೀವು ಇದನ್ನೇ ಮಾಡುತ್ತೀರಿ. ಇದೇ ಒಂದು ಸ್ಲೋಗನ್‌ನನ್ನು ಇಟ್ಟುಕೊಂಡು ನೀವು ಹೋಗುತ್ತಿದ್ದಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ನಾನು ಇವತ್ತು ಒಂದು ಮಾತನ್ನು ಹೇಳಬಯಸುತ್ತೇನೆ. ದೇಶಪಾಂಡೆ ನಗರದಲ್ಲಿ ಗೌರವಾನ್ವಿತ ನಾಗರೀಕರ ಮೇಲೆ ವಿನಾಕಾರಣ ಗುಂಡು ಹಾಕಿ ಕೊಂದಿದ್ದು ಅದು ಪಾಪದ ಕೆಲಸವಲ್ಲವೆ ? ನೀವು ಮಾತನಾಡುವಾಗ ಉತ್ತರ ಕೊಡಿ. ನಾನು ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ಆ ಘಟನೆಯ ಬಗ್ಗೆ ಹೈಕೋರ್ಟ್‌ನ ಒಬ್ಬ ನ್ಯಾಯಾಧೀಶರಿಂದ ತನಿಖೆ ಮಾಡಿಸುತ್ತೇವೆಂದು ಹೇಳಿದರು. ಈ ಪರಟನೆ ನಡೆದು 3 ತಿಂಗಳಾಯಿತು. ಅಲ್ಲಿಗೆ ಯಾವುದೇ ಹೈಕೋರ್ಟ್‌ನ ನ್ಯಾಯಾಧೀಶರು ಹೋಗಿದ್ದಾರೆಯೆ ? ಅಲ್ಲಿ ತನಿಖೆ ಪ್ರಾರಂಭವಾಯಿತೆ ? ನಿಮ್ಮ ಸರ್ಕಾರ ಇದ್ದಾಗ ತನಿಖೆಯನ್ನು ಏತಕ್ಕೆ ಪ್ರಾರಂಭ ಮಾಡಲಿಲ್ಲ ? ನಿಮ್ಮ ಬಣ್ಣ ಬಯಲಾಗುತ್ತದೆ ಅಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾವು ಮಾಡಿದೆವು. ಆದರೆ ನೀವು ಮಾಡತಕ್ಕ ಪ್ರಚೋದನೆ......

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ತಮ್ಮ ಮೂಲಕ ಈ ಸರ್ಕಾರಕ್ಕೆ ಹೇಳುತ್ತಿದ್ದೇನೆ. ಈ ಘಟನೆಯ ಸತ್ಯಾಸತ್ಯತೆ ಹೊರಗೆ ಬರಲಿ, ಇದರ ಬಗ್ಗೆ ತನಿಖೆ ಮಾಡಿಸುತ್ತೇನೆಂದು ಅವತ್ತು ಇದ್ದ ಮಾನ್ಯ ಮುಖ್ಯಮಂತ್ರಿಗಳು ಬಹಿರಂಗವಾಗಿ ಘೋಷಣೆ ಮಾಡಿದರು. ಅದು ಏನಾಗಿದೆ ? ಮುಖ್ಯ ಮಂತ್ರಿಗಳು ಉತ್ತರ ಕೊಡುವಾಗ ಕೊಡಿ. ಈ ಘಟನೆ ನಡೆದು 3 ತಿಂಗಳಾಯಿತು. 4 ತಿಂಗಳಾಯಿತು. ಅಲ್ಲಿಗೆ ನ್ಯಾಯಾಧೀಶರು ಹೋಗಲಿಲ್ಲ. ಇವತ್ತು ಈ ಘಟನೆಯ ಸತ್ಯಾಸತ್ಯತೆ ಹೊರಗೆ ಬರಬೇಕು. ಯಾರು ಅಪರಾಧಿಗಳಿದ್ದಾರೆ ಅವರಿಗೆ ಶಿಕ್ಷೆಯಾಗಬೇಕಾಗಿತ್ತು. ಆ ಕೊಲೆಗಡುಕ ಸರ್ಕಾರಕ್ಕೆ ಜನರು ಸರಿಯಾದ ಶಿಕ್ಷೆಯನ್ನು ಕೊಟ್ಟರು ಎಂದು ನಾನು ಈ ಸದನದಲ್ಲಿ ಈ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ:- ಅಮಾಯಕರು ಯಾರಾದರೂ ಸಾಯಲಿ. ನಿಮಗಂತೂ ಅನುಕೂಲ ಆಯಿತು. 40 ಸೀಟ್‌ಗಳು ನಿಮಗೆ ಸಿಕ್ಕಿದವು.

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ಇಷ್ಟು ಹಗುರವಾಗಿ ತೆಗೆದುಕೊಳ್ಳಬೇಡಿ. ನಾನು ಅದಕ್ಕೆ ಒಂದು ಮಾತು ಹೇಳುತ್ತೇನೆ. ಇವತ್ತು ಅಲ್ಪಸಂಖ್ಯಾತ ಬಂಧುಗಳಿಗೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಲ್ಪಸಂಖ್ಯಾತರ ಬಗ್ಗೆ ಒಂದು ಕಡೆ ಅನುಕಂಪ ತೋರಿಸುತ್ತಾರೆ. ಅವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಮಾಡಿರಿ ಎಂದು. ಇದೆಲ್ಲವನ್ನೂ ಕೂಡ ಇಲ್ಲಿ ಮಾಡಿಸತಕ್ಕವರು ಯಾರು ? ನಾನು ನೇರವಾಗಿ ಹೇಳಬೇಕಾಗುತ್ತದೆ, ನೀವೆಲ್ಲರೂ ಕೂಡ ಜವಾಬ್ದಾರರಿದ್ದೀರಿ ಎಂದು ಮಾತನ್ನು ನಾನು ಹೇಳಬೇಕಾಗುತ್ತದೆ. ಒಂದು ಕಡೆ ಪ್ರಚೋದನೆ ಮಾಡುವುದು, ಇನ್ನೊಂದು ಕಡೆ ಹೇಳುವುದೇನೆಂದರೆ ಕೊಲೆಗಡುಕ ಸರ್ಕಾರ ಎಂದು. ಎನ್‌ಕ್ವೈರಿ ಮಾಡಲಿ; ಈಗ ಹೊಸ ಸರ್ಕಾರ ಬಂದಿದೆ. ತಪ್ಪು ಮಾಡಿದ್ದರೆ ಶಿಕ್ಷೆ ಕೊಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ನಾನು ಹೇಳುವುದಿಷ್ಟೆ. ಇವತ್ತು ಈ ರಾಜ್ಯದ, ಈ ದೇಶದ ಅಲ್ಪಸಂಖ್ಯಾತ ಬಂಧುಗಳಿಗೆ ಸತ್ಯ ಯಾವುದು, ಅಸತ್ಯ ಯಾವುದು, ಯಾರನ್ನು ನಂಬಬೇಕು, ಯಾರನ್ನು ನಂಬಬಾರದು ಎಂಬುದು ಮನದಟ್ಟಾಗಿದೆ. ಅದಕ್ಕಾಗಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಏನು ಹೋಮ್ ಮಿನಿಸ್ಟರ್ ಮತ್ತು ಮುಖ್ಯಮಂತ್ರಿಗಳು ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಶಾಂತಿ ಸೌಹಾರ್ದತೆಯಿಂದ ಇದನ್ನು ಕೊನೆ ಮಾಡಬೇಕು, ಅಲ್ಪಸಂಖ್ಯಾತ ಬಂಧುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಶಾಂತ ರೀತಿಯಲ್ಲಿ ಗೌರವದಿಂದ ಅಲ್ಲಿ ರಾಷ್ಟ್ರಧ್ವಜ

ಹಾರಬೇಕು ಎಂದು ಮಾಡಿದರು. ಅದನ್ನು ಯಾರೂ ವಿರೋಧ ಮಾಡಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯ ಬಂದ 47 ವರ್ಷಗಳ ನಂತರ ಎಲ್ಲೂ ಸಹ ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೆ ಹೋದಂಥ......

ಶ್ರೀ ಕಮರಲ್ ಇಸ್ಲಾಂ:– ಯಡಿಯೂರಪ್ಪ......

ಶ್ರೀ ಬಿ.ಎಸ್. ಯಡಿಯೂರಪ್ಪ:– ಒಂದು ನಿಮಿಷ. ನಾನು ಯೀಲ್ಡ್ ಆಗುತ್ತಿಲ್ಲ. ನೀವು ಮಾತನಾಡುವಾಗ ಮಾತನಾಡಿ. ನಾನು ಈಗ ಯೀಲ್ಡ್ ಆಗುತ್ತಿಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಹೈಕೋರ್ಟಿನಲ್ಲಿ ಕೇಸ್ ಪೆಂಡಿಂಗ್ ಇದೆ. ಏತಕ್ಕೆ ಹೀಗೆ ಮಾತನಾಡುತ್ತಾರೆ ? ಡಿಸಿಷನ್ ಆಗಿಲ್ಲ.

(ಹಲವಾರು ಸದಸ್ಯರು ಮಾತನಾಡುತ್ತಿದ್ದರು. ಯಾವುದೂ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ. ಗೊಂದಲಮಯ ವಾತಾವರಣ ಇತ್ತು.)

SRI QUMURAL ISLAM:– Sir, I am on a point of order.

(ಹಲವಾರು ಸದಸ್ಯರು ಮಾತನಾಡಲು ಎದ್ದುನಿಂತಿದ್ದರು)

ಛೇರ್ಮನ್:– ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ, ಕುಳಿತುಕೊಳ್ಳಿ. ಬೆಲ್ಲದ್ ಅವರೇ ಕುಳಿತುಕೊಳ್ಳಿ, ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ.

SRI QUMURUL ISLAM:_ I am on a point of Order. I am very happy that Hon. Leader on Opposition was very nicely speaking and he was talking of the minority and all that in this House. I would request the Hon. Speaker that minorities of Karnataka will be very happy if they drop the flag hoisting at Idgah maidan. This is a request on behalf of the minorities to the Hon. Leader of Opposition. They will be very happy.

ಶ್ರೀ ಕೆ.ಎಸ್. ಈಶ್ವರಪ್ಪ:– ಮುಸಲ್ಮಾನರು ವಿರೋಧ ಮಾಡುತ್ತಿಲ್ಲ. ಮುಸಲ್ಮಾನರು ಹುಬ್ಬಳ್ಳಿಯಲ್ಲಿ ರಾಷ್ಟ್ರಧ್ವಜ ಹಾರಿಸುವುದು ಬೇಡ ಎಂದು ಹೇಳುತ್ತಿಲ್ಲ. ಲೀಗ್‌ನವರು ಬೇಡ ಎಂದು ಹೇಳುತ್ತಿದ್ದಾರೆ. ಅದನ್ನು ಅರ್ಥ ಮಾಡಿಕೊಳ್ಳಬೇಕು. ಕೇವಲ ಲೀಗ್‌ನವರು ಬೇಡ ಎಂದರೆ ಈ ರಾಜ್ಯದ ಜನ ಯಾರೂ ಒಪ್ಪುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಇಷ್ಟೆ. ಇವತ್ತು ಇಲ್ಲಿ ಕುಳಿತಿರತಕ್ಕ ಯಡಿಯೂರಪ್ಪ ಆಗಲಿ ಅಥವಾ ಹಿರಿಯ ಸದಸ್ಯರಾದಂಥ ಕಮರಲ್ ಇಸ್ಲಾಂ, ನಮ್ಮ ಸ್ನೇಹಿತ ಸದಸ್ಯರಾಗಲೀ ಇದು ಇಷ್ಟು ಜನರಿಗೇ ಸೀಮಿತವಾದ ಪ್ರಶ್ನೆ ಅಲ್ಲ. ನಮ್ಮ ಸದಸ್ಯರಿಗೆ ನಾನು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ನಾನೇನಾದರೂ ಬೇರೆ ಯಾವುದೇ ಒಂದು ಧ್ವಜವನ್ನು ಅಲ್ಲಿ ಹಾರಿಸಬೇಕು ಎಂದು ಹೇಳಿಲ್ಲ. ತಮ್ಮ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಸ್ಥಳ ಯಾರಿಗೆ ಸೇರಿದೆ ಎಂಬುದನ್ನು ನಾನು ಪ್ರಸ್ತಾಪ ಮಾಡುತ್ತಿಲ್ಲ. ಯಾರಿಗೇ ಅದು ಸೇರಿರಲಿ. ಅಲ್ಪಸಂಖ್ಯಾತ ಬಂಧುಗಳಿಗೆ ಸೇರಿರಲಿ. ಪ್ರಶ್ನೆ ಏನೆಂದರೆ, ಈ ದೇಶದ ಇಂಚು ಇಂಚಿನಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವುದನ್ನು ತಡೆಯುವುದು ಸರಿಯಿಲ್ಲ, ಸಾಧ್ಯ ಇಲ್ಲ. ಯಾವುದಾದರೂ ಪಾಕಿಸ್ತಾನದ ಧ್ವಜವನ್ನು ಹಾರಿಸುವುದಕ್ಕೆ ಹೋದರೆ, ಬೇರೆ ದೇಶದ......

(ಮಾನ್ಯ ಸಚಿವರಾದ ಶ್ರೀ ಸಿ. ಬೈರೇಗೌಡರು ಮಾತನಾಡಲು ಎದ್ದರು)

ಶ್ರೀ ಬಿ.ಎಸ್. ಯಡಿಯೂರಪ್ಪ:- ಸ್ವಾಮಿ, ಹೀಗಾದರೆ ಹೇಗೆ ? ಹಿಂದೆ ಪಕ್ಕದಲ್ಲಿ ಕುಳಿತು ನನ್ನ ಜೊತೆಯಲ್ಲಿ ಈ ವಿಷಯದ ಬಗ್ಗೆ ಮಾತನಾಡಿದ್ದೀರಿ.

ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿಗಳು):- ಒಂದು ನಿಮಿಷ. ಬಹಳ ದೊಡ್ಡ ಮಾತನ್ನು ಹೇಳಿದ್ದೀರಿ. ಈಗ ಈ ದೇಶದ ಪ್ರತಿಯೊಂದು ಅಂಗುಲದಲ್ಲೂ ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೆ ಅವಕಾಶ ಇರಬೇಕು ಎಂದು ಇದನ್ನ ತತ್ವಶಃ ತಾವು ಒಪ್ಪಿದ್ದೀರಿ ಎಂದು ನಾನು ಭಾವಿಸಿದ್ದೇನೆ. ಹಾಗಾದರೆ ಸ್ವಾಮಿ, ನೀವು ನಡೆಯಿರಿ ನಾನು ಬರುತ್ತೇನೆ. ಇಲ್ಲವೇ ನಾನು ಬರುತ್ತೇನೆ ನನ್ನ ಜೊತೆಯಲ್ಲಿ ಬನ್ನಿ. ನಿಮ್ಮ ಆರ್.ಎಸ್.ಎಸ್. ಕಛೇರಿಗಳ ಮೇಲೆ ರಾಷ್ಟ್ರಧ್ವಜವನ್ನು ಹಾರಿಸುವಂಥ ಕೆಲಸಕ್ಕೆ ತಾವು ತಯಾರಾಗಿ, ತಯಾರಾಗಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಒಂದು ಮಾತು ಹೇಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ:- ಈಗ ಏನೋ ಭಾರಿ ದೊಡ್ಡ ವಿಚಾರ ಹೇಳುತ್ತಾರೆ ಎಂದು ನಾನು ಅಂದುಕೊಂಡಿದ್ದೆ. ದೊಡ್ಡ ವಿಚಾರ ಹೇಳಲೇ ಇಲ್ಲ. ಸರ್ವ ಸ್ವಾಗತ. ನಾನೇ ಹೋಗಿ ರಾಷ್ಟ್ರಧ್ವಜವನ್ನು ಹಾರಿಸಿ ಬಂದಿದ್ದೇನೆ. ಬಂದು ಹಾರಿಸಿ. ರಾಷ್ಟ್ರಧ್ವಜ ಹಾರಿಸುವುದಕ್ಕೆ ಬೇಡ ಎಂದು ಹೇಳುತ್ತಾರಾ ? ಎಲ್ಲಾದರೂ ಉಂಟಾ ? ರಾಷ್ಟ್ರದ್ರೋಹಿಗಳಾದವರು ಬೇಡ ಎಂದು ಹೇಳಬೇಕಾಗುತ್ತದೆ. ನಾವು ರಾಷ್ಟ್ರದ್ರೋಹಿಗಳಲ್ಲ. ನಾವು ಜನತಾದಳದವರಲ್ಲ; ರಾಷ್ಟ್ರಧ್ವಜ ಕಿತ್ತು ವಿಧಾನಸೌಧದ ಮೇಲೆ ಪಾರ್ಟಿ ಫ್ಲ್ಯಾಗ್ ಹಾರಿಸುವುದಕ್ಕೆ ಹೋಗಿದ್ದರಲ್ಲ, ಅವರಲ್ಲ ನಾವು.

ಶ್ರೀ ಸಿದ್ಧರಾಮಯ್ಯ:- ಮಾನ್ಯ ನಂಜೇಗೌಡರು ಬಹಳ ಹಿರಿಯ ಸದಸ್ಯರು. ಅವರು ಹೇಳುತ್ತಾರೆ, ಮಾನ್ಯ ಬೈರೇಗೌಡರು ಬಹಳ ದೊಡ್ಡ ವಿಚಾರ ಹೇಳಿದರು ಅಂತ. ಶ್ರೀಮಾನ್ ಯಡಿಯೂರಪ್ಪನವರು, ಮಾನ್ಯ ವಿರೋಧಪಕ್ಷದ ನಾಯಕರು ಅವರು ಬಹಳ ದೊಡ್ಡ ವಿಚಾರವನ್ನೇನೂ ಪ್ರಸ್ತಾಪ ಮಾಡುತ್ತಿಲ್ಲ. ರಾಷ್ಟ್ರದ ಇಂಚು ಇಂಚಿನಲ್ಲೂ ಕೂಡ ರಾಷ್ಟ್ರಧ್ವಜವನ್ನು ಹಾರಿಸಬೇಕು ಎನ್ನತಕ್ಕ ವಿಚಾರದಲ್ಲಿ ನಮ್ಮದೇನೂ ತಕರಾರು ಇಲ್ಲ. ಆದರೆ ನಿಮ್ಮ ಜಾಗಕ್ಕೆ ಸೇರಿದ ಆ ಇಂಚಿನಲ್ಲೂ ಕೂಡ ರಾಷ್ಟ್ರಧ್ವಜವನ್ನು ಹಾರಿಸುವುದು ದೊಡ್ಡದು ಅಂತ ತಿಳಿದು, ಅಲ್ಲಿ ಹಾರಿಸಿ ನಂತರ ಬೇರೆ ಕಡೆ ಏಕೆ ಹಾರಿಸುವುದಿಲ್ಲ ಎನ್ನತಕ್ಕ ಮಾತನ್ನು ಪ್ರಶ್ನೆಯಾಗಿ ಕೇಳಬೇಕಾಗುತ್ತದೆ. ಆದ್ದರಿಂದ ಅದು ದೊಡ್ಡ ವಿಚಾರ ಅಲ್ಲ. ಇದೂ ದೊಡ್ಡ ವಿಚಾರ ಅಲ್ಲ. ಅವರು ಹೇಳಿದ್ದೂ ದೊಡ್ಡ ವಿಚಾರವಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಶ್ರೀಮಾನ್ ಬೈರೇಗೌಡರು ಹೊಸದಾಗಿ ಸಚಿವರಾಗಿ ಸಚಿವ ಸ್ಥಾನದಲ್ಲಿ ಕುಳಿತಿದ್ದೀರಿ. ತಾವು ಹಣಕಾಸು ಸಚಿವರಾಗಿ ತುಂಬ ಪ್ರಮುಖ ಸ್ಥಾನದಲ್ಲಿದ್ದೀರಿ. ಆದರೆ ಇದು ಈ ರೀತಿಯಾಗಿ ಚರ್ಚೆಯಾಗುತ್ತದೆಂದು ನಾನು ಭಾವಿಸಿರಲಿಲ್ಲ. ನಾನು ಹೇಳುತ್ತೇನೆ. ನಾನು ಒಬ್ಬ ರಾಷ್ಟ್ರೀಯ ಸ್ವಯಂ ಸೇವಕ ಸಂಘದಲ್ಲಿ ಪಳಗಿ ಮನುಷ್ಯನಾಗಿ ಈ ಸ್ಥಾನದಲ್ಲಿ ಕುಳಿತಿರುವಂಥವನು. ಅಲ್ಲಿ ದೇಶ ಭಕ್ತಿ ಬಗ್ಗೆ ಪಾಠ ಕಲಿತಂತಹವನು ನಾನು. ಇಲ್ಲದಿದ್ದರೆ ರಸ್ತೆಯಲ್ಲಿ ತಿರುಗುತ್ತಾ ಇದ್ದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಒಂದು ನಿಮಿಷ ಕೇಳಿ. ದುಃಖ ಏಕೆ ?

ಶ್ರೀ ಆರ್.ಎಲ್. ಜಾಲಪ್ಪ:- ನಾವು ಮನುಷ್ಯರಲ್ಲವೊ ?

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಏನು ಹೇಳಿದೆ? ನಿಮ್ಮ ಬಗ್ಗೆ ಹೇಳಿದೆನೇ? ಹುಟ್ಟಿದಾಗಲೇ ಮಹಾ ಪುರುಷರಾಗಿ ಹುಟ್ಟಿದಂತಹವರು. ನಾನು ಒಬ್ಬ ಸಾಮಾನ್ಯ ರೈತನ ಮಗ.

ಶ್ರೀ ಸಿದ್ಧರಾಮಯ್ಯ:- ಶ್ರೀಮಾನ್ ಯಡಿಯೂರಪ್ಪನವರು ದೊಡ್ಡ ಮನುಷ್ಯರಾಗಿದ್ದಾರೆ, ಎಂಬ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಆದರೆ ನಾವು ಬೇರೆಯವರೂ ಕೂಡ ಅಷ್ಟೇ ಮನುಷ್ಯತ್ವ ಇರತಕ್ಕಂತಹವರು ಎನ್ನತಕ್ಕಂಥಾದ್ದನ್ನು ದಯ ಮಾಡಿ ತಿಳಿದುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅಧ್ಯಕ್ಷರು ಅಪ್ಪಣೆ ಕೊಡಿಸಬೇಕು. ನಾನು ಒಂದು ಮಾತನ್ನು ನಿಮ್ಮ ಬಗ್ಗೆ ಹೇಳಿದೆನೆ? ನಾನು ಒಬ್ಬ ಸಾಮಾನ್ಯ ವ್ಯಕ್ತಿ. ಎಲ್ಲೋ ರಸ್ತೆಯಲ್ಲಿ ಬಿದ್ದಿದ್ದಂತಹವನನ್ನು ಎತ್ತಿಕೊಂಡು ಬಂದು ಮನುಷ್ಯನನ್ನಾಗಿ ಮಾಡಿದ್ದುದು ಆ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಈ ಯಡಿಯೂರಪ್ಪನನ್ನು. ಅದಕ್ಕೆ ಸನ್ಮಾನ್ಯ ಬೈರೇಗೌಡರು ಹೇಳಿದರು. ಶ್ರೀಮಾನ್ ಬೈರೇಗೌಡರ ರಾಷ್ಟ್ರೀಯ ಸ್ವಯಂ ಸೇಮಕ ಸಂಘದ ಯಾವುದೇ ಕಛೇರಿಯ ಮೇಲೆ ರಾಷ್ಟ್ರ ಧ್ವಜವನ್ನು ಹಾರಿಸುವುದಕ್ಕೆ ಈಗಾಗಲೇ ಎಲ್ಲಾ ಕಡೆ ಹಾರಿಸುತ್ತಿದ್ದಾರೆ. ಬಹುಶಃ ಇದನ್ನು ಯಾವುದೋ ಪ್ರಚಾರ ಮಾಡುವುದರ ಅಗತ್ಯ ಇಲ್ಲ. ನಮ್ಮ ಜೊತೆ ಕರೆದುಕೊಂಡು ಹೋಗುತ್ತೇವೆ ನೀವು ಮಂತ್ರಿಗಳಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಛೇರಿಯ ಮೇಲೆ ಜನವರಿ 26ನೇ ತಾರೀಖು ಒಟ್ಟಾಗಿ ಹಾರಿಸೋಣ. ಯಾವುದನ್ನು ಬೇಕಾದರೂ ಆಯ್ಕೆ ಮಾಡಿ. ಆದರೆ ಒಂದು ಮಾತನ್ನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನನಗೆ ವೈಯಕ್ತಿಕವಾಗಿ ಯಾವುದೇ ಪ್ರತಿಷ್ಠೆ ಇಲ್ಲ, ಶ್ರೀಮಾನ್ ಕಮರುಲ್ ಇಸ್ಲಾಂ ನಮ್ಮ ಸ್ನೇಹಿತರು ಹೇಳಿದರು. ಇದರಲ್ಲಿ ರಾಜಕೀಯ ಲಾಭ ಮಾಡುವಂತಹ ಕ್ಷುಲಕ ಕೆಲಸಕ್ಕೆ ನಾವು ಸಿದ್ಧ ಇಲ್ಲ, ಹಿಂದೆ ಮಾಡಿಲ್ಲ ಮುಂದೆಯೂ ಮಾಡುವುದಿಲ್ಲ. ನಾನು ಅದಕ್ಕಾಗಿ ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಓಹೋ!

ಶ್ರೀ ಬಿ.ಎಸ್. ಯಡಿಯೂರಪ್ಪ:- ನನಗೆ ಅರ್ಥವಾಗಲಿಲ್ಲ. "ಹಾ ಅಂದರೆ" ಏನು? ನಾನು ಈ ಸದನದಲ್ಲಿ ಜವಾಬ್ದಾರಿ ಸ್ಥಾನದಿಂದ ಮಾತನಾಡುತ್ತಿದ್ದೇನೆ. ಇದು ತಮಾಷೆ ವಿಷಯ ಅಲ್ಲ. ರಾಷ್ಟ್ರಧ್ವಜವನ್ನು ಹಾರಿಸಬೇಕೆಂಬ ಪ್ರಶ್ನೆ 6 ಜನ ಮುಗ್ಧರು ಪೋಲೀಸ್ ಗೋಲೀಬಾರ್‌ಗೆ ತುತ್ತಾಗಿ ಹುತಾತ್ಮರಾದ ಸಂದರ್ಭ ಬಂದಿದೆ. ಇವತ್ತು ಸನ್ಮಾನ್ಯ ಸಿಂಧ್ಯರವರು ಗೃಹ ಸಚಿವರಾಗಿ ಇದರ ಬಗ್ಗೆ ಪ್ರಸ್ತಾಪ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಗಮನ ಕೊಡುತ್ತಾರೆ ಎಂದು ಹೇಳಿದ್ದಾರೆ. ಬಹಳ ಹಗುರವಾದ ವಿಚಾರವಾಗಿದ್ದರೆ ಅವರು ಗಮನ ಕೊಡುತ್ತಿದ್ದರೆ? ನಾನು ಇಷ್ಟನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ನನ್ನನ್ನು ಕರೆದು ಈ ರೀತಿ ಆಗಬೇಕು ಎಂದು ಸಲಹೆ ಕೊಟ್ಟರೆ ತಲೆಬಾಗಿ ನಡೆದುಕೊಳ್ಳುವುದಕ್ಕೆ ನಾನು ಸಿದ್ಧ ಇದ್ದೇನೆ. ಇದನ್ನು ಕೊನೆ ಮಾಡೋಣ. ಯಾರೂ ಇದನ್ನು ಪ್ರತಿಷ್ಠೆ ಪ್ರಶ್ನೆಯಾಗಿ ಮಾಡಿಕೊಳ್ಳುವುದು ಬೇಡ. ಅಲ್ಲಿರತಕ್ಕ ನಾಗರೀಕ ಬಂಧೂಗಳೂ ಇದನ್ನು ಮಾಡುವುದಿಲ್ಲ. ಸ್ವತಃ ಮಾನ್ಯ ಖರ್ಗೆಯವರಿಗೆ ಗೊತ್ತಿರಬಹುದು. ಸನ್ಮಾನ್ಯ ವೀರಪ್ಪ ಮೊಯಿಲಿಯವರಿಗೆ ಆ ಬಿಸಿ ತಟ್ಟಿದ ಮೇಲೆ 6 ಜನ ಮುಗ್ಧರ ಸಾವು ಆದ ಮೇಲೆ ಹೇಳಿದರು. ಹುಬ್ಬಳಿ ಧಾರವಾಡ ಮಹಾನಗರದ ಜನತೆ ಒಂದು ಕಡೆ ಕುಳಿತು ಚರ್ಚೆ ಮಾಡಿ ಬಗೆಹರಿಸಿಕೊಳ್ಳಬಹುದಿತ್ತು ಅಂತ. ನಾನು ಪತ್ರ ಬರೆದಿದ್ದೆ. ರಾಷ್ಟ್ರ ಧ್ವಜವನ್ನು ಸರ್ಕಾರ, ಯಾರೇ ಒಬ್ಬ ಪ್ರತಿನಿಧಿ ಅಲ್ಲಿಗೆ ಬಂದು ತುಂಬ ಗೌರವದಿಂದ ರಾಷ್ಟ್ರ ಧ್ವಜವನ್ನು ಹಾರಿಸೋಣ. ಅವತ್ತು ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೆ ಅಲ್ಲಿಗೆ ಹೋದಾಗ ಪೋಲೀಸ್ ಅಧಿಕಾರಿಗಳು ಯಾರೋ ಕೆಲವರು, ಮಾನ್ಯ ಮುಖ್ಯ ಮಂತ್ರಿಗಳು ದಾಖಲೆಗಳನ್ನು ತೆಗೆದು ನೋಡಿ. ಯಾರೋ ಪೋಲೀಸ್ ಅಧಿಕಾರಿಗಳು ಯಾವುದೋ ಕಾರಣಕ್ಕೋಸ್ಕರ ರಾಷ್ಟ್ರಧ್ವಜವನ್ನು ಕೀಳದಿದ್ದರೆ

ಇವತ್ತು ಆ ಸಂದರ್ಭ ಬರುತ್ತಿರಲಿಲ್ಲ. ಅಲ್ಪಸಂಖ್ಯಾತ ಬಾಂಧವರ ಜೊತೆ ನಮ್ಮ ಹಿರಿಯರು ಕೆಲವರು ಮಾತನಾಡಿದ್ದಾರೆ. ಬಹುಶಃ ಶ್ರೀಮಾನ್ ಕಮರುಲ್ ಇಸ್ಲಾಂರವರು ನಮ್ಮ ಜೊತೆ ಬರಲಿ. ಹೋಗೋಣ. ಆದಕ್ಕಾಗಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ವಿಶೇಷವಾದ ಗಮನ ಕೊಟ್ಟು ಶಾಂತ ರೀತಿಯಲ್ಲಿ, ಗೌರವದಿಂದ ಅಲ್ಲಿ ರಾಷ್ಟ್ರ ಧ್ವಜವನ್ನು ಹಾರಿಸುವಂತಹ ವ್ಯವಸ್ಥೆ ಮಾಡಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಕಳೆದ 5 ವರ್ಷಗಳಲ್ಲಿ ಒಂದು ರೀತಿಯಲ್ಲಿ ಕಾನೂನು ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿತ್ತು. ಒಂದು ರೀತಿಯಲ್ಲಿ ಭ್ರಷ್ಟಾಚಾರದ ಹಗರಣದ ಸರಮಾಲೆ ನಡೆದಿದೆ. ಆಶ್ರಯ ಹಗರಣವನ್ನು ಈ ಶತಮಾನದ ಹಗರಣವೆಂದು ನಮ್ಮ ಸನ್ಮಾನ್ಯ ವೀರಪ್ಪ ಮೊಯಿಲಿಯವರು ಅವರು ಮುಖ್ಯಮಂತ್ರಿಗಳಾಗುವುದಕ್ಕಿಂತ ಮುಂಚಿತವಾಗಿ ಹೇಳಿದರು. ಆದರೆ ಆ ಹಗರಣಕ್ಕೆ ಒಂದು ರೀತಿಯಲ್ಲಿ ಕಾರಣೀ ಪುರುಷರು ಅವರೇ ಆಗಿಬಿಟ್ಟರು. ಕೊಲೆ ಆರೋಪ ಹೊತ್ತಂಥವರು ಮಂತ್ರಿಗಳಾದರು. ಮತ್ತೆ ಕ್ಲಾಸಿಕ್ ಕಂಪ್ಯೂಟರ್ ಹಗರಣದ ಆರೋಪಕ್ಕೆ ತುತ್ತಾದ ಮಾಜಿ ಮುಖ್ಯ ಮಂತ್ರಿಗಳು ಸಿ.ಬಿ.ಐ. ತನಿಖೆಯನ್ನು ಎದುರಿಸುತ್ತಿದ್ದಾರೆ. ನ್ಯಾಯಾಲಯದ ಕಟಕಟೆಯನ್ನೂ ಹತ್ತಿದ್ದಾರೆ. ಕೇಂದ್ರ ಸರ್ಕಾರದ ಸಚಿವರೊಬ್ಬರ ಭೂಹಗರಣ. ಇಲಾಖೆಯ ತನಿಖೆ ಮಾಡುವಂತಹ ಆದೇಶವನ್ನು ಕೊಟ್ಟಂತಹ ಒಂದೇ ಒಂದು ಕಾರಣಕ್ಕೋಸ್ಕರ ಆವೊತ್ತಿನ ಕಂದಾಯ ಸಚಿವರಾದ ರಾಜಶೇಖರಮೂರ್ತಿಯವರು ರಾಜೀನಾಮೆಯನ್ನು ಕೊಡಬೇಕಾಯಿತು. ಈ ರಾಜ್ಯದ ಜನ ಆ ಕಡೆ ಕುಳಿತಿದ್ದ ಕಾಂಗ್ರೆಸ್ ಪಕ್ಷದವರನ್ನು ಈ ಕಡೆಗೆ ಏಕೆ ತಂದರು, ನಿಮ್ಮನ್ನು ಅಲ್ಲಿಗೆ ತೆಗೆದುಕೊಂಡು ಹೋದರು ? ಒಂದು ಬದಲಾವಣೆಯನ್ನು ನಿರೀಕ್ಷಣೆ ಮಾಡುವುದಕ್ಕೆ ಅಲ್ಲಿಗೆ ತೆಗೆದುಕೊಂಡು ಹೋದರು. ರಾಜಕೀಯ ಅಪರಾಧಿಗಳಿಗೆ ಈ ರಾಜ್ಯದಲ್ಲಿ ಶಿಕ್ಷೆ ಇಲ್ಲವೇನು ? ಖಜಾನೆಯನ್ನು ಲೂಟಿ ಮಾಡಿದಂತಹ ಅವ್ಯವಹಾರಗಳಿಗೆ ಅವುಗಳನ್ನು ಮಾಫಿ ಮಾಡುವುದಕ್ಕೆ ಸಾಧ್ಯವಿದೆಯೇನು ? ಸರ್ಕಾರದ ಸ್ವತ್ತನ್ನು ನುಂಗಿದವರಿಗೆ ರಕ್ಷಣೆ ಕೊಡುವುದಕ್ಕೆ ಸಾಧ್ಯವಿದೆಯೇನು ? ನಾನು ಹೇಳುತ್ತೇನೆ, ಕೊಲೆ ಮಾಡುವುದು ಹೇಗೆ ಅಪರಾಧವೋ, ಕೊಲೆ ಮಾಡುವುದಕ್ಕೆ ಬೆಂಬಲ ಕೊಡುವುದು ಅಷ್ಟೇ ಅಪರಾಧ. ಭ್ರಷ್ಟಾಚಾರ ನಡೆದಾಗ ಅದನ್ನು ಮುಚ್ಚಿಹಾಕುವಂತಹ ಪ್ರಯತ್ನವನ್ನು ಯಾರಾದರೂ ಮಾಡಿದರೆ ಅದು ಭ್ರಷ್ಟಾಚಾರ ಮಾಡುವುದಕ್ಕಿಂತ ಹೆಚ್ಚು ದೊಡ್ಡ ಅಪರಾಧವಾಗುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೋ ಏನೋ ಗೊತ್ತಿಲ್ಲ, ಏನೋ ಒಂದು ನೋವು ಕಾಡುತ್ತಿದೆ. ಮುಖ್ಯಮಂತ್ರಿಗಳು ದೆಹಲಿಯಲ್ಲಿದ್ದಾಗ ಒಂದು ಸುದ್ದಿ ಪತ್ರಿಕೆಗಳಲ್ಲಿ ಬಂತು. ಕೇಂದ್ರ ಸಚಿವರ ಭೂಹಗರಣಗಳ ಬಗ್ಗೆ ನನಗೇನೂ ರಾಜಕೀಯ ಸೇಡು ತೀರಿಸಿಕೊಳ್ಳಬೇಕೆಂದು ಇಲ್ಲ. ಆದರ ಬಗ್ಗೆ ಪಬ್ಲಿಕ್ ಲಿಟಿಗೇಷನ್ ಲಿಟಿಷನ್ ಇದೆ ಅದು ತೀರ್ಮಾನವಾಗಲಿ ನೋಡೋಣವೆಂದು ಹೇಳಿದ್ದಾರೆ. ನಾನು ಕೇಳುತ್ತೇನೆ. ಈ ರಾಜ್ಯದ ಇತಿಹಾಸದಲ್ಲಿ ಒಬ್ಬ ಕೇಂದ್ರ ಸಚಿವರ ಬಗ್ಗೆ ಆಡಳಿತ ಪಕ್ಷದವರೇ ಸ್ವತಹ 34–35 ಜನ ಶಾಸಕರು ಅದರ ಬಗ್ಗೆ ತನಿಖೆಯಾಗಬೇಕೆಂದು ಪತ್ರವನ್ನು ಬರೆದ ಮೇಲೆ ಅದರ ಒಂದು ಆಧಾರದ ಮೇಲೆ ಅವೊತ್ತಿನ ಕಂದಾಯ ಸಚಿವರು ಇಲಾಖೆಯ ತನಿಖೆಗೆ ಆದೇಶ ಮಾಡಿದರು. ಇದು ಅಪರಾಧವೇನು ? ಈ ರೀತಿ ಅಪರಾಧ ಮಾಡಿದವರನ್ನು ಕ್ಯಾಬಿನೆಟ್ ಮೀಟಿಂಗ್ ಕರೆದು ಅದರ ಸಬ್ ಕಮಿಟಿ ಮಾಡಿ ಅಲ್ಲಿ ತೀರ್ಮಾನ ಮಾಡುವುದಕ್ಕೆ ನಮ್ಮ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಾಧ್ಯವಿದೆಯೇನು ? ನಾನು ಅತ್ಯಂತ ವಿನಯದಿಂದ ಸಭಾನಾಯಕರನ್ನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಭ್ರಷ್ಟಾಚಾರದ ಹಗರಣಗಳು ಯಾವುದು ಇದೆ, ಯಾವುದೇ ಮುಲಾಜಿಗೆ ಸಿಕ್ಕಿಕೊಳ್ಳಿಯೆಂದು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಹಿಂದೆ ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ ಈಗಾಗಲೇ ಆರು ತಿಂಗಳು ಕೊಳೆಯುತ್ತಿರುವ ವಿಷಯಗಳನ್ನು ಹೊರಗೆ ತೆಗೆದುಕೊಂಡು ಬನ್ನಿಯೆಂದು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ ದಯಮಾಡಿ ಭೂಹಗರಣ ಏನು ನಡೆದಿದೆ ಕೇಂದ್ರ ಸರ್ಕಾರದ ಸಚಿವರ ಕೈವಾಡ

ಅವರು ಕುಟುಂಬದವರು ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಆಸ್ತಿಯ ನಡವಳಿಕೆ ಏನು ಇದೆ ಆ ಬಗ್ಗೆ ತಕ್ಷಣ ತಾವು ಸಿಬಿಐ ತನಿಖೆಗೆ ಆದೇಶವನ್ನು ನೀಡಬೇಕು ಅದನ್ನು ಸಿಬಿಐಗೆ ಕಳುಹಿಸಿಕೊಡಬೇಕು ಅಥವಾ ಹೈಕೋರ್ಟ್ ನ್ಯಾಯಾಧೀಶರಿಗೆ ಜವಾಬ್ದಾರಿಯನ್ನು ಕೊಟ್ಟು ತನಿಖೆ ಮಾಡಿಸಿ. ಆದರೆ ಯಾವುದೋ ಒಂದು ಕಾರಣಕ್ಕೋಸ್ಕರ ರಾಜಕೀಯ ಸೇಡು ತೀರಿಸಿಕೊಳ್ಳುವ ಪ್ರವೃತ್ತಿ ನಿಮ್ಮಲ್ಲಿದೆ ಎಂದು ನಾನು ಹೇಳುವುದಿಲ್ಲ, ಅದನ್ನು ಮಾಡುವುದಿಲ್ಲವೆಂದು ನನಗೆ ಗೊತ್ತಿಲ್ಲ. ಆದರೆ ಸತ್ಯವನ್ನು ಮರೆಮಾಡುವುದು ಅಪರಾಧವಾಗುತ್ತದೆ. ಈ ರಾಜ್ಯದ ಜನ ಮುಖ್ಯಮಂತ್ರಿಗಳಿಗೆ ಈ ರೀತಿಯ ಹಗರಣಗಳನ್ನು ಹೇಗಾದರೂ ಮಾಡಿ ಕೈಬಿಡಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅದನ್ನು ಮಾಡಿದರೆ ಅಕ್ಷಮ್ಯ ಅಪರಾಧವಾಗಬಹುದು. ಅದಕ್ಕೋಸ್ಕರ ಸರಿಯಾದ ತನಿಖೆಗೆ ತಾವು ಆದೇಶವನ್ನು ನೀಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಆ ಮಾತುಗಳನ್ನು ನಾನು ನಿರೀಕ್ಷೆ ಮಾಡಿದ್ದೆ ಆ ಮಾತು ಎಲ್ಲೂ ಇರಲಿಲ್ಲ. ರಾಜ್ಯಪಾಲರ ಭಾಷಣವನ್ನು ನಾನು ಶಬ್ದ ಶಬ್ದಗಳನ್ನು ಓದಿದೆ. ಈ ನಾಡಿನ ಜನ ಯಾವ ಭ್ರಷ್ಟಾಚಾರ ಮತ್ತು ಭೂಹಗರಣಗಳ ಬಗ್ಗೆ ರೋಸಿ ಹೋಗಿ ಒಂದು ಬದಲಾವಣೆಯನ್ನು ತಂದರು. ರಾಜ್ಯಪಾಲರ ಭಾಷಣದಲ್ಲಿ ಮೊದಲನೆಯ ಪುಟದಲ್ಲಿ ಅವ್ಯವಹಾರಗಳ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳುತ್ತೇವೆಂದು, ಅದಕ್ಕೆ ರಕ್ಷಣೆ ಕೊಡುವುದಿಲ್ಲವೆಂದು ಹೇಳಿದರೆ ಎಲ್ಲರಿಗೂ ಅಭಿಮಾನ ಬರುತ್ತದೆ. ಇಲ್ಲಿ ಏಕೋ ಏನೋ ಅನುಮಾನ ಬರುತ್ತಿದೆ. ಇವರ ನಡವಳಿಕೆ ಹೋಗುವ ದಾರಿಯನ್ನು ನೋಡಿದಾಗ ಭಯವಾಗುತ್ತಿದೆ. ಇವರೂ ಅದೇ ಹಳೆಯ ದಾರಿಯನ್ನು ತುಳಿಯುತ್ತಾರೇನೋ ಎನ್ನುವ ಭಯ ರಾಜ್ಯದ ಜನತೆಯನ್ನು ಕಾಡುತ್ತಿದೆ ಏನಾದರೂ ಒಂದು ರೀತಿಯಲ್ಲಿ ಹೊಂದಾಣಿಕೆಯಾಗುತ್ತಿದೆಯೇನೋ ಎನ್ನುವ ಭಾವನೆ ಜನರಲ್ಲಿ ಮೂಡಿದರೆ ನಿಮಗಿಂತ ಹೆಚ್ಚು ನೋವು ಆಗುವುದು ನನಗೆ. ಅದಕ್ಕಾಗಿ ನಾನು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ಒಂದು ಕ್ಷಣ ಸಹ ತಡಮಾಡದೆ ಈ ಬಗ್ಗೆ ಸತ್ಯ ಹೊರಗೆ ಬರಲಿ. ಆರೋಪಗಳನ್ನು ನಿಮ್ಮ ಮೇಲೆ ನಮ್ಮ ಮೇಲೆ ಮಾಡಬಹುದು. ಮತ್ತೊಬ್ಬರ ಮೇಲೆ ಮಾಡಬಹುದು. ಆ ಆರೋಪಗಳ ಬಗ್ಗೆ ತನಿಖೆ ಮಾಡಿ ಆ ರೀತಿಯ ತನಿಖೆಯಿಂದ ಸತ್ಯ ಹೊರಗೆ ಬರಬೇಕಾಗುತ್ತದೆ. ಆ ಕಡೆ ತಾವು ಕ್ರಮ ತೆಗೆದುಕೊಳ್ಳಬೇಕು.

ಇನ್ನು ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಬರಗಾಲವಿದೆ. ಮಾನ್ಯ ಜೆ.ಹೆಚ್. ಪಟೇಲ್‌ರವರಿಗೆ ಪವರ್ ಬಂತು, ಆದರೆ ರಾಜ್ಯದ ಜನರಿಗೆ ಪವರ್ ಸಿಗಲಿಲ್ಲ. ಪವರ್ ಬರದಿಂದ ರಾಜ್ಯದ ರೈತರ ಪಂಪ್‌ಸೆಟ್ಟುಗಳು ಸ್ಟಾರ್ಟ್ ಆಗುತ್ತಾ ಇಲ್ಲ. ಆಶ್ಚರ್ಯವೇನೆಂದರೆ, ಗ್ರಾಮೀಣ ಜನರ ಪ್ರಶ್ನೆ ಬಂದಾಗ ಅವರಿಗೆ ನೆರವು ಕೊಡುವ ಪ್ರಶ್ನೆ ಬಂದಾಗ, ಏನೋ ದೊಡ್ಡ ಅನಾಹುತವಾಗಿದೆ ಎನ್ನುವ ರೀತಿಯಲ್ಲಿ ಅನ್ಯಾಯವಾಗುವಂಥಾದ್ದು ಸರ್ಕಾರದ ನೀತಿಗಳಾಗಿವೆ. ಈ ಸದನದಲ್ಲಿ ಚರ್ಚೆಯಾಗಿವೆ. ಹತ್ತು ಅಶ್ವಶಕ್ತಿಯುಳ್ಳ ಪಂಪ್‌ಸೆಟ್ಟುಗಳಿಗೆ ಪುಕ್ಕಟೆ ಕೊಡಬೇಕೆಂದು ನಿಶ್ಚಯವಾಗಿದೆ.

40 ಪರ್ಸೆಂಟ್ ರೈತರಿಗೆ ವಿದ್ಯುತ್ ಕೊಡುತ್ತಿದ್ದೇವೆಂದು ಹೇಳುತ್ತಾರೆ, ದಾಖಲೆಗಳನ್ನು ತೋರಿಸಿ. ಇವತ್ತು ಪವರ್ ಉತ್ಪತ್ತಿ ಆಗತಕ್ಕದ್ದರಲ್ಲಿ ಶೇಕಡ 30 ಭಾಗ ನೀವು ಕೊಡುತ್ತಿದ್ದೀರಿ. ಬಹುಶಃ ಟ್ರಾನ್ಸ್‌ಮಿಷನ್ ಲಾಸ್ 22 ಪರ್ಸೆಂಟ್ ಏನಿದೆ ಅದರ ಭಾರವನ್ನೂ ಇದರ ಮೇಲೆ ಹೇರಿದ್ದೀರೇನೋ ನನಗೆ ಗೊತ್ತಿಲ್ಲ. ರಾಜ್ಯದ ರೈತರಿಗೆ ಹತ್ತು ಅಶ್ವಶಕ್ತಿಯವರೆಗೆ ಪಂಪ್‌ಸೆಟ್ಟುಗಳಿಗೆ ಏನು ಫ್ರೀಯಾಗಿ ವಿದ್ಯುತ್ ಸರಬರಾಜು ಮಾಡುತ್ತಿದ್ದೇವೆ ಅದನ್ನು ಮುಂದುವರೆಸಬೇಕು. ಆದರೆ ಪುಕ್ಕಟೆಯಾಗಿ ವಿದ್ಯುತ್ ಕೊಡುತ್ತಿದ್ದೇವೆ ಎಂದು ಕೆ.ಇ.ಬಿ.ಯವರು ಕಣ್ಣು ಮುಚ್ಚಿಕೊಂಡು ಕುಳಿತಿದ್ದಾರೆ. ವಿದ್ಯುತ್ ಯಾವ ಸಂದರ್ಭದಲ್ಲಿ ಬರುತ್ತದೆಯೋ ಹೋಗುತ್ತದೆಯೋ ಗೊತ್ತಿಲ್ಲ. ದಿನದಲ್ಲಿ 3–4 ಗಂಟೆಗಳೂ ಸಹ ಮೋಟಾರುಗಳು ಸ್ಟಾರ್ಟ್ ಆಗುವುದಿಲ್ಲ, ಬಾವಿಯಿಂದ ನೀರು ಬರುವುದಿಲ್ಲ, ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ. ಈ ಸದನದ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ

ಇಚ್ಛಿಪಡುತ್ತೇನೆ. 1983ರಿಂದ ಈವರೆಗೆ ಏಳು ಬಾರಿ ಟ್ಯಾರಿಫ್ ರೇಟ್‌ನ್ನು ಜಾಸ್ತಿ ಮಾಡಿದ್ದೇವೆ. ರಾಜ್ಯದ ರೈತರಿಗೆ ಉಚಿತ ವಿದ್ಯುತ್ ಸರಬರಾಜು ಮಾಡುತ್ತಿದ್ದೇವೆ ಎಂದು ಹೇಳಿ ಅದನ್ನು ಕಾಂಪನ್‌ಸೇಟ್ ಮಾಡಲಿಕ್ಕೆ ಕಮರ್ಷಿಯಲ್ ಪರ್‌ಪಸ್‌ಗೆ ಕೆಲವು ಕಾರ್ಖಾನೆಗಳವರಿಗೆ ಒಂದು ಯೂನಿಟ್‌ಗೆ 3 ರೂಪಾಯಿ 60 ಪೈಸೆ ಚಾರ್ಜ್ ಮಾಡುತ್ತಿದ್ದೇವೆ. ಪವರ್ ಜನರೇಷನ್ ಕಾಸ್ಟ್ ಒಂದು ಯೂನಿಟ್‌ಗೆ 80 ಪೈಸೆ ಬೀಳುತ್ತದೆ. ಮನೆಗಳಿಗೆ ಏನು ಎ.ಇ.ಹೆಚ್. ಕನೆಕ್ಷನ್ ಕೊಟ್ಟಿದ್ದೇವೆ ಅದಕ್ಕೂ ಹೆಚ್ಚು ತೆರಿಗೆಯನ್ನು ವಸೂಲು ಮಾಡುತ್ತಿದ್ದೇವೆ. ಮಾನ್ಯ ಜೆ.ಹೆಚ್. ಪಟೇಲರವರು ಉಪ ಮುಖ್ಯಮಂತ್ರಿಗಳಾಗಿ ಹೇಳಬೇಕಾಗಿತ್ತು. 700–800 ಕೋಟಿ ರೂಪಾಯಿ ಏನು ಬಾಕಿ ಇದೆ ಅದನ್ನು ವಸೂಲು ಮಾಡುತ್ತೇವೆ, ವಿದ್ಯುತ್ ಉತ್ಪಾದನೆ ಕಡೆಗೆ ಹೆಚ್ಚಿನ ಗಮನಕೊಡುತ್ತೇವೆಂದು ಹೇಳಬೇಕು. ತಾವು ಅಂಕಿ ಅಂಶಗಳನ್ನು ಕೊಡಿ ಮತ್ತು ಮಂತ್ರಿಗಳಾಗಿ ಅದನ್ನು ಪರಿಶೀಲನೆ ಮಾಡಿ. ಮಂತ್ರಿಗಳು, ಮುಖ್ಯಮಂತ್ರಿಗಳು ಹೇಳಿಕೊಂಡು ಬಂದಿರುತ್ತಾರೆ. ನಾನ್ ರೆಸಿಡೆನ್‌ಷಿಯಲ್ ಇಂಡಿಯನ್ಸ್‌ರಿಂದ ಹಣ ತರುತ್ತೇವೆ, ಖಾಸಗಿ ಬಂಡವಾಳ ಹೂಡುತ್ತೇವೆ ಎಂದು ಹೇಳಿದರು. ಎಷ್ಟು ತಂದಿದ್ದೀರಿ ? ನನಗೆ ಗೊತ್ತಿರುವ ಹಾಗೆ ಒಂದೂ ಪೈಸೆಯನ್ನೂ ತಂದಿಲ್ಲ. ಆಕಸ್ಮಾತ್ ಬಂದಿದ್ದರೆ ಎಲ್ಲಿ ಇಟ್ಟುಕೊಂಡಿದ್ದೀರಿ ? ಅದನ್ನು ಹೇಳಬೇಕಾಗುತ್ತದೆ. ಸರ್ಕಾರ ಉತ್ತರ ಕೊಡುವ ಸಂದರ್ಭದಲ್ಲಿ ಆ ವಿಚಾರವನ್ನು ಹೇಳಿ. ನಮ್ಮ ರಾಜ್ಯದ ವಿದ್ಯುತ್ ಸ್ಥಿತಿಗತಿಯ ಬಗ್ಗೆ ಒಂದು ಶ್ವೇತ ಪತ್ರವನ್ನು ಬಿಡುಗಡೆ ಮಾಡಬೇಕು. ನನಗೆ ಗೊತ್ತಿರುವ ಹಾಗೆ ಅಂಕಿ ಅಂಶಗಳ ಪ್ರಕಾರ ನಮ್ಮ ರಾಜ್ಯದ ಇನ್‌ಸ್ಟಾಲ್ಡ್ ಕೆಪಾಸಿಟಿ ಸುಮಾರು 3,283 ಮೆಗಾವ್ಯಾಟ್. ನಮಗೆ ಸುಮಾರು 4,500 ಮೆಗಾವ್ಯಾಟ್ ವಿದ್ಯುತ್ ಬೇಕಾಗಿದೆ. ತಜ್ಞರ ರಿಪೋರ್ಟ್ ಪ್ರಕಾರ ಎರಡು ಸಾವಿರದ ಇಸವಿಯವರೆಗೆ 7,500 ಮೆಗಾವ್ಯಾಟ್ ವಿದ್ಯುತ್ ಬೇಕಾಗುತ್ತದೆ ಎಂದು ಹೇಳುತ್ತಾರೆ. ಕಳೆದ 10 ವರ್ಷಗಳಿಂದ ನೂರು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಆಗಿಲ್ಲ. ಅದಕ್ಕೇನು ಕಾರ್ಯಕ್ರಮ ತೆಗೆದುಕೊಂಡಿಲ್ಲ. ಪ್ರತಿ ವರ್ಷ 625 ಮೆಗಾವ್ಯಾಟ್‌ಗೂ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಬೇಕಾಗುತ್ತದೆ. ಅದರ ಬಗ್ಗೆ ಸ್ಪಷ್ಟವಾದ ನೀತಿ, ಧೋರಣೆ ಏನು ಎಂಬುದನ್ನು ಹೇಳಬೇಕಾಗುತ್ತದೆ. ಸದ್ಯಕ್ಕೆ ರಾಮಗೊಂಡಂ ವಿದ್ಯುತ್ ಸ್ಥಾವರದಿಂದ ವಿದ್ಯುತ್ ಅನ್ನು ಪಡೆದುಕೊಂಡರೂ ಬೆಂಗಳೂರು ನಗರದಲ್ಲಿ ದಿವಸಕ್ಕೆ ನಾಲ್ಕು ಬಾರಿ ವಿದ್ಯುತ್ ಹೋಗುತ್ತದೆ. ಎರಡು ಮೂರು ಗಂಟೆ ಕಾರ್ಖಾನೆಗಳು ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ವಿದ್ಯುತ್ ಸರಬರಾಜು ಇಲ್ಲದೇ ಕಾರ್ಖಾನೆಗಳನ್ನು ಮುಚ್ಚುವ ಸ್ಥಿತಿ ಬಂದಿದೆ. ಐ.ಪಿ. ಸೆಟ್ಟುಗಳು ಸ್ಟಾರ್ಟ್ ಆಗುತ್ತಿಲ್ಲ. ಮನೆಗಳಲ್ಲಿ ಟ್ಯೂಬ್‌ಲೈಟುಗಳು ಹತ್ತುವುದಿಲ್ಲ. ಕಳೆದ 5 ವರ್ಷಗಳಿಂದ ಜನ ಬೇಸತ್ತು ಅವರನ್ನು ಈ ಕಡೆಗೆ ಕಳುಹಿಸಿದ್ದಾರೆ. ನೀವು ಇದರ ಬಗ್ಗೆ ಹೆಚ್ಚು ಗಮನ ಕೊಡಬೇಕು. ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಶ್ವೇತಪತ್ರವನ್ನು ಹೊರಡಿಸುತ್ತೇವೆ ಎಂದು ಹೇಳಿದ್ದೀರಿ.

ಛೇರ್ಮನ್:– ಮಾನ್ಯ ಯಡಿಯೂರಪ್ಪನವರೇ ನಿಮಗೆ ಇನ್ನೂ ಎಷ್ಟು ಸಮಯ ಬೇಕಾಗುತ್ತದೆ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಇನ್ನು ಹತ್ತು ನಿಮಿಷಗಳಲ್ಲಿ ಮುಗಿಸುತ್ತೇನೆ.

ಛೇರ್ಮನ್:– ಬಹಳ ಜನ ಸದಸ್ಯರು ಮಾತನಾಡುವವರು ಇರುವುದರಿಂದ ಈ ಸಭೆಯು 8 ಗಂಟೆಯವರೆಗೆ ಕೂರಲಿಕ್ಕೆ ತಾವು ಒಪ್ಪುವುದಾದರೆ ಆಗಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಮಾನ್ಯ ಹಣಕಾಸು ಸಚಿವರು ಈ ಅಧಿವೇಶನ ಸೇರುವುದರೊಳಗಾಗಿ ಶ್ವೇತಪತ್ರವನ್ನು ಹೊರಡಿಸಬೇಕಾಗಿತ್ತು. ರಾಜ್ಯಪಾಲರ ಭಾಷಣದಲ್ಲಿ ತೆರಿಗೆ ಮತ್ತು ತೆರಿಗೆಯೇತರ ವೆಚ್ಚವನ್ನು ಹೆಚ್ಚಿಸುವ ಬಗ್ಗೆ ಎಲ್ಲೂ ಕಾಣುವುದಿಲ್ಲ. ಇಡೀ ದೇಶದಲ್ಲಿ ಅತ್ಯಂತ ಹೆಚ್ಚು ಮಾರಾಟ ತೆರಿಗೆಯನ್ನು ನಾವು ಹಾಕುತ್ತಿದ್ದೇವೆ. ಉದಾಹರಣೆಗೆ ಡೀಸೆಲ್ ಮತ್ತು ಪೆಟ್ರೋಲ್ ಮೇಲೆ 22 ಪರ್ಸೆಂಟ್ ನಾವು

ತೆರಿಗೆಯನ್ನು ಹಾಕುತ್ತಿದ್ದೇವೆ. ಬೇರೆ ರಾಜ್ಯಗಳಲ್ಲಿ 4 ರಿಂದ 14 ಪರ್ಸೆಂಟ್ ಮಾತ್ರ ಇದೆ. ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ 6 ಪರ್ಸೆಂಟ್ ಇದೆ. ಔಷಧಿಗಳ ಮೇಲೆ 8 ರಿಂದ 10 ಪರ್ಸೆಂಟ್ ತೆರಿಗೆಯನ್ನು ನಾವು ವಿಧಿಸಿದ್ದೇವೆ. ರಾಜ್ಯದ ಸಂಪನ್ಮೂಲಗಳ ಸ್ಥಿತಿ ಸುಧಾರಣೆಯಾಗಬೇಕಾದರೆ ಈ ತೆರಿಗೆ ವ್ಯವಸ್ಥೆಯನ್ನು ದಯಮಾಡಿ ಸರಳೀಕರಣಗೊಳಿಸಿ; ಸೋರಿಕೆಯನ್ನು ತಡೆಯುವ ಕಾರ್ಯಕ್ರಮವನ್ನೂ ರೂಪಿಸಿ. ಬಾಕಿ ಇರುವಂಥ ಹಣ ವಸೂಲಿ ಕಾರ್ಯಕ್ರಮವನ್ನು ಹಾಕಿಕೊಳ್ಳಿ. ಈ ಒಂದು ನೈಸರ್ಗಿಕ ಸಂಪತ್ತು ಲೂಟಿಯಾಗದಂತೆ ಕ್ರಮ ತೆಗೆದುಕೊಳ್ಳಿ. ತೆರಿಗೆಯೇತರ ಈ ಸಂಪನ್ಮೂಲಗಳ ಹೆಚ್ಚಳಕ್ಕೆ ಕಾರ್ಯಕ್ರಮಗಳನ್ನು ರೂಪಿಸಿ. ಈ ಬಗ್ಗೆ ಸ್ಪಷ್ಟವಾಗಿ ತಮ್ಮ ಮನಸ್ಸಿನಲ್ಲಿ ಏನಿದೆ, ಆ ಒಂದು ಖಚಿತ ನಿರ್ಧಾರ ತಿಳಿಸಬೇಕೆಂಬ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ.

ಕೊನೆಯದಾಗಿ ಭದ್ರಾ ಬಲದಂಡ ನಾಲೆ ಅದು ಕುಸಿದುಹೋಗಿ ಮೂರು ವರ್ಷವಾಯಿತು. ವೀರಾವೇಶದ ಮಾತುಗಳನ್ನು ಆಡಿದರು, ಆರು ತಿಂಗಳು, ಒಂದು ವರ್ಷದಲ್ಲಿ ಅದನ್ನು ನಾವು ಮಾಡಿಮುಗಿಸುತ್ತೇವೆ ಎಂದು. ಇವತ್ತು ಲಕ್ಷಾಂತರ ಜನರು ಬೀದಿಪಾಲಾಗುತ್ತಿದ್ದಾರೆ. ಮೂರು ವರ್ಷಗಳಾದರೂ ತಜ್ಞರ ಸಲಹೆ ತೆಗೆದುಕೊಂಡು ಇವತ್ತಿನವರೆಗೂ ಕೆಲಸ ಆಗಿಲ್ಲ; ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನ ಮೇಲೆ ಸಿಟ್ಟು ಇದ್ದರೂ ಕೂಡ ಇದರ ಮೇಲೆ ಸಿಟ್ಟ ಮಾಡಿಕೊಳ್ಳದೆ ತಕ್ಷಣ ರಿಪೇರಿ ಕೆಲಸಕ್ಕೆ ಆದ್ಯತೆ ಮೇರೆಗೆ, ಈ ಕೆಲಸವನ್ನು ಪ್ರಾರಂಭ ಮಾಡುವ ಬಗ್ಗೆ ವಿಶೇಷ ಗಮನ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಒಂದುಸಾರಿ ಶಿವಮೊಗ್ಗ ಜಿಲ್ಲೆಗೆ ಬಂದಾಗ ನೋಡಿದ್ದಾರೆ. ನೆರೆಹಾವಳಿ, ಭೂಕಂಪ, ಅತಿವೃಷ್ಟಿಯಿಂದ ಲಕ್ಷಾಂತರ ಜನ ಊಟ ಮಾಡತಕ್ಕಂಥ ಅಂಜನಾಪುರ ಜಲಾಶಯ, ಶಿಕಾರಿಪುರ ತಾಲ್ಲೂಕಿನ ಜಲಾಶಯ ಭೀಕರ ನೆರೆಹಾವಳಿಗೆ ಸಿಕ್ಕಿ ಕೋಡಿ ಕೊಚ್ಚಿಕೊಂಡು ಹೋಯಿತು. ನಾನು ಹಿಂದಿನ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಶ್ರೀಮಾನ್ ವೀರಪ್ಪ ಮೊಯಿಲಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಎರಡು–ಮೂರು ಸಾರಿ ಬಂದರು; ಏಳೆಂಟು ಲಕ್ಷ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಿ ಲುಕ್ಸಾನು ಆದರೂ ಪರವಾಗಿಲ್ಲ ಎಂದು ಹೇಳಿ. ಅಡ್ಡಗೋಡೆಯನ್ನು ಕಟ್ಟಿದ್ದರಿಂದ ಇವತ್ತು ಒಂದು ಸಾರಿ ನೀರು ಕೊಟ್ಟಿದ್ದರಿಂದ ಕೋಟ್ಯಾಂತರ ರೂಪಾಯಿ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಯಿತು. ಅರವತ್ತು–ಎಪ್ಪತ್ತು ಕೋಟಿ ರೂಪಾಯಿಗಳನ್ನು ಬೆಳೆ ಬೆಳೆದು 30–40 ಸಾವಿರ ಹೆಕ್ಟೇರ್ ಜಾಗ ಉಪಯೋಗಕ್ಕೆ ಬಂತು. ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಸ್ವತಃ ಫೈಲನ್ನು ತಾವು ತರಿಸಿಕೊಂಡು, ಖುದ್ದಾಗಿ ನೋಡಿ ನಾಲ್ಕೈದು ಕೋಟಿ ಬಿಡುಗಡೆ ಮಾಡಬೇಕು. ಇದರ ಬಗ್ಗೆ ಶಾಶ್ವತವಾದ ಕೋಡಿ ಕೆಲಸ ಆಗಬೇಕಾಗಿದೆ. ಈ ಕಡೆಗೆ ಅವರು ವಿಶೇಷ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ರಾಜ್ಯದಲ್ಲಿ ಹರಿಜನರು–ಗಿರಿಜನರ ಬಗ್ಗೆ ಸರ್ಕಾರ ಸಂಪೂರ್ಣ ನಿರ್ಲಕ್ಷ್ಯವನ್ನು ತೋರಿಸುತ್ತಿದೆ. ಸ್ಪೆಶಲ್ ಕಾಂಪೊನೆಂಟ್ ಸ್ಕೀಮ್‌ನಲ್ಲಿ ಕೇಂದ್ರಸರ್ಕಾರ ಬಿಡುಗಡೆ ಮಾಡಿದ ಹಣವನ್ನು ಖರ್ಚು ಮಾಡುವುದಕ್ಕೆ ಮನಸ್ಸು ಇಲ್ಲದೆ, ಅದು ಯಾವ್ಯಾವ ಬಾಬುಗಳಿಗೆ ಖರ್ಚಾಯಿತೋ ಗೊತ್ತಿಲ್ಲ. ದಯಮಾಡಿ ಮಾನ್ಯ ಸಮಾಜಕಲ್ಯಾಣ ಮಂತ್ರಿಗಳು ಇದರ ಬಗ್ಗೆ ಗಮನಕೊಟ್ಟು ಅಂಕಿಅಂಶಗಳನ್ನು ಕೊಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಸರ್ಕಾರ ಹರಿಜನರು, ಪರಿಶಿಷ್ಟಜಾತಿ ಮತ್ತು ವರ್ಗದ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ಮಾಡಿದೆ. ಅವರು ಸಿಗಬೇಕಾದಂಥ ಸವಲತ್ತುಗಳು ಸಿಗದೆ ಒಂದು ರೀತಿಯ ಗೊಂದಲ ವಾತಾವರಣ, ಉಸಿರು ಕಟ್ಟುವಂಥ ವಾತಾವರಣದಲ್ಲಿ ಅವರು ಇಂದು ಬದುಕುತ್ತಿದ್ದಾರೆ. ಇದಕ್ಕಾಗಿ ಮೀಸಲಿಟ್ಟ 18 ಪರ್ಸೆಂಟ್ ಹಣ ಆ ಬಾಬಿಗೆ ಖರ್ಚಾಗುತ್ತಿಲ್ಲ. ಆದಕ್ಕಾಗಿ ವಿಶೇಷವಾಗಿ ಸ್ಪೆಶಲ್ ಕಾಂಪೊನೆಂಟ್ ಸ್ಕೀಮ್‌ನಲ್ಲಿ ಕೇಂದ್ರಸರ್ಕಾರದಿಂದ ಎಷ್ಟು ಹಣ ಬಂದಿಗೆ, ತಾವು ಎಷ್ಟು ಮ್ಯಾಚಿಂಗ್ ಗ್ರಾಂಟ್ ಕೊಟ್ಟಿದ್ದೀರಿ ಎಂದು ತಿಳಿಸಬೇಕು. ಈ ಮಾರ್ಚ್ ಒಳಗೆ ಒಂದು ಪೈಸೆ ಕೂಡ ಉಳಿಯದೆ

ಈ ಹಣ ಆ ಬಾಬಿಗೇ ಖರ್ಚಾಗುವಂತೆ ದಿಟ್ಟ ಹೆಜ್ಜೆಯನ್ನು ತೆಗದೆಕೊಳ್ಳಬೇಕು ಮತ್ತು ಈ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಕೊನೆಯಪಕ್ಷ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಭರವಸೆಗಳನ್ನು ಕೊಟ್ಟಿದ್ದೀರಿ, ಅದು 3 ರೂಪಾಯಿ 20 ಪೈಸೆಗೆ ಒಂದು ಕಿಲೊ ಅಕ್ಕಿ ಕೊಡುವಂಥಾದ್ದು ಆಗಿರಬಹುದು, ಉಚಿತವಾಗಿ ರೈತರಿಗೆ ವಿದ್ಯುತ್ ಒದಗಿಸುವುದು ಆಗಿರಬಹುದು, ಒಂದು ಲಕ್ಷ ಯುವಕರಿಗೆ ಸರ್ಕಾರಿ ಉದ್ಯೋಗ ಕೊಡಲು ಖಾಲಿ ಇರುವ ಅಷ್ಟು ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಹೇಳಿದ್ದ ಮಾತಿರಬಹುದು. ಈ ಎಲ್ಲ ಪ್ರಮುಖ ವಿಷಯಗಳ ಬಗ್ಗೆ ಸ್ಪಷ್ಟವಾದ ಉತ್ತರವನ್ನು ನಾವು ನಿರೀಕ್ಷೆ ಮಾಡುತ್ತಿದ್ದೇವೆ. ಸರಿಯಾದ ಉತ್ತರವನ್ನು ಕೊಟ್ಟು ಈ ರಾಜ್ಯದ ಜನ ತಮಗೆ ಏನು ಆಶೀರ್ವಾದ ಮಾಡಿ ಅಧಿಕಾರಿಯನ್ನು ಕೊಟ್ಟಿದ್ದಾರೆ, ಅದನ್ನು ನೀವು ಉಪಯೋಗ ಮಾಡಿಕೊಳ್ಳಿ. ಐದು ವರ್ಷ ಪೂರ್ಣಕಾಲ ಅಧಿಕಾರದಲ್ಲಿ ಉಳಿಯಿರಿ. ಪರಸ್ಪರ ಕಚ್ಚಾಟಕ್ಕೆ ಅವಕಾಶ ಮಾಡಿಕೊಡಬೇಡಿ. ಹಿಂದೆ ಇದೇರೀತಿ ಕಚ್ಚಾಟದಿಂದಾಗಿ ಜನ ನಿಮ್ಮನ್ನು ನಿರಾಕರಿಸಿದರು. 'ಯಡಿಯೂರಪ್ಪನವರೇ, ನಿಮಗೆ ಏಕೆ ದುಃಖ' ಎಂದು ನೀವು ಕೇಳಬಹುದು. ದುಃಖ ಏಕೆ ಎಂದರೆ, ಅವತ್ತು ನೀವು ಹೀಗೆ ಮಾಡಿದ್ದರ ಪರಿಣಾಮವಾಗಿ ಜನರಿಗೆ ವಿರೋಧಪಕ್ಷದ ಮೇಲಿದ್ದ ನಂಬಿಕೆ ಹಾಳಾಗಿಹೋಯಿತು. ಜನಕ್ಕೆ ಈ ಸಂಶಯ ಬಂದು ಅನಿವಾರ್ಯವಾಗಿ ಬಿ.ಜೆ.ಪಿ. ಅಧಿಕಾರಕ್ಕೆ ಬರಬಹುದು ಎಂದರೂ ಅವಕಾಶ ಸಿಗಲಿಲ್ಲ. ಜನರು ದೇವೇಗೌಡರನ್ನು ನೋಡಿದರು, ರಾಮಕೃಷ್ಣ ಹೆಗಡೆ, ಬೊಮ್ಮಾಯಿಯವರನ್ನು ನೋಡಿದರು. ಇವರು ಮಂತ್ರಿಗಳು, ಮುಖ್ಯಮಂತ್ರಿಗಳು ಏನೋ ಆಗಬಹುದು. ಇವರು ಏನು ರೈತರು, ಕೃಷಿಕಾರ್ಮಿಕರು ಅಂತ ಕಟ್ಟಿಕೊಂಡು ಹಳ್ಳಿಪಳ್ಳಿಯಲ್ಲಿ ತಿರುಗುವ ಜನ. ಅನುಭವ ಇಲ್ಲದವರು, ಅನುಭವ ಬಂದಮೇಲೆ ಅಧಿಕಾರವನ್ನು ಕೊಡೋಣ ಎಂದು ಹೇಳಿದರು. ಹೀಗಾಗಿ ಇದೊಂದು ಸಲ ಅಧಿಕಾರದಲ್ಲಿ ಕೂಡಿಸುವುದಕ್ಕೆ ಜನ ನಿಮಗೆ ಆಶೀರ್ವಾದ ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಐದು ವರ್ಷಗಳ ಕಾಲ ಪೂರ್ಣಾವಧಿಯಲ್ಲಿ ಕಚ್ಚಾಟಕ್ಕೆ ಅವಕಾಶ ಕೊಡದೆ ಅಧಿಕಾರದಲ್ಲಿ ಇದೆಯೆಂದು ವಿನಂತಿ ಮಾಡಿಕೊಳ್ಳುತ್ತಾ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿ ನೀವು ಹೇಳಿದಂಥ ನಿರ್ದಿಷ್ಟವಾದ ಯಾವುದೇ ಕಾರ್ಯಕ್ರಮಗಳು ಇಲ್ಲದೇ ಇರುವುದರಿಂದ ಇದನ್ನು ನಾನು ವಿರೋಧಮಾಡಿ, ಸನ್ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ):– ಸನ್ಮಾನ್ಯ ಸಭಾಧ್ಯಕ್ಷರೇ, ಹಾಗೂ ಸಭಾನಾಯಕರೇ, ವಿರೋಧ ಪಕ್ಷನಾಯಕರೇ, ಬಹಳ ಮುಖ್ಯವಾಗಿ ಹಣಕಾನ ಮಂತ್ರಿಗಳು ಇಲ್ಲಿ ಇರಬೇಕಾಗಿತ್ತು.

ಒಬ್ಬ ಮಾನ್ಯ ಸದಸ್ಯರು:– ಬಂದಿದ್ದಾರಲ್ಲ ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಅವರು ಬರಲಿ ಎಂದು ನಾನು ಕಾಯುತ್ತಿದ್ದೆ. ಈಗ ಬಂದಿದ್ದಾರೆ. ಅದಕ್ಕೋಸ್ಕರ ನಾನು ಮಾತನಾಡುವುದಕ್ಕೆ ನಿಂತಿದ್ದೇನೆ. ಇವತ್ತು ಜನರು ಅವರನ್ನು ವಿರೋಧಪಕ್ಷವಾಗಿ ಕೂಡಿಸಿದರು, ಇವರನ್ನು ಆಡಳಿತಪಕ್ಷವಾಗಿ ಕೂಡಿಸಿದ್ದಾರೆ. ನಾವು 116 ಜನ ನಿಂತಿದ್ದೆವು, ನನ್ನೊಬ್ಬನನ್ನು ಗೆಲ್ಲಿಸಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಬಹಳ ಮುಖ್ಯವಾದದ್ದು ಕೃಷಿ ಬಗ್ಗೆ. ಎಲ್ಲರೂ ಬಡ್ಡಿಮನ್ನಾಮಾಡಿ, ಮಾಡುತ್ತೇವೆ ಎಂದು ಹೇಳಿದರು. ಏಕೆ ಬಡ್ಡಿ ಮನ್ನಾ ಮಾಡುತ್ತೇವೆ ಎಂದು ಹೇಳುತ್ತೀರಿ ? ಹಣಕಾಸಿನಗೆ ಒಂದು ಶಿಸ್ತು ಇರಬೇಕು, ರಾಜ್ಯದ ಆರ್ಥಿಕ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ತಮಗೆ ಒಂದು ಶಿಸ್ತು ಇರಬ್ಕು. ಏಕೆ ಮನ್ನಾ ಮಾಡುತ್ತೀರಿ ? ಇದಕ್ಕೆ ಕಾರಣವನ್ನು ಕೊಡಬೇಕು. ತಾವು ಏಕೆ ಮಾಡುತ್ತೀರಿ ಎಂದು ಕಾರಣ ಕೊಟ್ಟರೆ ನಾನು ಮಾತನಾಡುತ್ತೇನೆ. ಏಕೆಂದರೆ

ನೀವು ಕೃಷಿಗೆ ಯಾವ್ಯಾವ ಸಾಲಗಳನ್ನು ಕೊಟ್ಟಿದ್ದೀರಿ ? ಏನೇನು ಕಾರಣಕ್ಕೆ ಸಾಲ ಕೊಟ್ಟಿದ್ದೀರಿ ? ಯಾವುದೇ ರೈತನಿಗೆ ಅದು ಕೇಂದ್ರಸರ್ಕಾರ ಆಗಬಹುದು, ಇಲ್ಲ ರಾಜ್ಯಸರ್ಕಾರ ಆಗಬಹುದು, ಇಲ್ಲ ಸಹಕಾರಿ ಬ್ಯಾಂಕುಗಳು ಆಗಬಹುದು ಅಥವಾ ಕಮರ್ಶಿಯಲ್ ಬ್ಯಾಂಕ್ ಆಗಬಹುದು ಅಥವಾ ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳು ಆಗಬಹುದು; ಯಾರಿಗೂ ಉತ್ಪಾದನಾ ಸಾಲವನ್ನು ಕೊಟ್ಟಿಲ್ಲ. ಗುಲಾಮಗಿರಿ ಮಾರ್ಕೆಟ್ ಪದ್ಧತಿಯಲ್ಲಿ ಯಾವುದೇ ಬೆಳೆಗೆ ಒಂದು ನಿಗದಿತವಾದ ಬೆಲೆಯನ್ನು ನಿಗದೆ ಮಾಡದೆ ರೈತರ ಸಂಪತ್ತನ್ನು ಲೂಟಿ ಮಾಡತಕ್ಕಂಥ ಒಂದು ಕೈಗಾರಿಕಾ ನೀತಿ, ರೈತರನ್ನು ಲೂಟಿ ಮಾಡತಕ್ಕಂಥ ಒಂದು ಮಾರುಕಟ್ಟೆ ನೀತಿಯ ಮೇಲೆ ಇವತ್ತು ರೈತ ಸಾಲಗಾರನಾಗಿದ್ದಾನೆ. ಅದಕ್ಕೇ ಸರ್ಕಾರ ವೈಜ್ಞಾನಿಕವಾಗಿ ಆಲೋಚನೆ ಮಾಡಬೇಕು. ಇದು ಒಂಭತ್ತನೇ ವಿಧಾನಸಭೆ ಮುಗಿದು ಹತ್ತನೇ ವಿಧಾನಸಭೆ. ಯಾವ್ಯಾವ ಸಾಲವೆಂದು, ಈಗ ಉದಾಹರಣೆಗೆ ನೋಡೋಣ. ಇವತ್ತು ಮೈಸೂರಿನಲ್ಲಿ ಒಂದು ಕುಕ್ಕೆ ಟೊಮೆಟೊ ಹಣ್ಣಿಗೆ ಎರಡು ರಿಂದ ಮೂರು ರೂಪಾಯಿಗೆ ಹರಾಜು ಹಾಕುತ್ತಾರೆ. ಇಡೀ ಪ್ರಪಂಚದಲ್ಲೇ ಇಂತಹ ಮಾರುಕಟ್ಟೆ ವ್ಯವಸ್ಥೆ ಇದೆ. ಎರಡು ರೂಪಾಯಿಗೆ ಒಂದು ಸಾರಿ, ಎರಡು ರೂಪಾಯಿಗೆ ಎರಡು ಸಾರಿ, ಎರಡು ರೂಪಾಯಿಗೆ ಮೂರು ಸಾರಿ ಎಂದು ಕೂಗುತ್ತಾರೆ. ಇದೇ ಟೊಮೆಟೋ ಹಣ್ಣಿನಿಂದ ಬದುಕತಕ್ಕಂಥ ಬೇರೆ ಒಂದು ಸಮಾಜವನ್ನು ನೋಡೋಣ. ಒಂದು ಕುಕ್ಕೆ ಟೊಮೆಟೋ ಹಣ್ಣು ತೆಗೆದುಕೊಂಡರೆ ಬೆಂಗಳೂರಿನಲ್ಲಿ ಸಾಂಬಾರ್ ಮಾಡುವವನು 60 ರೂಪಾಯಿ ಸಂಪಾದನೆ ಮಾಡುತ್ತಾನೆ. ಅದೇ ಒಂದು ಕುಕ್ಕೆ ಟೊಮೆಟೋ ಹಣ್ಣಿನಿಂದ ಜ್ಯೂಸ್ ತಯಾರು ಮಾಡುವವನು ನೂರು ರೂಪಾಯಿ ಸಂಪಾದನೆ ಮಾಡುತ್ತಾನೆ. ಇದೇ ಟೊಮೆಟೋ ಹಣ್ಣಿನಿಂದ ಸಾಸ್ ಮಾಡುವವನು 140 ರೂಪಾಯಿ ಸಂಪಾದನೆ ಮಾಡುತ್ತಾನೆ. ಇದೇ ಟೊಮೆಟೋ ಹಣ್ಣಿನಿಂದ ದೊಡ್ಡದೊಡ್ಡ ಹೋಟೆಲುಗಳಲ್ಲಿ ಸಾಲಾಡ್ ಅಂತ ಕೊಟ್ಟು 300 ರೂಪಾಯಿ ಸಂಪಾದನೆ ಮಾಡುತ್ತಾರೆ. ಇವನು ಒಂದು ಕುಕ್ಕೆ ಟೊಮೆಟೋ ಹಣ್ಣನ್ನು ಎರಡು ರೂಪಾಯಿಗೆ ಮಾರಿದರೆ ಯಾವ ರೀತಿಯಿಂದ ಸಾಲ ಕೊಡಬೇಕಾಗುತ್ತದೆ ಎಂದು ಯೋಚನೆ ಮಾಡಿ. ಉದಾಹರಣೆಗೆ ರೇಷ್ಮೆ ಕೃಷಿಕ್ಷೇತ್ರದಲ್ಲಿ ಅತ್ಯಂತ ಕ್ಲಿಷ್ಟಕರವಾದ ಬೆಳೆ. ಈ ರೇಷ್ಮೆ ಮೇಲೆ ಏನೇನು ನಿಂತಿದೆ ? ರೇಷ್ಮೆಗಾರ ಇಲ್ಲದಿದ್ದರೆ ಕೈಗಾರಿಕೆಯನ್ನು ಮಾಡುವುದಕ್ಕೆ ಆಗುವುದಿಲ್ಲ. ಇಡೀ ಸಾರಿಗೆ ಕ್ಷೇತ್ರ, ರೇಷ್ಮೆ ಬೆಳೆಮೇಲೆ ನಿಂತಿರುವುದು. ಸಾರಿಗೆ ಕ್ಷೇತ್ರ ಇಲ್ಲದಿದ್ದರೆ ವ್ಯಾಪಾರ ಕ್ಷೇತ್ರ ಇಲ್ಲ. ಆ ವ್ಯಾಪಾರ ಕ್ಷೇತ್ರ ಇಲ್ಲದಿದ್ದರೆ ಕೈಗಾರಿಕಾ ಕ್ಷೇತ್ರ ಇಲ್ಲ. ಕೈಗಾರಿಕಾ ಕ್ಷೇತ್ರ ಇಲ್ಲದಿದ್ದರೆ ಉದ್ಯೋಗ ಕ್ಷೇತ್ರ ಇಲ್ಲ. ಇಡೀ ನಾಲ್ಕು ಕ್ಷೇತ್ರಗಳಿಗೆ ಕಚ್ಚಾವಸ್ತುಗಳನ್ನು ಒದಗಿಸಿಕೊಂಡುವಂಥ ಒಬ್ಬ ರೇಷ್ಮೆ ಬೆಳೆಗಾರನ ಪರಿಸ್ಥಿತಿ ಬಗ್ಗೆ ನಿಮ್ಮ ರೇಷ್ಮೆ ಇಲಾಖೆಯ ಅಧಿಕಾರಿಗಳನ್ನು ಕರೆಸಿ ಕೇಳಿ. ಅವನು ಭಯಂಕರವಾದ ಪೆಟ್ಟು ತಿಂದಿದ್ದಾನೆ.

• ರೇಷ್ಮೆ ಬೆಳೆಯುವಂಥ ಯಾವುದೇ ಊರಿಗೆ ಹೋದರೂ ಆ ಊರು ವಾಸನೆ ಹೊಡೆಯುತ್ತದೆ. ರೇಷ್ಮೆ ಹುಳುಗಳು ಎರಡನೇ ಜ್ವರದಿಂದ ಮೂರನೇ ಜ್ವರಕ್ಕೆ ಎದ್ದಾಗ ರೇಷ್ಮೆ ಬೆಳೆಯುವ ಕೃಷಿಕ, ಅವನ ಹೆಂಡತಿ ಮತ್ತು ಮಕ್ಕಳ ಕಣ್ಣಲ್ಲಿ ರಕ್ತ ಇರುವುದಿಲ್ಲ. ಅಂಥ ರೇಷ್ಮೆ ಬೆಳೆಗೆ ಕನಿಷ್ಟ ಬೆಲೆ ನಿಗದಿ ಮಾಡುವುದಕ್ಕೆ ಸಾಮರ್ಥ್ಯ ಇಲ್ಲದೆ 9ನೇ ವಿಧಾನ ಸಭೆ ಮುಗಿದು 10ನೇ ವಿಧಾನ ಸಭೆಯಲ್ಲಿ ನಾವು ಬಡ್ಡಿ ಬಗ್ಗೆ ಮಾತನಾಡುತ್ತಿದ್ದೇವೆ. 150 ರೂಪಾಯಿಗಿಂಥಾ ಕಮ್ಮಿ ಹರಾಜಿನಲ್ಲಿ ಕೂಗಬಾರದು ಎನ್ನತಕ್ಕಂಥ ಕಾನೂನು ಮಾಡದೇ ಇರತಕ್ಕಂಥ ನಾವು ಈ ರಾಜ್ಯದ ರೈತರ ಭವಿಷ್ಯದ ಬಗ್ಗೆ ಮಾತನಾಡುತ್ತೇವೆ. ರೈತರನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತಿರುವುದು ಸುಳ್ಳು. ಎಲ್ಲಿವರೆಗೆ ಕನಿಷ್ಠ ಬೆಲೆ ನಿಗದಿ ಮಾಡತಕ್ಕಂಥ ಒಂದು ಮಾರ್ಕೆಟ್‌ನ್ನು ಅವನಿಗೆ ಸೃಷ್ಟಿ ಮಾಡುವುದಿಲ್ಲವೋ ಅಲ್ಲಿಯವರೆಗೆ ಅವನು ಸಾಲದಿಂದಾಗಲೀ ಅಥವಾ ನೆಮ್ಮದಿಯಿಂದಾಗಲೀ ಬದುಕುವುದಕ್ಕೆ ಸಾಧ್ಯವೇ ಇಲ್ಲ. ಇನ್ನು ಕೃಷಿ ಕಾರ್ಮಿಕರ ಸಾಲ: ಐ.ಆರ್.ಡಿ.ಪಿ. ಲೋನ್, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಸಾಲ, ಬಡತನ ರೇಖೆಗಿಂಥ ಕೆಳಗಿರುವವರನ್ನು ಮತ್ತು ಹರಿಜನರ-ಗಿರಿಜನ ಹಾಗೂ

ಕೂಲಿ ಮಾಡತಕ್ಕಂಥವರನ್ನು ಮೇಲಕ್ಕೆ ಎತ್ತುವುದಕ್ಕೋಸ್ಕರ, ಅವನ ಬದುಕಿಗೆ ಉತ್ತಮವಾದ ಭವಿಷ್ಯವನ್ನು ಸೃಷ್ಟಿ ಮಾಡುವುದಕ್ಕೋಸ್ಕರ ಎಮ್ಮೆ ಸಾಲ , ಕುರಿ ಸಾಲ, ಕೋಳಿ ಸಾಲ. ಈ ಸಾಲವನ್ನು ಸೃಷ್ಟಿ ಮಾಡಿದವರಿಗೆ ಎಮ್ಮೆ ವಿಷಯವೇ ಗೊತ್ತಿಲ್ಲ. 2 ಕಂತೆ ಹುಲ್ಲಿಗೆ 10 ರೂಪಾಯಿ, ಮೇಯಿಸುವವನಿಗೆ ದಿನಕ್ಕೆ 5 ರೂಪಾಯಿ ಕೂಲಿ, ಅವನಿಗೆ ಕೊಟ್ಟಿರುವ ದುಡ್ಡಿಗೆ 2 ರೂಪಾಯಿ ಬಡ್ಡಿ ಒಟ್ಟು 17 ರೂಪಾಯಿ ಜೊತೆಗೆ 2 ರೂಪಾಯಿ ತಿಂಡಿ ಸೇರಿದರೆ 19 ರೂಪಾಯಿ. ಶುರುವಿನಲ್ಲಿ ಎಮ್ಮೆ 3 ಲೀಟರ್ ಕರೆಯಿತು ಕೊನೆಗೆ ಬಂತು ಅರ್ಧ ಲೀಟರ್. ಸರಾಸರಿ ಎರಡು ಲೀಟರ್ ಆಯಿತು. ಅವನಿಗೆ-ಒಂದು ದಿವಸಕ್ಕೆ 12 ರೂಪಾಯಿ ಬಂತು, ಒಂದು ದಿವಸಕ್ಕೆ 7 ರೂಪಾಯಿ ಹೋಯಿತು, ಇದರಿಂದ ಒಂದು ತಿಂಗಳಿಗೆ 210 ರೂಪಾಯಿ ನಷ್ಟವಾಯಿತು. ಒಂದು ವರ್ಷಕ್ಕೆ 2400 ರೂಪಾಯಿ ಹೋಯಿತು. ಇನ್ನೊಂದು ವರ್ಷ ಹಾಲು ಕರೆಯದ ಎಮ್ಮೆಯನ್ನು ಪುಕ್ಸಟ್ಟೆ ಸಾಕಬೇಕಲ್ಲಾ? ಇದು 4 ಸಾವಿರ ಸಾಲ, ಅದು 6 ಸಾವಿರ ಕೊನೆಗೆ ಎಂಟೂವರೆ ಸಾವಿರ ಸಾಲ ಆಯಿತು. ಹೋಗಲಿ ಅವನು ಹಾಲು ಕುಡಿದ್ನಾ? ಅದೂ ಇಲ್ಲ. ಫಲಾನುಭವಿ ಎಂದರೆ, ತಾನೂ ಹಾಲವನ್ನು ಕುಡಿದು ಉಳಿಕೆ ಹಾಲನ್ನು ಮಾಡಿ ಅದನ್ನು ಕಟ್ಟುವುದೇ ಫಲಾನುಭವಿ ಅಂಥ ಅರ್ಥ. ಹಳ್ಳಿಯಲ್ಲಿ ಹಾಲಿನ ಡೈರಿ ಅಂಥ ಮಾಡಿದರು. ಅವನು ಎಲ್ಲಾ ಹಾಲನ್ನು ಅಲ್ಲಿಗೆ ಬಿಟ್ಟು ಅದಕ್ಕೆ 12 ರೂಪಾಯಿ ಸಿಕ್ತು. ಅವನ ಹೆಂಡತಿಗೆ ಹಾಲು ಇಲ್ಲ; ಅವನ ಮಕ್ಕಳಿಗೆ ಹಾಲು ಇಲ್ಲ; ಇವನಿಗೆ ಸಾಲ. ಈ ಸಾಲ ಕಟ್ಟಬೇಕು. ಇದಕ್ಕೆ ಬಡ್ಡಿ ಮನ್ನಾ ಮಾಡುತ್ತೀರ. ಅದಕ್ಕೆ ನಾನು ಹೇಳುತ್ತೇನೆ, ಎಲ್ಲಾ ಶಾಸಕರು ಎರಡೆರಡು ಎಮ್ಮೆ ಸಾಲ ತೆಗೆದುಕೊಂಡು ಬಿಡೋಣ. ಒಳ್ಳೆ ಲಾಭ ಬಂದರೆ ನಾವು ಕಟ್ಟೋಣ ಇಲ್ಲದೇ ಹೋದರೆ ನಮಗೂ ಮನ್ನಾ ಮಾಡಬಹುದು. ಆಗ ಕರೆಕ್ಟ್ ಆಗಿ ಅನುಭವ ಆಗುತ್ತದೆ. ಸಭಾಧ್ಯಕ್ಷರನ್ನು ಮೊದಲುಗೊಂಡು ಈ ಕೆಲಸ ಶುರು ಮಾಡಿದರೆ ಸಮಾಜದಲ್ಲಿ ಬಾರಿ ಬದಲಾವಣೆಯಾಗುತ್ತದೆ.

ಛೇರ್ಮನ್:- ನಾನು ಎಮ್ಮೆ ಸಾಕುವ ಮಂತ್ರಿಯೇ ಆಗಿದ್ದುದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ತಮಗೆ ಅನುಭವ ಇಲ್ಲವೆಂದು ನಾನು ಹೇಳುತ್ತಿಲ್ಲ. ಎಲ್ಲಾ ಶಾಸಕರಿಗೂ ಎಮ್ಮೆ ಸಾಲ ಕೊಡಿ. ಎಲ್ಲರೂ ಅವುಗಳನ್ನು ಸಾಕೋಣ, ಒಳ್ಳೆ ಲಾಭ ಬಂದರೆ ವಾಪಸ್ ಕಟ್ಟೋಣ, ಇಲ್ಲವೆಂದರೆ ಮನ್ನಾಮಾಡಲಿ. ಆದ್ದರಿಂದ, ಮೊದಲನೇ ವಿಷಯವನ್ನು ಬಹಳ ಗಂಭೀರವಾಗಿ ಯೋಚನೆ ಮಾಡಬೇಕು. ಅದು ವಿರೋಧ ಪಕ್ಷ ಆಗಬಹುದು, ಆಡಳಿತ ಪಕ್ಷ ಆಗಬಹುದು, ಕೃಷಿ ಬಗ್ಗೆ ಒಂದು ವೈಜ್ಞಾನಿಕವಾದ ಆಲೋಚನೆ ಮಾಡದೇ ಇದ್ದರೆ ಬಹಳ ತೊಂದರೆಯಾಗುತ್ತದೆ. ಹಳ್ಳಿಗಾಡಿನ ಪರಿಸ್ಥಿತಿ ಬಗ್ಗೆ ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಹಳ್ಳಿಗಾಡಿನ ಜನರುಗಳೆಲ್ಲಾ ವಲಸೆ ಹೋಗುತ್ತಿದ್ದಾರೆನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ನಾವು ಇಲ್ಲಿ ಕುಳಿತುಕೊಂಡು ಬಡ್ಡಿ ಮನ್ನಾ ಮಾಡಬಹುದು. ಅದು ಏನು ಮನ್ನಾ ಮಾಡುತ್ತೀರೋ ಅದು ನಮಗೆ ಬೇಡ. ವೈಜ್ಞಾನಿಕ ಬೆಲೆ ನಿಗದಿ ಮಾಡತಕ್ಕಂಥ ಒಂದು ಸಾಮರ್ಥ್ಯ ಇರಬೇಕು. ಭೂಮಿ ಉತ್ಪಾದನಾ ಸಾಧನ. ಇಡೀ ಕೈಗಾರಿಕೆ ಭೂಮಿ ಮೇಲೆ ನಿಂತಿದೆ, ಒಂದು ಎಕರೆ ಕಬ್ಬನ್ನು ರೈತ ಸರಬರಾಜು ಮಾಡಿದರೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ 6 ಸಾವಿರ ರೂಪಾಯಿ ಟ್ಯಾಕ್ಸ್ ಕೊಡುತ್ತದೆ. ಒಂದು ಎಕರೆ ಕಬ್ಬನ್ನು ಸರಬರಾಜು ಮಾಡಿದರೆ ಎಲ್ಲರೂ ಚೆನ್ನಾಗಿ ಊಟ ಮಾಡಿ ಎಂದು 8200 ರೂಪಾಯಿ ಸಬ್ಸಿಡಿ ಕೊಡುತ್ತಾರೆ. ಒಂದು ಎಕರೆ ಕಬ್ಬಿನಲ್ಲಿ ರೆಕ್ಟಿಫೈಡ್ ಸ್ಪಿರಿಟ್ ತಯಾರು ಮಾಡಿದರೆ 96 ಸಾವಿರ ರೂಪಾಯಿ ಶರಾಪ್ ಆಗುತ್ತದೆ. ಇಷ್ಟೊಂದು ಲಿಕ್ಕರ್ ಲಾಬಿ ನಡೆಯುವುದಕ್ಕೆ ಕಬ್ಬು, ಇಜೀ ಔಷಧಿ ಕಾರ್ಖಾನೆಗೆ ಕಬ್ಬು, ಇಷ್ಟೊಂದು ಕೈಗಾರಿಕೆಗಳ ಉತ್ಪನ್ನಕ್ಕೆ ಕಾರಣನಾಗಿರುವ ರೈತನು ಬೆಳೆಯುವ ಬೆಳೆಗೆ ಕನಿಷ್ಟ ಬೆಲೆ ನಿಗದಿ ಮಾಡತಕ್ಕಂಥ ಸಾಮರ್ಥ್ಯ ಇಲ್ಲ. ಇವತ್ತು ರಾಸಾಯನಿಕ ಗೊಬ್ಬರದ ಬೆಲೆ ಎಷ್ಟು? 1 ಸಾವಿರ ರೂಪಾಯಿಗೆ ಎರಡು ಮೂಟೆ ಡಿಎಪಿ. ಅಂದರೆ 20 ಪಟ್ಟು ಬೆಲೆ ಜಾಸ್ತಿಯಾಗಿದೆ. ಇವತ್ತು ಕಬ್ಬಿಗೆ ಹದಿನೇಳೂವರೆ ತಿಂಗಳು ಆಗಿದೆ. ಸರ್ಕಾರಕ್ಕೆ ತಿಳುವಳಿಕೆ ಇಲ್ಲದೆ

ಕಂದಾಯ ಹಾಕುತ್ತದೆ! ಹದಿನೇಳೂವರೆ ತಿಂಗಳಿಗೆ ಒಂದು ಬೆಳೆ ಕಟಾವು ಆದರೆ ಎರಡು ಬೆಳೆ ಕಟಾವಿಗೆ 34 ತಿಂಗಳಾಯಿತು. ಇವರು 12 ತಿಂಗಳಿಗೆ ಒಂದು ಸಾರಿ ಕಂದಾಯ ಹಾಕುತ್ತಾರೆ. ನಾನು ಒಂದು ಸಾರಿ ಮಾತುಕತೆಗೆ ಬಂದಿದ್ದಾಗ ಕೆಲವು ಅಧಿಕಾರಿಗಳು ಬಂದಿದ್ದರು. 16 ತಿಂಗಳಿಗೆ ಕಬ್ಬು ತೆಗೆದುಕೊಳ್ಳಿ ಎಂದು ಹೇಳಿದರೆ, ಆವಾಗ ಇದೇ ಸೋಮಶೇಖರ್‌ರವರು ಮಂತ್ರಿಯಾಗಿದ್ದರು. ಆಗ ಮಾತನಾಡುವಾಗ ಆ ಫ್ಯಾಕ್ಟರಿ ಮಾಲೀಕರು ಕಬ್ಬನ್ನು ಯಾವಾಗ ಬೇಕಾದರೂ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಅಂದರೆ, ಅವರು ಕಬ್ಬನ್ನು ಹೊಂಗೆ ಮರ ಎಂದು ತಿಳಿದುಕೊಂಡಿದ್ದರೆಂದು ಕಾಣಿಸುತ್ತದೆ. ಇದರ ಬಗ್ಗೆ ಒಂದು ಸಮಿತಿಯನ್ನು ಮಾಡಿ ವೈಜ್ಞಾನಿಕವಾಗಿ ಆಲೋಚನೆ ಮಾಡದೆ ಇದ್ದರೆ ಬಹಳ ತೊಂದರೆಯಾಗುತ್ತದೆ. ಗ್ರಾಮೀಣ ಜನ ಜೀವನದ ಬಗ್ಗೆ, ಗ್ರಾಮೀಣ ಬದುಕಿನ ಬಗ್ಗೆ ಅಧ್ಯಯನ ಮಾಡಲು ಒಂದು ಜವಾಬ್ದಾರಿ ಸಮಿತಿ ಮಾಡಿ ತೀರ್ಮಾನ ಮಾಡದೇ ಇದ್ದರೆ ಇನ್ನು 5ವರ್ಷಗಳಳೊಗೆ ನಾವು ಯಾರೂ ಬೀದಿಯಲ್ಲಿ ತಿರುಗುವುದಕ್ಕಾಗುವುದಿಲ್ಲ. ಅಂಥಾ ಪರಿಸ್ಥಿತಿ ನಿರ್ಮಾಣವಾಗುತ್ತದೆ. ದಯವಿಟ್ಟು ಎಲ್ಲರೂ ಗಂಭೀರವಾಗಿ ಇದರ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ ಸುಮ್ಮನೆ, ನಾವು ಮಾತನಾಡಿದ್ದೇವೆ – ಬಡ್ಡಿ ಮನ್ನಾ ಮಾಡಿಬಿಡೋಣ, ನಾವು ಮಾತನಾಡಿದ್ದೇವೆ – ಚಕ್ರ ಬಡ್ಡಿ ಮನ್ನಾ ಮಾಡೋಣ ಎನ್ನುವು ಸರಿಯಲ್ಲ. ವೈಜ್ಞಾನಿಕವಾಗಿ ಎಲ್ಲರೂ ಆಲೋಚನೆ ಮಾಡುವುದನ್ನು ದಯವಿಟ್ಟು ಎಲ್ಲರೂ ಕಂತುಕೊಳ್ಳಬೇಕು. ರೈತರುಗಳು ರಾತ್ರಿ 9ಗಂಟೆಗೆ ತರಕಾರಿಗಳನ್ನು ಲಾರಿಗಳಲ್ಲಿ, ಬಸ್‌ಗಳಲ್ಲಿ ಹಾಕಿಕೊಂಡು ಬೆಂಗಳೂರು, ಮೈಸೂರುಗಳಿಗೆ ಹನ್ನೆರಡೂರವರೆ ರಾತ್ರಿಗಳಲ್ಲಿ ಹೋಗಿ ಮಾರ್ಕೆಟ್‌ಗಳಲ್ಲ ಬಿದ್ದುಕೊಂಡಿರುತ್ತಾರೆ. ಆ ಮಾರ್ಕೆಟ್‌ನಲ್ಲಿ ದಲ್ಲಾಳಿಗಳು ರೈತರುಗಳು ಮಾಡತಕ್ಕಂಥ ಹಲ್ಲೆಗೆ ಪೋಲೀಸರಿಂದ ಯಾವುದೇ ಪ್ರೊಟೆಷನ್ ಇಲ್ಲ. ರೈತರುಗಳನ್ನು ಕೇವಲ ವೋಟಿಗಾಗಿ ಇಟ್ಟುಕೊಂಡಿದ್ದೀರಿ ಅಷ್ಟೆ. ಕೃಷಿ ಕಾರ್ಮಿಕನಿಗೆ ವೈಜ್ಞಾನಿಕವಾದ ಬೆಲೆ ನೀತಿ ಇದೆಯೇ ? 1972ನೇ ಇಸವಿಯಲ್ಲಿ ಒಬ್ಬ ವಿಲೇಜ್ ಅಕೌಂಟೆಂಟ್‌ಗೆ ತಿಂಗಳಿಗೆ 80 ರೂಪಾಯಿ ಸಂಬಳ ಇದ್ದದ್ದು ಈಗ 3500 ರೂಪಾಯಿ ಸಂಬಳ ಇದೆ. ಅವತ್ತು 40 ರೂಪಾಯಿ ರಾಗಿ ಇತ್ತು, 3 ರೂಪಾಯಿ ಕೂಲಿ ಇತ್ತು, ಇದು ಎಷ್ಟು ಪಟ್ಟು ಜಾಸ್ತಿ ಆಯಿತು ? ಒಂದು ಜೊತೆ ಬೂಡ್ಸು 1200 ರೂಪಾಯಿ. ಒಂದು ಜೊತೆ ಬೂಡ್ಸು ತೆಗೆದುಕೊಳ್ಳಬೇಕಾದರೆ ಒಂದು ಎಕರೆಯಲ್ಲಿ ಬೆಳೆದ ರಾಗಿಯನ್ನು ಅವನ್ನು ಮಾರಬೇಕಾಗುತ್ತದೆ. ಕೈಗಾರಿಕೆಗಳಲ್ಲಿ ಉತ್ಪಾದನೆ ಮಾಡುವಂಥ ವಸ್ತುಗಳ ಬೆಲೆ ಎಷ್ಟು ಗಗನಕ್ಕೆ ಏರಿವೆ ? ಅದೇ ಭೂಮಿಯಲ್ಲಿ ಉತ್ಪಾದನೆ ಮಾಡತಕ್ಕಂಥ ವಸ್ತುಗಳು ಎಷ್ಟರಮಟ್ಟಿಗೆ ಏರಿವೆ ಎಂಬ ಬಗ್ಗೆ ಸರ್ಕಾರವು ಗಂಭೀರವಾಗಿ ಯೋಚನೆ ಮಾಡಬೇಕು! ಹಳ್ಳಿಗಳಲ್ಲಿ ಬಡವರನ್ನು ಬಹಳ ಉದ್ಧಾರ ಮಾಡುತ್ತವೆಂದು ಹೇಳಿ ಹಸಿರು ಕಾರ್ಡ್‌ಗಳನ್ನು ಕೊಟ್ಟು ಅವರಿಗೆ 2 ಲೀಟರ್ ಸೀಮೆ ಎಣ್ಣೆ ಕೊಡುತ್ತೇವೆ. ಅದೇ ಪಟ್ಟಣದಲ್ಲಿ ಇರುವವರಿಗೆ ಗ್ಯಾಸ್ ಇಲ್ಲದೇ ಇರುವವರಿಗೆ 13 ಲೀಟರ್, ಗ್ಯಾಸ್ ಇರುವವರಿಗೆ 2 ಲೀಟರ್, ಪಟ್ಟಣದವರಿಗೆ ಕೊಡಬೇಡಿ ಎಂದು ನಾನು ಹೇಳುತ್ತಿಲ್ಲ ಪಟ್ಟಣದವರಿಗೂ ಕೊಡಲೇಬೇಕು. ಆದರೆ ಕಡು ಬಡತನದಲ್ಲಿರುವವರ ಮನೆಯಲ್ಲಿ ಲೈಟೇ ಇರುವುದಿಲ್ಲ. ಸೀಮೆ ಎಣ್ಣೆ ಬುಡ್ಡಿಯನ್ನು ಹಚ್ಚಿಕೊಂಡು ಜೀವನ ಮಾಡತಕ್ಕಂಥ ವ್ಯಕ್ತಿಗೆ ಒಂದೂವರೆ ಲೀಟರ್, 2ಲೀಟರ್ ಸೀಮೆ ಎಣ್ಣೆ. ಅದೇನು ಶಹರಿಗೆ ಒಂದು ಕಾನೂನು ? ಹಳ್ಳಿಗೆ ಒಂದು ಕಾನೂನು ? ಹಳ್ಳಿಗಳು ಎಂದರೆ ಗುಲಾಮಗಿರಿ ಸಂಕೇತವೇ ? ಕೃಷಿ ಕಾರ್ಮಿಕರು, ಬಡವರು ಎಂದು ಭಾಷಣದ ಮೂಲಕ ಕಾಳಜಿ ತೋರಿಸಿದರೆ ಪ್ರಯೋಜನವಿಲ್ಲ. ಅವರುಗಳಿಗೆ ಅವಶ್ಯಕತೆ ಇರುವಷ್ಟು ಸೀಮೆ ಎಣ್ಣೆ ಕೊಡಬೇಕು. ಆದರಿಂದ ಬಹಳ ಅನುಕೂಲವಾಗುತ್ತದೆ. ಇನ್ನೊಂದು ಬಹಳ ಮುಖ್ಯವಾದ ವಿಷಯವನ್ನು ಇಲ್ಲಿ ಹೇಳಲಾಗಿದೆ. 30 ಪರ್ಸೆಂಟ್ ಮಹಿಳೆಯರಿಗೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಲಾಗಿದೆ. 30 ಪರ್ಸೆಂಟ್ ಮಹಿಳೆಯರಿಗೆ ಅವಕಾಶ ಕೊಡುವುದಕ್ಕಿಂಥ ಮುಖ್ಯವಾಗಿ ಮಹಿಳೆಯರ ಆಸೆ ಆಕಾಂಕ್ಷೆಗಳನ್ನು 50 ಪರ್‌ಸೆಂಟ್‌ನಷ್ಟು ನೆರವೇರಿಸಿದರೆ ಅಷ್ಟೇ ಅವಕಾಶ ಮಾಡಿಕೊಟ್ಟಹಾಗೆ ಆಗುತ್ತದೆ.

ಮುಖ್ಯ ಮಂತ್ರಿಗಳಾದ ಮಣ್ಣಿನ ಮಗ ದೇವೇಗೌಡರಿಗೆ ಮಹಿಳೆಯರ ಬಗ್ಗೆ ಜವಾಬ್ದಾರಿ ಇದ್ದರೆ, ರಾಜ್ಯದಲ್ಲಿ ಶರಾಪು, ಲಾಟ್ರಿ ಎರಡನ್ನು ಕಿತ್ತು ಹಾಕಿದರೆ ಮಹಿಳೆಯರರಿಗೆ ದೊಡ್ಡ ಸ್ಥಾನ ಕೊಡತಕ್ಕಂಥ ವ್ಯವಸ್ಥೆಯಾಗುತ್ತದೆ. ಕೂಲಿ ಮಾಡುವವರು ತಮ್ಮ ಜೀವನವನ್ನು ಹಾಳು ಮಾಡಿಕೊಂಡಿರುವುದು ಈ ಸಾರಾಯಿ ಮತ್ತು ಲಾಟ್ರಿ ಟಿಕೇಟ್‌ನಿಂದಾಗಿ. ಮೊನ್ನೆ ಪತ್ರಿಕೆಯಲ್ಲಿ ಓದಿದ ವಿಷಯವನ್ನು ಹೇಳಿದರೆ ಅದು ಅಸಹ್ಯವಾಗುತ್ತದೆ, ಅದನ್ನು ಸದನದಲ್ಲಿ ಹೇಳಬಾರದು. ಸಾರಾಯಿಯನ್ನು ಕುಡಿದು ತನ್ನ ತಾಯಿಯ ದೇಹವನ್ನೇ ಸಂಪರ್ಕಿಸಿದ್ದ ಎಂದು ಪೇಪರ್‌ನಲ್ಲಿ ಬಂದಿತ್ತು. ಅಂಥಾ ಹೇಸಿಗೆ ವಿಚಾರದಲ್ಲಿ ಸುಮಾರು ನೂರು ಕುಟುಂಬಗಳನ್ನು ನಾನು ಸರ್ವೆ ಮಾಡಿದ್ದೇನೆ.

ನಿಮ್ಮ ಸರಕಾರದಿಂದ ನಮಗೆ ಏನೂ ಬೇಕಾಗಿಲ್ಲ. ನಾನು ನನ್ನ ಗಂಡ ಮಕ್ಕಳು ಚೆನ್ನಾಗಿ ಇರುತ್ತೇವೆ, ಕನಿಷ್ಟ ಸಾರಾಯಿಯನ್ನು ತೆಗೆದು ಹಾಕಿ ಎನ್ನುತ್ತಾರೆ. ಆ ದಿಕ್ಕಿನಲ್ಲಿ ಏನಾದರೂ ಕೆಲಸ ಮಾಡಿದರೆ ಜನತಾದಳ ಸರಕಾರವು ನಿಜವಾಗಿಯೂ ಅಜರಾಮರವಾಗಿರಲಿ, ಒಂದು 20 ವರ್ಷಗಳ ಕಾಲ ನೀವು ಅಧಿಕಾರದಲ್ಲಿ ಇರಿ ಎಂದು ನಾನೇ ಆಶಿಸುತ್ತೇನೆ. ಇಲ್ಲಿ ಕುಳಿತುಕೊಂಡು ರಾಜಕಾರಣ ಮಾಡುತ್ತಾ ವಿರೋಧವನ್ನು ಮಾಡುವುದಿಲ್ಲ. ನಾವಿಲ್ಲಿ ಸಮಾಜದ ಪರವಾಗಿ ಚಿಂತನೆ ಮಾಡಬೇಕು. ನಾವು ಇಲ್ಲಿಗೆ ಬಂದು ಎಷ್ಟೊಂದು ಸವಲತ್ತುಗಳನ್ನು ಮಾಡಿಕೊಂಡಿದ್ದೇವೆ. ಇಲ್ಲಿ ಮ್ಯಾನ್‌ಪವರ್‌ಗೆ ಎಷ್ಟೊಂದು ಗೌರವವನ್ನು ಇಟ್ಟುಕೊಂಡಿದ್ದೇವೆ. ನಾವು ಇಲ್ಲಿ ಕುಳಿತುಕೊಂಡು ಒಂದು ದಿನದ ಶ್ರಮವನ್ನು ವ್ಯರ್ಥ ಮಾಡುವುದಕ್ಕೆ 250 ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಅಂಥ ಸಂದರ್ಭದಲ್ಲಿ ನಾವು ಜನರಿಗೂ ಕನಿಷ್ಠವಾದ ಬದುಕನ್ನು ಸೃಷ್ಟಿಮಾಡಿಕೊಡ ಬೇಕಾದಂಥ ವಿಚಾರವನ್ನು ಮಾಡಬೇಕು. ನಮಗೆ ಧರ್ಮ ಮತ್ತು ಜಾತಿಗಳು ಬೇಕಾಗಿಲ್ಲ. ನಮಗೆ ಉತ್ತಮವಾದ ಬದುಕು ಬೇಕು, ಊಟ ಬಟ್ಟೆಗಳು ಬೇಕು. ನೆಮ್ಮದಿಯಾದ ಬದುಕು ಬೇಕು. ನಮಗೆ ಯಾವ ಜಾತಿಬೇಕಾಗಿಲ್ಲ, ಅದನ್ನು ಕಟ್ಟಿಕೊಂಡು ಏನು ಮಾಡಬೇಕಾಗಿದೆ ? ಯಾರಾದರೂ ಮಾಡಲು ಕೆಲಸ ಇಲ್ಲದವರು ಮಾಡಿಕೊಳ್ಳಲಿ. ಉದಾಹರಣೆಗೆ ಒಬ್ಬನು ಒಂದು ಸೇರು ಅಕ್ಕಿ ತೆಗೆದುಕೊಳ್ಳುತ್ತಾನೆ. ಒಬ್ಬನು ಅದರಲ್ಲಿ ವಾಂಗೀಬಾತ್ ಮಾಡುತ್ತಾನೆ, ಇನ್ನೊಬ್ಬ ಪಲಾವ್ ಮಾಡುತ್ತಾನೆ; ಮತ್ತೊಬ್ಬ ಒಗ್ಗರಣೆ ಅನ್ನ ಮಾಡಿಕೊಡುತ್ತಾನೆ, ಮಗದೊಬ್ಬ ಕಿಚಡಿ ಮಾಡಿಕೊಳ್ಳುತ್ತಾನೆ. ಹೀಗೆ ಮಾಡಿದವರು ತಮ್ಮ ಅಡುಗೆ ಶ್ರೇಷ್ಠ ಎಂದು ಹೇಳುತ್ತಾನೆ. ಆದರೆ ಮೂಲಭೂತವಾದ ಅಕ್ಕಿಯು ಇಲ್ಲದಿದ್ದರೆ ಯಾವುದೂ ಸಿದ್ಧವಾಗುವುದಿಲ್ಲ. ಅಂದರೆ ರೈತರು ಉತ್ತುಬಿತ್ತು ಭತ್ತವನ್ನು ಬೆಳೆಯದಿದ್ದಲ್ಲಿ ಯಾವ ಬಾತ್ ಕೂಡ ತಯಾರಾಗುವುದಿಲ್ಲ. ಆದ್ದರಿಂದ ಎಲ್ಲಾ ಧರ್ಮಗಳವರೂ ಕೂಡ ಕೆಟ್ಟ ವಿಚಾರಗಳನ್ನು ತಿರಸ್ಕಾರ ಮಾಡಿ ಒಳ್ಳೆಯ ವಿಚಾರಗಳನ್ನು ಕಂಡುಹಿಡಿದರು. ಆತನು ಕ್ರಿಶ್ಚಿಯನ್. ಇವೊತ್ತು ರ್‍ಯಾಬೀಸ್ ರೋಗದಿಂದ ನೂರಾರು ಕೋಟಿ ಜನರ ಜೀವ ಉಳಿದುಕೊಂಡಿದೆ. ಹಾಗಾದರೆ ಕ್ರಿಶ್ಚಿಯನ್ ಧರ್ಮದವನು ಕಂಡು ಹಿಡಿದನೆಂದು ಹಿಂದೂ–ಮುಸ್ಲಿಮ್ ಧರ್ಮದವರು ಅದನ್ನು ಮುಟ್ಟಿಸಿಕೊಳ್ಳವುದಿಲ್ಲವೆ ? ಅದು ಸಾಧ್ಯವೆ ? ಧರ್ಮ ಅನ್ನುವುದು ಮಾನವನ ಬೆಳಕು. ಎಲ್ಲಾ ಸತ್ಯ ವಿಚಾರಗಳನ್ನು ನಮ್ಮ ಬದುಕಿಗೆ ಅಳವಡಿಸಿಕೊಳ್ಳಬೇಕು. ಕೇವಲ ದ್ವೇಷಾಸೂಯೆಗಳನ್ನು ಬೆಳೆಸಿಕೊಳ್ಳಬಾರದು. ಅದರಿಂದ ಇಡೀ ಸಮಾಜ ಹಾಳಾಗುತ್ತದೆ. ಪ್ರೀತಿ ವಿಶ್ವಾಸದಿಂದ, ಹೋರಾಟದಿಂದ, ಜನರನ್ನು ವಿಚಾರಕ್ಕೆ ಒಡ್ಡುವುದರ ಮೂಲಕ ಎಲ್ಲಾ ರಾಜಕೀಯ ಪಕ್ಷಗಳೂ ಬೇಕಾದರೆ ಓಟು ತೆಗೆದುಕೊಳ್ಳಲಿ. ಆಗ ಮತದಾರರ ಅಭಿಪ್ರಾಯ ಆದಾಗುತ್ತದೆ.

ಇನ್ನೊಂದು, ಸಾಲ ಮನ್ನಾ ಮಾಡುವ ವಿಚಾರದ ಬಗ್ಗೆ ಇದೆ. ತಾವುಗಳು ಹೋದ ಸಲ ಇದ್ದಾಗ ಸಾಲ ಮನ್ನಾ ಮಾಡಿದ್ದಿರಿ. ಹೋಟಲ್‌ನವರ ಸಾಲವನ್ನು ಮನ್ನಾ ಮಾಡಿದ್ದೀರಿ. ನಂತರ ಬಂಗಾರಪ್ಪನವರ ಸರಕಾರ ಇದ್ದಾಗ ಅಬಕಾರಿ ಗುತ್ತಿಗೆದಾರರ ಸಾಲವನ್ನು ಮನ್ನಾ ಮಾಡಿದ್ದಾರೆ. ಇದನ್ನು ಬಿಟ್ಟು ನೀವು ರೈತರ ಬಡ್ಡಿಯ ಸುದ್ದಿಯನ್ನು ಮಾತನಾಡಬಾರದು.

ಅನಂತರ ಇನ್ನೊಂದು ಕಾನೂನು ಇದೆ. ಇಡೀ ಕರ್ನಾಟಕದಲ್ಲಿ 50 ಲಕ್ಷ ಎಕರೆ ನೀರಾವರಿ ಪ್ರದೇಶ. ಅಲ್ಲಿ ಕೆರೆ, ಬಾವಿ, ಪಂಪ್‌ಸೆಟ್ಟು ಇತ್ಯಾದಿಗಳು ಇವೆ. ಒಂದೂವರೆ ಕೋಟಿ ಎಕರೆ ಮಳೆ ಆಧಾರಿತ ಪ್ರದೇಶ. ಒಂದು ಕಾನೂನನ್ನು ರಿಸರ್ವ್‌ಬ್ಯಾಂಕ್ ಮಾಡಿದೆ. ಅದು ಯಾವ ವಿಲೇಜ್ ಅಕೌಂಟೆಂಟ್‌ಗೂ, ತಹಶೀಲ್ದಾರರಿಗೂ ಗೊತ್ತಿರುವುದು ಕಾಣೆ. ಒಂದು ಹಿಂಗಾರು ಬೆಳೆ, ಒಂದು ಮುಂಗಾರು ಬೆಳೆ ಆಗದಿದ್ದರೆ, ಆ ರೈತನಿಗೆ ಎರಡು ಸಾಲ ಇದ್ದರೆ, ಒಂದು ಸಾಲಮನ್ನಾ, ಇನ್ನೊಂದು ಸಾಲವನ್ನು ಐದು ಕಂತುಗಳ ಮೂಲಕ ಅವನಿಂದ ವಸೂಲು ಮಾಡುವುದು. ಇದರ ಬಗ್ಗೆ ಆರಾಣೆಗಿಂತ ಬೆಳೆ ಕಡಿಮೆಯಾಗಿದೆ ಎನ್ನುವ ವಿಷಯವನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಅದನ್ನು ಅಪೆಕ್ಸ್ ಬ್ಯಾಂಕ್‌ನ ಗಮನಕ್ಕೆ ತಂದು ಅದು ರಿಸರ್ವ್‌ಬ್ಯಾಂಕ್‌ನ ಗಮನಕ್ಕೆ ತಂದರೆ ಒಂದು ಸಾಲ ಮನ್ನಾ ಎನ್ನುವ ವಿಷಯ ಇದೆ. ಆದರೆ ಈ ಕಾನೂನು ವಿಲೇಜ್ ಅಕೌಂಟೆಂಟ್ ಅಥವಾ ತಹಶೀಲ್ದಾರರಿಗೆ ಗೊತ್ತಿಲ್ಲ. ನಮಗೆ ಸಾಲ ಮನ್ನಾ ಆಗಲೇಬೇಕು. ಮಾಡದಿದ್ದರೆ ಇದ್ದೇ ಇದೆ, ಕಾನೂನು ಪ್ರಕಾರ ಸೆಕ್ಷನ್ 60–61ರ ಪ್ರಕಾರ ಯಾವ ಯಾವ ಪದಾರ್ಥಗಳನ್ನು ಮುಟ್ಟಬಾರದು ಎನ್ನುವ ಬಗ್ಗೆ ಹೈಕೋರ್ಟ್ ತಡೆಯಾಜ್ಞೆಯನ್ನು ಕೊಟ್ಟಿದೆ. ಅದನ್ನು ಮೀರಿ ಏನಾದರೂ ಬಂದರೆ ನಮಗೆ ಆಸ್ತಿ ರಕ್ಷಣೆ ಮಾಡಿಕೊಳ್ಳುವ ಹಕ್ಕು ಕೊಟ್ಟಿರುವುದರಿಂದ ಸೆಕ್ಷನ್ 104ರ ಪ್ರಕಾರ ನಾವು ನಮ್ಮ ಆಸ್ತಿ ರಕ್ಷಣೆ ಮಾಡಿಕೊಳ್ಳುವ ವಿಚಾರದಲ್ಲಿ ಬಂದವರ ಪ್ರಾಣವನ್ನು ತೆಗೆಯುವುದು ಬೇಡ, ಕಾಲು ಮುರಿದು ಹಾಕಬಹುದು ಎಂದು ಯಾರೋ ಹೇಳಿದರು. ಆಕಸ್ಮಾತ್ ಸಾಲ ವಸೂಲಿಗೆ ಬಂದರೆ ಹಾಗೆ ಆಗಬಹುದು ಎಂದು ಕಾಣುತ್ತದೆ. ಸಂಪನ್ಮೂಲಗಳನ್ನು ಕ್ರೋಢೀಕರಿಸುತ್ತೇವೆ ಎಂದು ಹೇಳತಕ್ಕಂಥ ಒಂದು ಸರಕಾರ ಯಾವರೀತಿಯಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸುತ್ತದೆ ?

ಕಾಂಗ್ರೆಸ್ ಪಕ್ಷ 42 ಮಂತ್ರಿಗಳನ್ನು ಒಂದು ದೊಡ್ಡ ಏರ್‌ಬಸ್ ತರಹ ಮಾಡಿ, ಅವರನ್ನು ಜನ ತಿರಸ್ಕಾರ ಮಾಡಿದರು, ಎರಡನೆಯದಾಗಿ ಇವರನ್ನು ಆರಿಸಿದರು. ಬಹಳ ಕಡಿಮೆ ಮಂತ್ರಿಗಳನ್ನು ಮಾಡಿ ಅದರಲ್ಲಿ ದುಡ್ಡು ಉಳಿಸಬಹುದಿತ್ತು. ಇನ್ನೊಂದು ಬಹಳ ಮುಖ್ಯವಾಗಿ, ಇದನ್ನು ಮಾಡುವುದಕ್ಕಾಗುವುದಿಲ್ಲ, ಮಾಡುತ್ತಾರೆ ಎಂದು ಹೇಳುವುದಿಲ್ಲ, ಆದರೂ ನನ್ನ ಜವಾಬ್ದಾರಿಯಿಂದ ಹೇಳಲೇಬೇಕು. ಪ್ರಾಕೃತಿಕಸಂಪತ್ತು, ಆಯಾಯ ಜಿಲ್ಲಾ ಪಂಚಾಯತಿಗಳ ಸ್ವತ್ತು, ಉದಾಹರಣೆಗೆ ನಾನು ತಮಿಳುನಾಡಿನ ಒಂದು ಗ್ರಾನೈಟ್ ಕಾರ್ಖಾನೆಗೆ ಹೋಗಿದ್ದೆ. ಒಂದು ದೊಡ್ಡ ಬ್ಲಾಕ್‌ಸ್ಟೋನ್, ಅದರಲ್ಲಿ 40 ಸ್ಲಾಬ್ ಆಗುತ್ತದೆ. ಒಂದು ಸ್ಲಾಬ್‌ಗೆ 5 ಸಾವಿರದಂತೆ ಒಟ್ಟು 2 ಲಕ್ಷ ರೂ ಬರುತ್ತದೆ. ಇಷ್ಟೊಂದು ದೊಡ್ಡ ದಂಧೆ ಸರ್ಕಾರದ ಪರವಾಗಿದೆ. ಅದೊಂದು ನಿಗದಿತ ವಿಚಾರದ ಮೇಲೆ ಕಲ್ಲನ್ನು ಸಾಗಾಣಿಕೆ ಮಾಡಬೇಕು. ಅದರ ಬಗ್ಗೆ ನನಗೆ ಪೂರ್ಣ ಮಾಹಿತಿ ಬೇಕು, ಯಾರ್ಯಾರು ಗುತ್ತಿಗೆದಾರರು, ಎಷ್ಟು ಎಕರೆ ಸರ್ಕಾರದಿಂದ ಪರವಾನಿಗೆ ಪಡೆದಿದ್ದಾರೆ, ಇದೇನು ಸಾಮಾನ್ಯ ಜಾಲವಲ್ಲ, ಬಹಳ ದೊಡ್ಡ ಜಾಲ ಇದು. ಇದರಲ್ಲಿ ಯಾರ್ಯಾರು ಇದ್ದಾರೆ ಎಂದು ನಮಗೆ ಗೊತ್ತಿಲ್ಲ ತಾವು ಮಾಹಿತಿ ಕೊಡಬೇಕು ಸದನಕ್ಕೆ, ಇದನ್ನು ಪೂರ್ಣ ಸರ್ಕಾರಕ್ಕೆ ಬರುವ ಆದಾಯದ ಕೆಲಸವನ್ನಾಗಿ ಮಾಡಬೇಕು. ಆಮೇಲೆ ಕೆಲವು ಕಾಮಗಾರಿಕೆ ಕೆಲಸಗಳನ್ನು, ಈಗ ನಾವು ಆಶ್ರಯ ಯೋಜನೆ ಯಾರ್ಯಾರಿಗೆ ಕೊಟ್ಟಿದ್ದೀರಿ ಅವರೆಲ್ಲ ಅನಾಥ ಯೋಜನೆಯಡಿಯಲ್ಲಿ ಬಿದ್ದುಕೊಂಡಿದ್ದಾರೆ ಈಗ. ಏಕೆಂದರೆ ಮಧ್ಯವರ್ತಿಗಳು ದುಡ್ಡು ತಿನ್ನುವುದು ಜಾಸ್ತಿ. ಆಶ್ರಯ ಯೋಜನೆಯ ಫಲಾನುಭವಿಗೆ ನೀನೇ ಮನೆ ಕಟ್ಟಿಕೋ ಎಂದು ಜವಾಬ್ದಾರಿಯಿಂದ ಅವನಿಗೆ ಕೊಟ್ಟರೆ ಆತ ಭದ್ರವಾದ ಮನೆ ಕಟ್ಟಿಕೊಳ್ಳುತ್ತಾನೆ. ದಯವಿಟ್ಟು ಮಧ್ಯವರ್ತಿಗಳನ್ನು ತಾವು ನಿಲ್ಲಿಸಬೇಕು. ಮಧ್ಯವರ್ತಿಗಳಿಲ್ಲದೆ ಎಷ್ಟು ಕಾಮಗಾರಿಗಳು ನಮಗೆ ಸಾಧ್ಯವೋ ಅಷ್ಟನ್ನು ಮಾಡಬೇಕು. ಉದಾಹರಣೆಗೆ ಒಂದು ಶಾಲೆ ಕಟ್ಟಡಕ್ಕೆ ಒಂದು ಲಕ್ಷ ರೂಪಾಯಿ ಆಗುತ್ತದೆ. ಅಲ್ಲಿ ಆ ಊರಿನ 25–30 ಜನ ಯಜಮಾನರ ಒಂದು ಸಮಿತಿ ಮಾಡುವುದು, ಯಾವ ಪಕ್ಷವೋ ಏನೋ, ಒಂದು ಲಕ್ಷ ರೂಪಾಯಿಗಳನ್ನು ಅವರ ಕೈಗೆ ಕೊಡುವುದು,

ಕಟ್ಟಿಕೊಳ್ಳಪ್ಪ ನೀವು ನಿಮ್ಮ ಸ್ಕೂಲನ್ನು ಎನ್ನುವುದು. ಕೆಳಮಟ್ಟದ ಕಾಮಗಾರಿಕೆ ಕೆಲಸ ನಡೆಯುವುದಿಲ್ಲ, ಭದ್ರವಾದ ಕಟ್ಟಡ ಆಗುತ್ತದೆ. ಈಗ ನೋಡಿದರೆ ಯಾವ ಬಿಲ್ಡಿಂಗನ್ನೂ ಕೇಳೋರಿಲ್ಲ ಹೇಳೋರಿಲ್ಲ. ಏನು ಮಾಡುವುದು ? ಲಂಚ, ಲಂಚ ನಿರ್ಮೂಲನೇ ಯಾವ ರೀತಿ ಮಾಡುತ್ತೀರಿ, ಸರ್ಕಾರದ ಕಾರ್ಯಕ್ರಮ. ನೀವು ಹೇಳುವುದು ಖರೆ, ಬಹಳ ಭ್ರಷ್ಟಾಚಾರ ನಡೆಯುತ್ತಿದೆ ಅದನ್ನು ನಿರ್ಮೂಲನಾ ಮಾಡುತ್ತೇವೆ ಎಂದು, ಹಂಗಂಗೆ ಏನೇನೋ ಹೇಳುತ್ತಿದ್ದೀರಿ ನೋಡೋಣ. ಯಾವ ಮಟ್ಟಕ್ಕೆ ಮಾಡುತ್ತೀರಿ ಎಂದು. ಸ್ವಲ್ಪ ಜವಾಬ್ದಾರಿಯುತವಾಗಿ ಕನಿಷ್ಠ ಭ್ರಷ್ಟಾಚಾರ ನಿಲ್ಲಿಸುವ ದೃಷ್ಟಿಯಿಂದ ಕೆಲಸ ಮಾಡಿದರೆ ಅದೇ ಸಾಕು. ಏಕೆಂದರೆ, ಭ್ರಷ್ಟಾಚಾರದಿಂದ ಎಷ್ಟೊಂದು ಅಪಾಯ ಎನ್ನುವುದನ್ನು ಸಾರ್ವಜನಿಕವಾಗಿ ಆಲೋಚನೆ ಮಾಡಬೇಕು. ಒಂದು ಕಿಮೀ ರಸ್ತೆ ಮಾಡುವಾಗ ಇಬ್ಬರು ವ್ಯಕ್ತಿಗಳು ಲಂಚ ತಿಂದರು, ಆದರೆ ಅಲ್ಲಿ ವರ್ಷಾನುಗಟ್ಟಲೆ ಓಡಾಡುವ ಎಷ್ಟು ವಾಹನಗಳ ಅನಾಹುತಗಳಿಗೆ ಕಾರಣ ಎಷ್ಟು ಸಾವಿರಾರು ವಾಹನಗಳಿಗೆ ನಷ್ಟವಾಗುತ್ತದೆಂದು ನಾವು ಯೋಚನೆ ಮಾಡಬೇಕು. ಭ್ರಷ್ಟಾಚಾರದ ಮೂಲಕ ಇಡೀ ಸಮಾಜದ ಅವನತಿ ಆಗುತ್ತಿದೆ. ಇವತ್ತು ಭ್ರಷ್ಟಾಚಾರ ಮಾಡುವವರು ಕೇವಲ 10 ರಿಂದ 20 ಪರ್ಸೆಂಟ್, 80 ಪರ್ಸೆಂಟ್ ನಾವು ಸಫರ್ ಪಡುತ್ತಿದ್ದೇವೆ. ಆ 20 ಪರ್ಸೆಂಟ್ ಭ್ರಷ್ಟಾಚಾರ ನಿರ್ಮೂಲನಾ ಮಾಡುವ ಕಾರ್ಯಕ್ರಮವನ್ನು ಹೇಗೆ ರೂಪಿಸುತ್ತಿದೆ ಎಂದು ಹೋಗುತ್ತಾಹೋಗುತ್ತಾ ಗೊತ್ತಾಗುತ್ತದೆ. ಹಸಿರು ಕಾರ್ಡ್‌ನ್ನು ಎಲ್ಲಾ ಕಡೆ ಕೊಟ್ಟುಬಿಟ್ಟಿದ್ದಾರೆ. ದಯವಿಟ್ಟು ಎಲ್ಲಾ ಕಡೆ ಹಸಿರು ಕಾರ್ಡ್ ಕೊಡದೆ ಆಹಾರದ ವಿತರಣಾ ಕಾರ್ಯಕ್ರಮ ಸರಿಯಾಗಿ ಆಗಬೇಕು. ಆಮೇಲೆ ತಮ್ಮ ಸರ್ಕಾರಕ್ಕೊಂದು ಸಲಹೆ. ಈಗ ಅಕ್ಕಿ ಇದೆಯಲ್ಲಪ್ಪ, ಮಧ್ಯಾಹ್ನ ಅಕ್ಕಿ ಹಾಕಿ ಊಟ ಮಾಡಿ ಸಂಜೆಗೆ ಇಟ್ಟರೆ ಅದು ಹಳಸಿಹೋಗುತ್ತದೆ. ಏಕೆಂದರೆ, ಅದು ಪಂಜಾಬಿನಿಂದ ತಂದ ಅಕ್ಕಿ. ಅದು 7 ರೂಪಾಯಿನ ಅಕ್ಕಿ ಆಗಬಹುದು 4 ರೂಪಾಯಿನ ಅಕ್ಕಿ ಆಗಬಹುದು. ನಾನು ಮನೆಗೆ ಒಂದು ಕೆ.ಜಿ. ಅಕ್ಕಿ ತೆಗೆದುಕೊಂಡು ಹೋಗಿ ಮಧ್ಯಾಹ್ನ ಅನ್ನಾ ಮಾಡಿಸಿ ರಾತ್ರಿ ಹೊತ್ತು ಊಟ ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಕೇವಲ ಆಂಧ್ರದಿಂದ ಅಕ್ಕಿ ತರಿಸಿ ಸರಬರಾಜು ಮಾಡುವ ಮೂಲಕ ಉತ್ತಮವಾದ ಅಕ್ಕಿ ಕೊಡಬಹುದೆಂದು ನನ್ನ ಅಭಿಪ್ರಾಯ.

ಈಗ ಕೃಷ್ಣ ಮೇಲ್ದಂಡೆ ನಮಗೆ ಬಹಳ ಮುಖ್ಯವಾದದ್ದು. ನಮಗೆ ಯಾವ್ಯಾವ ಮಟ್ಟದ ಅನ್ಯಾಯವಾಗಿದೆ ಅಂದರೆ, ಒಟ್ಟು ನಮ್ಮ ಕರ್ನಾಟಕದ ಕೊಡುಗೆ ಜಲಾನಯನದಲ್ಲಿ ನೂರಕ್ಕೆ 47.5 ಪರ್ಸೆಂಟ್ ನಮಗೆ ಹಂಚಿಕೆ 27.2 ಆಂಧ್ರ ಪ್ರದೇಶದ ಕೊಡುಗೆ 24.5 ಪರ್ಸೆಂಟ್ ಹಂಚಿಕೆ 56.4. 2ಸಾವಿರದ ಇಸವಿಯೊಳಗೆ ನಾವು ಮಕುತ್ಯಾ ಮಾಡುತ್ತೇವೆಂದು ಹೇಳಿದ್ದಾರೆ. ಅದರೆ ಅದು ಸಾಧ್ಯವಿಲ್ಲ. ಇಂತಹ ಕಾಮಗಾರಿಗೆ ಜಲಾಶಯಕ್ಕೆ ಹಣ ಒದಗಿಸುವುದಕ್ಕಿಂತ ಅಲ್ಲಿರುವ ಇಂಜಿನಿಯರಿಗೆ, ಕಂಟ್ರಾಕ್ಟರಿಗೆ ಹಣ ಒದಗಿಸಲಿಕ್ಕೆ ನಿಮಗೆ ಆಗಲಿಲ್ಲ. ಅಂತಹ ಕೆಟ್ಟ ವ್ಯವಸ್ಥೆ ಇದೆ. ಅವರಿಬ್ಬರಿಗೂ ಒದಗಿಸಿಯಾದ ಮೇಲೆ ಉಳಿದುಕೊಂಡರೆ ಜಲಾನಯನಕ್ಕೆ ಸ್ವಲ್ಪ ಹಣ ಸಿಗುತ್ತದೆ. ಅದು ಮುಂದುವರಿಯಬಹುದು, ಏಕೆಂದರೆ ಬಹಳ ಸುಲಭ ಅವರಿಗೆ ಇದನ್ನೆಲ್ಲಾ ಅಲ್ಲಿ ಯಾರು ನೋಡುವುದಕ್ಕೆ ಹೋಗುತ್ತೀರಿ. ಸಾಫ್ಟ್ ರ್ಯಾಕ್ ಅದನ್ನೇ ಬರೆಯುತ್ತಾರೆ ಹಾರ್ಡ್ ರ್ಯಾಕ್ ಎಂದು ಅದು 7 ರೂಪಾಯಿ ಇದು 30 ರೂಪಾಯಿ. ಇದು ಬಹಳ ಸುಲಭ. ಪೆನ್ನು ಹಿಡಿದುಕೊಂಡು ಬರೆದರೆ ಮುಗಿದು ಹೋಯಿತು. ನಮ್ಮ ವಿಲೇಜ್ ಅಕೌಂಟೆಂಟ್ ಒಬ್ಬನಿಗೆ ಆರ್.ಟಿ.ಸಿ. ಕೊಟ್ಟುಬಿಡುತ್ತಾರೆ. ಏನಾದರೂ ಮರೆ ಮಾಚಿದರೆ ಬೇಕಾದರೆ ಈ ಶಾಸನಸಭೆಯನ್ನೇ ಬೇರೆಯವರ ಹೆಸರಿಗೆ ಆರ್.ಟಿ.ಸಿ. ಕೊಟ್ಟರೂ ಕೊಟ್ಟರು. ಅಂತಹ ಕೆಲಸ ನಡೆಯುತ್ತದೆ. ಇದರ ಬಗ್ಗೆ ಗಂಭೀರವಾಗಿ ವಿಚಾರ ಮಾಡಬೇಕು. ಸರಕಾರ ಮಾಡುವುದೂ ಬಿಡುವುದು ಬೇರೆ ಪ್ರಶ್ನೆ. ಸರಕಾರ ಒಂದು ಮಾತನ್ನು ಹೇಳಬೇಕು. ಬಚಾವತ್ ಆಯೋಗವನ್ನು ಆಗಲಿಲ್ಲವೆಂದು ತಿರಸ್ಕಾರ ಮಾಡುತ್ತೇವೆಂದು ನೇರವಾಗಿ ಹೇಳಬೇಕು. 2000 ಇಸವಿಯೊಳಗೆ ಮುಗಿಸಲು ಸಾಧ್ಯವಿಲ್ಲ. ನೀವು ಸರಕಾರ ರಚನೆ ಮಾಡಿದ್ದಾಗ 5 ವರ್ಷ

ಬರಗಾಲ ಅನುಭವಿಸಿದ್ದೀರಿ. 5 ವರ್ಷ ಬರಗಾಲ ಅನುಭವಿಸಿದವರಿಗೆ ಯಾವ ರೀತಿ ಹಣವನ್ನು ಒದಗಿಸಿಕೊಡಲು ಸಾಧ್ಯ? ಬರಗಾಲಕ್ಕಿಂತ ಕೆಟ್ಟ ಸಾಲ ಇನ್ನಾವುದೂ ಇಲ್ಲ. ಇದಕ್ಕೆಲ್ಲಾ ಕಾರಣವೇನೆಂದರೆ 1969ರಲ್ಲಿ ನಾಗಾರ್ಜುನ ಸಾಗರ ಯೋಜನೆ ಪೂರ್ಣಗೊಂಡ ನಂತರವೇ ಮೇ 1969ರಲ್ಲಿ ನ್ಯಾಯಾಧೀಶ ಬಚಾವತ್‌ರವರ ಅಧ್ಯಕ್ಷತೆಯಲ್ಲಿ ನ್ಯಾಯ ಮಂಡಲಿ ನೇಮಕವಾಯಿತು. ಆಂಧ್ರ ಪ್ರದೇಶದ ಡಾ: ಕೆ.ಎಲ್. ರಾವ್ ಅವರು 63 ರಿಂದ 73 ರವರೆಗೆ ಕೇಂದ್ರ ನೀರಾವರಿ ಮಂತ್ರಿಯಾಗಿದದರು. ಇದು ಒಂದು ಕಾರಣ ಇದೆ. ಆಂಧ್ರದ ಪರವಾಗಿ ತೀರ್ಮಾನವಾಗಬೇಕಾದರೆ ಇದು ಒಂದು ಕಾರಣವಾಗಿದೆ. ಏಕೆಂದರೆ ಒಂದು ಜಲಮಂಡಲಿ ಮಾಡಿದರು. ಕರ್ನಾಟಕದಲ್ಲಿ ಎಷ್ಟರಮಟ್ಟಿಗೆ ನೀರು ಹರಿಯುತ್ತಿದೆ, 47.5 ಪರ್ಸೆಂಟಿಗೆ ನಮಗೆ 700 ಟಿ.ಎಂ.ಸಿ ನೀರು. ಅದೇ ಆಂಧ್ರ ಪ್ರದೇಶಕ್ಕೆ 24.5 ಪರ್ಸೆಂಟಿಗೆ 800 ಟಿ.ಎಂ.ಸಿ ನೀರನ್ನು ನಾವು ಕೊಡುತ್ತೇವೆ. ನಮ್ಮ ಭಾಗ ಎಷ್ಟು ಎಂದು ಹೇಳುತ್ತೇನೆ. 1973ರ ಬಚಾವತ್ ಆಯೋಗದ ತೀರ್ಪು ತುಂಗಭದ್ರ ಜಲಾನಯನ ಸರಾಸರಿ ಹರಿವ ಮಲ್ಲಾಪುರದವರೆಗೆ ಅಂದರೆ ಬಾರ್ಡರ್ 450 ಟಿಎಂಸಿ ಇದ್ದರೂ ಕರ್ನಾಟಕದ ಬಳಕೆ 320 ಟಿಎಂಸಿ ಮಾತ್ರ ಇರಬೇಕೆಂದು ನಿರ್ಬಂಧ ಹಾಕಿದೆ. ಇದರಿಂದ ಆಯೋಗಕ್ಕೆ ಆಂಧ್ರಪ್ರದೇಶದಲ್ಲಿ ಹಾಲಿ ಇರುವ ಯೋಜನೆಗಳನ್ನು ಅನಾವೃಷ್ಟಿ ವರ್ಷಗಳಿಂದ ರಕ್ಷಿಸುವುದಕ್ಕೆ ಆಸಕ್ತಿ ಮಾತ್ರ ಇತ್ತು. ಆಂಧ್ರದಲ್ಲಿರತಕ್ಕಂತಹ ಜಮೀನನ್ನು ಅನಾವೃಷ್ಟಿಯಿಂದ ತಪ್ಪಿಸುವುದಕ್ಕೆ ಮಾತ್ರ ಯೋಜನೆ ಹಾಕಿತ್ತು. ಕರ್ನಾಟಕ ನೀರಾವರಿ ಯೋಜನೆಗಳ ಬಗ್ಗೆ ಅದು ಆಲೋಚನೆ ಮಾಡಲಿಲ್ಲ. ಕನ್ನಂಬಾಡಿ ಡ್ಯಾಂ ಕಟ್ಟಬೇಕಾದರೆ ಪೂರ್ಣ 3 ವರ್ಷದ ಬಡ್ಜಟ್ಟನ್ನು ಬಳಕೆ ಮಾಡಿ ಕಟ್ಟಲಾಯಿತು. ಇದರಿಂದ ದೊಡ್ಡ ಕಟ್ಟೆ ಕಟ್ಟಲಾಯಿತು. ಇಡೀ ರಾಜ್ಯದ 75 ಭಾಗದ ಹಣವನ್ನು ನೀರಾವರಿಗೆ ಮೀಸಲಿಡಬೇಕು. ಏಕೆಂದರೆ ಭೂಮಿಯ ಮೂಲಕ ಉತ್ಪಾದನೆಯ ಮೂಲಕ ರಾಜ್ಯದ ಅಭಿವೃದ್ಧಿ ಸಾಧ್ಯ. ಕರ್ನಾಟಕದಲ್ಲಿ ಸುಮಾರು 28 ರಿಂದ 30 ಸಾವಿರ ಕೆರೆಗಳಿಗೆ ಇವತ್ತು 16 ಸಾವಿರ ಕೆರೆಗಳು ಉಳಿದುಕೊಂಡಿದೆ. ನೀರಾವರಿಗೆ ಆದ್ಯತೆ ಕೊಡದೆ ಆಯಾಯ ಕೆರೆಗೆ ಒಂದು ಸಮಿತಿ ಮಾಡುತ್ತೀರಿ. ಇವತ್ತು ಹೇಮಾವತಿಗೆ 7,44,000 ಎಕರೆ ಮಾಡಿದ್ದೇವೆ. 7,44,000 ಎಕರೆ ಜಮೀನು ಮಾಡದಿದ್ದರೆ ಒಂದೊಂದು ಮಡುವೆಗೂ ಸಮಿತಿ ಮಾಡದೆ ಇದ್ದರೆ ಸುಮಾರು ಒಂದೊಂದು ಮಡುವ ನೇರದಲ್ಲಿ 4–4 ಕೊಲೆಯಾಗುತ್ತದೆ. ನಾವು ನೀರನ್ನು ಸರಬರಾಜು ಮಾಡುತ್ತಿರುವುದು ಸೆಮಿ ಡ್ರೈ ಕ್ರಾಪ್ಸ್‌ಗೆ. ನಾನು ಮೊನ್ನೆ ಚನ್ನರಾಯಪಟ್ಟಣ ಏರಿಯಾದಲ್ಲಿ ಹೋಗಿದ್ದೆ ಈ ವರ್ಷ ಒಂದೂವರೆ ತಿಂಗಳು ನಿರಂತರವಾಗಿ ಮಳೆಯಾಗಿ ರೈತರಿಗೆ ಅನುಕೂಲವಾಗಿದೆ. ಇಲ್ಲದಿದ್ದರೆ ಅದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ.

ಹೇಮಾವತಿ ಏರಿಯಾದಲ್ಲಿ ನಾವು ನೀರನ್ನು ಬಿಟ್ಟಿದ್ದೇವೆ ಎಲ್ಲಾ ರೈತರಿಗೂ ಅನುಕೂಲವಾಗುತ್ತದೆ ಎಂದು ಹೇಳಿ. ನಾವು ಕೊಟ್ಟಿರುವ ಉದ್ದೇಶ ಸಮಿ ಡ್ರೈ ಕ್ರಾಪ್ಸ್‌ಗೆ. ಮಳೆಯಿಂದ ಏನಾದರೂ ಅನಾನುಕೂಲವಾದಾಗ ಒಂದೊಂದು ಹದ ನೀರನ್ನು ಹಾಯಿಸಿಕೊಂಡು ಕಾಳುಗಳನ್ನು, ಕಡ್ಲೆಕಾಯಿ ಇನ್ನಿತರ ಪದಾರ್ಥಗಳನ್ನು ಬೆಳೆಯಿರಿ ಎಂದು ಹೇಳಿ ನೀರನ್ನು ಕೊಟ್ಟಿರುವುದು. ಈ ರೀತಿ ಒಂದು ತಿಳಿವಳಿಕೆಯನ್ನೂ ಸಹಾ ರೈತರಿಗೆ ಕೊಟ್ಟಿಲ್ಲ. ಏಕೆಂದರೆ ಮಾರುಕಟ್ಟೆ ಪದ್ಧತಿ ಆ ರೀತಿ ಇರುವುದರಿಂದ ನಮ್ಮ ರೈತರು ಅದನ್ನು ಬೆಳೆಯುವುದಕ್ಕೆ ಸಾಧ್ಯ. ಇದೆಲ್ಲ ಯೋಜನೆಗೆ ನಮಗೆ ಯವ ಯಾವ ಅನಾನುಕೂಲವಾಗಿದೆ. ಕೃಷ್ಣ ಮೇಲ್ದಂಡೆ ಯೋಜನೆಯು ಬೆಳಗಾವಿ, ಬಿಜಾಪುರ, ರಾಯಚೂರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ 30 ಲಕ್ಷ ಎಕರೆ ನೀರು ಉಣಿಸಬೇಕಾಗಿದೆ. ಹಾಗೆಯೇ ತುಂಗಾ ಮೇಲ್ದಂಡೆ ಮತ್ತು ಭದ್ರಾಮೇಲ್ದಂಡೆ ಯೋಜನೆಗಳು ಶಿವಮೊಗ್ಗ, ಧಾರವಾಡ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲ 15 ಲಕ್ಷ ಎಕರೆಗೆ ನೀರು ಉಣಿಸಬೇಕಾಗಿದೆ. ಇಷ್ಟೆಲ್ಲಾ ಈ ಕಾರಣ ಬಚಾವತ್ ಆಯೋಗ ಮಾಡಿದ ಅನ್ಯಾಯವನ್ನು ಕೃಷ್ಣಾ ಮೇಲ್ದಂಡೆ ಉಪಜಲಾನಯನ ಮತ್ತು ತುಂಗಾಭದ್ರ ಉಪಜಲಾನಯನದ ಪೂರ್ಣ ಅಭಿವೃದ್ಧಿಗಾಗಿ ಹೋರಾಡಿ ಪೂರೈಸಿಕೊಳ್ಳುವ ಮೂಲಕ ಈ ಸರ್ಕಾರ

ಸರಿಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ಹೋರಾಟದ ಜವಾಬ್ದಾರಿಗಳನ್ನು ಸರ್ಕಾರಗಳು ಹೊರದಿದ್ದರೆ, ನಾವು ಕರ್ನಾಟಕದ ರೈತರು ಈ ಹೋರಾಟದಲ್ಲಿ ಪೂರ್ಣ ಸಹಕಾರ ಕೊಡುತ್ತೇವೆ. ಆದ್ದರಿಂದ ದಯವಿಟ್ಟು ಅತ್ಯಂತ ಗಾಂಭೀರವಾಗಿ ತಾವು ಬಚಾವತ್ ಆಯೋಗವನ್ನು ಅನುಷ್ಠಾನಕ್ಕೆ ಎರಡು ಸಾವಿರ ಇಸವಿಯೊಳಗಾಗಿ ತರುವುದಕ್ಕೆ ಆಗದಿದ್ದರೆ ಕನಿಷ್ಠ ತಿರಸ್ಕಾರ ಮಾಡುತ್ತೇವೆ ಎಂದು ಹೇಳತಕ್ಕಂಥ ರೀತಿ ಕೇಂದ್ರಕ್ಕೂ, ರಾಜ್ಯಸರ್ಕಾರಕ್ಕೂ 'ಲಡಾಯಿ' ಶುರುವಾಗಲೇಬೇಕು. ಅದು ಅನಿವಾರ್ಯ. ಈ ರೀತಿ ಕಾನೂನನ್ನು ಯಾರು ಬರೆಯುತ್ತಾರೆ. ಪ್ರಕೃತಿಗೆ ಕಾನೂನನ್ನು ಯಾರ ಕೈಯಲ್ಲೂ ಬರೆಯುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇಡೀ ಪ್ರಪಂಚವೇ ಒಪ್ಪಿಕೊಂಡಿದೆ. ಯಲ್ಲಿಂಕ್ ಫಾರ್ಮುಲಾದ ಆಧಾರದ ಮೇಲೆ ಜಲಮಂಡಲಿ ರಚನೆ ಮಾಡಿ ಒಂದು ವೈಜ್ಞಾನಿಕವಾಗಿ ವಿಚಾರ ಮಾಡಿ ಎರಡು ರಾಜ್ಯಗಳನ್ನು ಸಂಪರ್ಕಿಸಿ ಒಂದು ವಿಚಾರದ ಆಧಾರದ ಮೇಲೆ ಒಂದು ಆಯೋಗ ರಚನೆಯಾಗಿ ಒಂದು ವಿಚಾರವನ್ನು ಬರೆಯಬೇಕು. ಇಷ್ಟೆಲ್ಲಾ ವಿಚಾರವನ್ನು ತಾವು ಗಮನದಲ್ಲಿಟ್ಟುಕೊಂಡು ತಾವು ಏನು ಐದು ವರ್ಷದವರೆಗೂ ಇರುತ್ತೀರಿ, ಇರುವಂಥ ಸಮಯದಲ್ಲಿ ಗಂಭೀರವಾಗಿ ಜನರ ಬದುಕಿನ ಬಗ್ಗೆ ಜನರ ವಿಚಾರದ ಬಗ್ಗೆ ಚಿಂತಿಸಬೇಕು. ಕೇವಲ ಗ್ರಾಮೀಣ ಬದುಕಿನ ಜನರನ್ನು ವೋಟಿನ ವಿಚಾರಕ್ಕೆ ಬಳಸಿಕೊಳ್ಳಬಾರದು. ಅದರಲ್ಲೂ ನಾವು ಇದುವರೆಗೂ ಅತೀ ಮುಖ್ಯವಾಗಿ ಜವಾಬ್ದಾರಿಯಿಂಧ ನಿರ್ವಹಿಸಬೇಕಾಗಿರುವುದು ಪಟ್ಟಣ ಪ್ರದೇಶದಲ್ಲಿ ಇರತಕ್ಕಂಥ ಸ್ಲಮ್ ಏರಿಯಾ ಎಂದು ಮಾಡಿ ಪಟ್ಟಣದಲ್ಲಿ ಎಲ್ಲಾ ನಗರಗಳಲ್ಲಿ ಯಾವುದೇ ವ್ಯವಸ್ಥೆ ಇಲ್ಲದೆ ಅತ್ಯಂತ ಕೊಳಚೆ ಪ್ರದೇಶವನ್ನಾಗಿ ಮಾಡಿ ನಿಕೃಷ್ಟ ಜೀವನವನ್ನು ಕೊಟ್ಟು ಬುದ್ಧಿಯೂ ಇಲ್ಲದಂತೆ ಮಾಡಿ ಸಮಾಜದಲ್ಲಿ ಕೇವಲ ಅವರನ್ನು ಯಾವಾಗಲೂ ಕರೆದುಕೊಂಡು ಬಂದು ವೋಟು ಹಾಕಿಸಿಕೊಂಡು ಮತ್ತೆ ತೆಗೆದುಕೊಂಡು ಹೋಗಿ ಸ್ಲಮ್ ಏರಿಯಾಗೆ ಬಿಡತಕ್ಕಂಥ ಒಂದು ಕೀಳು ಪ್ರವೃತ್ತಿಯನ್ನು ಬೆಳೆಸಿದ್ದೇವೆ. ಅವರಿಗೂ ಒಂದು ಉತ್ತಮವಾದ ಮಸಾಜವನ್ನು ಸೃಷ್ಟಿಮಾಡುವ ದಿಕ್ಕಿನಲ್ಲಿ ಕೆಲಸಮಾಡಬೇಕು ಎಂದು ಹೇಳುತ್ತೇನೆ. ಬಹಳ ಜನ ಮಹಾತ್ಮರ ಫೋಟೊವನ್ನು ಮುಂದೆ ಇಟ್ಟುಕೊಂಡಿದ್ದೇವೆ. ನಮ್ಮ ಜನ ಶಾಸನಸಭೆ ಎಂದರೆ ಬಹಳ ದೊಡ್ಡ ಗೌರವವನ್ನು ಕೊಡುತ್ತಾರೆ. ನಾನು ಇಲ್ಲಿ ಹೊಸಬ. ಕಿರಿಯ ಸದಸ್ಯದರು ಎಂದು ಬರುತ್ತಿದ್ದರಂತೆ ಹೆದರಿಸುತ್ತಿದ್ದರು. ನಾನು ನೋಡಿದೆ. ಹಿರಿಯ ಸದಸ್ಯರು, ಕಿರಿಯ ಸದಸ್ಯರುಗಳನ್ನು ಬಹಳ ಗಂಭೀರವಾದುದು ಶಾಸನಸಭೆ. ಈ ಶಾಸನಸಭೆ ಬಗ್ಗೆ ಬಹಳ ಗೌರವ ಇಟ್ಟುಕೊಂಡಿದ್ದಾರೆ. ಎಂಎಲ್ಎ ಎಂದರೆ ದೇವರು ಎಂದು ವೋಟು ಕೊಡುತ್ತಾರೆ. ಐದು ವರ್ಷ ಆದಮೇಲೆ ಬಯ್ಯುತ್ತಿರುತ್ತಾರೆ. ಮೊದಲು ಕೊಡುವಾಗ ಅವರನ್ನು ದೇವರು ಎನ್ನುತ್ತಿರುತ್ತಾರೆ. ಈಗ ಇಲ್ಲಾ ವೋಟು ತೆಗೆದುಕೊಂಡು ಬಂದಿದ್ದೇವೆ. ಕನಿಷ್ಟ ಸಭಾಧ್ಯಕ್ಷರು ಬಂದಮೇಲೆ ನಿಜವಾಗಲೂ ನಮಗೆಲ್ಲ ಮತದಾರರ ಬಗ್ಗೆ ಗೌರವ ಇದೆ. ಮತದಾರಬಗ್ಗೆ ಗಂಭೀರತೆ ಇದೆ. ದೂರದರ್ಶನದ ಮೂಲಕ ಶಾಸನಸಭೆಯಲ್ಲಿ ನಡೆಯತಕ್ಕಂಥ ನಡವಳಿಕೆಯನ್ನು ಕನಿಷ್ಟ ಒಂದು ದಿವಸಕ್ಕೆ ಒಂದು ಗಂಟಯೊ, ಎರಡು ಗಂಟೆ ಟೈಮ್ ನಮಗೆ ಮತ ಕೊಟ್ಟಿರತಕ್ಕಂಥ ಮಾಲೀಕರು ದಯವಿಟ್ಟು ನೋಡಿದರೆ ಆಗ ನಾವು ಅತ್ಯಂತ ಗಂಭೀರವಾಗಿ ಚರ್ಚೆ ಮಾಡುವುದಕ್ಕೂ ಶುರುಮಾಡುತ್ತೇವೆ, ಗೌರವಯುತವಾಗಿ ನಡೆದುಕೊಳ್ಳುವುದಕ್ಕೂ ಶುರುವಾಗುತ್ತದೆ. ಮತದಾರರನ್ನು ಮರೆಯಲ್ಲಿ ಇಟ್ಟು ಕತ್ತಲೆ ಕೋಣೆಯಲ್ಲಿ ಕುಳಿತು ನಾವು ಈ ರೀತಿ ಮಾತನಾಡಿಕೊಂಡು ಹೋಗಬಾರದು.ದೂರದರ್ಶನದ ಮೂಲಕ ಜನರಿಗೆ ತೋರಿಸತಕ್ಕಂಥ ಕೆಲಸವನ್ನು ಮಾಡಿ, ಇಡೀ ಕರ್ನಾಟಕದ ಎಲ್ಲಾ ಜನರ ಪರವಾಗಿ ಪ್ರೀತಿ ವಿಶ್ವಾಸದಿಂದ ಕೆಲಸ ಮಾಡಿ, ಜನತಾ ದಳಕ್ಕೆ ನಾನು ದ್ವೇಷ ಮಾಡುವುದಿಲ್ಲ. ಶುಭವನ್ನು ಕೋರುತ್ತಾ ಅದರ ಜವಾಬ್ದಾರಿ ಕೆಲಸವನ್ನು ವಿರೋಧ ಪಕ್ಷದ ನಾಯಕರು ಮಾಡಲಿ ಎಂದು ಹೇಳುತ್ತೇನೆ. ಈ ವಿಷಯದಲ್ಲಿ ನಾನು ಮಾತ್ರ ರೈತರ ಸಾಲ, ಬಡ್ಡಿ ದಯವಿಟ್ಟು ಇದನ್ನೆಲ್ಲ ಬಿಡಬೇಕು. ಸಾಲ ಮನ್ನಾ ಮಾಡುವ ವಿಷಯದಲ್ಲಿ ಒಂದು ಸಮಿತಿ ಮಾಡಿ

ಚರ್ಚೆ ಮಾಡಿ, ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ(ಕಂದಾಯ ಮಂತ್ರಿಗಳು):– ಮಾನ್ಯ ಅಧ್ಯಕ್ಷರೇ, ಈಗತಾನೆ ತಮ್ಮ ಮೇಡನ್ ಸ್ಪೀಚ್ ಏನು ಮಾಡಿದ್ದಾರೆ ನನ್ನ ಸ್ನೇಹಿತರು, ಅವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅವರಿಗೆ ಪೂರ್ಣವಾದ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಒಂದು ವಿಷಯದಲ್ಲಿ ಅವರು ಬೆಳಕು ಚೆಲ್ಲಬೇಕು ಎಂದು ಕೇಳುತ್ತೇನೆ. ಏಕೆಂದರೆ ರೈತ ಸಂಘದ ಪ್ರತಿನಿಧಿಯಾಗಿ ಇಲ್ಲಿ ಅವರು ಉಪಸ್ಥಿತಿರಿದ್ದರೆ. ಈಗ ನಾವು ಏನು ದೊಡ್ಡದೊಡ್ಡ ಪ್ರಾಜೆಕ್ಟ್‌ಗಳನ್ನು ಮಾಡಿ ನೀರು ಸರಬರಾಜು ಮಾಡುತ್ತಿದ್ದೇವೆ, ಅವರಿಗೆ ವಾಟರ್ ರೇಟ್ ಏನು ನಾವು ಹಾಕಿದ್ದೇವೆ, ಅದೇನು ಅಂಥ ಜಾಸ್ತಿಯಲ್ಲ.

ಮೈದಾನ ಪ್ರದೇಶದಲ್ಲಿ ನಾವು ಒಂದು ಬೋರ್ ವೆಲ್ ಮಾಡಿ, ಒಂಬು ಎಕರೆ, ಎರಡು ಎಕರೆಗೆ ನೀರು ತೆಗೆದುಕೊಳ್ಳಬೇಕು ಎಂದರೆ ಸುಮಾರು 50 ರಿಂದ 75 ಸಾವಿರ ರೂಪಾಯಿ ನಾವು ಇನ್‌ವೆಸ್ಟ್ ಮಾಡಬೇಕಾಗುತ್ತದೆ. ಆದರೆ ನಾವೇನು ಇವತ್ತು 150–200 ವಾಟರ್‌ರೇಟ್ ಧಾರಣೆ ಹಾಕಿದ್ದೇವೆ, ವಾಟರ್ ರೇಟ್‌ನ ಬಾಕಿ ಸುಮಾರು 180 ಕೋಟಿ ರೂಪಾಯಿ ನಮ್ಮ ರಾಜ್ಯದಲ್ಲಿದೆ. ಈ ವಾಟರ್ ರೇಟ್‌ನ್ನು ನಾವು ವಸೂಲು ಮಾಡುವುದೇ ಬಿಡುವುದೇ ವಾಟರ್ ರೇಟ್‌ನ್ನು ನಾವು ವಸೂಲು ಮಾಡದೇ ಇದ್ದರೆ ನಾವು ಈ ಕಾರ್ಯಕ್ರಮಗಳನ್ನು ಜಾರಿಗೆ ತರುವುದಾದರೂ ಹೇಗೆ ? ಇದರ ಬಗ್ಗೆ ಏನಾದರೂ ತಾವು ಸ್ವಲ್ಪ ಬೆಳಕು ಚೆಲ್ಲುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಅವರು ಸಲಹೆ ಕೊಟ್ಟರು; ಆಯಿತು. ಅವರಿಗೆ ಸಂಬಂಧ ಇರುವ ಹಾಗೆ ಹೇಳಿದಿರಿ.

ಶ್ರೀ ಆರ್.ಎಲ್. ಜಾಲಪ್ಪ:– ನಾನು ಏಕೆ ಇದನ್ನು ಹೇಳುತ್ತಿದ್ದೇನೆ, ಆದರೆ ಇವತ್ತು ಈ ವಾಟರ್ ರೇಟಿನ ವಿರೋಧ ಇರುವುದು ಯಾರ್ಯಾರು ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ ಆ ಭಾಗದಲ್ಲಿ ಮಾತ್ರ. ಇನ್ನು ಬೇರೆ ಭಾಗಗಳಲ್ಲಿ ಈ ವಿರೋಧ ಇಲ್ಲ. ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ಕೇಳುವವರು ಗತಿ ಇಲ್ಲ. ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ಇಲ್ಲ, ಚಿತ್ರದುರ್ಗದಲ್ಲಿ ಇಲ್ಲ, ರಾಯಚೂರಿನ ಕೆಲವು ಭಾಗಗಳಲ್ಲಿಲ್ಲ. ಈಗ ಎಲ್ಲೆಲ್ಲಿ ನಮ್ಮ ರೈತಸಂಘಗಳು ಬಲವಾಗಿವೆ. ಆ ಭಾಗದಲ್ಲಿ ಮಾತ್ರ ನೀರು ಜಾಸ್ತಿ ಇದೆ, ನೀರು ಸಿಗುತ್ತಿದೆ. ತುಂಗಭದ್ರಾ ಇರಬಹುದು. ಕಾವೇರಿ ಇರಬಹುದು, ಕೃಷ್ಣಾ ಜಲಾನಯನ ಇರಬಹುದು. ಆದ್ದರಿಂದ ಅವರ ಸಲಹೆ ಏನು ಎಂದು ಕೇಳೋಣ ಎಂದು ಕೇಳಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ನಾವೆಂದು ನೀರಿನ ರೈತ ಸಂಘ ಅಲ್ಲ. ಎಲ್ಲೆಲ್ಲಿ ನೀರು ಇದೆ. ಅಲ್ಲಿ ರೈತ ಸಂಘ ಇದೆ ಎಂದು ಹೇಳುತ್ತಿದ್ದೀರಿ. ತಾವು ದಯವಿಟ್ಟು ಮಾತನ್ನು ವಾಪಸ್ ತೆಗೆದುಕೊಳ್ಳಬೇಕು. ನಾವು ನೀರಿನ ರೈತ ಸಂಘದವರು ಅಲ್ಲ ಹೇಳುತ್ತಿರುವುದು, ಈಗಾಗಲೇ ನಾನು ತಮ್ಮ ಹತ್ತಿರ ಹೇಳಿದೆ, ಒಂದು ಪಾಸ್ ಬುಕ್ ಕೊಟ್ಟರೆ ನಮ್ಮ ಎಲ್ಲಾ ವ್ಯವಸ್ಥೆಯನ್ನು ಉತ್ತಮವಾಗಿ ಸೃಷ್ಟಿ ಮಾಡುತ್ತೇವೆ. ನಾವು ಒಂದು ಸಮಿತಿ ಮಾಡಿಕೊಳ್ಳೋಣ.

ಛೇರ್ಮನ್: ಅವರ ಛೇಂಬರಿನಲ್ಲಿ ಹೋಗಿ ಡಿಸ್ಕಸ್ ಮಾಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ನೀವು ಆ ಪ್ರಶ್ನ ಕೇಳುವಾಗಲೇ ಹೇಳಬೇಕಾಗಿತ್ತು.

ಛೇರ್ಮನ್:– ನೀವು ಪ್ರಶ್ನೆ ಏನು ಕೇಳುತ್ತೀರಿ ಎಂದು ಗೊತ್ತಾಗಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಸಭಾಧ್ಯಕ್ಷರು ದಯವಿಟ್ಟು ನನ್ನನ್ನು ಕೇಳುವುದಕ್ಕಿಂತ ಮುಂಚೆ ಅವರನ್ನು ಕೇಳಬೇಕಿತ್ತು.

ಛೇರ್ಮನ್:- ನೀವು ಅವರ ಛಂಬರಿನಲ್ಲಿ ಹೋಗಿ ಡಿಸ್ಕಸ್ ಮಾಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಅವರಿಗೆ ಬೆಲ್ ಹೊಡೆಯುವುದಿಲ್ಲ, ನಮಗೆ ಏಕೆ ಹೊಡೆಯುತ್ತೀರಿ ?

ಛೇರ್ಮನ್:- ಅದು ಹಾಗಲ್ಲ, ಹೇಗೆ ಎಂದರೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಅಧ್ಯಕ್ಷರೆ, ಏನು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದರು. ಶ್ರೀಮಾನ್ ಜಾಲಪ್ಪನವರು ಈ ವಿಷಯವನ್ನು ಶ್ರೀಮಾನ್ ಬೊಮ್ಮಾಯಿಯವರು ವಿರೋಧ ಪಕ್ಷದ ನಾಯಕರಾಗಿ 1978ರಲ್ಲಿ ಇಟ್ಟರು, ಆಗ ನಾವು ಕೂಡ ಆ ಕಡೆ ಇದ್ದೆವು. ದೇವರಾಜ್ ಅರಸು ಅವರು ಇದೇ ಮಾತನ್ನು ಹೇಳಿದರು, ತಾವೇನು ಹೇಳಿದಿರಿ ಈಗ ಒಬ್ಬ ರೈತ ಯಾರಿಗೆ ಈ ಪ್ರಾಜೆಕ್ಟ್‌ನಿಂದ ನೀರು ಸಿಗುವುದಿಲ್ಲ, ಅಂತಹ ರೈತ ಏನು ಮಾಡುತ್ತಾನೆ, ಪಿಎಲ್‌ಡಿ ಬ್ಯಾಂಕಿನಿಂದ ಸಾಲ ಪಡೆದುಕೊಳ್ಳುತ್ತಾನೆ.

ಛೇರ್ಮನ್:- ಖರ್ಗೆಯವರೆ, ಛೇಂಬರಿನಲ್ ಡಿಸ್ಕಸ್ ಮಾಡಿ. ಬೇರೆ ವಿಷಯಗಳು ಇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಉಗಮ ಸ್ಥಾನ ಅಲ್ಲಿಂದ ಇದೆ. ಅದಕ್ಕೆ ಕೇಳುತ್ತಿದ್ದೇನೆ. ಅದಕ್ಕೆ ಅವರನ್ನು ಕೇಳಬೇಕು; ರೈತ ಪಿಎಲ್‌ಡಿ ಬ್ಯಾಂಕಿನಿಂದ ಏನು ಸಾಲವನ್ನು ಪಡೆದುಕೊಳ್ಳುತ್ತಾನೆ, ಬಾವಿ ತೆಗೆಯುತ್ತಾನೆ, ತಿರುಗಿ ಎಲೆಕ್ಟ್ರಿಸಿಟಿ ಕನೆಕ್ಷನ್‌ಗೆ ದುಡ್ಡು ಖರ್ಚು ಮಾಡುತ್ತಾನೆ. ಮತ್ತೆ ಪಂಪುಸೆಟ್ಟು ತರುವುದಕ್ಕೆ ಪುನಃ ಸಾಲವನ್ನು ತೆಗೆದುಕೊಳ್ಳುತ್ತಾನೆ. ಇವೆಲ್ಲದರ ಮೇಲೆ ಅವನು ಸಾಲಕ್ಕೆ ಬಡ್ಡಿಯನ್ನೂ ಕೊಡಬೇಕು ಮತ್ತು ಸಾಲವನ್ನೂ ತೀರಿಸಬೇಕು. ಆದರೆ ಒಂದು ಕಡೆ ಈ ವ್ಯವಸ್ಥೆ ಇದೆ. ಇನ್ನೊಂದು ಕಡೆ ಕೋಟ್ಯಾಂತರ ರೂಪಾಯಿಗಳನ್ನು ನಾವು ಖರ್ಚು ಮಾಡಿ ಪ್ರಾಜೆಕ್ಟ್‌ಗಳನ್ನು ಕಟ್ಟುತ್ತೇವೆ. ನೇರವಾಗಿ ಅವರ ಹೊಲಕ್ಕೆ ನೀರು ಕೊಡುತ್ತೇವೆ. ಕೊಟ್ಟರೂ ಕೂಡ ಅಲ್ಲೇನಾದರೂ ನಾವು ಬೆಟರ್‌ಮೆಂಟ್ ಲೆವಿ ಹಾಕಬೇಕು ಎಂದರೆ ಅಥವಾ ಇರಿಗೇಷನ್ ಸೆಸ್ ಹಾಕಬೇಕು ಎಂದರೆ ಎಲ್ಲರೂ ವಿರೋಧ ಮಾಡುತ್ತಿದ್ದಾರೆ. ಮತ್ತು ನೀವು ಈ ಮಾತನ್ನು ಹೇಳುತ್ತಿದ್ದೀರಿ ಎಂದರೆ ಅವರ ಗತಿ ಏನಾಗಬೇಕು ? ಅವರು ರೈತರಲ್ಲವೇನು ? ಎನ್ನತಕ್ಕ ಮಾತನ್ನು ಕೇಳಿದಾಗ ಅವರು ಇಲ್ಲ ಅದಕ್ಕೆ ನಾನು ಒಪ್ಪುತ್ತೇನೆ ಎಂದು ಅವರು ಹೇಳಿದರು. ನಾವು ಒಪ್ಪಿಕೊಳ್ಳುತೇವೆ ಎಂದು ಈ ಮಾತನ್ನು ಇಲ್ಲೇ ಅವರು ಹೇಳಿದರು. ಆದರೆ ಕೇಳುವಾಗ ಏನು ಮಾಡುತ್ತಾರೆ ಎಂದರೆ ಎಲ್ಲರೂ ಕೇಳುತ್ತಾರೆ. ಬೆಟರ್‌ಮೆಂಟ್ ಲೆವಿ ಮಾಫ್ ಮಾಡಿ ಎಂದು ಹೇಳುತ್ತಾರೆ ಅಥವಾ ಇರಿಗೇಷನ್ ಸೆಸ್ ಅನ್ನೂ ಮಾಫ್ ಮಾಡಿ ಎಂದು ಹೇಳುತ್ತಾರೆ. ಇದು ಸಹಜವಾಗಿ ವಿರೋಧ ಪಕ್ಷದಲ್ಲಿ ಬಂದಾಗಲೇ ಹೀಗೆ ಆಗುತ್ತದೇನೋ ಗೊತ್ತಿಲ್ಲ. ಯಾವಾಗಲೂ ಈ ವಿಷಯ....

ಛೇರ್ಮನ್:- ವ್ಯವಸಾಯ ವ್ಯಾಪಾರ ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಹೌದು. ಅದಕ್ಕಾಗಿ ಎಲ್ಲರೂ ಕೂಡ ಕೇಳುತ್ತಿದ್ದಾರೆ. ಆದುದರಿಂದ ಇದಕ್ಕೆ ಒಂದು ನಿರ್ದಿಷ್ಟವಾದ ನಿರ್ಣಯ ತೆಗೆದುಕೊಂಡರೆ ಆವಾಗ ಇದು ಸಾಧ್ಯ ಇದೆ. ಇಲ್ಲದಿದ್ದರೆ ಸುಮ್ಮನೆ ನಾವು ಸಹಜವಾಗಿ ಕೇಳುವುದು ಅವರು ಹೇಳುವುದು ಇದು ಪ್ರತಿಯೊಂದು ಸಲ ನಡೆದಿದೆ.

ಛೇರ್ಮನ್:- ಮಾನ್ಯ ಶಿವನಂಜನಪ್ಪನವರೆ ತಾವು ಮಾತನಾಡಬಹುದು.

ಶ್ರೀ ಜಿ.ಸ್. ಶಿವನಂಜಪ್ಪ:- ನಾನು ಓದಿಕೊಂಡು ಬಂದಿಲ್ಲ ನಾಳೆ ಮಾತನಾಡುತ್ತೇನೆ.